ಕರ್ನಾಟಕವೆಂದರೆ, ಬೆಳಗಾಂವಿ, ಧಾರವಾಡ, ಬಳ್ಳಾರಿ, ಹಂಪೆ, ಶೈಸೂರು, ಬೆಂಗಳೂರು ಮತ್ತು ಮಂಗಳೂರು ಕಾರ್ಕಳ ಇವು ನನ್ನ ಜ್ಞಾಪಕಕ್ಕೆ ಬರುತ್ತವೆ. ಈ ನಾಲ್ಕು ವಿಭಾಗಗಳಲ್ಲಿಯೂ ಸ್ವಲ್ಪ ವ್ಯಕ್ತಿ ಸ್ವಾತಂತ್ರ್ಯ ಕಂಡುಬಂದರೂ ಈ ಕರ್ನಾಟಕದಲ್ಲಿ ಸಾಂಸ್ಕೃತಿಕ ಐಕ್ಯತೆಯು ಸ್ವಲ್ಪವಾಗಿ ಕಂಡುಬರುತ್ತಿದೆ. ಕರ್ನಾಟಕದ ವಿಕೀಕರಣವು ಸುಲಲಿತವಾದ ಕನ್ನಡ ಭಾಷಾತಂತಿಯಿಂದ ತಾನಾಗಿಯೇ ಉಂಟಾಗಿ ಬಿಡುವುದು. ಭಿನ್ನಭಿನ್ನದಲ್ಲಿಯೂ ಐಕ್ಯತೆಯಿರುವುದೇ ನಮ್ಮ ಭರತಖಂಡದ ಜೀವನಮಂತ್ರವಾಗಿದೆ. ಈ ತರಹದ ಹೃದಯ ಐಕ್ಯತೆಯು ಹಿಂದೀಭಾಷೆಯ ಆಗಬಲ್ಲದು. ಹೃದಯ ವಿಕಾಸಕ್ಕೆ ಉಪಾಸಕರ್ ಆದ ನನ್ನ ಕನ್ನಡಿಗ ಸಹೋದರರು ಹಿಂದೀ ಭಾಷಾಕ್ಷೇತ್ರವನ್ನು ಹೆಚ್ಚು ವಿಕಾಸಗೊಳಿಸಿ ದೇವನಾಗರಿ ಅಕ್ಷರಗಳನ್ನು ಮನೆಗಳಲ್ಲಿ ಉಪಯೋಗಿಸುವರೆಂದು ಆಶಿಸುತ್ತೇನೆ. ಹೀಗೆ ಹಿಂದೀಭಾಷೆಯ ಮೂಲಕ ಎಲ್ಲಾ ಪ್ರಾಂತ್ಯಗಳ ಐಕ್ಯತೆಯನ್ನು ಮತ್ತು ಖಾದೀ ಬಟ್ಟೆಯ ಸಮಾಜಿಕ ಐಕ್ಯತೆಯನ್ನು ಉಂಟುಮಾಡಲು ಪ್ರಯತ್ನಿಸಿದ್ದೇ ಆದರೆ ಮಹಾತ್ಮಾಜಿಯವರ ಒನ್ನೊತ್ತಾಸ ದಿನವನ್ನು ಸರಿಯಾಗಿ ಕೊಂಡಾಡಿದಂತಾಗುವುದು.

(ನಿತ್ಯ ಕರ್ನಾಟಕ.)

(೬ ಸೇನಗುಪ್ತರ ಭಾಷಣ.)

(೩ನೆ ಪುಟದಿಂದ ಮುಂದುವರಿದಿದೆ.)

ಯುದ್ಧಕಾಲದ ಸ್ವದೇಶೀ ತತ್ವ.

ನೀವು ಮುಂದೆ ಬರಬಹುದಾದ ಸಂಘರ್ಷಗಳಿಗೆಲ್ಲಾ ತಯಾರಾಗಿರಬೇಕು. ಆ ಸ್ವದೇಶೀತತ್ವವು ಯುದ್ಧಸೂಚನೆಯನ್ನುಳ್ಳದಾಗಿದೆ, ಅಂಥಾ ತತ್ವವು ಬಂಗಾಳವು ಇಚ್ಛಿಸುವಾದ ಕಾಲದಲ್ಲಾ, 1921 ರಲ್ಲಿಯೂ, ಹೊದವರ್ಷವೂ ಆಚರಿಸಲ್ಪಟ್ಟಿತು. ಈ ತತ್ವದ ಅರ್ಥವೇನೆಂದರೆ :— ಬ್ರಿಟಿಷರ ವಸ್ತ್ರಗಳೆಲ್ಲವು ಸಂಪೂರ್ಣ ಬಹಿಷ್ಕರಿಸಲ್ಪಡಬೇಕಾಗುತ್ತದೆ, ಇಂಡಿಯಾ ದೇಶಕ್ಕೆ ಏನು ಕೊಡಬೇಕೆಂಬಬಗ್ಗೆ ಯಾವ ವಿಷಯವನ್ನಾ, ಬ್ರಿಟಿಷರು ನಿಶ್ಚಯಿಸಿರುವದಿಲ್ಲ. ಬ್ರಿಟಿಷರ ಚುನಾವಣೆಗಳೇನಾದರೂ ಆಗಲಿ, ನಾನು ಲಕ್ಷಿಸುವದಿಲ್ಲ. ಯಾವಪಾರ್ಟಿಯವರು ಅಧಿಕಾರಕ್ಕೆ ಬಂದರೂ, ಅಪ್ಪರಲ್ಲಿ ಇದೆ ನಮ್ಮ ಶಕ್ತಿಪ್ರದರ್ಶನವಂತೂ ಆಗೇ ತೀರಬೇಕು. ಯುದ್ಧಕಾಲಬಂದರೆ ಎಡೆಸೆ ಸ್ವದೇಶೀ ತತ್ವವನ್ನು ನೀವು ಅವಲಂಬಿಸಲಿಕ್ಕಬೇಕು.

ನಾನು ರಾಷ್ಟ್ರಸಭೆಯ ಕಾರ್ಯಕಾರಿ ಮಂಡಲದ ಸದಸ್ಯನಾಗಿದ್ದು, ಶಾಂತಕಾಲದಲ್ಲಿ, ಯುದ್ಧ ಪ್ರಸಂಗವನ್ನು ಮಾಡುತ್ತಿರುವೆನೆಂದು ನೀವು ಹೇಳಬಹುದು. ಆದರೆ ಯುದ್ಧ ಸೂಚನೆಗಳು ತೋರುತ್ತಿರಬೇಕಾದರೆ, ನಾನು ಹೇಗೆ ಭವಿಷ್ಯವನ್ನು ನುಡಿಯದೆ ಇರಲಿ? ಯಾವಾಗಲೂ ಇದೇ ಶಾಂತಿ ಇರುವುದೆಂದು ಹೇಳುವುದಾದರೆ, ನೀವೇ ನನ್ನನ್ನು ಹುಚ್ಚನೆಂದೆನ್ನುವಿರಿ.

ಇಂಗ್ಲಾಂಡ್ ದೇಶದ ರಾಜ್ಯವ್ಯತ್ಯಾಸಗಳಿಂದ ಏನೂ ಬದಲಾವಣೆ ಆಗಲಾರವು.

ಕೂಲಿಕಾರಪಕ್ಷವಾಗಲೀ, ಕನ್‌ಸರ್ವೇಟಿವ್ ಪಕ್ಷವಾಗಲೀ, ಯಾರು ಬಂದರೂ ನಮಗೇನು? ನಮ್ಮ ಕೋರಿಕೆಗಳೆಲ್ಲವೂ ಈಡೇರಬೇಕಾದರೆ, ಬಿಸಿಯಿಲ್ಲದೆ ಸಾಧ್ಯವಾಗುವದಿಲ್ಲ. ಆ ಬಿಸಿಯನ್ನು ತೋರಿಸಬೇಕಾದರೆ ಹಿಂದೂಸ್ಥಾನದ ತರುಣ, ತರುಣಿಯರೂ, ಎಲ್ಲಾ ಮತಾಂತಗಳವರೂ ಒಕ್ಕಟ್ಟಾಗಿರಬೇಕು. ವಿಲಾಯ್ತಿ ಸರಕಾರದ ಬದಲಾವಣೆಯಿಂದ ಏನೂ ಆಗಲಾರದು?

ಲಾರ್ಡ್ ಇರ್ವಿನ್ ಸಾಹೇಬರು ಫಿಬ್ರವರಿ ತಿಂಗಳು ರಾಜ್ಯಕಾರಣಗಳ ವಿಷಯದಲ್ಲಿ ಮಹಾತ್ಮಾಗಾಂಧಿಯವರೊಡನೆಯೂ, ಕಾರ್ಯಕಾರಿ ಮಂಡಲದ ಸದಸ್ಯರೊಡನೆಯೂ ಏತಕ್ಕೋಸ್ಕರ ಚರ್ಚೆ ನಡಿಸಿದರು? ಕಾಂಗ್ರೆಸ್ ಸಂಸ್ಥೆಯು ಹಿಂದುಸ್ಥಾನದಲ್ಲಿ ಶಕ್ತಿಶಾಲೀ ಸಂಘವೆಂತಲೂ, ಅದರ ಸಹಾಕಾರವಿಲ್ಲದೆ ಆಳ್ವುದು, ಕಷ್ಟವೆಂತಲೂ, ತಿಳಿದಮೇಲಲ್ಲವೇ, ಅವರು ನಮ್ಮನ್ನೆಲ್ಲಾ ಕರಸಿಕೊಂಡದ್ದು? ಹಿಂದಿನ ಯುದ್ಧದಲ್ಲಿ ಬೊಂಬಾಯಿಯವರು ಪೂರಾ ಹೆಸರು ಸಡೆದರು. ಇನ್ನು ಮುಂದಿನಪ್ರಕರಣದಲ್ಲಿ ಬಂಗಾಳದವರು ತಮ್ಮ ಕೈ ತೋರಿಸುವರು.

ಚಿಟ್ಟಾಗಾಂಗ್ ಮತ್ತು ಹಿಜಲಿಯ ಕೃತ್ಯಗಳು.

ಒಂದು ಭಾಗದಲ್ಲಿ ಶಾಂತಿವಾತಾವರಣವಿದ್ದರೆ ಬಂಗಾಳದಲ್ಲಿ ಸರ್ಕಾರಕ್ಕೂ ಪ್ರಜಾವರ್ಗಕ್ಕೂ ಕಲಹಗಳಿದ್ದೇಇವೆ, ಚಿಟ್ಟಾಗಾಂಗದಲ್ಲಿ ..... ಮುಸಲ್ಮಾನ್ ಇನ್ಸ್ಪೆಕ್ಟರ ಖೂನಿಯಾದಮೇಲೆ, ಮಿಲಿಟರಿಯವರು ಆ ಪಟ್ಟಣದಲ್ಲಿ ಭೀಷಣಕೃತ್ಯಗಳನ್ನು ನಡೆಸಿದರು. ಇದು ಹಿಂದೂ ಮುಸಲ್ಮಾನ್ ಕಲಹವೆಂದು ಭಾಸ ಕೊಡಲ್ಪಟ್ಟಿತು. ಎರಡು ಮೂರು ಹೈಸ್ಕೂಲ್‌ಗಳಿಗೆ ನುಗ್ಗಿ ವಿದ್ಯಾರ್ಥಿಗಳನ್ನೊಬ್ಬರನ್ನೂ ಬಿಡದಂತೆ ಹೊಡೆದರು ಇವರಲ್ಲಿ 9 ರಿಂದ 15 ವರ್ಷಗಳೊಳಗಿನವರೂ ಇದ್ದರು. ಹಿಜಲಿ ಎಂಬ ಊರಿನಹತ್ತರ ವಿಚಾರಣೆ ಎಲ್ಲದೆ ಅನೇಕ ಬಂಗಾಳ ಯುವಕರು ಸೆರೆಯಾಗಿದ್ದಾರೆ, ಸೆಪ್ಟೆಂಬರು 16-ನೇ ತಾರೀಖಿನ ದಿವಸ ನಿಷ್ಕಾರಣವಾಗಿ ಅವರನ್ನು ಮುತ್ತಿ ಇಬ್ಬರನ್ನು ಕೊಂದರು ಇಂಥಾ ಕಾರ್ಯಗಳೆಲ್ಲದ ಕೆಲಸವು ಎಲ್ಲಾದರೂ ನಡೆದೀತೆ? ನಾವೇನೂ ಸುಮ್ಮನಿರಲಿಲ್ಲಾ ಕಾಂಗ್ರೆಸ್ ಅಧ್ಯಕ್ಷರೊಂದಿಗೆ ಪತ್ರ ವ್ಯವಹಾರ ನಡೆದು, ಈಗ ವಿಚಾರಣಾಸಭೆಯೇರ್ಪಟ್ಟಿದೆ, ಎಲ್ಲವೂ ಬೈಲಿಗೆ ಬೀಳುವಂತಿದೆ, ಮುಂದಿನ ಅಹಿಂಸಾತ್ಮಕ ಯುದ್ಧದಲ್ಲಿ ಸ್ವರಾಜ್ಯವು ವರ್ಷ, ತಿಂಗಳೆಂಬಂತಿಲ್ಲಾ ಘಂಟೆಗಳೊಳಗೆ ದೊರಕುವುದು.

ವರ್ತಮಾನಗಳು.

ಪರದೇಶ.

ಮಹಾತ್ಮಾಗಾಂಧಿ, ಮತ್ತು ಶ್ರೀಮತಿ ಸರೋಜಿನಿದೇವಿಯವರು, ಮೊದಲನೇಸಲ ಕೊಲಂಬಿಯೆ ಗ್ರಾಮೋಫೋನ್ ಕಂಪನಿಗೆ ಕೆಲವು ಸಿರಿಸಗಳವರಿಗೆ 'ಭಾಷಣ' ಕೊಟ್ಟರು, ಮಹಾತ್ಮರು, ದೇವರ ಅಸ್ತಿತ್ವದ ವಿಷಯದ ಬಗ್ಗೆ ಮಾತಾಡಿದರು.

ಮೆಡಿಟೆರೇನಿಯನ್ ಸಮುದ್ರಕ್ಕೆ ಸಂಬಂಧಿಸಿರುವ 'ಶಿಪ್ರಸ್' ದ್ವೀಪದಲ್ಲಿ ಕಾಂಗ್ರಾಂತರಂಗಳಿಂದ ದಂಗೆಎದ್ದು, ಸರ್ಕಾರದ ಕಛೇರಿಯನ್ನು ಸುಟ್ಟರುತ್ತಾರೆ. ಸೈನ್ಯಗಳು ಆಕಾಶವಿಮಾನಗಳಿಂದ ಸಾಗಿಸಲ್ಪಟ್ಟಿರುವುವೆಂದು ಕೈರೋದಿಂದ ವರ್ತಮಾನ ಬಂದಿದೆ.

ಜಪಾನಿನವರು ತಕ್ಷಣವೇ ಮಂಚೂರಿಯಾ ಬಿಟ್ಟು ಹೋಗಬೇಕೆಂದು ಜನೀವಾಲೀಗದಲ್ಲಿ ನಿರ್ಣಯಮಾಡಲ್ಪಟ್ಟ ಠರಾವನ್ನು ಓದಿದರು.

ಹಿಂದೂಸ್ಥಾನ.

ಮದ್ರಾಸು ನ್ಯಾಯವಿಧಾಯಕ ಸಭೆಯ, ಮುಂದೆ ಬರುವ ಅಧಿವೇಶನದಲ್ಲಿ 'ತಿರುಪತಿದೇವಸ್ಥಾನದ' ಆಡಳಿತ ವಿಷಯವನ್ನು ಚರ್ಚಿಸುವರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಕೇರಳದ ಕಾಂಗ್ರೆಸ್ ಸಭೆಯವರುಳಿಸಿ, ಕೇರಳದ ಸ್ತ್ರೀಯರೆಲ್ಲಾ ಅಲ್ಲಿಯದೇವಸ್ಥಾನ ಸತ್ಯಾಗ್ರಹಕ್ಕೆ, ಸ್ವಲ್ಪವೂ ಹೆದರದೆ ಬೆಂಬಲವನ್ನೀಯಬೇಕೆಂದು ಸಂದೇಶವನ್ನು ಕಳುಹಿಸಿದ್ದಾರೆ.

ಬಂಗಾಳದ ಶ್ರೀ ಸೇನಗುಪ್ತಾರವರು ಲಂಡನ್ನಿಗೆ ತೆರಳುವುದರ್ಪ ಬೊಂಬಾಯಿಯಲ್ಲಿ ಸ್ಫೂರ್ತಿದಾಯಕ ಭಾಷಣವಿತ್ತರು.

ಬೊಂಬಾಯಿ ಮುನಿಸಿಪಾಲಿಟಿಯವರು - "ಮದುವೆ" ತೆರಿಗೆ ಹಾಕಬೇಕೆಂದು ಆಲೋಚನೆ ನಡೆಸುವವರಿದ್ದಾರೆ. ಹೊಸದಾಗಿ ಯಾರು ಮದುವೆಯಾದರೂ ತೆರಿಗೆ ಕೊಡಬೇಕಾಗುತ್ತದೆ.

ಶ್ರೀಯುತ ಮಣಿಲಾಲ್ ಕೋಟಾರಿ ಯವರು ಗಾಂಧಿ ಜಯಂತಿಸಪ್ತಾಹದಲ್ಲಿ 8,20,000 ರೂಪಾಯಿಗಳು ಬೆಲೆಯುಳ್ಳ ಖಾದಿಯು ಮಾರಲ್ಪಟ್ಟಿತೆಂದು ಹೇಳಿದ್ದಾರೆ. ಬೊಂಬಾಯಿಯಲ್ಲಿ ಮಾತ್ರ 2,45,000 ರೂಪಾಯಿಗಳ ಖಾದಿಯು ಮಾರಾಟವಾಯಿತು.

"ಗಾಂಧಿಜಯಂತಿ ಸಪ್ತಾಹವು ಮುಗಿಯಿತು. ಆದರೆ ದರಿದ್ರ, ನಾರಾಯಣರ (ಹಿಂದೂ, ಮುಸಲ್ಮಾನರ ಸಹಿತ) ಸೇವೆಮಾಡುವ ಕೆಲಸವು ಇನ್ನುಮುಂದೆ ಕೂಡ, ಈಗ ಮಾರಾಟವಾಗದೆ ಇರುವ ಖಾದಿಯು ಸಂಪೂರ್ಣವಾಗಿ ಮಾರಲ್ಪಡುವವರೆಗೂ, ಸಾಗುವುದೆಂದು ನಂಬಿರುತ್ತೇನೆ".

ಎಂದು ಶ್ರೀ ಕೋಟಾರಿಯವರು ಹೇಳಿದರು.

"ಅಡ್ವಾನ್ಸ್" (Advance), ಪತ್ರಿಕೆಯಲ್ಲಿ ಬಿ. ಕೆ. ಶರ್ಮಯವರು ಹಿಂದೂದೇಶ ಪ್ರಭುತ್ವದ ಖರ್ಚು ಜಾಸ್ತಿಗಳನ್ನು ಕಡಿಮೆ ಮಾಡುವ ನಿಧಾನಗಳನ್ನು ವಿವರಿಮಾಡುತ್ತಾ, ಮುಂತ್ತಿನಲ್ಲಿ ಇರುವ ರಾಜಕೀಯ ಖಟ್ಲೆಯ ಖರ್ಚುಗಳನ್ನು ಬರೆದಿದ್ದಾರೆ. ಇದುವರೆವಿಗೂ, ಸುಮಾರು ತಿಂಗಳಿಗೆ 50,000 ರೂಪಾಯಿಗಳು ಖರ್ಚು ಆಗುತ್ತಾ ಬಂದಿದೆಯೆಂತಲೂ, ಒಟ್ಟಿಗೆ 1,700,000 ರೂಪಾಯಿಗಳು ಆಗಿದೆಯೆಂತಲೂ, ಇನ್ನು ಮುಂದೆ 2,500,000 ರೂಪಾಯಿಗಳವರೆವಿಗೆ ಖರ್ಚುಗಳು ಆಗಬಹುದೆಂತಲೂ ಬರೆದಿದ್ದಾರೆ.

ಬಳ್ಳಾರಿ ಚುನಾವಣೆಗಳು.

ಈ ತಿಂಗಳು 22ನೇ ತಾರೀಖು ಬಳ್ಳಾರಿ ಪೌರಸಭೆಯ ಚುನಾವಣೆಗಳು ನಡೆದವು. ಕೆಳದುಳದ, 14 ಸ್ಥಾನಗಳಿಗೆ ಮಾತ್ರ ಚುನಾವಣೆಗಳು, ನಡೆದು ಈ ಕೆಳಗಿನ ಸಭ್ಯರು ಆರಿಸಲ್ಪಟ್ಟರು.

1 ಶ್ರೀ ಸಿ. ಬಾಲಾಜಿರಾವ್
2 ,, ಡಾಕ್ಟರು ಸೀತಾರಾಮಶರ್ಮ
3 ,, ಟಿ. ಸುಬ್ಬಶಿಟ್ಟಿ
4 ,, ಯಸ್. ಶರಣಪ್ಪ
5 ,, ಕಾಲಾಗಾನ್ ಸಾಹೇಬ್
6 ,, ಗಾಳಕರಿಬಸಪ್ಪ
7 ,, ಮುಲ್ಲಂಗಿ ನೀಲಪ್ಪ.
8 ,, ಮುಂಡ್ಲೂರು ಗಂಗಪ್ಪ.
9 ,, ಜಾನಿಕಂಟಿ ವಿರುಪಾಕ್ಷಪ್ಪ
10 ,, ಬಿ. ಕೆ. ಗುರುರಾಜರಾವ್
11 ,, ಡಿ. ಯಸ್ ಹನುಮಂತರಾವ್
12 ,, ಕೃಷ್ಣಸ್ವಾಮಿ ನಾಯಿಡು
13 ಶ್ರೀಮತಿ ಮಂಗಮ್ಮ (ಸ್ತ್ರೀ ಸಭ್ಯರು.)
14 ಶ್ರೀ ಯಂ ರಾಮಯ್ಯ. (ನಿಮ್ನವರ್ಗ)

ಪ್ರಾಮುಖ್ಯ ಕೆಲಸಗಳಿಗೆ ತೊಂದರೆ ಬರುವುದೆಂದು ಕಾಂಗ್ರೆಸ್‌ನವರು ಚುನಾವಣೆಗಳಲ್ಲಿ ಭಾಗ ತೆಗೆದುಕೊಳ್ಳಲಿಲ್ಲ. ಸದಸ್ಯರಾದವರಿಗೆ ನಾವು ಹೇಳಬೇಕಾದ್ದಿಷ್ಟೇ, ಪುರೋಹಿತನೇ ನಿಮ್ಮಮುಖ್ಯೋದ್ಯೋಗ, ಪುರ ಸೇವೆಯೇ ನಿಮ್ಮ ಧ್ಯೇಯವೆಂದು ತಿಳಿಯಿರಿ. ಹೆಸರು ಪ್ರತಿಷ್ಠೆ ಧಾವನೆಗಳನ್ನು ದೂರದಲ್ಲಿಡಿರಿ. ಪರರ ಮಾತು ಕೇಳದೆ ಸ್ವತಂತ್ರವಿವೇಚನಾಶಕ್ತಿಯನ್ನು ಅಭ್ಯಾಸಿಸಿರಿ ಇನಾವುದೂ ಇಲ್ಲದಿದ್ದರೆ ಕುಮಗೆ ಆಕೆಲಸವು ಅನಾವಶ್ಯಕವೂ ಅನರ್ಹವೂ ಆಗುತ್ತದೆ"

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೫೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟೆಪಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಪದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಭಾರತಮಾತೆಯ ಹತ್ತು ಆಜ್ಞೆಗಳು

೧. ಭರತಖಂಡದಲ್ಲಿ ಸಿದ್ಧವಾಗುವ ಪದಾರ್ಥಗಳನ್ನೇ ತೆಗೆದುಕೊಳ್ಳಿರಿ,

೨ ಭರತಖಂಡದಲ್ಲಿ ಯಾವ ಪದಾರ್ಥಗಳ ಕೊರತೆಯುವುದಿಲ್ಲವೋ ಅಥವಾ ದೊರೆಯುವುದಿಲ್ಲವೋ ಅಂತಹವು ಅಗತ್ಯವಿದ್ದರೆ ವಿದೇಶದವುಗಳನ್ನು ತೆಗೆದು ಕೊಳ್ಳಿರಿ

೩. ಒಕ್ಕಲುತನವನ್ನು ಹೆಚ್ಚಿಸಿ ಹೊಸ ಹೊಸ ಪದಾರ್ಥಗಳನ್ನುಂಟುಮಾಡಿರಿ

೪ ಕೈಗಾರಿಕೆಗಳನ್ನು ಪರಸ್ಪರ ಸಹಾಯದಿಂದ ಸಿದ್ಧಗೊಳಿಸಿರಿ ಮತ್ತು ಉತ್ತಮ ಪದಾರ್ಥಗಳನ್ನು ಮಾಡುವುದರಲ್ಲಿ ನಿಮ್ಮ ಕೌಶಲ್ಯವನ್ನು ಪ್ರಕಟಗೊಳಿಸಿರಿ. ಸ್ವಲ್ಪ ನೆಚ್ಚದಲ್ಲಿ ಉತ್ತಮ ಪದಾರ್ಥಗಳನ್ನು ಹೆಚ್ಚಾಗಿ ಸಿದ್ಧಗೊಳಿಸಲು, ಪ್ರಯತ್ನಿಸಿರಿ

೫. ಭರತಖಂಡದ ಪದಾರ್ಥಗಳನ್ನು ಪರದೇಶಗಳಿಗೆ ಕಳುಹಿಸಿ ಈ ದೇಶದ ವ್ಯಾಪಾರವನ್ನು ಹೆಚ್ಚಿಸಿರಿ

೬ ನಿಮ್ಮ ಕಾರ್ಯಕ್ಕೆ ಭಾರತೀಯರನ್ನೇ ಇಟ್ಟುಕೊಳ್ಳಿರಿ ಭಾರತೀಯ ಹಡಗುಗಳಲ್ಲಿಯೇ ನಿಮ್ಮ ಪದಾರ್ಥಗಳನ್ನು ಕಳುಹಿಸಿರಿ. ಭಾರತೀಯ ಬ್ಯಾಂಕ ವಿಮಾ ಕಂಪನಿಗಳಿಗೇನೇ ಪ್ರೋತ್ಸಾಹಿಸಿರಿ

೭ ಕಚ್ಚಾ ಪದಾರ್ಥಗಳಿಂದ ಪಕ್ಕಾ ಸಾಮಾನುಗಳನ್ನು ಭರತಖಂಡದಲ್ಲಿಯೇ ಮಾಡಿರಿ

೮ ಹೊಸ ಉದ್ಯೋಗಗಳನ್ನು ಪ್ರಾರಂಭಿಸಿರಿ ಇದ್ದ ಉದ್ಯೋಗಗಳಲ್ಲಿ ಸುಧಾರಣೆಯನ್ನು ಮಾಡಿರಿ. ಶಾಸ್ತ್ರಜ್ಞಾನದ ಪೂರ್ಣ ಪ್ರಯೋಜನವನ್ನು ಪೊಂದಲು ಹಿಂಜರಿಯ ಬೇಡಿರಿ

೯ ಪದಾರ್ಥಗಳ ಪ್ರಸಿದ್ಧಿಯು ಪ್ರಾಪ್ತವಾಗಬೇಕೆಂದು ಹೆಚ್ಚು ಪದಾರ್ಥಗಳನ್ನುಂಟುಮಾಡುವುದರ ಕಡೆಗೆ ಲಕ್ಷಿಸದೆ ಉತ್ತಮ ಪದಾರ್ಥಗಳನ್ನು ಮಾಡುವುದರ ಕಡೆಗೇನೇ ಲಕ್ಷಿಸಿರಿ.

೧೦ ಭಾರತೀ ಉದ್ಯೋಗಾಭಿವೃದ್ಧಿಗೆ ಭಾರತೀಯ ಬಂಡವಾಳವನ್ನು ಪ್ರಯೋಗದಲ್ಲಿ ತಂದುಕೊಳ್ಳಿರಿ.

ಉದ್ಯೋಗ

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯ ಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7-30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು. ಸುಮಾರು ೨೫ ಕೋಟಿಜನಗಳಿಗೆ ಜನ್ಮಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದುದು ದೇಶಾಭಿಮಾನಿಗಳ ಅಗತ್ಯಕರ್ತವ್ಯವಾಗಿದೆ. ಭಾವೀ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯ ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲಪೇಕ್ಷೆಯುಳ್ಳವರು ಈಗಲೇ ಸೇರಬೇಕು.

FOR SALE

1 Boston hand Press :—

Prints 5" × 8" matter neatly, In good working order

Price moderate & reasonable

2 New cyclostyle Machine:—

Used only twice or thrice Perfectly new

Price considerably cheap. Apply sharp:—

KARNATAKA KESARI OFFICE

Bellary.

TO LET

THE GRADUATES' TRADING ASSOCIATION,

General merchants, Gramaphone Dealers & News Agents

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್ ಗ್ರಾಮಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜಂಟ್ಸ್

ತೇರು ಬೀದಿ ಬಳ್ಳಾರಿ

ದಿ ಎಂಪೈರ್ ಆಫ್ ಇಂಡಿಯಾ, ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಕಂಪೆನಿಯ ಮುಖ್ಯ ಲಕ್ಷಣಗಳು

೧. ಅತಿ ಕಡಿಮೆ ಖರ್ಚಿನಿಂದ ನಡೆಯುತ್ತಿರುವ ಸಂಸ್ಥೆ.

೨ ಪೊಲಿಸಿದಾರರ ಹಣಕ್ಕೆ ತುಂಬ ಭದ್ರತೆಯುಳ್ಳದ್ದು.

೩ ಕಂಪೆನಿಯ ಬಂಡವಾಳವಲ್ಲದೆ ಇಂಡಿಯನ್ ಲೈಫ್ ಅಶ್ಯೂರೆನ್ಸ್ ಆಕ್ಟಿನಿಂದ ಮಂಜೂರಾದ ಸಂಸ್ಥೆಗಳಲ್ಲಿ ಇಡಲ್ಪಟ್ಟಿರುವುದು

೪ ಪ್ರೀಮಿಯಮಿನ ದರವು ಬೇರೆ ಕಂಪೆನಿಗಳ ದರಕ್ಕಿಂತ ಕಡಿಮೆ

೫ ಪೊಲಿಸಿಗಳಲ್ಲಿ ತೊಡಕಾದ ಶರತುಗಳು ಏನೂ ಇಲ್ಲದೆ ಸರಳವಾಗಿರುವುದು

೬ ಹಳೆಯ ಪೊಲಿಸಿಗಳನ್ನು ಹೆಚ್ಚು ಖರ್ಚು ಇಲ್ಲದೆ ಊರ್ಜಿತಕ್ಕೆ ತರುವುದು

೭ ಕಂಪೆನಿಯ ಲಾಭದಲ್ಲಿ ಸೇಕಡಾ ೯೦ನ್ನು ಪೊಲಿಸಿದಾರರೊಳಗೆ ಹಂಚಲಿಕ್ಕಿರುವುದು

೮ ಪೊಲಿಸಿಯು ಬೆಂಡೆಂತ ಕಂಡು ಬಂದಾಗ ಕಂಪೆನಿಯಿಂದ ಕೊಡೋಣಾಗುವ ಪ್ರತಿಫಲವು ಬಹಳ ಉದಾರಕರವಾದ್ದಾಗಿರುವುದು

೯ ಪೊಲಿಸಿಯ ಪ್ರತಿಫಲವನ್ನು ಪಡೆಯುವ ಸಂದರ್ಭ ಬಂದಾಗ ಅಳ್ಳತರವಿಲ್ಲದೆ ಕೂಡಲೆ ಹಣವು ಸಿಕ್ಕುವುದು.

ಎಂ. ವೆಂಕೋಬರಾವ್. ಬಿ. ಎ.
ಸತ್ಯನಾರಾಯಣ ಪೇಟೆ
ಬಳ್ಳಾರಿ

Commerce has conquered the world

FREE INSTRUCTIONS.

THE KARNATAKA TYPE WRITING INSTITUTE,
& Commercial Agency.
Bangalore Road, Bellary.

Agents & dealers in:-
Wood stock, Corona and other typewriters of all makes. Best Ribbons carbons, and Swadeshi fountainpens etc.

HOW TO LEARN TOUCH TYPE WRITING IN 20 days
short hand a speciality.
(Seperate accommodation for lady students)
Job works & repairs undertaken on moderate charges

ಆಜಾಗಿನ್ನು ಕಮ್ಮಿ ದರದಲ್ಲಿ ಕೈಸು ಮಾಡಲಾಗುತ್ತೆ

Prospects sent free on application.

ARYA VAIDYALAYA BELLARY.

Pandit C. S. Shastry's
Patents Rs 16 Dies

MONEY RETURNED IF NOT CURED

FEVER KILLER.

1 Any fever completly cured in 4 days — 8 oz Bottle Rs 2—0—0

2 NAVAJEEVAN PAK
King of Tonic foods (sweet) — 1 lb Rs 1—8—0

3 PRAMEHA BHANJINI
Gonorhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್ ಸಿ ಯೆಸ್ ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು — ಗಣವಿಲ್ಲದಿದ್ದರೆಣ ಪತ್ರ

" ಜ್ವರ ಸಂಹಾರಿ. "

1, ಸಾಮಾನ್ಯ ಎಲ್ಲಾ ಜ್ವರಗಳು ನಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ 3—0—0

2 ನವಜೀವನಪಾಕ
ಪೌಷ್ಟಿಕ ರಸಾಯನ — ಒಂದು ಪೌಂ ರೂ 1—8—0

3 ಪ್ರಮೇಹ ಭಂಜಿನಿ
ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ — ರೂ 6—0—0

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಜೆತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯವಾದರೂ ಕಷ್ಟಸಾಧ್ಯವಾಗಿದ್ದವಾದರೂ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ವಾಸಿಮಾಡಲ್ಪಡುತ್ತವೆ ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್

PRINTED & PUBLISHED BY T. B KESHAVA RAO
AT SRI VIDYARANYA PRESS BELLARY.

ಕರ್ನಾಟಕ ಕೇಸರಿ

ಸುಕೃತೀ ಕೃತ್ಯಕ್ಷಿಪೋ ! ಸುಪ್ರಕೃತ್ಯಸ್ಯಂಗ ಪಲೀಕಾಃ ॥
ನಿರ್ಮೈರಸ್ಸರ್ವ ಘಾತೇಷು । ಯಸ್ಯ ಪ್ರಕಾಂತಿ ಸಾಂಡವ ॥ ಗೀತೆ. ಅ. ೧೧ ಶ್ಲೋ - ೨೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

(3)

ವಾರ್ಷಿಕ ಚಂದಾ
ಸ್ಥಳದವರಿಗೆ ೨-೮-೦
ಪರಸ್ಥಳದವರಿಗೆ ೩-೦-೦

ಸಂಪಾದಕ
ಟೇಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.

ಪ್ರತಿ ಪತ್ರಿಕೆ ೦—೧—೦

ವರ್ಷ ೧ ಬಳ್ಳಾರಿ ನಗರ.—ನವಂಬರ್ ೨ ನೆ ಸೋಮವಾರ ೧೯೨೦ ಸಂಚಿಕೆ ೩

ಸತ್ಯಶೋಧನೆ, ಸತ್ಯಾಚರಣೆ, ಸತ್ಯಚಿಂತನೆಮಾಡುವುದರಲ್ಲಿಯೇ

ನಾನು ಸಾಯಲಪೇಕ್ಷಿಸುವೆನು

ನನ್ನ ಈ ಮನೋಕಾಮನೆಯು ಸಫಲವಾಗಲೆಂದು ಆಶೀರ್ವ

ಮಿಸಲಿಕ್ಕೋಸ್ಕರ ಜನತೆಯನ್ನು ಬೇಡಿಕೊಳ್ಳುವೆನು."

ಸತ್ಯಶೋಧಕನು ಪವಿತ್ರಿತವಾಗುವ ಧೂಳಿಗಿಂತಲೂ ಕೆಳಗಿರಬೇಕಾಗುತ್ತದೆ.

ಪ್ರಪಂಚದಲ್ಲಿ ಧೂಳಿಯನ್ನು ಎಲ್ಲರೂ ತುಳಿಯುವರು.

ಆದರೆ ಸತ್ಯದ ಪೂಜಾರಿಯು ಧೂಳಿಯಿಂದ ತುಳಿಯಲ್ಪಡುವಷ್ಟು

ಕೆಳಗಿಲ್ಲದಿದ್ದರೆ ಸತ್ಯದರ್ಶನವೂ ಕೂಡ ಆಗಲಾರದು.

ಮಹಾತ್ಮ ಗಾಂಧಿ.

ಕರ್ನಾಟಕ ಕೇಸರಿಗೆ ಆಶೀರ್ವಾದ ರೂಪವಾದ ಸಂದೇಶ.

ಶ್ರೀ ಬೆನಗಲ ರಾಮರಾವ್ ಎಂ. ಎಸ್. ಎಲ್. ಎಲ್. ಬಿ.

ಮದ್ರಾಸ್ ಸರ್ಕಾರದ ಪ್ರಾಮುಖ್ಯ ಭಾಷಾಂತರ ಕರ್ತರು (RETD.)

ತಾವು ಪ್ರೀತಿ ಪುರಸ್ಸರವಾಗಿ ಕಳುಹಿಸಿದ ಕರ್ನಾಟಕಕೇಸರಿಯ ಪ್ರಥಮಸಂಚಿಕೆಯು ತಲಪಿತು. ಕಳೆದ ಹತ್ತು ವರ್ಷಗಳಿಂದ ಮೊದಲ್ಗೊಂಡು ಬಳ್ಳಾರಿ ಜಿಲ್ಲೆಯಲ್ಲಿ ಒಂದು ಕನ್ನಡ ವಾರಪತ್ರಿಕೆಯು ಹೊರಡಬೇಕೆಂದು ತುಂಬ ಆಶೆಯಿಟ್ಟುಕೊಂಡಿದ್ದೆನು, ಮತ್ತು ಬಳ್ಳಾರಿಯ ನನ್ನ ಎಷ್ಟೋ ಮಂದಿ ಆಪ್ತಮಿತ್ರರೊಡನೆ ಮಾತನಾಡಿಯೂ, ಇದ್ದೆನು. ಅಅಪೇಕ್ಷೆಯು, " ಕರ್ನಾಟಕ ಕೇಸರಿಯ" ಮೂಲಕವಾಗಿ ಈಗ ನೆರವೇರಿದ್ದಕ್ಕಾಗಿ ಅತ್ಯಾನಂದಪಡುತ್ತಿರುವೆನು. ಪಾಶ್ಚಾತ್ಯ ವಿದ್ಯಾಸಂಸ್ಕೃತರೂ, ಸುರಿತವೇರಸೇವಕರೂ, ಅದ ಮ್ಯಾಗಿ ಸಬ್ರಹ್ಮಣ್ಯಂ ರವರ ಸಂಪಾದಕತ್ವದಲ್ಲಿ ತಮ್ಮ ಪತ್ರಿಕೆಯು ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಿ, ಹೆಚ್ಚುವುದಾಗುವುದು, ಆಶೆಯಿಟ್ಟು ದೇವರನ್ನು ಪ್ರಾರ್ಥಿಸುವೆನು. ಕರ್ನಾಟಕಸ್ಥರ ಕೇಂದ್ರಸ್ಥಾನವಾಗಿ, ಹೃದಯವಂತಿರುವುದು. ಅದು ಎಲ್ಲಾದರೂ ಕನ್ನಡಿಗರ ಕೈತಪ್ಪಿ ಹೋದುದಾದರೆ, ಅಮೇಲೆ " ಕರ್ನಾಟಕ ಏಕೀಕರಣ" ಎಂಬುದು ನಿರರ್ಥಕವು. ಆದುದರಿಂದ ಬಳ್ಳಾರಿ ಪ್ರಾಂತ್ಯದ ನನ್ನ ಬಂಧುಗಳನ್ನು ಎಚ್ಚರಿಸುವುದಕ್ಕಾಗಿಯೇ ಹುಟ್ಟಿರುವ ಈ ತಮ್ಮ ಪತ್ರಿಕೆಗೆ ಯಾವ ಬಾಧೆಯೂ ಬಾರದಂತೆ ಕಾಪಾಡಬೇಕಾದ ಭಾರವು ಸಮಸ್ತ ಕರ್ನಾಟಕಸ್ಥರ ಮೇಲಾಗಿರುವುದು ತಮ್ಮ ಪತ್ರಿಕೆಯ ವಿಚಾರದಲ್ಲಿ ನನ್ನಿಂದ ಆಗುವಷ್ಟು (ಅಮಿತಿತ್ಯಲ್ಪನೆಂದು ಹೇಳಬೇಕಾದುದಿಲ್ಲ,) ಸಹಾಯ ಕೊಡಲು ಮತ್ತು ಕೊಡಿಸಲು ನಾನು ಸರ್ವದಾ ಸಿದ್ಧನಿರುವೆನೆ.

ಇಂತು ತಮ್ಮ ಹಿತಾಕಾಂಕ್ಷಿ.

ತಾ| ೨೭—೧೦—೩೧ **ಬೆನಗಲ್ ರಾಮರಾವ್.**

ಮದ್ರಾಸ್

ಕರ್ನಾಟಕ ಕೇಸರಿ ಪ್ರಶಂಸೆ

(ಕಂದ ಪದ್ಯಗಳು.)

ಲೇಖಕ ಎಂ. ಎಸ್. ಸುಬ್ಬಣ್ಣ ಬಾಳುಬಂಡೆ

ಕಾಮಿತ ಫಲಗಳನೀಯುತೆ। ಧಾಮಿಪಪೊಲವಾದ ನಿಬಿಳಸುಜನಾಳಿಗೆ ತಾಂ। ಧಾಮವುಯೆನಿಸಿದ ಕನ್ನಡ ನೀಮಹಿಮಗೆ ಶೀರ್ಷಗೊಂಡು ದಾಪೂರ್ವಜರಿಂ ॥ ೧ ॥ ಮಂಗಳಕರಭಾರತಗೆ ಯಿ। ದುಗವುತಾನೆ ನಿಸಿವಾಸಿಸುವಜನ ಕೆಲ್ಲಂ। ಸಿಂಗರಿಸಿ ಭೋಗಗಳ। ಬಿಗೊಡುವಿ ಕರ್ನಾಟಾಖ್ಯಜನನಿಸಾಕ್ಷಿಸಾನಂ ॥ ೨ ॥

॥ ೩ ॥ ಇರುವನಭಾರತಮಾತೆಯು। ಅರಿವಂತಃ ಕರುಣದಿಂದೆತಾನೇರುತೆಸಂ। ಚರಿಸುವ ಕೇಸರಿ ನಾಗ್ನೆಯಸಿರಿದಿತ್ತಿಪ್ಪ ದಳೊಪಂ ಬೊತರದೀಸಿಂಹಂ ॥ ೪ ॥ ಕರ್ನಾಟಕದಾಲಯ ವಹ। ಪೂರ್ಣಂಯೆನಿನಂತತೋರ್ಪ। ಬಳ್ಳಾರಿಪುರಂ। ವರ್ಣಾಗ್ರಗಣ್ಯ ಟ ಸುಬ್ಬ। ಮ್ಮಣ್ಯನ ಸಂಪಾದಕತ್ವದಲೆಯುದರಿ ॥ ೫ ॥ ಇನ್ನಿದರಂಘೈವ್ರಿಗೆಸಂ। ಪನ್ನರುಸುಖಕಂ ನಡಾಭವಾನಿಗಳೆಲ್ಲಂ। ಮನ್ನಿಪಿಪ್ಪೋತ್ಸಾಹಿಸಲಿದು ಸಂಸತಿಕೆಯಗೋಂಡು ಮುರಿವುದರಿವರ್ಗಗಳಂ ॥ ೬ ॥ ಕಾವಕರಿಂಸ್ತ ಕವಹನುಂ, ರದನಾಗ್ರದಿಕಿತ್ತಿ ಬಿಸುಟದರಿಂಸುದಿಗಳು। ಪದೆಮರುಳಿಸುತಾಯಂತಕಳಿ ಸದನಮೊಳರಿ ಸುತ್ತಿಪ್ಪರಿಗೀಪ್ರದ ಶೌರ್ಯಂ ॥ ೭ ॥ ಈ ಕೇಸರಿಯೋಳ್ಸದ್ಗುಣ। ಸೌಕರ್ಯವನಿಸಯಗೆಲ್ಲ ವಿವರಿಸಬಹುದೈ। ತಾಕರು ಣಿಪಸಂಭಾರುತ। ಬೇಕಾದುದನೆಲ್ಲ ನೋಲಿದುಮುದದಿಂ ನಿರುತಂ ॥ ೮ ॥ ಯಿದ ಪ್ರಜೆಗಳಸೌಖ್ಯಂಗಳ। ನೊದಗಿಸಿಕೊಡಲೀಗಲುದಯವಾಂತಿಹುದೆಂದೇ। ಮುದವಾಂತು ಯಿಬಿಳಜನಗಳು। ಬುಧಶಾರ್ದೂಲರ್ವಚನ ವಿಾಯಲೆಂ ಪಾಂಬೇಡ್ವೇ ॥ ೯ ॥

ಜಾ

ಶುದ್ಧ ಖಾದಿ **ಕೈ ನೂಲು ಕೈ ಮಗ್ಗದಲ್ಲಿತಯಾರಾದ** **ಅಗ್ಗ ಖಾದಿ**

(ಖಾದಿಯೇ ಸ್ವರಾಜ್ಯದ ಕೈಕಸುಬದ ಖಾದಿ)

ಅನ್ನವಿಲ್ಲದೆ ಕೊರಗುತ್ತಿರುವ ಕಡುಬಡವರಿಗೆ ನೀವು ನಕ್ಕಷ್ಟು ಊಟವನ್ನು ಕೊಟ್ಟು ಪುಣ್ಯ ಕಟ್ಟಿಕೊಳ್ಳ ಬೇಕೆಂದು ಅಪೇಕ್ಷಿಸುವುದಾದರೆ, ಶುದ್ಧ ಖಾದಿಯನ್ನೇ ಧರಿಸಿರಿ ! ಮಹಾತ್ಮ ಗಾಂಧಿ, ಜವಾಹರ್‌ಲಾಲ್ ನೆಹರು ವಗೈರೆ ದೊಡ್ಡ ದೊಡ್ಡ ಮುಖಂಡರ ಚಿತ್ರಗಳನ್ನು ಮಿಲ್ಲು ಬಟ್ಟೆಗಳ ಮೇಲೆ ಹಾಕಿ ಸೋಸ ಮಾಡುತ್ತಿರುವರು. ಅಲ್ಲದೆ ಮಿಲ್ಲಿನ ಒರಟು ಬಟ್ಟೆಗಳನ್ನು ಖಾದಿಯೆಂತ ಸಾರುತ್ತಾರೆ. ನೀವು ಮೋಸ ಹೋಗ ಬೇಡಿರಿ. ನಮ್ಮಲ್ಲಿ ಒಂದು ಸಲ ಬಂದು ಪರೀಕ್ಷಿಸಿ ಕೆಗೆದು ಕೊಳ್ಳಿರಿ

ಖಾದಿ ಕೋ ಆಪರೇಟಿವ್ ಸೊಸೈಟಿ.

ಬ್ರಾಹ್ಮಣರ ಬೀದಿ ಬಳ್ಳಾರಿ

ಕರ್ನಾಟಕ ಕೇಸರಿ

ಸಂಪಾದಕೀಯ ವಿಚಾರಗಳು.

ತಿರುಪತಿ ದೇವಸ್ಥಾನ.

ತಿರುಪತಿಯು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಾಮುಖ್ಯ ಯಾತ್ರಾಸ್ಥಳವಾಗಿ ವರ್ಷಕ್ಕೆ ಲಕ್ಷಗಟ್ಟಲೆ ಆದಾಯವನ್ನು ಕೊಡುತ್ತಾಗಿದೆ. ಹಿಂದೂ ದೇಶದ ಎಲ್ಲಾ ಭಾಗಗಳಿಂದಲೂ ಯಾತ್ರೀಕರು ಬರುತ್ತಾರೆ. ಇಂಥಾ ಪವಿತ್ರ ಸ್ಥಳದಲ್ಲಿ, ಭಕ್ತರಿಂದ ಭಕ್ತಿ ಪೂರ್ವಕವಾಗಿ ಕೊಡಲ್ಪಡುವ ದ್ರವ್ಯವು, ಮಹಂತರ ಆಡಳಿತದಲ್ಲಿ, ಯೋಗ್ಯತೆಯಿಲ್ಲದ ಜನರಿಂದ ಅನವ್ಯಯ ವಾಗುವುದೆಂತಲೂ, ವಿದ್ಯಾವಂತರಲ್ಲದ ಬೈರಾಗಿಗಳು ನೂರಾರು ರೂಪಾಯಿ ಸಂಬಳವನ್ನು ಹೊಂದುತ್ತಿರುವರೆಂತಲೂ, ಹೊರದೂರ ಯಾತ್ರೀಕರಿಗೆ ಕಷ್ಟಗಳುಮಾತ್ರ ತಪ್ಪುವಂತಿಲ್ಲವೆಂತಲೂ, ನಮಗೆ ತಿಳಿದು ಬಂದಿದೆ ಪ್ರಜಾಪಕ್ಷವನ್ನು ವಹಿಸಿ ಮಾತನಾಡುವ, ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಸದಸ್ಯರು ಹೋದ ವರ್ಷವೇ ಈ ಪ್ರಶ್ನೆಯನ್ನು ಚರ್ಚಿಸಿದ್ದರು. ಈ ಬಿಲ್ಲಿಯ ಸದಸ್ಯರಾದ ಮಿ॥ **ರಂಗನಾಥ ಮೊದಲಿಯಾರ್** ರವರು ಈ ದೇವಸ್ಥಾನದ ಸುವ್ಯವಸ್ಥೆ ಗೋಸ್ಕರ ಒಂದು ಬಿಲ್ ತರುವವರಿದ್ದಾರೆ. ಮಹಂತರೇನಾದರೂ, ನಿರಂಕುಶವಾಗಿ ವರ್ತಿಸಿರುವುದು ಸತ್ಯವಾಗಿದ್ದರೆ, ಅದಕ್ಕೆ ಕಾನೂನಿನಿಂದ ತಡೆಯಾಗಬೇಕು ದಕ್ಷಿಣದೇಶದ ಇಂಥಾ ಪ್ರಾಮುಖ್ಯ ಸ್ಥಾನವು ಒಬ್ಬ ವ್ಯಕ್ತಿಯ ಜವಾಬ್ದಾರಿ ಮೇಲಿರಬಾರದು ಪರಸ್ಥಳಗಳಿಂದ ಬರುವ ಯಾತ್ರೀಕರಿಗೆ ಕಡಿಮೆ ಖರ್ಚಿನಲ್ಲಿ ಎಲ್ಲಾ ಅನುಕೂಲಗಳು ದೊರೆಯುವಂತಿರಬೇಕು ಗುಡ್ಡದ ಮೇಲೆ ಮತ್ತು ಕೆಳಗೆ ಆರೋಗ್ಯಸೂತ್ರಗಳಿಗನುಸರಿಸಿ, ಸ್ವಚ್ಛತೆ, ಸಿಹಿ ನೀರಿನ ವ್ಯವಸ್ಥೆ, ಭಕ್ತರಗಳ ಅನುಕೂಲತೆ, ವರ್ಗಿರೆ ದೃಷ್ಟಿಗಳಿಂದ ಸದಸ್ಯರು ಈ ವಿಷಯವನ್ನು ಪರ್ಯಾಲೋಚಿಸಿ, ಚಟ್ಟದಿಂದ ನಿರಂಕುಶಾಧಿಕಾರವನ್ನು ಬಂಧಿಸಬೇಕು.

ಕ್ರಾಂತಿಕಾರರ ಚಳವಳಿ.

ಹಿಂದೂ ಸ್ಥಾನದ ಸ್ವಾತಂತ್ರ್ಯವು ಬೇಕೆಂದರನ್ನು ತೊಳ್ಳುವುದರಿಂದ ಬರುವುದೆಂಬ ಹುಚ್ಚು ನಂಬಿಕೆಯು ಕೆಲವು ತರುಣರಿಗುಂಟು, ಧಾಕಾ ಪಟ್ಟಣದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಮಿ॥ ಎಲ್. ಜೆ. ದುರ್ನಾವ್ ರು ತಾ॥ 28—10—31 ಬುಧವಾರ ಸುಮಾರು 12-30 ಘಂಟೆಗೆ ವ ನೆಗೆ ಹಿಂದಿರುಗುವವೇಳೆಯಲ್ಲಿ ಕೆಲವು ಯುವಕರು ಅವರನ್ನು ಒಂದೇ ಸವನೆ ರಿವಾಲ್ವರ್‌ಗಳಿಂದ ಹೊಡೆದರು. ಮುಖದಲ್ಲಿ ಸೆಟ್ಟು ತಗಲಿದೆ ಈ ವರೆವಿಗೆ ಬಂದ ವರ್ತಮಾನಗಳಿಂದ ಅವರ ಸ್ಥಿತಿಯು ಅಪಾಯಕರವಾಗಿಲ್ಲೆಂದು ತಿಳಿದು ಬಂದಿದೆ. ತಾ॥ 29—10—31 ರ ದಿವಸ ಕಲ್ಕತ್ತಾ ಯೂರೋಪಿಯನ್ ಸಂಘದ ಅಧ್ಯಕ್ಷರಾದ ಮಿ॥ ಇ. ವಿಲ್ಲಿಯರ್ಸರವರು ತಮ್ಮ ಕಚೇರಿಯಲ್ಲಿ ಕುಳಿತು ಸರ್ಕಾರದ ಪಕ್ಷಪಾತಿಗಳೆಂದಿಗೆ ಮಾತಾಡುತ್ತಿರುವಾಗ, ಮಧ್ಯಾನ್ಹದ ಸುಮಾರಕ್ಕೆ, ಒಬ್ಬ ಯುವಕನು ಬಾಗಿಲಿಗೆ ಬಂದು ರಿವಾಲ್ವಾರಿನಿಂದ ಮೂರು ಸಾಲು ಬೇಳೆ ಅವರನ್ನು ಹೊಡೆದನು ಬೆನ್ನಿನಲ್ಲಿ ಸಾಧಾರಣ ಘಾಯವಾಗಿದೆ. ಇವರನ್ನು ಕಾಪಾಡಿದ ಭಗವಂತನ ಕೃಪೆಯು ಅವರ್ಣನೀಯವು.

ಹಿಂಸೆಯ ತತ್ವ.

ಹಿಂಸಾ ಮಾರ್ಗಗಳಿಂದ ಹಿಂದೂಸ್ಥಾನದ ಸ್ವಾತಂತ್ರ್ಯಚಳವಳಿಕ್ಕೆ ಪೂರಾ ಬಾಧೆಯು ತಟ್ಟುವುದೆಂದು ಮಹಾತ್ಮಗಾಂಧಿಯವರು ಅನೇಕ ವೇಳೆ ಹೇಳುತ್ತಲೂ, ತಮ್ಮ ಪತ್ರಿಕೆಗಳಲ್ಲಿ ಬರೆಯುತ್ತಲೂ, ಬಂದಿದ್ದಾರೆ. ಕ್ರಾಂತಿಕಾರರಿಂದ ಯಾವ ಉಪಯುಕ್ತ ಕೆಲಸವೂ ಆಗಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಅದಕ್ಕೆ ಬದಲಾಗಿ, ಅವರ ಸಂಬಂಧಿಕರೂ, ಆ ಊರಿನವರೂ, ಸರ್ಕಾರದ ಆಗ್ರಹಕ್ಕೆ ಪಾತ್ರರಾಗಿ ನಿರ್ದೋಷಿಗಳಾದವರನೇಕರು ತೊಂದರೆಗೆ ಒಳಗಾಗಬೇಕಾಗುತ್ತದೆ ಪಾಶ್ಚಿಮಾತ್ಯ ಘೋರಯಂತ್ರಣಕ್ಕೆ ಸರಿಯಾದ ಯ ದುರಿಲ್ಲದೆ ಅವರು ಈ ಗುಪ್ತ ಕಾರ್ಯವನ್ನು ಹೊಡಿರುತ್ತಾರೆ.

ಅವರೆ ಇಂಥಾ ಪ್ರಾಣ್ಯ ಕೆಲಸಗಳಿಂದ ಯುವಕರ ಅಮೂಲ್ಯ ಜೀವನವು ಶೀಘ್ರವಾಗಿ ಕೊನೆಗಾಣುವುದಲ್ಲದೆ ಹಿಂದೂಸ್ಥಾನದ ಪವಿತ್ರ ಹೆಸರಿಗೆ ಕಳಂಕ ಬೊದಗುವುದು ತಾಳ್ಳಿಯಿಲ್ಲದ ಯುವಕರು ಇನ್ನು ಮೇಲಾದರೂ, ಮಹಾತ್ಮ ಗಾಂಧಿಯವರ ಬೋಧನೆಗೊಳಪಡುವರೆಂದು ಆಶಿಸುತ್ತೇವೆ.

ಪಾರ್ಲಿಮೆಂಟ್ ಚುನಾವಣೆಗಳು.

ಆರ್ಥಿಕ ಸಮಸ್ಯೆಗಳನ್ನು ನಿವಾರಿಸಿ ದೇಶದಲ್ಲಿ ಶಾಂತಿಯನ್ನುಂಟುಮಾಡುವ ಧನೋದ್ದೇಶದಿಂದ, ಇಂಗ್ಲಾಂಡಿನಲ್ಲಿ ಮೂರು ದೊಡ್ಡ ಪಾರ್ಟಿಗಳವರೂ ಒಟ್ಟಾಗಿ ಜಾತೀಯಸರಕಾರವೆಂದು ನಾಮಾಂಕಿತಮಾಡಿ, ರಾಜ್ಯಕಾರಭಾರವನ್ನು ಕೆಲದಿವಸ ನಡೆಸಿದರು. ಮುಖ್ಯವಾದ ಕೆಲವಿಷಯಗಳನ್ನು ವಿಮರ್ಶಿಸಿ, ಆರ್ಥಿಕ ಸಮಸ್ಯೆಗಳಲ್ಲಿ ತಮ್ಮ ಅಭಿಪ್ರಾಯವನ್ನು ಒಪ್ಪಿಸಿದನಂತರ-ಚುನಾವಣೆಗಳು ನಡೆಯಬೇಕಾಯಿತು. ಈ ಚುನಾವಣೆಗಳಲ್ಲಿ ಜಾತೀಯ ಸರಕಾರಕ್ಕೆ, ಆತ್ಯಾಶ್ಚರ್ಯಕರವಾದ ಜಯವೂ ಕಾರ್ಮಿಕ ವರ್ಗದವರಿಗೆ ಹಿಂದೆ ಎಂದೂ ಕಾಣದ ಅಪಜಯವೂ ಒದಗಿದೆ. ಪ್ರಭುತ್ವ ಪಕ್ಷವಾದಿಗಳು (Conservatives) ಈಸಲ ಅಧಿಕಸಂಖ್ಯಾಕರಾಗಿ ಜಯಭೇರಿಯನ್ನು ಹೊಡೆಯುತ್ತಲಿದ್ದಾರೆ.

ಜಾತೀಯ ಸರಕಾರದ ಬಲ	556
ವಿರುದ್ಧ ಪಕ್ಷದವರ ಸಂಖ್ಯೆ ಇವರಲ್ಲಿ	57.
ಪ್ರಭುತ್ವ ಪಕ್ಷಪಾತಿಗಳು (Conservatives)	410

ಜಾತೀಯ ಸರಕಾರದವರಿಗೆ 165 ಲಕ್ಷ ಮತದಾರರು ತಮ್ಮ ಮತಗಳನ್ನು ತೊಟ್ಟರು. ಕಾರ್ಮಿಕ ವರ್ಗದವರಿಗೆ (LABOUR) 60 ಲಕ್ಷ ಮತಗಳು ದೊರತಿದವು

ಗೆದ್ದ ಪ್ರಮುಖರು.

ರಾಮ್ಸೆ ಮ್ಯಾಕ್ಡೊನಾಲ್ಡ್.
ಜೆ. ಹೆಚ್. ಟಾಮಸರ್.
ಸ್ಟಾನ್ಲಿ ಬಾಲ್ಡ್‌ವಿನ್.
ಸರ್. ಶಾಮುಯಲ್ ಹೋರ್.
ಲಾಯಡ್ ಜಾರ್ಜ್.
ಸರ್ ಜಾನ್ ಸೈಮನ್.
ಚರ್ಚಿಲ್ ಸಾಹೇಬರು
ಜಾರ್ಜ್ ಲಾನ್ಸ್‌ಬರಿ

ಸೋತ ಪ್ರಮುಖರು.

ಆರ್ಥರ್ ಹೆಂಡರ್‌ಸನ್.
ಕ್ಲೈನ್ಸ್.
ವೆಡ್ವುಡ್ ಬೆನ್.
ಸಕಲಾತ ವಾಲ
ಫೆನ್ನರ್ ಬ್ರಾಕವೆ.

ಸ್ನೋಡೆನ್ ಪ್ರಭುಗಳು ನಿಂತಿಲ್ಲ ಅವರೂ. ಇನ್ನೂ ಛೇಂಬರ್ಲೆನ್‌ಸಾಹೇಬರುಗಳಿಗೆ ಮಂತ್ರಿವರ್ಗದಲ್ಲಿ ಸ್ಥಾನವು ದೊರೆಯ ಬಹುದು.

ಲಂಡನ್ ವಾರ್ತೆಗಳು.

ಹಿಂದೂಸ್ಥಾನಕ್ಕೆ ಕೊಡಬೇಕಾದ ಸ್ವತಂತ್ರ್ಯದ ವಿಷಯದಲ್ಲಿ ಬ್ರಿಟಿಶನವರು ವಿನೂಹೇಳದೆ ಮೌನವಾಗಿರುವುದು-ಸರಿಯಾಗಿಲ್ಲವೆಂತಲೂ, ಮಹಾತ್ಮ ಗಾಂಧಿಯವರು ವಾರಕ್ಕೊಂದುದಿವಸ ಮೌನವಾಗಿದ್ದರೆ, ಬ್ರಿಟಿಶ ಸರ್ಕಾರದವರು ಪ್ರತಿನಿತ್ಯವೂ ಮೌನವನ್ನು ವಹಿಸುತ್ತಿರುವರೆಂತಲೂ ಸೂಚಿಸುತ್ತಾ ಡಾ. ಸಪ್ರುಯವರು, ಈ ವಿಷಯಗಳನ್ನು ಸ್ಪಷ್ಟವಾಗಿ ಬೇಳಲು ಸಭೆಯಲ್ಲಿ ಒತ್ತಾಯ ಪಡಿಸಿದರು.

ಹಿಂದೂಸ್ಥಾನ ಸರಕಾರದ ಕಾರ್ಯದರ್ಶಿಗಳಾದ ಸರ್. ಶಾಮುಲ್ ಹೋರರವರು ಜವಾಬು ಹೇಳುತ್ತಾ, ಪಾರ್ಲಿಮೆಂಟದ ಚುನಾವಣೆಗಳಿಂದ ಸರ್ಕಾರದ ಗಮನವು ಸದ್ಯಕ್ಕೆ ಬೇರೆಕಡೆ ಇರುವುದರಿಂದ, ತಾಳ್ಮೆಯಿರಬೇಕೆಂದರು. ಮತ್ತು, ಸಂಯುಕ್ತ ಉಪಸಮಿತಿಯವರು, ಕೇಂದ್ರ ಪ್ರಭುತ್ವದ ಮುಖ್ಯಾಧಿಕಾರಗಳ ನಿರ್ಣಯ ಮಾಡಲಿಲ್ಲವೆಂದರು.

ಅಲ್ಪ ಸಂಖ್ಯಾಕರ ಸಮಸ್ಯೆಯನ್ನು ಪರಿಹಾರ ಮಾಡದೆ, ಕೇಂದ್ರ ಪ್ರಭುತ್ವದ ಜವಾಬ್ದಾರಿ ವಿಷಯವನ್ನು ಚರ್ಚಿಸಲಾಗದೆಂದು, ಜಾಫರುಲ್ಲಾಖಾನರವರು ಹೇಳಿದರು.

ಮಹಾತ್ಮ ಗಾಂಧಿಯವರು.

ಈವಾರ ಡಾ ಮಾಂಟಿಸೋರಿಯವರ ಸಂದರ್ಶನವಾಯಿತು ಡಾಕ್ಟರ್‌ಸಾಹೇಬರು ಮಹಾತ್ಮರನ್ನೂ, ಅವರ ತತ್ವಗಳನ್ನೂ ಬಹಳ ಪ್ರಶಂಸಿಸಿದರು. "ನೀನು ಪುರುಷಶ್ರೇಷ್ಠನಿರುವಿ. ನೀನು ಪ್ರೇಮಮೂರ್ತಿ. ನಿನ್ನ ಜೀವಿತವೇ ಪ್ರತ್ಯಕ್ಷ ಪ್ರೇಮ ಸಂದೇಶ" ಮಹಾತ್ಮರು ಉತ್ತರ ಹೇಳುತ್ತಾ, ಬಾಲ ಬಾಲಿಕೆಯರಲ್ಲಿ ಪ್ರೇಮತತ್ವವನ್ನು ಬೆಳೆಸಲಿಕ್ಕೂ, ಅಹಿಂಸೆಯನ್ನು ಮಹಾನ್ ಮಾಡಲಿಕ್ಕೂ ಹೇಳಿದರು.

ಗಾಂಧಿಜಿ ನೇ ಇಸ್ತಿಯಲ್ಲಿ ಮಹಾತ್ಮರು ಯರವಾಡಾ ಜೈಲಿನಲ್ಲಿ ಅಪಾಯಸ್ಥಿತಿಯಲ್ಲಿದ್ದಾಗ ಕರ್ನಲ್ ಮಹಾಕರೆಂಬ ಡಾಕ್ಟರ್‌ರವರು ಅವರೇಷ ಮಾಡಿ ಮಹಾತ್ಮರ ಪ್ರಾಣದಾನ ಮಾಡಿದರು ಮಹಾತ್ಮರು ಅವರನ್ನು ಭೆಟ್ಟಿಯಾಗಿ ಪರಸ್ಪರ ಭಾಷಣ ನಡೆಸಿದರು.

(ಅದೇ ಪುಟದಲ್ಲಿ ಸುಂಪೂರ್ಣವಿದೆ.)

ಇಂಗ್ಲೆಂಡಿನ ಚುನಾವಣೆ.

ರಾಷ್ಟ್ರೀಯ ಪ್ರಭುತ್ವದವರು ಅತ್ಯಧಿಕ ಸಂಖ್ಯೆಯಿಂದ ದಿಗ್ವಿಜಯವನ್ನು ಹೊಂದಿರುವುದೂ, ಪ್ರಜಾಪಕ್ಷಪಾತಿಗಳೆಂದು ಪ್ರಖ್ಯಾತರಾದ ಕಾರ್ಮಿಕ ವರ್ಗದವರು ಸೋತು ಪಾತಾಳಕ್ಕಿಳಿದಂತಿರುವುದೂ, ಆಶ್ಚರ್ಯ ಜನಕವಾಗಿದೆ. ರಾಷ್ಟ್ರೀಯ ಪಕ್ಷದಲ್ಲಿ ಮೂರು ಭಾಗಗಳವರು ಸೇರಿರುವುದಾದರೂ, ಕನಸರ್ವೇಟಿವ್ಸ್ ಎಂಬ ವರ್ಗದವರು ವಿಶೇಷವಾಗಿ ಬಂದಿರುವುದರಿಂದ ಮಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಹೇಳಿದಂತೆ ರಾಜ್ಯಾಂಗ ವಿಧಾನದಲ್ಲಿ ಅಸರಫ್ಸೇಯಗೇನೂ ಪ್ರಭಾವವಾಗಿರುತ್ತದೆ. ಕಾರ್ಮಿಕ ವರ್ಗದವರ ಅವಜಯದ್ದೆ ರಾಜಕೀಯ ಅಭಿಪ್ರಾಯಗಳನ್ನು ಈಡೆಗೆ ಬದಲಾವಣೆ ಮಾಡಿದುವೆ ಎತ್ತು ಮುಖಂಡರಾಗಿದ್ದು ಈಗೆ ತ್ಯಜಿಸಿರುವ ಮಿ॥ ರಾಮಸೆ ಮಾಕ್ಡೊನಾಲ್ಡರೂ, ಉಮೇದವಾರರಾಗಿ ನಿಲ್ಲದೆ ಸುಮ್ಮನಿದ್ದ ಪ॥ ಸ್ನೋಡನ್‌ರವರೂ, ಕಾರಣರೆಂದು ಹೇಳಬೇಕಾಗಿದೆ. ಅಧಿಕ ಸಂಖ್ಯಾಕರಿರುವ ಟೋರಿಭಾಗದವರ ವಾತಾವರಣವಿದ್ದು, ಮಿ॥ ರಾಮ್ಸೆ ಮಾಕ್ಡೊನಾಲ್ಡರು ಮುಖ್ಯ ಮಂತ್ರಿತ್ವವನ್ನು ವಹಿಸುವ ಸಂಭವವಿರುವುದಾದರೂ, ಟೋರಿಯವರ ಅಭಿಪ್ರಾಯ ವಿರುದ್ಧವರ್ತಿಸುವುದು ಎಂದಿಗೂ ಸಾಧ್ಯವಿಲ್ಲ. ಇಂಥಾಸರಿಸ್ಥಿತಿಯಲ್ಲಿ ಅವರು ಎಷ್ಟುದಿವಸ ಈ ಅಧಿಕಾರದಲ್ಲಿ ಇರುವರೋ ಊಹಿಸುವುದು ಕೂಡ ಅಸಾಧ್ಯವಾಗಿದೆ. ಮಂತ್ರಿಗಳು ಎಷ್ಟು ದಿವಸ ಟೋರಿಯವರ ಕೀಲುಗೊಂಬೆಗಳಾಗಿರುವರೊ ಅಲ್ಲಿಂದ ಸರಿಗೂ, ಅವರು ಅಧಿಕಾರದಲ್ಲಿರಬಹುದೆಂದು, ಹೇಳಬಹುದು.

ಈ ರಾಜ್ಯಾಂಗ ಬದಲಾವಣೆಯಿಂದ ಹಿಂದೂಸ್ಥಾನದಲ್ಲಿ ಕಾರ್ಯತಃ ನಿಷ್ಪಾದಿಯಿಲ್ಲದಂತೆ, ಇಂಗ್ಲಿಷ್‌ಪಕ್ಷಗಳಲ್ಲಿ, ಯಾವ ಬಾಗದವರು, ಬಂದರೂ, ನಿರಂಕುಶಾಧಿಕಾರದಲ್ಲೇನೂ ಕಡಿಮೆಯಾಗುವುದಿಲ್ಲ ಉದಾಹರಣಾರ್ಥವಾಗಿ ಕಾರ್ಮಿಕವರ್ಗದವರು ಅಧಿಕಾರ ಬರುವುದಕ್ಕೆಂತಮುಂಚೆ, ರುಚಿ ರುಚಿಯಾದ ಮಾತುಗಳನ್ನು, ದೊಡ್ಡ ದೊಡ್ಡ ಭಾಷಣಗಳನ್ನು ಆಡಿದ್ದರು. ಅವರ ಅಧಿಕಾರದಲ್ಲೇ ಹಿಂದೂಸ್ಥಾನದಲ್ಲಿ ಘೋರಾತಿಘೋರ ಅತ್ಯಾಚಾರಗಳು ನಡೆದವು. ಪೋಲೀಸಿನವರು ಮಿತಿಮೀರಿ ಕೆಲಸಮಾಡಿದರು. ಸ್ತ್ರೀಯರು ಲಾಠಿಪೆಟ್ಟುಗಳಿಗೆ ಗುರಿಯಾದರು. ಶಾಂತ ಮೂರ್ತಿಗಳಾದ ಮಹಾತ್ಮಗಾಂಧಿಯವರು ಯರವಾಡಾ ಸೆರೆಮನೆಯನ್ನು ಕಂಡರು ಟೋರಿ ಪಕ್ಷದವರಲ್ಲಿ ಒಂದು ಸಾಗುವಿಕೆಯನ್ನು ನಾವು ಕಾಣಬಹುದಾಗಿದೆ. ಅವರು ಕಪಟಗಳಲ್ಲ. ಹೇಳುವದೊಂದು,ಮಾಡುವದೊಂದು ಈ ಕೆಲಸಗಳನ್ನು ಮಾಡಿಲ್ಲಾ, ಮುಂದೆಯೋಚನೆ ಪರಿಪತ್ತಿನಲ್ಲಿ ಮಾನವನ್ನು ಗಳಿಸದೆ, ತಮ್ಮ ಸಾಭಿಪ್ರಾಯಗಳನ್ನು ಸ್ಪಷ್ಟವಾಡಿಸುವರೆಂದು ನಿರೀಕ್ಷಿಸಲಾಗಿದೆ. ಅವರು ಆಗಾಗ್ಯೆ ಹೇಳುವಘೋರಣೆಗಳಿಂದ ಪೂರ್ಣಜವಾಬ್ದಾರೀ ಸರ್ಕಾರವು ನಮಗೆ ದೊರೆಯುವಂತಿಲ್ಲ, ಆರ್ಥಿಕ, ಸೈನಿಕ, ಮತ್ತು ವಿದೇಶೀ ವ್ಯವಹಾರಗಳ ಬಗ್ಗೆ ಹಿಂದೀಯರಿಗೆ ಅಧಿಕಾರವು ಕೊಡಲಾಗ ಪಡಿಲ್ಲವೆಂದು ಅವರು ಸ್ಪಷ್ಟವಾಗಿಹೇಳುವರು. ಹಿಂದೂಸ್ಥಾನಕ್ಕೆ ಸಪ್ತರ್ಷಿಗಳಾಗಿ ಬಂದು, ಯಾವತರಹ ಸ್ವರಾಜ್ಯವನ್ನು ಕೊಡಬೇಕೆಂಬ ಬಗ್ಗೆಸರದಿಮಾಡಿದವರಲ್ಲಿ ಪ್ರಮುಖರಾದ ಸರ್ ಜಾನ್ ಸೈಮನರು ಬೇರೆ, ಮಂತ್ರಿಗಳಾಗುವರೆಂಬ ವರದಿ ಇದೆ. ಅವರು ಬರಲಿ, ಬರದಿರಲಿ, ಕನಸರ್ವೇಟಿವ್ ಪಕ್ಷದವರು ಅವರುವರದಿಯಲ್ಲಿ ಶೋರಿಸಿದ ಸಾಜಿಸೆಗಳನ್ನು ಅಂಗೀಕರಿಸುವರು ಪೂರ್ಣ ಸ್ವರಾಜ್ಯಕ್ಕೇ ಯವಾಗಿಟ್ಟುಕೊಂಡಿರವ, ಕಾಂಗ್ರೆಸವರೂ, ಅವರ ಪ್ರತಿನಿಧಿಯಾಗಿ ಈಗ ಲಂಡನ್‌ದಲ್ಲಿರುವ ಮಹಾತ್ಮಾ ಗಾಂಧಿಯವರೂ, ಇವನ್ನೊಪ್ಪಲಾರರು.

ಗಾಂಧಿಯವರು, ರಿಕ್ತ ಹಸ್ತರಾಗಿ ಹಿಂದೂಸ್ಥಾನಕ್ಕೆ ಬಂದುದೇ ಆದರೆ, ಪರಿಣಾಮವು ಭಯಂಕರವಾಗಿ, ಉಭಯ ದೇಶಗಳಿಗೂ ಕಷ್ಟ, ನಷ್ಟಗಳು ಸಂಭವಿಸುತ್ತವೆ. ಅವರೆ, ದೇವರ ಸಂಕಲ್ಪವು ಹೇಗಿದೆಯೋ ನೋಡಬೇಕಾಗಿದೆ.

ಭಾರತೀಯರು ಪೂರ್ಣ ಸ್ವರಾಜ್ಯವನ್ನು ಹೊಂದಬೇಕಾದರೆ, ಅಧಿಕ ಧೈರ್ಯವೂ, ಸ್ವಾರ್ಥತ್ಯಾಗವೂ ಅಮಿತ ಸಹನೆಯೂ, ಹೃದಯವಿಶಾಲತೆಯೂ ಅತ್ಯಂತಾವಶ್ಯಕವಾಗಿದೆ ಈ ಅಮೂಲ್ಯಗುಣಗಳನ್ನೆಲ್ಲಾ, ನಾವು ಈ ವಿಚಾರಕಾಲದಲ್ಲಿ ಅಭ್ಯಸಿಸಬೇಕು.

ದಕ್ಷಿಣ ದೇಶದಲ್ಲಿ ಹಿಂದೀಪ್ರಚಾರ

ದಕ್ಷಿಣದೇಶದಲ್ಲಿ ಹಿಂದೀ ಪ್ರಚಾರ ಕಾರ್ಯವು 1918 ರಲ್ಲಿ ಮಹಾತ್ಮಗಾಂಧಿಯವರಿಂದ ಆರಂಭವಾಯಿತು. ಅವರ ಮಿತ್ರರಾದ ಶ್ರೀ ದೇವದಾಸ ಗಾಂಧಿಯವರು ಅನರ್ಹ ಮದ್ರಾಸಕ್ಕೆ ಬಂದು ಕೆಲಸಗಳು ಅಲ್ಲಿದ್ದಾ ಹಿಂದೀ ಪ್ರಚಾರ ಕಾರ್ಯಕ್ಕೆ ಬಲವಾದ ಅಸ್ತಿಭಾರವನ್ನು ಹಾಕಿದರು. ಪ್ರಾರಂಭಾದಂದಿನಿಂದ ಐಂಬತ್ತು ವರ್ಷಗಳವರೆಗೂ, ಅಲಹಾಬಾದ ಹಿಂದೀಸಾಹಿತ್ಯ ಸಮ್ಮೇಲನದವರು ದ್ರವ್ಯಸಹಾಯ ಮಾಡಿದರು. ನಂತರ ದಕ್ಷಿಣ ಭಾರತ ಹಿಂದೀಪ್ರಚಾರ ಸಭೆಯವರು ಆ ಕೆಲಸವನ್ನು ಕೈಗೊಂಡು, ದಕ್ಷಿಣ ದೇಶೀಯರಿಂದ ಹಣ ಸಹಾಯವನ್ನು ಬೇಗೆಯುತ್ತಾ ಲಿದ್ದಾರೆ. ಉತ್ತರ ದೇಶದಿಂದ ಸುಮಾರು ಒಂದು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳು ಸಹಾಯವಾಯಿತ. ದಕ್ಷಿಣ ದೇಶದ್ದರು ಅಷ್ಟೇಂದೀಚೆಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಮದ್ರಾಸಿನ ಸಭೆಯು ಪ್ರತಿ ವರ್ಷ ಕೈಕೆರುವುದೇಕೆ ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರಭಾಷಾ ಎಂಬಪರೀಕ್ಷೆಗಳನ್ನು ನಡೆಸುವುದು. ಭಾಷಾವಿಶಾರದ, ಪ್ರಚಾರಕ ಪರೀಕ್ಷೆಗಳು ವರ್ಷಕ್ಕೊಂದುಸಲ ಮಾತ್ರವೇ ನಡೆಯುತ್ತವೆ. ದಕ್ಷಿಣ ದೇಶದ ವಿವಿಧ ಭಾಗಗಳಲ್ಲಿ 113 ಸ್ಥಳಗಳಲ್ಲಿ ಪರೀಕ್ಷೆಗಳು ನಡೆಯುತ್ತಲಿವೆ ಈ ಒಳಗಾಗಿ ಸುಮಾರು ನಾಲ್ಕುವರೆ ಲಕ್ಷ ಜನಗಳಿಗೆ ಹಿಂದಿಯನ್ನುಂಬಂಧವಾಗಿದೆ.

ಸತ್ಯಾಗ್ರಹಚಳುವಳಿಕಾಲದಲ್ಲಿ ಜೈಲುಗಳು ಹಿಂದೀ ಕಲಿಯಲಿಕ್ಕೆ, ಸೊಗಸಾದ ಪಾಠಶಾಲೆಗಳಾಗಿದ್ದವು. ರಾಷ್ಟ್ರೀಯಕ್ಕೆ ಕುಮುಖಾಗಲಿ, ಬಣ್ಣವಾಗಲಿ, ಹಿಂದೀಭಾಷೆಯನ್ನು ಕಲಿಯಲಿಕ್ಕೆ ಅಡ್ಡಬರಲಿಲ್ಲಾ. ಹಿಂದೀಯನ್ನು ಕಲಿತು ದೇಶದಲ್ಲಿ ನಿಕಭಾಷೆಯ ಪ್ರಚಾರವಾಯ ತೆಂದರೆ, ಸ್ವರಾಜ್ಯದ ಅತ್ಯಂತ ಪ್ರಾಮುಖ್ಯತೆಯೆಂದು ಸಾಧಿಸಿದಂತಾಗುವುದು.

ಹೊಕ್ಕಸಾಧಿಕಾರಿಯಾದ ಪ್ರಪಂಚದ ಪ್ರಥಮ ಸ್ತ್ರೀವ್ಯಕ್ತಿ.

ಸುಮಾರು ಹತ್ತುಕೋಟಿ ಪ್ರಜಾಸಂಖ್ಯೆಯುಳ್ಳ ರಷ್ಯಾದೇಶದ ಸಮಗ್ರ ಹಣದ ಆಡಳಿತವು ಬಾಲ್ಚಾರಯಾಕೋವ್ಸ್ಕಿಯ ಎಂಬ ಸ್ತ್ರೀಯ ಅಧಿಕಾರದಲ್ಲಿದೆ. ಪ್ರಪಂಚದಲ್ಲಿ ಇದೇಒಂದು ಉದಾಹರಣೆಯಾಗಿದೆ. ಸಾವಿಯಟ್ ಸರ್ಕಾರದಲ್ಲಿ "ಆರ್ಥಿಕ ಪ್ರತಿನಿಧಿ" ಎಂಬ ಹೆಸರು ಆಕೆಗೆ ಸಲ್ಲುವುದು. ಆ ಸರ್ಕಾರದ ಗಣನೆಯಲ್ಲಿ ಸೆಷ್ಟಂಬರು 30 ಕ್ಕೆ ವರ್ಷವು ಮುಗಿಯುವುದು. ಆದುದರಿಂದ ಅಯವ್ಯಯ ಪಟ್ಟಿಯು ಅ ಸ್ತ್ರೀ ವ್ಯಕ್ತಿಯಿಂದ ತಯಾರಾಗಿ ಆ ತಾರೀಖಿನೊಳಗಾಗಿಯೇ ಸರ್ಕಾರಕ್ಕೆ ತಲಪಿ, ನಂತರ ವಾರ್ಷಿಕ ಆಯವ್ಯಯವು ನಿಶ್ಚಯಿಸಲ್ಪಡುವುದು.

ಇಂಥಾ ಅದ್ಭುತಶಕ್ತಿಯನ್ನುಳ್ಳ ಆ ವ್ಯಕ್ತಿಯ ಚರಿತ್ರೆಯನ್ನರಿಯಲು ಸಾಹಸರು ಕುತೂಹಲಿಯುಕ್ತರಾಗಬಹುದು ಸೂಸ್ಕೊಂಬ ಪಟ್ಟಣದಲ್ಲಿ ಒಬ್ಬ ಮುದ್ರಣಕಾರನ ಮಗಳಾಗಿ ಜನಿಸಿ, 1899 ನೇ ಇಸ್ವಿಯಲ್ಲಿ, ತನ್ನ ತಂದೆಯ ಸ್ಥಾಪಿಸಿದ್ದ "ಬೋಲ್ಷೆವಿಕ್" ಪಾರ್ಟಿಗೆ ಮುಖಂಡಳು. ಆಗ ಆ ಬಾಲೆಯು ಚಿಕ್ಕ ವಿದ್ಯಾರ್ಥಿಯಾಗಿದ್ದಳು. ಆ ಕಾಲದಲ್ಲಿ ಮುದ್ರಣಕಾರರು ಐಶ್ವರ್ಯವಂತರಾದ್ದರಿಂದ, ಆಕೆಗೆ ವಿಶ್ವವಿದ್ಯಾಲಯದ ಶಿಕ್ಷಣವು ದೊರೆತು, ವಿಜ್ಞಾನ ಶಾಸ್ತ್ರದಲ್ಲಿ ಪ್ರವೀಣಳಾದಳು. ವಿದ್ಯಾರ್ಥಿಯಾಗಿರುವಾಗಲೇ, ಕ್ರಾಂತಿಕಾರಕ ಸಂಸ್ಥೆ ಚಳವಳಿಯನ್ನು ಹೂಡಿದ್ದಳು. ಸೂರಿಯಸಲ ಆಕೆಯನ್ನು ಸಹೀಪಾರಾ ಮಾಡಿದ್ದರು. ಒಂದುಸಲ ಸೈಬೀರಿಯಾ ದೇಶದವರಿಗೂ ಅಟ್ಟಿದ್ದರು. 1917 ಇಸ್ವಿಯಲ್ಲಿ ಕ್ರಾಂತಿಯು ಪ್ರಾರಂಭವಾಯಿತು. ಆಗ ಈ ವ್ಯಕ್ತಿಯು ಪೂರಾ ಚಟುವಟಿಕೆಯಿಂದ ಭಾಗ ತೆಗೆದುಕೊಂಡಳು. ಯುದ್ಧಕಾಲಗಳಲ್ಲಿ ಲಸಾಯಗೆಗಳನ್ನು ಕಳ್ಳಿಸಿದೆ, ರಾತ್ರಿಹಗಲೆನ್ನದೆ, ಬೋಲ್ಷೆವಿಕ್ ಕ್ರಾಂತಿಕಾರರಿಗೆ ಸಹಾಯಮಾಡಿದಳು. ಕೊನೆಗೆ ಬೋಲ್ಷೆವಿಕ್ ಸರ್ಕಾರವು ಸ್ಥಾಪಿತವಾದಾಗ 1921 ರಲ್ಲಿ ಮಾಸ್ಕೋ ಪಟ್ಟಣಕ್ಕೆ ಬಂದು, ಸಹಾಯಕ ವಿದ್ಯಾಭ್ಯಾಸ ಮಂತ್ರಿಯಾಗಿ ದೇಶದ ಆಡಳಿತವನ್ನೆಲ್ಲಾ 1929 ವರೆಗೂ ನಿರ್ವಹಿಸಿದಳು. ಆ ವರ್ಷವೇ ಆರ್ಥಿಕ ಮಂತ್ರಿಯ ಅಧಿಕಾರವು ದೊರೆಯಿತು.

ಗೋ ಸಪ್ತಾಹ.

ಒಕ್ಕಲತನವೇ ಮುಖ್ಯವಾಗಿರತಕ್ಕ ಈ ನಮ್ಮ ಭರತ ಖಂಡದಲ್ಲಿ ಗೋರಕ್ಷಣೆಯು ಅತ್ಯಂತ ಮಹತ್ವದ ಕಾರ್ಯವಾಗಿದೆ. ಜನಗಳ ಅಯುರಾರೋಗ್ಯಗಳಿಗೆ ಅಗತ್ಯವಾಗಿರತಕ್ಕ ಹಾಲು, ಮೊಸರುಗಳು ರಾಷ್ಟ್ರದಲ್ಲಿ ದಿನೇ ದಿನೇ ಕಡಿಮೆಯಾಗಿ ಪೈರಿನ ಹಾಲು ಮೊಸರುಗಳು ವಿಶೇಷಗತಿಯಿಂದ ವಿಶೇಷವಾಗಿ ಬಳಕೆ ಪಡುತಿವೆ. ಈ ಸೋಚನೀಯ ಸ್ಥಿತಿಯು ಸಮಾರತ ಯಾಗಬೇಕಾದರೆ ಶೀಘ್ರಕಾಲದಲ್ಲಿಂತೆ ಗೋರಕ್ಷಣೆಯು ಭರತ ಖಂಡದ ಸಮಿತ್ತ ಕಾರ್ಯವಾಗಬೇಕು.

ಕಳೆದ ವರ್ಷ ಅನೇಕ ಸ್ಥಳಗಳಲ್ಲಿ ಈ ಸಪ್ತಾಹವು ಪ್ರಾರಂಭವಾಗಿದೆ. ಅದು ಈ ವರುಷ ಹೆಚ್ಚು ಪ್ರಮಾಣದಲ್ಲಿ ಜರುಗಬೇಕು. ಇದೇ ಖರ್ಚ ತಾರೀಕ ಶುಕ್ರ ೧ ಶನಿ ೧೦ ವರೆಗ ೧೦ ದಿನ ವರೆಗೆ ಈ ಗೋ ಸಪ್ತಾಹ ಜರುಗಬೇಕಾಗಿ ಗೊತ್ತಾಗಿದೆ.

ಉದ್ಯೋಗ

ಬಳ್ಳಾರಿ ಸುದ್ದಿ.

1 ಉಪಾಧ್ಯಾಯರ ದಿನ

ದಕ್ಷಿಣ ಹಿಂದೂಸ್ಥಾನದ ಉಪಾಧ್ಯಾಯರ ಪರವಾಗಿ, ಬಳ್ಳಾರಿಯ ಉಪಾಧ್ಯಾಯರು 'ವಿದ್ಯಾಭ್ಯಾಸ' ದಿನವನ್ನು ಆಚರಿಸಿದರು 31-10-31 ರ ದಿನದ ಪ್ರಾತಃಕಾಲ ಮಿ॥ ಮಾರ್ಟಿನರವರ ಅಧ್ಯಕ್ಷತೆಯಲ್ಲಿ ಸಭೆಯುಕೂಡಿ, ಪ್ರಬಂಧಗಳು ಓದಲ್ಪಟ್ಟು, ಉಪಾಧ್ಯಾಯರು ಮತ್ತು ಸಂಸ್ಥೆಯ ವಿಷಯದಲ್ಲಿ ಜರ್ಜಿಯಾಯಿತು ತಂದೆ, ತಾಯಿಗಳ ಮತ್ತು ಪೋಷಕರ ಸಂಘವನ್ನೇರ್ಪಡಿಸಿ, ಉಪಾಧ್ಯಾಯರ ಕೆಲಸದಲ್ಲಿಯೂ, ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಯ ವಿಷಯದಲ್ಲಿಯೂ, ಅವರು ಉತ್ಸಾಹವನ್ನು ತೆಗೆದುಕೊಳ್ಳಲನುಕಾಶನಿಯ ಪಂತೆ ಒಂದು ರಾಯ ನಿರ್ಣಯ ಪಾಯಿತು ವಿದ್ಯಾನಿಕೇತನದಿಂದ ಮಿ॥ ಕೆ ಎಸ್. ವೇಂಕಾಂತಂರವರ ರಾಯವನ್ನು ಎಲ್ಲರೂ ಅನುಮೋದಿಸಿದರು ಬೇಗ್ಗೆ 8 ರಿಂದ 12 ರ ವರಿಗೆ ಶಾಲೆಯನ್ನಿಟ್ಟು ಎಲ್ಲಾ ವಿಷಯಗಳಿಗೂ ಅನುಕೂಲವಡಿಸಬೇಕೆಂದು, ಶ್ರೀ ಪಟ್ಟಂ ಶಾಸ್ತ್ರಿಯಾರು ತಂದ ರಾಯವನ್ನು, ಆಗತೀ ಜರ್ಜಿನಲಿಲ್ಲಾಗುವುದಿಲ್ಲೆಂದು, ಸಾಹೆಬರು ಸುಂದು ಸರಿಸಿದರು ಸಾಯಂಕಾಲ ಬಹಿರಂಗ ಸಭೆಯು ಮ್ಯುನಿಸಿಪಲ್ ಹೈಸ್ಕೂಲಿದಲ್ಲಿ ವಕೀಲ ಶ್ರೀ ಬಾಂಜಿಯಾಯರ ಅಧ್ಯಕ್ಷತೆಯಲ್ಲಿಕೂಡಿ, ಶ್ರೀ ಕೋಟಿಲಿಂಗಂರವರ ಸ್ವಾಗತವಾದ ಉಪನ್ಯಾಸವಾಯಿತು, ಅನಂತರ ಭಾಷಣಗಳನ್ನು ವರ್ಣಿಸುತ್ತಾ, ದಕ್ಷಿಣ ಇಂಡಿಯಾ, ಸಂಘದವರು ಮಾಡುತ್ತಿರುವ ಸೇವೆಯನ್ನು ನಿಷ್ಪಾಲಾಗಿ ವಿವರಿಸಿದರು ಲಘ್ವಕ್ಷರ ಅಂತ್ಯಭಾಷಣಗಳಿಂದ ಉಪಯುಕ್ತ ಸೂಚನೆಗಳೆಮ್ಮವೃ, ಕಷ್ಟಸಟ್ಟವರಿಗೆಲ್ಲ ಧನ್ಯವಾದಗಳರ್ಪಿತವಾದ ಮೇಲೆ ಸಭಾವಿಸರ್ಜನೆಯಾಯಿತು

2 ಪುರಸಭೆಯ ವಿಷಯ

ಪುರಸಭೆಯ ಅಧ್ಯಕ್ಷರಾದ ಶ್ರೀನಾರಾಯಣರಾಯರು ಭಾನುವಾರ (31—11—31) ಮಧ್ಯಾನ್ಹ 12 ಘಂಟೆಗೆ ಪ್ರೆಸಿಡೆಂಟರ ಕಛೇರಿಯಲ್ಲಿ ಸಾರ್ವಜನಿಕರ ಒಬ್ಬಾಬ್ಬರಿಯನ್ನು ನಡಿಸಿದರು ನಾಳೆ ಅಂದರೆ ಮಂಗಳವಾರ (3—11—31) ಸಾಯಂಕಾಲ ಪುರಸಭೆಯ ನೌಕರಕ್ಕೆಲ್ಲರೂ ಸೇರಿ ಇವರಿಗೆ ಅಲ್ಪಸನ್ಮಾನದಿಂದ, ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವಾಗೌರವಿಸುವರು ಶ್ರೀ ಬಿ ಭೀಮರಾಯರು ಅಧ್ಯಾಸನವನ್ನುಮಿಸುವರು 10—11—31 ರ ಪ್ರಾತಃಕಾಲ ಅಧ್ಯಕ್ಷರ ಚುನಾವಣೆಯೂ, ಸಾಯಂಕಾಲ ಉಪಾಧ್ಯಕ್ಷರ ಚುನಾವಣೆಯೂ ನಡೆಯುವುದು ಈಗ್ಗೆ ಸದಸ್ಯರ್ಲ್ಲಿ ಮಾತುಕಥೆಗಳು ನಡೆಯುತ್ತಲಿವೆ

ಶ್ರೀಯುತನಗರೂಪು ನಾರಾಯಣರಾಯರು ಸುಮಾರು 9 ವರ್ಷಗಳು ಪುರಸಭೆಯ ಅಧ್ಯಕ್ಷರಾಗಿದ್ದರು ಸಾರ್ವಜನಿಕ ಕೆಲಸಗಳನ್ನು ನಿರ್ವಹಿಸಿದೆವರಿಗೆ ನಾನ್ಯ ಸಾನುಭೂತಿಯಿಂದಲೂ ಪ್ರೇಮ ದಿಂದಲೂ ವಿಮರ್ಶಿಸಬೇಕು ವೈಯ್ಯಕ್ತಿಕ ದೋಷಗಳು ಗೃತಿ ಸಬ್ಬಳ್ಳಿರುವದರಿಂದ ಇಂಥ ದೋಷಗಳಿಗೆಸುವದು ಈಗ ನಿರರ್ಥಕವೆಮತ್ತು ಅನುಚಿತವು

ಶ್ರೀ ಈಗೂರು ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಈ ಪಟ್ಟಣಕ್ಕೆ ಉತ್ಕೃಷ್ಟವಾದ ಸೌಕರ್ಯಗಳು ಲಭಿಸಿದವು ನೀರಿನ ಪಸತಿ, ವಿದ್ಯುದ್ದೀಪಗಳು, ಉನ್ನತ ಪಾಠಶಾಲೆಯ ಭವನವು ಮತ್ತು ಇತರ ಸೌಕರ್ಯಗಳೊದಗಿದವು ಈ ಊರಿಗೆ ಇವರು ಮಾಡಿದ ಸೇವೆಯನ್ನು ಯಾರೂ ಮರೆಯಲಾರರು ಹೊಸಪೇಟೆ ಸಭೆಯ ಸಮಾನೇತರವಾದಕೂಡಲೆ, ಶ್ರೀ ನಾರಾಯಣ ರಾಯರು ಮಾಡಿದ ಸೇವೆಯನ್ನು ಕುರಿತು ಪ್ರಶಂಸ ಮಾಡುತ್ತಾ ರಾಯವು ಮಾಡತಕ್ಕದ್ದು ಉಚಿತವೆಂದು ನಾವು ಸೂಚಿಸುತ್ತೇವೆ

ಫುಟ್‌ಬಾಲ್ ಸಂದ್ಯಗಳು.

ಮೂರು, ನಾಲ್ಕು ದಿವಸಗಳಿಂದ, ಸ್ಥಳಿ, ವರ ಸ್ಥಳ ಸಂಘಗಳವರು ಸಿನಿಸಿಲ್ ಹೈಸ್ಕೂಲಿದ ಮೈದಾನದಲ್ಲಿ ಸಂದ್ಯಗಳನ್ನೇರ್ಪಡಿಸಿರುವರು ಪ್ರತಿ ನಿತ್ಯವು ಸಾಯಂಕಾಲ ಸಾವಿರಾರು ಜನರು ಸೇರಿ ಮಿಕ್ಕಿದ ಉತ್ಸಾಹವನ್ನು ವ್ಯಕ್ತಪಡಿಸುತ್ತಲಿದ್ದರು ಅನಂತ್ಯರವರ ಕಾಲೇಜಿನವರು, ಈ ಊರ ಹೈಸ್ಕೂಲಿದವರನ್ನೂ, ಹೊಸಪೇಟೆಯವರನ್ನೂ ಸೋಲಿಸಿದರು

ವರ್ತಮಾನಗಳು.

ಸರ್ವದೇಶ.

ಇಂಗ್ಲಾಂಡಿನಲ್ಲಿ ಹಿಂದೂಸ್ಥಾನದ ವಿಷಯವಾಗಿ ಸತ್ಯಾಸತ್ಯ ವಿಷಯಗಳು ಪ್ರಕಟವಾಗುತಂತಿಯೇ ಇವೆ. ಕಾಮನ್ವೆಲ್ತ್ ಆಫ್ ಇಂಡಿಯಾ ಲೀಗ್ ವರರು ಮುಖ್ಯಗಾ ದಿಯವರಿಗೆ 31-11 31 ನೇ ಶನಿವಾರ ಸಾಯಂಕಾಲ ಔತಣಕೂಟ್ಟಾಗ, ಈ ವಿಷಯವಾಗಿ ಪ್ರಸ್ತಾಪಿಸಿದರು ಗಂಟೆ ಭಾಷಣಗಳನ್ನು ಮಾಡಿದರು ಕೆರಂಡ್ ಎ ಬಿ ಬೆಲ್ಡನ್‌ರವರು ಒಂದು ರಾಯವನ್ನು ತಂದರು ಅದು ಮಿ॥ ಚರ್ಚಿಲ್‌ರವರಿಂದ ಸಮರ್ಥಿತವಾಯಿತು ಸಾರಾಂಶವು ಈಕೆಗೆ ತಂತಿಂತಿದೆ

' ಕಾಮನ್‌ವೆಲ್ತ್ ಆಫ್ ಇಂಡಿಯಾಲೀಗ್ ಎಂಬ ಈ ಸಂಸ್ಥೆಯು ಮಾ ಲೀಕರಿಗೂ ವೃತ್ತಪತ್ರಗಳ ಸಂಪಾದಕರಿಗೂ, ಪ್ರಾಮುಖ್ಯ ಬಿರುದ್ಧಾರಿಗಳಿಗೂ, ಮನವಿಮಾಡಿಕೊಳ್ಳುವೆನೆಂದರೆ, ಇಂದಾ ಪರಿಸ್ಥಿತಿಯು ಕಳೆಯುವರಿಗೂ, ಹಿಂದೂಸ್ಥಾನದ ಎಲ್ಲಾ ವರ್ತಮಾನಗಳನ್ನೂ ನಿಷ್ಪಕ್ಷಪಾತವಾಗಿ ಪ್ರಚುರಿಸಿ ವರ್ತಮಾನ ಸಂಘಗಳವರನ್ನು ಪ್ರಚಾರಿಸಬೇಕು ಪ್ರಾಮುಖ್ಯವಿಷಯ ಗಳನ್ನು ಬಿಟ್ಟಿ ಹುಡುಕು, ಎಂಪೂಸ್ಥಾನಕ್ಕೆ ಈ ಮೇಲಕ್ಕೆ, ದೊಡ್ಡ ಎಂದಾದವನ್ನು ಮಾಡಿದಂತಾಗುವುದೆಂದು, ಈ ಸಭೆಯು ಅಭಿಪ್ರಾಯಪಡುವುದು "

ದೇಲಿ ಹೆರಾಲ್ಡ ಪತ್ರಿಕೆಯ ಸಂಪಾದಕರು ಇನ್ನತ್ ಪ್ರತಿಭಟಿಸಿದರು ಮಹಾತ್ಮರು ಇದ್ದಿ ಉತ್ತರ ಹೇಳುತ್ತಾ, 'ಶ್ರೀ ಟಿ ಗೋಪಾಲರವರು ಈ ಪೆಟ್ಟಿ ಬಂಪಾಗ ರಾಜಗಿರವರನ್ನು ಸಲ್ಲಿಸಿ, ಬೇಕಾದಷ್ಟು ಮುನ್ನಣೆಸಾಡಿದಿರಿ ಇವರ, ಅವರು ಹಿಂದಿಯ ವಿಷಯವಾಗಿ, ದೃಢಯದ್ದಾನಕವಾಗಿ ಹೇಳಿದ ವಿಷಯಗಳನ್ನೂ, ವ್ಯಸನತರವಾದ ಅನ್ಯತ್ರಾಂತರವನ್ನೂ ನೀವು ಪ್ರಚಾರಿಸಲಿಲ್ಲಾ ನಾನು ಬಿಟ್ಟಾಗಾಂಗ, ಬಿಟಲಿ ಕೃತ್ಯಗಳ ವಿಷಯವಾಗಿ ಒಂದುದನ್ನು ನೀವು ಪ್ರಕಟಿಸಬೇಕು ಹಿಂದೂಸ್ಥಾನದಿಂದ ಖರ್ಚಿಲ್ಲದೆ ವರ್ತಮಾನಗಳನ್ನು ರವಿಸಿಕೊಂಡುವೆನು.ನೀವು ಮಾತ್ರ ಅಪ್ರಗಳನ್ನೆಲ್ಲಾ ಧಾರಾಳವಾಗಿ ತೆಗೆದುಕೊಳ್ಳಬೇಕು "

ಮಿ॥ ಬಾಲ್ಡವಿನ್ ಎಂಬ ಕನಸರ್ವೇಟಿವ್ ಪಕ್ಷದ ಮುಖಂಡರು ಮಹಾತ್ಮಾಗಾಂದಿಯವರನ್ನು, ಮಂಗಳವಾರ 3 11-31 ಕ್ಕೆ ಕಂಡು, ಮೂರುಕಥಗಳ ಪರಿಣಾಮವನ್ನು, ಮಂತ್ರಿಗಳಾದ ಮ್ಯಾಕ್ಡೊನಾಲ್ಡ ಸಾಹೇಬರಿಗೆ ತಿಳಿಸುವರು

ಬಂಗಾರದ ಕಾನೂನುಪೆಗೆದು, ಹಿಂದುಸ್ಥಾನದಿಂದ ಚಿನ್ನವನ್ನು ದೊರಬೀಳುವಂತೆ ಮಾಡಿದ ಬ್ರಿಟಿಶ ಸರ್ಕಾರದವರ "ಒಂದು ಕಣ್ಣಲ್ಲಿ ಎಣ್ಣೆ, ಇನ್ನೊಂದು ಕಣ್ಣಲ್ಲಿ ಬೆಣ್ಣೆ" ತತ್ವವನ್ನು ಸರ್ ಪುರುಷೋತ್ತಮ ದಾಸರವರು, ಇಂಡಿಯಾ ಸರ್ಕಾರದ ಕಛೇರಿಯಲ್ಲಿ ವಿಶದವಾಗಿ ನಿವೇದನೆ ಮಾಡಿದರು ಬ್ರಿಟಿಶ ಸರಕಾರದ ಗೆಲುವಿನ ಬಗ್ಗೆ, ಹಿಂದೂದೇಶದ ವೈಸ್ರಾಯರು ಧನ್ಯವಾದ ರೂಪವಾದ ಸಂದೇಶವನ್ನು, ಕಳುಹಿಸಿದುದಕ್ಕೆ ಒಬ್ಬರು ಮ್ಯಾಕ್ಡೊನಾಲ್ಡ ಸಾಹೇಬರು ಈ ರೀತಿ ಜವಾಬುಕೊಟ್ಟಿರುತ್ತಾರೆ "ಲಂಡನ್ ಗುಂಡುಮೇಜಿನ ಪರಿಷತ್ತಿನಲ್ಲಿ ಪ್ರಾರಂಭವಾಯಿತು, ನಮ್ಮ ತತ್ವವು ದೇಶಕ್ಕೆಲ್ಲಾ ಸಂಪ್ರಾಪ್ತವಾಗುವುದರಿಂದ, ಭಾರತೀಯ ಸರಕಾರದವರಾದ ನಾವು, ಅದನ್ನೇ ಅನುಸರಿಸ ಬೇಕು "

ಹಿಂದೂಸ್ಥಾನ.

ಸರ್ದಾರ ವಲ್ಲಭಬಾಯಿ ಪಟೇಲರವರು, ಹಿಂಸಾಕೃತ್ಯಗಳನ್ನು ಖಂಡಿಸುತ್ತಾ, ವೃತ್ತಪತ್ರಗಳಿಗೆ ಸಂದೇಶವನ್ನು ಕಳುಹಿಸಿರುವರು

ನೆಲ್ಲೂರು ಜಿಲ್ಲೆ ಉಪ್ಪಳಿಗೆದುಕೊಂಡು ಹೋಗುತ್ತಿರುವವರಿಗೆ ಸಿ, ಪಾಲೆಣಿಯ ಸಡೆದು 11 ಕಟ್ಟಿಗೆಗಳಲ್ಲಿ ರ ರಾಯಿಯಿಂದ 20ರ ವರಿಗೂ ಜಲ್ಲಾನೆಯ ವಿಧಿಸಲ್ಪಟ್ಟಿದೆ. ನೆಲ್ಲೂರು ಜಿಲ್ಲೆಯಗಡೂರು, ಸೂಲೂರುಪೆಟೆ ತಾಲೂಕುಗಳಲ್ಲಿ, ಗಾಂಧಿ, ಇರ್ವಿನ್ ಒಂದಾನ ಪ್ರಕಾರವಾಗಿ ಒಪ್ಪಿಸಿದ, ಅನುಕೂಲವು ವಾಪಸು ತೆಗೆದುಕೊಳ್ಳಲ್ಪಟ್ಟಿದೆ

ಹಿಂಸಾಕೃತ್ಯಗಳನ್ನು ತಡೆಮಾಡಲು, ಈಗ ಇರುವ ಕಾನೂನುಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಲು, ಸೈನ್ಯವನ್ನು, ಪೋಲಿಸ, ಎರೇಷಕಾಯಿದೆ ಮಾಡಿರುತ್ತಾರೆ ಈಗ ಒಂದುಸಾವಿರದೊಳಗಾಗಿ 91 ಯುವಕರನ್ನು ಬಂಗಾಳ ಸರ್ಕಾರದವರು ಕೈದು ಮಾಡಿರುತ್ತಾರೆ

ಅಲಿಬಿರಾಜಿಯ ಜಮಾಬಂದಿಗಳವರು ಒಂದು ಸಾವಿರ ರೂಪಾಯಿ ಒಟ್ಟಿಯ, ಖಾದಿಯನ್ನು ಸಿಂಧ ದೈವಾಂಬಾದ ಜೇರಸೇನಾಪಾಂಡಲಿಗೆ ಒಪ್ಪಿಸಿರುತ್ತಾರೆ ಕ್ಷಾಮದಿಂದ ಪ್ರಜ್ವಲಿಸುತ್ತಿರುವ 'ಧಾರಾ' ಸ್ಥಾಂತದಲ್ಲಿ, ಬಡವರಿಗೆ ಒಂದುವಿಯ ಹೆಂಚಲಾಗುವುದು

ಬೊಂಬಾಯಿ ಪುರಸಭೆಯವರು, ಪಟ್ಟಣದಿಂದ ಹೊರಬೀಳುವ ಬೇಟುಗಳಮೇಲೆ ನಾಲ್ಕಾಣೆ ತಿಗೆಯನ್ನೆತ್ತಲು ಸಂಸ್ಥಿಯನ್ನೇಯಬೇಕೆಂದು ಸರ್ಕಾರದವರನ್ನು ಕೇಳಿದ್ದರು ಇಲ್ಲಿಯ ವರ್ತಕಸಂಘದ ಕಾರ್ಯದರ್ಶಿಗಳು ಸರ್ಕಾರಕ್ಕೆ ಪತ್ರಬರೆಯುತ್ತಾ, ಇದು ಅನ್ಯಾಯವೆತಲಲ್ಲ, ಈ ಅನ್ಯಾಯತೆರಿಗೆಯು ಯಥಾಪ್ರಕಾರ ಬಡವ್ಯತನಮೇಲೆ ಬೀಳುವದೆಂತಲೂ, ಇದನ್ನು ಸರ್ಕಾರದವರು ಒಪ್ಪಬಾರದೆಂತಲೂ ತಿಳಿಸಿದ್ದಾರೆ,

ಸಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ರೈತರು ಆರ್ಥಿಕ ಕಷ್ಟದಿಂದ ಪಂಚಂಕರೀತಿಯಲ್ಲಿ ಸರಕಸಿ ಸುತ್ತಲಿದ್ದಾರೆ ಇವರ ಮುಖನಿವಾರಣೆಗಾಗಿ ಕರ್ನಾಟಕ ಮಂಡಿಂದರ್ಸರು, ಜನರಿಗೆ ಹಣವನ್ನು ಸೂಡಿಸಿ ಸಹಾಯವನ್ನೀಯುತ್ತಿರುವರು 15—9—31 ರಿಂದ 15—10—31 ರ ಒಂದ ತಿಂಗಳೊಳಗಾಗಿ ಗಾಂಧೀ ಸೇವಾಸಂಘದವರು 1231 ಸಂಸಾರದವರಿಗೆ ಧೈರ್ಯವನ್ನೊದಗಿಸಿರುವರು ಕ್ಷಾಮನಿವಾರಣೆಗಾಗಿ ಕೂಡಿರುವರು, 7,442—3—3 ಪೈದಲ್ಲಿ, 5,182-11 3 ಪೈಯನ್ನು ಒಂದು ತಿಂಗಳಲ್ಲಿ ಸಿದ್ಧಿಯಾಗಿಸಿವಾರೆ

ಸಂಯುಕ್ತ ಕರ್ನಾಟಕದಿಂದಾಗುವ ಲಾಭಗಳು

(ಒರ್ವ ಕನ್ನಡಿಗ)

ಬ್ರಿಟಿಷ ಕರ್ನಾಟಕವು ಅಂದರೆ ಮುಂಬಾಯಿ ಇಲಾಖೆ ಯೊಳಗಿನ ಬೆಳಗಾಂವ ಕಾರವಾರ ಧಾರ್ವಾಡ ವಿಜಾಪುರ ಜಿಲ್ಲೆಗಳು ಮತ್ತು ಸೊಲ್ಲಾಪುರ ತಾಲೂಕು ಮದ್ರಾಸ ಇಲಾಖೆ ಯೊಳಗಿನ ಮಂಗಳೂರು, ಬಳ್ಳಾರಿ ನೀಲಗಿರಿ ಈ ಜಿಲ್ಲೆಗಳು ಮತ್ತು ಕೊಳ್ಳೇಗಾಲ, ಹೊಸೂರು ಕೃಷ್ಣಗಿರಿ, ಪೂಗನೂರು, ವಡಕಶಿರ ಹಿಂಬೊಪುರ ವುರವೆಕೊಂಡೆ, ಕಲ್ಯಾಣದುರ್ಗ, ಈ ತಾಲ್ಲೂಕುಗಳು ಕೊಡಗು ಪ್ರಾಂತ್ಯ ಇವೆಲ್ಲ ಕೂಡಿ ಒಂದು ಪ್ರತ್ಯೇಕ ಪ್ರಾಂತ ವಾಗಬೇಕು ಈ ಭಾಗಕ್ಕೆ ಒಬ್ಬ ಗೌರ್ನರ್ ಇರಬೇಕು. ಇದಕ್ಕೊಂದು ರಾಜಧಾನಿ, ಒಂದು ಹೈ ಕೋರ್ಟು, ಒಂದು ವಿಶ್ವ ವಿದ್ಯಾಲಯ, ಒಂದು ರೇವು ಪಟ್ಟಣ ಇತ್ಯಾದಿ ಇರಬೇಕು. ಈ ಭಾಗಗಳನ್ನೆಲ್ಲಾ ಒಟ್ಟಾಗಿ ಜೋಡಿಸುವ ವೃತ್ತಮ ರೈಲು ಮತ್ತು ಮೋಟಾರು ಮಾರ್ಗಗಳು ಮಾಡಿಸಬೇಕು. ಕರ್ನಾಟಕ ಸಂಸ್ಥಾನಗಳೆಲ್ಲವೂ ಕರ್ನಾಟಕ ಪ್ರಾಂತಾಧಿಪತಿ ಅಂಕಿತ ವಾಗಿರಬೇಕು ಹೀಗೆ ಆದರೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಾಗುವುದು ಹೀಗೆ ಆದರೆ ಕರ್ನಾಟಕವು ಎಲ್ಲಾ ವಿಷಯಗಳ ಪ್ರಗತಿಯನ್ನು ಹೊಂದುತ್ತದೆ ಮತ್ತು ಕನ್ನಡಿಗರಿಗೆ ಬಹಳ ಲಾಭಗಳುಂಟಾಗುವವು

೧) **ಆರ್ಥಿಕ ವಿಷಯ** ಮೇಲ್ಕಂಡತಾಲೂಕುಗಳನ್ನು ಬಿಟ್ಟು ಆ ಜಿಲ್ಲೆಗಳವಾರ್ಷಿಕ ವೃತ್ತನ್ನವೃತ್ತ, ೫೯೧೧೩೬೩ ರೂಪಾಯಿಗಳು ಇದ್ದು ಈಗ ಅವುಗಳ ಸಲುವಾಗಿ ೨೫೯೧೧ ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಅಂದರೆ ಪ್ರತಿ ವರ್ಷ ೪೮೧೧೧೧೬೩ ರೂಪಾಯಿಗಳು ಕರ್ನಾಟಕದ ಹೊರಗೆ ಹೋಗುತ್ತವೆ. ಪ್ರತ್ಯೇಕ ಪ್ರಾಂತವಾದರೆ ಇದೇ ದುಡ್ಡಿನಿಂದ ಪ್ರಾಂತಿಕ ಆಡಳಿತವನ್ನು ನಡೆಸಿ ಈ ಪ್ರಾಂತ್ಯದ ಪ್ರಗತಿಗಾಗಿ ಬೇಕಾದ ಹಣವನ್ನು ವೆಚ್ಚಮಾಡಬಹುದು. ತುಂಗ ಭದ್ರ ಘಟ ಪ್ರಭಾ ಯೆವುಗಳ ಅಣೆ ಕಟ್ಟುಗಳನ್ನು ಕಟ್ಟಿಸಿರೆಂದು ಈಗ ಮೂರ ತ್ರಲೆಗಳಿಂದ ಕೇಳುತ್ತಾ ಬಂದರೂ ಸರಕಾರದವರಲಕ್ಷ್ಯವು ಅ ಕಡೆಗೆ ಹೋಗಿರುವುದಿಲ್ಲ. ಪ್ರತ್ಯೇಕ ಪ್ರಾಂತ್ಯವಾದರೆ ಈ ಅಣೆಕಟ್ಟುಗಳನ್ನು ಕಟ್ಟಿಸಬಹುದು. ಮತ್ತು ರೇವುಪಟ್ಟಣವನ್ನು ಪ್ರಾರಂಭಿಸಬಹುದು. ಕರ್ನಾಟಕವು ಪ್ರತ್ಯೇಕ ಪ್ರಾಂತವಾಗದ ವಿನಃ ಈ ಮುಖತ್ಸಾರ್ಯಗಳು ಜರುಗಲಾರವು.

೨ **ವರ್ತಕರಿಗೆ**

ಕರ್ನಾಟಕವು ಪ್ರತ್ಯೇಕ ಪ್ರಾಂತವಾದರೆ ಕರ್ನಾಟಕದಲ್ಲಿಯ ವರ್ತಕರ ಹಿತದ ಕಡೆಗೆ ಕರ್ನಾಟಕ ಪ್ರಾಂತಿಕ ಸರಕಾರದ ಲಕ್ಷ್ಯವು ಎಳೆಯುವದು. ಈಗ ಅವರ ಹಿತರ ಕಡೆಗೆ ಯಾರೂ ನೋಡುವದಿಲ್ಲ. ಅವರಿಗೆ ಬೇಕಾಗುವ ರೈಲು ಹೈನು ಹಾಕಿಸುವದು ಪ್ರತ್ಯೇಕ ರೇವು ಪಟ್ಟಣವನ್ನು ಕಟ್ಟಿಸಿ ಪರದೇಶದವರ ಕೂಡ ಪ್ರತ್ಯಕ್ಷ ವ್ಯವಹಾರ ಮಾಡಲಿಕ್ಕೆ ಅನುಕೂಲ ಮಾಡಿ ಕೊಡುವುದು, ಹೊಸ ಕಾರಖಾನೆಗಳನ್ನು ಪ್ರಾರಂಭಿಸಲಿಕ್ಕೆ ಅನುಕೂಲ ಮಾಡಿ ಕೊಡುವುದು,ಮುಂತಾದ ಅನೇಕ ಲಾಭಗಳಾಗುವವು.

೩ **ರೈತರಿಗೆ** ಕರ್ನಾಟಕ ಪ್ರಾಂತವು ಬೇರೆಆಯ ತೆಂದರೆ ಪ್ರಾಂತಿಕ ಸರಕಾರದ ಲಕ್ಷ್ಯವು ಕರ್ನಾಟಕ ಭೂಮಿ ರೈತರ ಸ್ಥಿತಿ ಮುಂದವುಗಳ ಕಡಿಗೆ ವಿಶೇಷ ಹೋಗುತ್ತದೆ. ಅನೇಕ ನೀರಾವರಿಗಳಾಗಿ ಭೂಮಿ ವೃದ್ಧಿ ಹೊಂದುತ್ತದೆ.ಕಂದಾಯವು ತಗ್ಗುತ್ತದೆ. ಭೂಮಿಯೆಲ್ಲವೂ ವಿಶೇಷ ಫಲವತ್ತಾಗುತ್ತದೆ. ಆಡಳಿತಗಳಿಂದ ಲಾಭವುಂಟಾಗುತ್ತದೆ ಇನ್ನೂ ಅನೇಕ ಲಾಭಗಳುಂಟಾಗುತ್ತವೆ.

೪ **ವಕೀಲರಿಗೆ ಮತ್ತು ಪಕ್ಷಕಾರರಿಗೆ** ಈಗ ಹೈಕೋರ್ಟುಗಳು ಕರ್ನಾಟಕದಿಂದ ಬಹಳ ದೂರವಿರುವದರಿಂದ ಸರಭಾಷೆಯ ಬ್ಯಾರಿಸ್ಟರು ಮತ್ತು ನ್ಯಾಯಾಧೀಶರ ಮೇಲೆ ಅವಲಂಬಿಸ ಬೇಕಾದುದರಿಂದ. ಭಾಷೆಯ ಬೇರೆ ಬೇರೆ ಯಾಗಿರುವುದರಿಂದ ವಕೀಲರಿಗೂ ಮತ್ತು ಪಕ್ಷದಾರರಿಗೂ ಬಹಳ ತೊಂದರೆ ವುಂಟಾಗುತ್ತದೆ. ಮತ್ತು ಅಷ್ಟುದೂರ ಸಾಕ್ಷಿಗಳನ್ನು ಕರೆದುಕೊಂಡು ಹೋಗುವದರಿಂದ ಹಣದ ನೆಚ್ಚವು ವಿಶೇಷ ವಾಗುತ್ತೆ. ಕರ್ನಾಟಕವು ಪ್ರತ್ಯೇಕ ಪ್ರಾಂತವಾದರೆ ಇಲ್ಲಿಯೇ ಹೈಕೋರ್ಟ ಆಗಿ ಪಕ್ಷಕಾರರ ಭಾಷೆಯಲ್ಲಿಯೇ ಬಹುಶಃ ಎಲ್ಲಾ ಕೆಲಸವು ನಡೆಯುವದು.ಹೋಗಿಬರುವ ನೆಚ್ಚು ತೊಂದರೆಗಳು ಕಡಿಮೆಯಾಗುತ್ತವೆ. ನ್ಯಾಯವು ಇದಕ್ಕೂ ಬೇಗ ದೊರೆಯುವುದು. ಈ ಹೈಕೋರ್ಟುಗಳು ಹತ್ತಿರವಾಗಿನಿಂದೆಯವತ್ತಿನವರಿಗೂ ಕರ್ನಾಟಕದ ವಕೀಲರಿಗೆ ದೊರೆಯದೇ ಯಿರತಕ್ಕಂಥ ನ್ಯಾಯಾಧೀಶ ಸ್ಥಾನಗಳು ದೊರೆಯುತ್ತವೆ

೫ **ವಿದ್ಯಾರ್ಥಿಗಳಿಗೆ ಮತ್ತು** ಸುಶಿಕ್ಷಿತರಿಗೆ ಕರ್ನಾಟಕದಲ್ಲಿಯೇ ವಿಶ್ವವಿದ್ಯಾಲಯವಾಗಿ. ಮಾತೃ ಭಾಷೆಯ ದ್ವಾರಾ ಶಿಕ್ಷಣವು ದೊರೆಯ ತ್ತದೆ ಕರ್ನಾಟಕವು ಉದ್ಯೋಗಿತಾವಸ್ಥೆ ಆಗುವಂಥಾ ಒಕ್ಕಲತನ ವ್ಯಾಪಾರ ಉದ್ಯೋಗಗಳ ಶಿಕ್ಷಣವು ಅದರಲ್ಲಿಯೇ ಕೊಡಲ್ಪಡುವದು ಶಿಕ್ಷಣ ಸಂಸ್ಥೆಗಳು ಹೆಚ್ಚಾಗಿ ಮತ್ತು ಹತ್ತಿರವಾಗಿ ಬಡ ವಿದ್ಯಾರ್ಥಿಗಳಿಗೆ ಸಹಶಿಕ್ಷಣದ ಅನುಕೂಲಗಳಾಗುತ್ತವೆ. ಸುಶಿಕ್ಷಿತರ ಆಕಾಂಕ್ಷೆಗಳಿಗೆ ಹೆಚ್ಚು ಅವಕಾಶವಾಗುವುದು. ಅವರು ಹೈಕೋರ್ಟ ಜಡ್ಜಿಗಳು, ಗವರ್ನರ್ಗಳು, ಮಂತ್ರಿಗಳು ಆಗುವ ಮಹತ್ವಾಕಾಂಕ್ಷೆ ಹಿಡಿಯ ಬಹುದು.ವಿದ್ವಾಂಸರು ಕರ್ನಾಟಕ ವಿಶ್ವವಿದ್ಯಾಲಯದ ಸದಸ್ಯರಾಗಬಹುದು.

೬ **ಪತ್ರಿಕಾಕರ್ತರಿಗೂ ಮತ್ತು ಗ್ರಂಥಕರ್ತರಿಗೂ** ಏಕೀಕೃತ ಕರ್ನಾಟಕದ ಎಲ್ಲಾ ಹಿತಾಹಿತಗಳೂ ನಂದೇ ಆಗುವವು.ಆದುದರಿಂದ ಪತ್ರಿಕಾಕರ್ತರ ಕಾರ್ಯಕ್ಷೇತ್ರವು ವಿಶಾಲವಾಗುವದು. ಗ್ರಂಥಕರ್ತರಿಗೆ ಏಕೀಕೃತ ಕರ್ನಾಟಕದಲ್ಲಿ ಹೆಚ್ಚುಅಸ್ಪದವಾಗುವುದು.

ಮಾತೃಭಾಷೆಗೆ ಹೆಚ್ಚಿನ ಮಹತ್ವವು ಬರುವದು. ಭಾಷಾಭಿವೃದ್ಧಿಯು ಪ್ರಗತಿಯ ಕುರುಹು. ಕರ್ನಾಟಕದಿಂದ ಕರ್ನಾಟಕ ಭಾಷಾಭಿವೃದ್ಧಿಯಾಗುವ ಕಾರಣ ಕರ್ನಾಟಕ ಮುಖಂಡರು, ಸುಶಿಕ್ಷಿತರು ರೈತರು ವರ್ತಕರು ಕರ್ನಾಟಕ ಏಕೀಕರಣ ತತ್ವದ ಪ್ರಚಾರವನ್ನು ಕೈ ಕೊಳ್ಳ ಬೇಕು, ಗಡಿ ಸೀಮೆಗಳಲ್ಲಿರುವ ಕನ್ನಡಿಗರು ಮರೆತು ಹೋದ ಸ್ವಾಭಿಮಾನವನ್ನು ತಿರಿಗಿ ಸಂಪಾದಿಸಿ ಕೊಳ್ಳಬೇಕು ವಿದ್ಯಾರ್ಥಿಗಳು ಭಾರತೀಯ ಅಭಿಮಾನವನ್ನು ಹೆಚ್ಚಿಸಿಕೊಳ್ಳಬೇಕು. ಸ್ವರಾಜ್ಯವನ್ನು ಪಡೆಯುವೆನೆಂದು ಅಖಿಲ ಭಾರತೀಯ ಮುಖಂಡರು ಭೀಷ್ಮ ಪ್ರತಿಜ್ಞೆ ಮಾಡಿದಂತೆ ಕನ್ನಡಿಗರೂ ಕೂಡ ಕರ್ನಾಟಕ ಏಕೀಕರಣವನ್ನು ಸಾಧಿಸಲು ಸಂಕಲ್ಪಿಸಬೇಕು. ಕಾಮಧೇನು ರೂಪಕವಾದ ಈತತ್ವವನ್ನು ಆರಾಧಿಸಿ ಪಡೆಕೊಳ್ಳಲು ಪ್ರಾರ್ಥನೆ.

ಮಹಾತ್ಮ ಗಾಂಧಿಯವರು

ಮೂರನೇ ಪುಟದಿಂದ ಮುಂದುವರಿದದ್ದು.

ಅಕ್ಷಭರ್ಡ ಮುಂತಾದ ಸ್ಥಳಗಳಲ್ಲಿ ಅವರ ಉಪನ್ಯಾಸಗಳಾದುವು. ಹಿಂಸಾಕೃತ್ಯಗಳನ್ನು ಖಂಡಿಸುತ್ತಾ ಇಂಡಿಯಾ ಸರ್ಕಾರದ ದಬ್ಬಾಳಿಕೆಯೇ ಇತ್ಯಕ್ಕೆಲ್ಲಾ ಕಾರಣವೆಂದರು. ಚಿಟ್ಟಾಗಾಂಗ್, ಹಿಜಲಿಗಳಲ್ಲಿ ನಡೆದ ಭಯಂಕರ ಘಟನೆಗಳನ್ನು ಖಂಡಿಸಿದರು. ಸ್ವರಾಜ್ಯದ ಯಾವ ಇತ್ಯರ್ಥವೂ ಆಗದಿದ್ದರೆ, ಬಹಿಷ್ಕಾರವು ಪುನಃ ಆರಂಭವಾಗುವುದೆಂದರು.

ಚಕ್ರವರ್ತಿಗಳಿಂದ ನಿಮಂತ್ರಣ.

ಬ್ರಿಟಿಷ ಚುನಾವಣೆಗಳಲ್ಲಿ ಜಯಪ್ರದವಾದ ಕನ್ಸರ್ವೇಟಿವ್ ಮಂತ್ರಿಗಳಿಗೆ ಬಕಿಂಘ್ಯಾಮು ಅರಮನೆಯಲ್ಲಿ ಬೃಹಸ್ಪತಿವಾರ ಉಪಾಹಾರವು ಜರುಗುವದು. ಈ ಬಗ್ಗೆ ಚಕ್ರವರ್ತಿ ಮತ್ತು ರಾಣಿ ಯವರಿಂದ ಲಾರ್ಡ್ ಬೀಬರ್ಲ್ಸನರಿಗೆ, ಗಾಂಧಿಜಿ ಯವರಿಗೆ ನಿಮಂತ್ರಣ ಕೊಡಲು ಅಪ್ಪಣೆಯಾಗಿರುವದು.

ಚರ್ಚಿಲ್ಲು, ಬ್ರೌಂಟುಫರ್ಡು, ಮುಂತಾದ ಕನ್ಸರ್ವೆಟಿವ್ ಶಿಖಾಮಣಿಗಳು ಕೈಹಿಡಿಕೊಳ್ಳುತ್ತಿದ್ದಾರೆ. ಮಹಾತ್ಮರು ನಿಮಂತ್ರಣ ಒಪ್ಪಿಕೊಂಡರೆ ಸೈನ್ಯದವರ ಛತ್ತರ ಹೋದಂತೆ ನಂಡುಸಂಚೀ ಧರಿಸಿ ಚಕ್ರವರ್ತಿಯನ್ನು ಸಂದರ್ಶಿಸುವರು ಪಂಡಿತ ಮದನಮೋಹನ ಮಾಲವೀಯ ಮತ್ತು ಶ್ರೀ ಮತಿ ಸರೋಜಿನೀದೇವಿ ಯವರಿಗೂ ಆಹ್ವಾನ ಕೊಟ್ಟಿರುವರು. ವಿನ್ಸ್ಟನ್ ಚರ್ಚಿಲ್ಲರಿಗೇ ಸಿಂಹಸ್ವಪ್ನವೆಂದೆಣಿಸಬೇಕು ಬ್ರಿಟಿಷರು ತಮ್ಮ ಚಕ್ರವರ್ತಿಗೆ ಅರ್ಧನಗ್ನ ಫಕೀರರನ್ನು ಕಾಣುವುದು ಅನುಚಿತವೆಂತ ಹೇಳುವರೊ ಏನೊ ನೋಡಬೇಕು ಮಹಾತ್ಮರ ಚಕ್ರವರ್ತಿಯನ್ನು ಕಂಡಿಪಕ್ಷದಲ್ಲಿ ಮೊಂಡುಸಂಚಿಯ ಮಹತ್ವವನ್ನು ತಿಳಿಸದಿರಲಾರರು

ಅದವಾನಿ ಪುರಸಭೆಯ ಚುನಾವಣೆಗಳು.

ಅದವಾನಿ ಪುರ ಸಭೆಯ ಚುನಾವಣೆಗಳುಅಕ್ಟೋಬರ್ ತಿಂಗಳು 26 ನೇ ತಾರೀಖು ನಡೆದವು. ಈ ಕೆಳಗಿನ ಸದ್ಯರು ಚುನಾಯಿಸಲ್ಪಟ್ಟರು.

ಶ್ರೀ ಆಜೀಂ ತುಲ್ಲಾ ಸಾಹೇಬು.
,, ಸಾಬ್ ಹುಸೇನ್.
,, ರಾಯಚೋಟಿ ರಾಮಯ್ಯ.
,, ಮುನಿಯಪ್ಪ
,, ಬೂಣಾತಿ ವೆಂಕೋಬರಾವ್
,, ಸಿ. ಲಕ್ಷ್ಮಯ್ಯ.
,, ರೆಡ್ಡಿ ವೆಂಕೋಬರಾವು.
,, ಅಲಿ ಹೈದರ್ ಸಾಬು.
,, ಅಬ್ದುಲ್ ರಹಿಮಾನ್ ಸಾಬು.
,, ಬಲ್ಲೇಲಿ ಅಕಾಳನ್ನ.
,, ಸಿ. ಕೃಷ್ಣ ರಾವ್
,, ಅಬ್ದುಲ್ ರಹೀಮ್ ಸಾಹೇಬ್.
,, ಜೌದರಿ ಮುನಿದ್ದೀನ್ ಸಾಹೇಬ್
,, ಯಂ. ಶ್ರೀರಂಗಪ್ಪ.
,, ಅಯ್ಯಾಧೊರೆ.
,, ಹಪ್ಪೀಲ್ ಸಾಹೇಬ್.
,, ಮಂಡಿಗಿರಿ ಖಾಜಾ ಹುಸ್ಸೇನ್ ಸಾಹೇಬ್
,, ಮಾಲಿ ನರಸಪ್ಪ. (ನಿಮ್ನವರ್ಗ.)
,, ರಾಯಚೂರು ನಬೀ ಸಾಹೇಬ್.
,, ಷಾಮ್ ಸುದ್ದೀನ್ ಸಾಹೇಬ್
,, ಹಟಾತಿ ಯಾಕೂಬ್ ಸಾಹೆಬ್.
,, ಸಿವರಾಜ ಸಿಂಗ್.
,, ಅಬ್ದುಲ್ ರಸೂಲ್ ಸಾಹೇಬ್
ಶ್ರೀಮತಿ ವೆಂಕಾಸಾನಿ. (ಸ್ತ್ರೀಯರ ಸ್ಥಾನಕ್ಕೆ)

ಅಲ್ಲಿ ಅಧ್ಯಕ್ಷರು ಯಾರಾಗಬಹುದೆಂದು ಪ್ರಶ್ನೆಗಳು ಬರುತ್ತಲಿವೆ.ಮುಸಲ್ಮಾನರ ಸಂಖ್ಯೆಯು ಅಧಿಕವಾಗಿದ್ದರೂ,ವಿಶಮತ್ವವಿಲ್ಲದಿರುವುದರಿಂದ, ಹಿಂದೂ ಮಹಾ ಸಭೆಯ ಪಕ್ಷದವರೇ ಅಧ್ಯಕ್ಷರಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಂಚಿಕೆಗೆ
ಪೂರಾ ೧ ಪುಟಕ್ಕೆ	೧೨೦—೦—೦	೬೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೩೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೩೫—೦—೦	೧೫—೦—೦	೩—೦—೦
ಎಂಟಿಕಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರಿಕಲ್ಲೊಂದು ಪುಟಕ್ಕೆ	೧೫—೦—೦	೦೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಪ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7-30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು. ಸುಮಾರು ೨೫ ಕೋಟಿಜನಗಳಿಗೆ ಚನ್ನಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದುದು ದೇಶಾಭಿಮಾನಿಗಳ ಆಗತ್ಯಕಾರ್ಯವಾಗಿದೆ ಭಾವೀಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯ ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ಜರುಗುವ ಹಿಂದೀಪರೀಕ್ಷೆಗೆ ಕೂಡಲಪೇಕ್ಷೆಯುಳ್ಳವರು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮಗಾಂಧಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ.		
"	ಒಂದನೆಯ ಭಾಗ	೦—೧೩—೦
"	ಎರಡನೆಯ ಭಾಗ	೦—೧೩—೦
"	ಮೂರನೆಯ ಭಾಗ	೦—೯—೦
"	ನಾಲ್ಕನೆಯ ಭಾಗ	೧—೮—೦
"	ಐದನೆಯ ಭಾಗ	೧—೮—೦
ಮಹಾತ್ಮಗಾಂಧಿಯವರು ಬರೆದ " ಅನಾಸಕ್ತಿ ಯೋಗ "		೦—೧೩—೦
"ಮಹಾತ್ಮಗಾಂಧಿ "	ಚಿಕ್ಕ ಪುಸ್ತಕ	೦—೧—೧

ಹಿಂದೀ ಪುಸ್ತಕಗಳು.

ಹಿಂದೀ ಬಾಲ ಶೋಧನಿ	(ಕನ್ನಡ ಪಿಂಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
"	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೫—೦
ದೂಸರೀ		೦—೬—೦
ಮಜೇದಾರ ಕಹಾನಿಯಾ		೦—೫—೨
ಅನುವಾದ ಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ.

ಕರ್ನಾಟಕ ಕೇಸರಿ ಕಚೇರಿಯಲ್ಲಿ ಬಳ್ಳಾರಿ.

ಪ್ರೇಮ ಚಿಕಿತ್ಸಾಲಯ.

ತಿಪ್ಪಮಾಚಾರ್ಲು ರೋಡು ಬಳ್ಳಾರಿ.

[ಸಬ್ ಏಜೆಂಟರು:—ಶ್ರೀಮಂತ ಪಾರ್ಕ ಫ್ಯಾಮಿಲಿ ಮೆಡಿಕಲ್ ಸ್ಟೋರ್ ಬೊಂಬಾಯಿ.

ಹೆಂಗಸರಿಗೆ ಮುಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನಮ್ಮಲ್ಲಿ ವಿದ್ಯುಚ್ಛಕ್ತಿ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

TO LET

FOR SALE

1 Boston hand Press 1—

Prints 5" × 8" matter neatly, In good working order

Price moderate & reasonable.

2 New cyclostyle Machine—

Used only Twice or thrice. Perfectly new

Price considerably cheap. Apply sharp—

KARNATAKA KESARI. OFFICE

Bellary.

ಶ್ರೇಷ್ಠವಾದ ಮಿಷನ್ ದಾರದ ವುಂಡೆಗಳು.



ಈ ದಾರದ ವುಂಡೆಗಳು ಶ್ರೇಷ್ಠವಾಗಿಯೂ, ನಯವಾಗಿಯೂ, ಇರುವುದರಿಂದ ಮಿಷನ್ನಿನಲ್ಲಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳುಪು, ಕಪ್ಪು, ಕಾಕಿ, ಮತ್ತು ಇತರ ರಂಗುಗಳಲ್ಲಿ ಅನೇಕ ಸೈಜಿನ ದಾರದ ಪ್ಯಾಕುಗಳು ಕಡಿಮೆ ಧಾರಣೆಗೆ ದೊರೆಯುತ್ತವೆ.

ದರ ಬರೆದು ತಿಳಿದುಕೊಳ್ಳಿರಿ

K. V. & Sons.
Car Street Bellary.

ಕೆ. ವೀರಭದ್ರಪ್ಪ, ಅಂಡ್ ಸನ್ಸ್.
ತೇರು ಬೀದಿ ಬಳ್ಳಾರಿ.

THE GRADUATES' TRADING ASSOCIATION,

General merchants, Gramaphone Dealers & News Agents

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್ ಗ್ರಾಮೊಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜಂಟ್ಸ್.

ತೇರು ಬೀದಿ ಬಳ್ಳಾರಿ

ಶ್ರೀ ಎಂಪೈರ್ ಆಫ್ ಇಂಡಿಯಾ. ಲ್ಯಾಪ್ ಆಕ್ಟೋಪಸ್, ಕೆಂಪೆನಿ, ಲಿಮಿಟೆಡ್.

ಈ ಕಂಪೆನಿಯ ಮುಖ್ಯ ಲಕ್ಷಣಗಳು

೧. ಜಾತ್ರೆಗಳಿಗೆ ಮಿರ್ಜಾಪುರ ಸ್ಥಳಗಳಿಗೆ ಸಂಕ್ಷಿಪ್ತ.

೨. ಪೊಲಿಸಿದಾರರ ಹಣಕ್ಕೆ ತುಂಬ ಭದ್ರತೆಯುಳ್ಳದ್ದು.

೩. ಕಂಪೆನಿಯ ಬಂಡವಾಳವೆಲ್ಲ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಮುಂಜೂರಾದ ಹಣಕ್ಕೆಗಳಲ್ಲಿ ಬಿಡಿಗಿಟ್ಟಿರುವುದು.

೪. ಪ್ರೀಮಿಯಮ್ಮುಗಳು ಪರವೂ ಜೀತಕಂಪೆನಿಗಳ ದಕ್ಕಿಂತ ಕಡಿಮೆ.

೫. ಪೊಲಿಸಿಗಳಲ್ಲಿ ತೊಡಕಾದ ಪರತಗಳಾವುದೂ ಇಲ್ಲದೆ ಸರಳವಾಗಿರುವುದು

೬. ರದ್ದಾದ ಪೊಲಿಸಿಗಳನ್ನು ಹೆಚ್ಚು ಕಡಿಮೆ ಇಲ್ಲದೆ ಉಜ್ಜೀವಕ್ಕೆ ತರಬಹುದು.

೭. ಕಂಪೆನಿಯ ಲಾಭದಲ್ಲಿ ಸೇಕಡಾ ೧೦೦ನ್ನು ಪೊಲಿಸಿದಾರರೆಲ್ಲಿಗೆ ಹಂಚಲಿಕ್ಕಿರುವುದು.

೮. ಪೊಲಿಸಿಯು ಜೀವನಕಾಲ ಕಂಪೆನಿ ಬಂದಾಗ ಕಂಪೆನಿಯಿಂದ ಕೊಡತಕ್ಕಾಗುವ ಪ್ರತಿಫಲವು ಬಹಳ ಉದಾರತವಾದ್ದಾಗಿರುವುದು.

೯. ಪೊಲಿಸಿಯ ಪ್ರತಿಫಲಕ್ಕೆ ಪತ್ರಿಯುವ ಸಂದರ್ಭ ಬಂದಾಗ ಅಧ್ಯಕ್ಷರದಲ್ಲಿದೆ: ಕೂಡಲೆ ಪರಿಹಾರ ಸಿಕ್ಕುವುದು.

ಎಂ. ವೆಂಕೋಬರಾವ್, ಬಿ. ಎ.
ಸತ್ಯನಾರಾಯಣ ಪೇಟೆ
ಬಳ್ಳಾರಿ.

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE,
& Commercial Agency.
Bangalore Road, Bellary.

Agents & dealers in-
Wood-stock, Corona and other typewriters of all makes. Best Ribbons carbons, and Swadeshi fountainpens etc.

HOW TO LEARN TOUCH TYPE-WRITING IN 20 days
short hand a speciality.
(Seperate accommodation for lady students)
Job works & repairs undertaken on moderate charges

ಅರ್ಜಿಗಳನ್ನು ಕಮ್ಮಿ ದರದಲ್ಲಿ ಸ್ವೀಕರಿಸಲಾಗುತ್ತೆ.

Prospects sent free on appliction.

ARYA VAIDYALAYA BELLARY.

Paudit C.S. Shastry's
Patent Medicines

MONEY RETURNED IF NOT CURED

FEVER KILLER.

1 Any fever completly cured in 4 days — 8 oz Bottle Rs 2—0—0

2 NAVAJEEVAN PAK.
King of Tonic foods (sweet) — 1 lb Rs 1- 8—0

3 PRAMEHA BHANJINI
Gonorhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್. ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. ಗುಣವಿಲ್ಲದಿದ್ದರೆ ಹಣ ಪರತ

1, "ಜ್ವರ ಸಂಹಾರಿ."
ಸಾಮಾನ್ಯ ಎಲ್ಲಾ ಜ್ವರಗಳು ನಾಲ್ಕು ದಿವಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ. 3—0—0

2 ನವಜೀವನಪಾಕ
ಪೌಷ್ಟಿಕ ರಸಾಯನ — ಒಂದು ಪೌಂ ರೂ. 1—8—0

3 ಪ್ರಮೇಹ ಭಂಜಿನಿ
ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ. — ರೂ. 6—0—0

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಜೆತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯವಾದರೂ ಕಷ್ಟಸಾಧ್ಯವಾಗಿದ್ದ ವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ವಾಸಿಮಾಡಿಕೊಡಲ್ಪಡುತ್ತವೆ. ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO
AT SRI VIDYARANYA PRESS. BELLARY.

ಕರ್ನಾಟಕ ಕೇಸರಿ

ಸುಕೃತಸ್ಯ ಕೃತ್ಯಸ್ಯ ಸುಕೃತ್ಸ್ವಂಗ ವರ್ಜಿತಃ ।
ನಿರ್ಮೈರಸ್ಸರ್ವ ಭೂತೇಷು । ಯಸ್ಸ ಸಾಸೀತ ಪಾಂಡವ ॥ ಗೀತ. ಅ. ೧೧ ಶ್ಲೋ. ೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

ವಾರ್ಷಿಕ ಚಂದ			ಸಂಪಾದಕ	ಬಿಡಿ ಪತ್ರಿಕೆ ೦—೧—೦
ಪರಸ್ಥಳದವರಿಗೆ	....	೨—೮—೦	ಟೇಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ.ಎಲ್.	
ಸ್ಥಳದವರಿಗೆ	...	೩—೦—೦		

ವರ್ಷ ೧ ಬಳ್ಳಾರಿ ನಗರ—ನವಂಬರ್ ೯ ನೇ ಸೋಮವಾರ ೧೯೩೧ ಸಂಚಿಕೆ ೪

"ಪ್ರೇಮವು ಕೊಡುವ ಗುಣವನ್ನುಳ್ಳದಾಗಿದೆಯೇ ಹೊರತು,

ಬೇಡುವುದಿಲ್ಲ.

ನಿಜವಾದ ಪ್ರೇಮವುಳ್ಳವನು, ದುಃಖವನ್ನು ಸಂತೋಷದಿಂದ ಸಹಿಸುವನು.

ಅವನಲ್ಲಿ ಕೋಪ ಮತ್ತು ಪ್ರತೀಕಾರ ಗುಣಗಳಿರುವುದಿಲ್ಲ."

"ನಯ ವಿನಯಗಳಿಲ್ಲದ ಸತ್ಯವು ಸೊಕ್ಕಿನಿಂದ ಕೂಡಿದ

ಬೂಟಾಟಿಕೆಯ ಚಿತ್ರವಾಗಿದೆ.

ಶ್ರೀಮಂತರೆಂದು ಕರೆಯಲ್ಪಡುವ ಜನರು, ತಮ್ಮ

ಮನೋಪರಿಶುದ್ಧತೆಗೂ, ನೈತಿಕ ಉನ್ನತಿಗೂ, ಸದ್ಯಕ್ಕೆ

ಆಚರಣೆಯಲ್ಲಿರುವ ತಮ್ಮ ವರ್ತನೆಗಳನ್ನು ಬದಲಾಯಿಸಬೇಕು."

ಮಹಾತ್ಮ ಗಾಂಧಿ

|| ವಂದೇ ಮಾತರಂ ||

ಸ್ವದೇಶಿಯ ಸುವಾರ್ತೆ.

(ಲೇಖಕರು - ಶ್ರೀ. ಕಾಕಾ ಕಾಲೇಲಕರವರು ಸಾಬರಮತಿ.)

ಸ್ವದೇಶಿಯು ನಮ್ಮ ಆಚಾರ ವಿಚಾರಗಳನ್ನು ಪ್ರಫುಲ್ಲಿತಗೊಳಿಸುವ ಒಂದು ಶ್ರೇಷ್ಠತರವಾದ **ಧಾರ್ಮಿಕ** ತತ್ವವಾಗಿದೆ ಇದು ಮನುಷ್ಯ ಜಾತಿಯ ಶಾಶ್ವತ ಶ್ರೇಯಸ್ಸಿಗೆ ಒಂದು ಸಾಧನವಾಗಿದೆ.

ಈ ನಮ್ಮ ಪುಣ್ಯ ಭೂಮಿಯಲ್ಲಿದ್ದ ನಾನಾ ದ್ವೇಷಾಸೂಯೆಗಳನ್ನೂ ಭಿನ್ನ ಭೇದಗಳನ್ನೂ ಉಚ್ಚ ನೀಚಭಾವನೆಗಳನ್ನೂ ನಿವಾರಣೆ ಮಾಡಲು **ಸ್ವದೇಶಿಯು** ಒಂದು ಸಾಧನವಾಗಿದೆ

ಸ್ವದೇಶಿಯಿಂದ ಸಶಾಧ- ಬುದ್ಧಿಯ ಹುಟ್ಟುವುದಕ್ಕೂ ಅಹಂಕಾರನಾಶ ನಮ್ರತೆಯು ತಲೆದೋರುವುದಕ್ಕೂ ಅನೇಕ ಕಷ್ಟನಷ್ಟಗಳನ್ನು ಕಳೆದು ಸುಖಶಾಂತಿಗಳನ್ನುಂಟು ಮಾಡಲಿಕ್ಕೂ ತುಂಬಾ ಸಹಾಯ ವಾಗುತ್ತದೆ ಇಂತಹ ಅನೇಕ ಪ್ರಯೋಜನಗಳುಂಟಾಗುವುದರಿಂದಲೇ **ಸ್ವದೇಶಿಯ ತತ್ವವು** ಪರಮಾತ್ಮನ ಅವತಾರವೆಂದು ನಾವು ಹೇಳುತ್ತಿದ್ದೇವೆ

ಈ **ಸ್ವದೇಶಿ ತತ್ವದಿಂದ** ನಾವು ನಮ್ಮ ಅಂತಃಕರಣವನ್ನು ಶುದ್ಧಗೊಳಿಸಿ ಸ್ವೇಚ್ಛೆ ಮತ್ತು ಮಯಿಗಳ ಸಾಮ್ರಾಜ್ಯವನ್ನು ನಮ್ಮ ಹೃದಯದಲ್ಲಿ ಸ್ಥಾಪಿಸಲು ನಾವು ಸಮರ್ಥರಾಗುತ್ತೇವೆ ನಮ್ಮ ಪಾಪ ಮತ್ತು ಅಸತ್ಯಗಳನ್ನು ನಿವಾರಣೆಮಾಡಲು ಈ **ಸ್ವದೇಶಿಯು** ನಮಗೆ ಬಹಳ ಸಹಾಯ ಮಾಡುತ್ತದೆ, ಆದ ಪ್ರಯುಕ್ತವೇ **ಸ್ವದೇಶಿಯು ಪರಮಾತ್ಮನ ಅವತಾರವೆಂದು** ನಾವು ಸಾರಿ ಸಾರಿ ಹೇಳುತ್ತಿದ್ದೇವೆ

ಈ **ಸ್ವದೇಶಿ ತತ್ವದ** ತೇಜಸ್ಸನ್ನು ಇದರ ಶ್ರೇಷ್ಠತ್ವವನ್ನು ಸರಿಯಾಗಿ ತಿಳಿದು ಕೊಳ್ಳುವಂಥಹ ಸ್ಥಿತಿಯಲ್ಲಿ ಈ ಭರತ ಖಂಡವು ಈಗ ಇನ್ನೂ ಇಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ,ಆದುದರಿಂದಲೇ ಈಗ **ಸ್ವದೇಶಿ ಬಟ್ಟೆಗಳ ಉಪಯೋಗ** ನೆಂಬ ಒಂದೇ ಒಂದು ಚಿಕ್ಕ ಕೃತಿಯನ್ನು ಭರತ ಖಂಡವು ಉಪಕ್ರಮಿಸಿದೆ

ಈ ನಿಶ್ಚಯವು ಒಂದು ಅದ್ಭುತ ಶಕ್ತಿಯಿಂದ ನಡೆಯುತ್ತಲಿದೆಯೆಂತಲೂ ಅ ಶಕ್ತಿಯು ನಿರಂತರದಲ್ಲಿಯೂ ವಿಶ್ವದ ಕಲ್ಯಾಣವನ್ನೇ ಮಾಡುತ್ತಿರುತ್ತದೆಂತಲೂ, ದೃಢವಾದ ವಿಶ್ವಾಸವಿರಬೇಕು **ಸ್ವದೇಶಿ** ಭಕ್ತನು ಜಗತ್ತನ್ನು ಒಳ್ಳೆಯ ದಾರಿಗೆ ತರಬೇಕೆಂದು ಪ್ರಯತ್ನಿಸುವುದಿಲ್ಲ ಏಕೆಂದರೆ, ಜಗತ್ತು ಪರಮಾತ್ಮನ ನಿಯೋಜಿತ ತತ್ವದಂತೆಯೇ ನಡೆಯುತ್ತಿರುತ್ತದೆಂದು, ನಂಬಿರುತ್ತಾನೆ

ಅಲದಮರದ ಬೆಳವಣಿಗೆಯ ವಿಷಯದಲ್ಲಿ **ಅಂಜೂರಿ ಗಿಡವು** ಹೇಗೆ ಚಿಂತಿಸುವುದಿಲ್ಲವೋ **ಕುರಿಗಳನ್ನು ನರಿಯು ಇಲಿಗಳನ್ನು ಬೆಕ್ಕು** ಪೋಷಿಸಲು ಹೇಗೆ ಯೋಚಿಸುವುದಿಲ್ಲವೋ ಹಾಗೆಯೇ ಒಂದು ದೇಶದ ಜನರು ಜಗತ್ತಿನ ಹಿತಾರ್ಥವೆಂದು ಕೂಡಾ ಮತ್ತೊಂದು ದೇಶದ ಜನರ ಉಪಯೋಗದ ಉಪಕರಣಗಳನ್ನು ಪೂರೈಸಿ ಕೊಡುವ ಶ್ರಮವಹಿಸಬೇಕಾದುದಿಲ್ಲ ಹಾಗೆ ಶ್ರಮ ವಹಿಸಿ ಅನ್ಯ ದೇಶದವರಿಗೆ ಸೌಲಭ್ಯವನ್ನುಂಟು ಮಾಡಿಕೊಡುವುದು ಶಕ್ಯವಿದ್ದರೂ ಇಷ್ಟವಾದುದಲ್ಲ ನಾವು ಇನಕ್ಕಿಂತಲೂ ಸುಖಕರವಾದಕಾಲದಲ್ಲಿ ಹುಟ್ಟಲಿಲ್ಲವಲ್ಲಾ! ಎಂದು ಚಿಂತಿಸಿದರೂ, ಹೇಗೆ ಈಗಿನ ಕಾಲಸ್ಥಿತಿಯ ಫಲಾಫಲಗಳನ್ನು ಅನುಭವಿಸಬೇಕಾಗಿದೆಯೋ ಹಾಗೆಯೇ **ನಾವು ನಮ್ಮ ಜನ್ಮ ಭೂಮಿಯ ಸೇವೆಯನ್ನು ಎಂಥಹ ಸ್ಥಿತಿಯಲ್ಲಾದರೂ ಮಾಡಲೇ ಬೇಕಾಗಿದೆ.**

(ಉದ್ಯೋಗ)

ಶುದ್ಧಖಾದಿ **ಕೈ ನೂಲು ಕೈ ಮಗ್ಗದಲ್ಲಿತಯಾರಾದ** **ಅಗ್ಗ ಖಾದಿ**

(ಖಾದಿಯೇ ಸುಖಜೀವನಕ್ಕೆ ಸಮೀಚೀನದಾರಿ)

ಅನ್ನವಿಲ್ಲದೆ ಕೊರಗುತ್ತಿರುವ ಕಡುಬಡವರಿಗೆ ನೀವು ವಸ್ತ್ರವನ್ನು ಊಟವನ್ನು ಕೊಟ್ಟು ಪುಣ್ಯ ಕಟ್ಟಿಕೊಳ್ಳ ಬೇಕೆಂದು ಅಪೇಕ್ಷಿಸುವುದಾದರೆ,ಶುದ್ಧ ಖಾದಿಯನ್ನೇ ಧರಿಸಿರಿ! ಮಹಾತ್ಮ ಗಾಂಧಿ, ಲಾಲಾಲಜಪತರಾಯ್ ಹೆಸರು ಬಗ್ಗೆ ದೊಡ್ಡ ದೊಡ್ಡಮುಖಂಡರ ಚಿತ್ರಗಳನ್ನು ಮಿಲ್ಲು ಬಟ್ಟೆಗಳ ಮೇಲೆ ಹಾಕಿ ಸೋಸ ಮಾಡುತ್ತಿರುವವರು ಅಲ್ಲಿದೆ ಮಿಲ್ಲಿನ ಒರಟು ಬಟ್ಟೆಗಳನ್ನು ಖಾದಿಯೆಂತ ಮಾರುತ್ತಾರೆ ನೀವು ಮೋಸ ಹೋಗ ಬೇಡಿರಿ ನಮ್ಮಲ್ಲಿ ಒಂದು ಸಲ ಬಂದುಪರೀಕ್ಷಿಸಿ ತೆಗೆದು ಕೊಳ್ಳಿರಿ

ಖಾದಿ ಕೋ ಆಪರೇಟಿವ್ ಸೊಸೈಟಿ.
ಬ್ರಾಹ್ಮಣರ ಬೀದಿ
ಬಳ್ಳಾರಿ

ಸಂಪಾದಕೀಯ ವಿಚಾರಗಳು.

ಬ್ರಿಟಿಷ್ ಮಂತ್ರಿವರ್ಗ.

ಪ್ರಧಾನ ಮಂತ್ರಿಗಳಾದ ಮ್ಯಾಕ್ಡೊನಾಲ್ಡರವರು ಬಹಳ ಕಷ್ಟಪಟ್ಟು ತಮ್ಮ ಮಂತ್ರಿವರ್ಗಕ್ಕೆ ಸದ್ಯರನ್ನು ನಿಯಾಮಕ ಮಾಡಿದ್ದಾರೆ. ಮ್ಯಾಕ್ಡೊನಾಲ್ಡರವರು ಬ್ರಿಟಿಷ ನಿಯೋಜಕ ವರ್ಗಗಳನ್ನು ಗಾರಡಿ ವಿದ್ಯದಿಂದ ತಮ್ಮಕಡೆಗೆ ಮಾಡಿಕೊಂಡಿರುವದು ನಿಜವು. ಅವರ ಕಾನ್ಸರ್ವೆಟಿವ್ ಪಕ್ಷದವರು ಅಧಿಕ ಸಂಖ್ಯಾಕರಾಗಿರುವದರಿಂದ, ತಮ್ಮ ಮಂತ್ರಿಮಂಡಳಿಗೆ 11 ಮಂದಿ ಕಾನ್ಸರ್ವೆಟಿವ್ ಪಕ್ಷದವರನ್ನು ಮತ್ತು ನಾಲ್ಕುಮಂದಿ ರಾಷ್ಟ್ರೀಯ ಕಾರ್ಮಿಕ ಪಕ್ಷದವರನ್ನು ಐದುಮಂದಿ ಲಿಬರಲ್ ಪಕ್ಷದವರನ್ನೂ ನಿಯಾಮಿಸಿ, ಮಂತ್ರಿಮಂಡಲಿ ಸ್ಥಾಪಿಸಿ ಮಾಡಿದರು. ಇದರಲ್ಲಿ ಕಾನ್ಸರ್ವೆಟಿವ್ ಪಕ್ಷದವರಿಗೆ ವಿಜಯವು ಸಿಕ್ಕಿರುವದು ನಿಶ್ಚಯ. ಸಂಕಿಗಳನ್ನು ಸಮರ್ಥಿಸುತ್ತಿರುವ ನೆವಿಲ್ ಚೆಂಬರ್ಲೆನ್ ಯವರು ಕೋಶಾಧಿಕಾರಿಯಾಗಿರುವದು ಟೋರಿ ಪಕ್ಷಕ್ಕೆ ವಿಶೇಷ ಪ್ರಾಮುಖ್ಯತೆ ಬಂದಂತೆ ಹೇಳಬಹುದು ಇದರೊಳಗೆ ಸ್ವೇಚ್ಛಾಚಾರವನ್ನು ಸಮರ್ಥಿಸುತ್ತಿರುವ ಸರ್ ಸಾಮುಯೆಲ್ ಹೋರ್, ಸ್ಕ್ಯಾಡೆನ್, ಸರ್ ಜಾನ್ ಸೈಮನ್ರೂ ಕೂಡಿ ಈ ಮಂತ್ರಿವರ್ಗದಲ್ಲಿದ್ದಾರೆ.

ಸರ್ ಜಾನ್ ಸೈಮನ್ ಸಾಹೇಬರು ಹಿಂದೂ ದೇಶದ ಪ್ರಶ್ನೆಗಳಕಡೆ ಸಂಕುಚಿತ ದೃಷ್ಟಿಯುಳ್ಳವರೆಂದು ಗೊತ್ತಿದೆ. ತಮ್ಮ ವರದಿಯಲ್ಲಿ ಸೂಚಿಸಿದ ಸಂಸ್ಕರಣಗಳನ್ನು ಮಾತ್ರ ಅವರು ಸಮರ್ಥಿಸುವರೇ ಹೊರತು, ಕೇಂದ್ರ ಪ್ರಭುತ್ವದಲ್ಲಿ ಜನಾಬುದಾರಿ ಅಧಿಕಾರವಾಗಲೀ, ಸೈನ್ಯ, ಆರ್ಥಿಕ, ವಿದೇಶೀ ವಿಷಯಗಳಮೇಲೆ ಅಧಿಕಾರವಾಗಲೀ, ನಮಗೆ ಕೊಡಲಿಕ್ಕೆ ಒಂಗೀಕರಿಸುವದು ಕಷ್ಟವು.

ಅಂಡನ್ನಿನಲ್ಲಿ ಮುಖಂಡರ ಸಂಭಾಷಣೆಗಳು.

ಈ ವಾರದಲ್ಲಿ ಎಲ್ಲಾ ಪಕ್ಷಗಳ ಮುಖಂಡರು, ಮ್ಯಾಕ್ಡೊನಾಲ್ಡರವರ ಸಂಗಡ ಮತ್ತು, ಬಾಲ್ಡವಿನ್ನರ ಸಂಗಡ ಸಂಭಾಷಣೆಗಳನ್ನು ಏರಿಸಿದರು. ಸರ್. ತೇಜಬಹದ್ದೂರ ಸಪ್ರೂರವರು ಮ್ಯಾಕ್ಡೊನಾಲ್ಡರವರ ಸಂಗಡ ಮಾತನಾಡಿ ಬಹಳ ಉತ್ಸುಕರಾಗಿ ನಮ್ಮಗೆ ಮುಕ್ತಿಯು ತ್ವರಿತದಲ್ಲಿಯೇ ಸಿಗಬಹುದಾಗಿದೆಯೂ, ಪರಿಸ್ಥಿತಿಗಳು ಬಹಳ ತೃಪ್ತಿಕರವಾಗಿರುವಂತೆಯೂ, ಹೇಳಿದರು. ಆದರೆ ಅವರ ಧ್ಯೇಯಗಳು ಸಂಕುಚಿತವಾಗಿರುವದರಿಂದಲೂ, ಅವರು ಮಿತಪಾಲಿಗಳಾಗಿರುವದರಿಂದಲೂ, ಕೇಂದ್ರ ಪ್ರಭುತ್ವದಲ್ಲಿ ಸ್ವಲ್ಪ ಅಧಿಕಾರವು ಸಿಕ್ಕರೆ ಸಮಾಧಾನ ಪಡುವವರಾಗಿರುವರು.

ಆದರೆ ಮಹಾತ್ಮ ಗಾಂಧಿಜಿಯವರು, ಮತ್ತು ಕೆಂಪಿತ ಮಾಳವಿಯಾರವರು ಅಷ್ಟರಲ್ಲಿ ತೃಪ್ತಿಪಡುವವರಾಗಿಲ್ಲ. ಮ್ಯಾಕ್ಡೊನಾಲ್ಡರ ಅಸ್ಪೃಶ್ಯ ಹೇಳಿಕೆಗಳು ಸಂಶಯವನ್ನು ಆಧಿಕ ಮಾಡುತ್ತಲಿವೆ ಮ್ಯಾಕ್ಡೊನಾಲ್ಡರವರು ಬ್ರಿಟಿಷ ನಿಯೋಜಕ ವರ್ಗಗಳನ್ನು ಗಾರಡಿ ವಿದ್ಯದಿಂದ ಮೋಹಿತರನ್ನಾಗಿ ಮಾಡಿದಂತೆ, ಮಹಾತ್ಮಾಗಾಂಧಿಯವರನ್ನು ಅಸ್ಪೃಶ್ಯ ಮಾತುಗಳಿಂದ ಮೋಸಮಾಡುವದು ಅಸಾಧ್ಯವು. ಮಹಾತ್ಮಾಗಾಂಧಿಯವರು ಕಾಂಗ್ರೆಸ ಸಂಸ್ಥೆಯ ಅದ್ವಿತೀಯ ಪ್ರತಿನಿಧಿಯಾಗಿರುವದು ಕಾಂಗ್ರೆಸ್ಸಿನ ಪ್ರಶಸ್ತ್ಯವೂ, ಸಾಮರ್ಥ್ಯವೂ, ಮ್ಯಾಕ್ಡೊನಾಲ್ಡರಿಗೆ ಗೊತ್ತಿದೆ. ಆದುದರಿಂದ ಮಹಾತ್ಮಾ ಗಾಂಧಿಯವರನ್ನು ಸಮಾಧಾನಪಡಿಸುವದು ಅವಶ್ಯಕವೆಂದು ಭಾರತ ಪ್ರಭುತ್ವದವರೂ, ಸಿಮಲಾ ಸರ್ಕಾರದ ಅಧಿಕಾರಸ್ಥರೂ, ಸ್ಪಷ್ಟಮಾಡಿದಂತೆ ತಿಳಿದು ಬಂದಿದೆ.

ಈ ತಿಂಗಳು 11-ನೇ ತಾರೀಖಿನಲ್ಲಿ ಮ್ಯಾಕ್ಡೊನಾಲ್ಡರು ಒಂದು ಪ್ರಕಟನೆ ಮಾಡುವರೆಂತಲೂ, ಅಲ್ಲಿ ಪಾಲ್ಯ ತಂತ್ರಗಳನ್ನು ಸೂಚಿಸುವರೆಂತಲೂ ತಿಳಿದು ಬಂದಿದೆ. ಅಲ್ಲಿಕೂಡ ಅಸ್ಪೃಶ್ಯ ಮಾತುಗಳೇ ಹೇಳಬಹುದಾಗಿ ತೋರುತ್ತದೆ. ಆದುದರಿಂದ ಸರಿಸ್ಥಿತಿಯ ಆಕಾಜನಕವಾಗಿಲ್ಲ. ಮಹಾತ್ಮರು ಯಾರೋ ಪ್ರ ಪ್ರಯತ್ನ ತಾಡಬೇಕೆಂದಿದ್ದರೂ, ಹಿಂದೂದೇಶದ ಪರಿಸ್ಥಿತಿಗಳು ವಿಷಮವಾಗಿ ಪರಿಣಮಿಸುತ್ತಲಿದುದರಿಂದ ಶೀಘ್ರದಲ್ಲಿಯೇ ಇಲ್ಲಿಗೆ ಬರಬಹುದು.

ಆಗಾಖಾನ್ ಸಾಹೇಬರೂ ಸಹ ಮ್ಯಾಕ್ಡೊನಾಲ್ಡರವರನ್ನು ಕೂಡಿ ಸಂಭಾಷಣೆ ಜರುಗಿಸಿದರು. ಅವರ ಕೋರಿಕೆಗಳಲ್ಲಿ ಸ್ವಲ್ಪಮಟ್ಟಿಗಾದರೂ ಸಮಾಧಾನಕ್ಕಾಗಿ ಬಿಟ್ಟುಬಿಡುವದು ಸಾಧ್ಯವೋ ಎಂದು ಮ್ಯಾಕ್ಡೊನಾಲ್ಡರು ಕೇಳಿದಂತೆ ತಾಡುಬರುತ್ತದೆ. ಅವರು ಉತ್ತರ ಕೊಡಲಿಕ್ಕೆ ಮುಸಲ್ಮಾನ ಎಲ್ಲಾ ಪ್ರತಿನಿಧಿಗಳನ್ನು ಸೇರಿಸಿ ಪರ್ಯಾಲೋಚಿಸುತ್ತಲಿರುವರು. ಕಾಂಗ್ರೆಸ್ಸಿನವರು ಎಷ್ಟು ಸಮಂಜಸವಾಗಿ ಸಮೇತುಕನಾಗಿ ವರ್ತಿಸಬೇಕೆಂದು ಯತ್ನಿಸುತ್ತಿದ್ದರೂ, ಈ ಸಂಕುಚಿತ ದೃಷ್ಟಿಯುಳ್ಳ ಪ್ರತಿನಿಧಿಗಳು ತಮ್ಮ ಹಟವನ್ನು ಬಿಡಲಿಲ್ಲ. ಸಂಪೂರ್ಣ ಸ್ವಾತಂತ್ರ್ಯವೂ ಸ್ವರಾಜ್ಯವೂ, ರಾಷ್ಟ್ರವಿಮುಕ್ತಿಯೂ ಇವರಿಗೆ ಪ್ರಿಯತಮಗಳಲ್ಲ. ತಮ್ಮ ಸಂಕುಚಿತ ಹಕ್ಕುಗಳಿಗಾಗಿ, ರಾಷ್ಟ್ರದ ಗುಲಾಮ ಸ್ಥಿತಿಯನ್ನು ಚಿರವಾಗಿರುವಂತೆ ಮಾಡುತ್ತಿರುವರು.

ಮಹಾತ್ಮ ಗಾಂಧಿಯವರ ಮನೋಸ್ಥಿತಿ.

ಒಂದೆರಡು ಕೋಮುವಾರು ಪ್ರತಿನಿಧಿಗಳ ಸಹ್ಯ ಹಟವಿದ್ದರೂ, ಇನ್ನೊಂದುಕಡೆ ಕಾನ್ಸರ್ವೆಟಿವ್ ಪಕ್ಷದಮೇಲೆ ಆಧಾರಬಿದ್ದ ಮ್ಯಾಕ್ಡೊನಾಲ್ಡರ ಅಸ್ಪೃಶ್ಯ ಮತ್ತು ಕಾಲವಿಲಂಬನ ಮಾಡುತ್ತಿರುವ ಹೇಳಿಕೆಗಳಿಂದಲೂ, ಮಹಾತ್ಮಾ ಗಾಂಧಿಯವರ ಸ್ಥಿತಿಯು ಸಾಕ್ಷ್ಯವಾಗಿದೆ. ಆದುದರಿಂದ ಈ ಪರಿಸ್ಥಿತಿಯಿಂದ ಸಮಾಧಾನವು ಬರುವದು ಅಸಾಧ್ಯವೆಂತ ಗಾಂಧಿಜೀಯವರು ಮ್ಯಾಕ್ಡೊನಾಲ್ಡರವರಿಗೆ ಹೇಳಿದಂತೆ ಕಂಡುಬರುತ್ತದೆ. ಮ್ಯಾಕ್ಡೊನಾಲ್ಡರ ಗೌರವಿ ವಿದ್ಯೆಯು ಇಲ್ಲಿ ಗೆಲ್ಲುವಂತೆ ಕಾಣಿಸುವದಿಲ್ಲ ಜಾರ್ಜ ಚಕ್ರವರ್ತಿಯನ್ನು ಭೆಟ್ಟಿಆಗದೆ, ಯಾವ ಉಡುಪನ್ನು ಧರಿಸಿ ಹೋಗುವರೆಂದು ಕೇಳಿದರೇ ತಮ್ಮ ಮಾಮೂಲು ಉಡುಪುಗಳನ್ನು ಧರಿಸಿ ಹೋಗುವೆನೆಂದು ಮಹಾತ್ಮರು ಹೇಳಿದರು. ಅದೇ ಪ್ರಕಾರ ಮಾಡಿದರು. ಈ ಸಮಾವೇಶದಿಂದ ಯಾವ ದೇಶಗಳಿಗೆ ಕಲ್ಯಾಣವಾಗಬೇಕೆಂಬ ಕೋರಿಕೆಯ ಪ್ರತಿಯೊಬ್ಬರಲ್ಲಿ ಏರಿಸುವುದು.

ತಿರುವಾಂಕೂರು ಮಹಾರಾಜರ ಪಟ್ಟಾಭಿಷೇಕ.

ನವಂಬರು ತಿಂಗಳು 6-ನೇ ತಾರೀಖಿನಲ್ಲಿ ತಿರುವಾಂಕೂರು ಸಂಸ್ಥಾನಧೀಶರ ಪಟ್ಟಾಭಿಷೇಕ ಮಹೋತ್ಸವವು ನಡೆಯಿತು, ಮಹಾರಾಜ ಶ್ರೀ ಪದ್ಮನಾಭದಾಸ ವಂಚಮಾಲ, ರಾಮವರ್ಮ, ಕುಲಶೇಖರ ಕೀರ್ತಿಪತಿ, ಮಣಿಸುಲ್ತಾನ್, ಮಹಾರಾಜ, ರಾಜರಾಮ, ರಾಜಬಹದ್ದೂರ ಹಾಗ ಪರಾಜಂಗ್‌ರವರಿಗೆ ತಿರುವೆಂಡ್ರಂನಲ್ಲಿ ಈ ಮಹೋತ್ಸವವು ಜರುಗಿತು.

ಇದ ನರವಿಗೂ, ತಿರುವಾಂಕೂರಿನಲ್ಲಿ ಅರಸರು ಅವರ ಪ್ರಜೆಗಳ ಪ್ರಮುಖ ಮಾಡುವದರಿಂದಲೂ, ಮತ್ತು ಕುಲದೇವರಾದ ಪದ್ಮನಾಭನ ಅಮಿತ ಭಕ್ತರಾಗಿ, ಅ ದೇವರಿಂದಲೇ ರಾಜ್ಯಕಾರ್ಭಾರಗಳನ್ನು ನಡೆಸುತ್ತಿರುವದರಿಂದಲೂ, ಯಶಸ್ವಿಗೆ ಬಂದಿರುವದು. ಈ ಕುಟುಂಬಕ್ಕೆ ಸೇರಿದ ರಾಜರು ಪದ್ಮನಾಭದೇವರ ದಾಸರಾಗಿ, ಅ ದೇವರ ಪ್ರೀತಿಗಾಗಿ, ಧರ್ಮದಿಂದ ರಾಜ್ಯಪಡಿಸಬೇಕೆಂಬ ಸಂಪ್ರದಾಯವಿದೆ ಈಗ ಪಟ್ಟಾಭಿಷಿಕ್ತರಾದ ಮಹಾರಾಜ ತಿರುನಾಳರವರಿಗೆಯವರಿಗೂ ರಾಜ್ಯಕಾರ್ಭಾರಗಳನ್ನು ಸಾಗಿಸುತ್ತಿರುವ ಮಹಾರಾಣಿ ಸೇತುಪಾರ್ವತಿಬಾಯಿ ಯವರ ಆದರಣೀಯ ಔತ್ಕೃಷ್ಟವಾದ ಶಿಕ್ಷಣವೂ, ವಿಜ್ಞಾನವೂ, ರಾಜನೀತಿಯೂ, ತಿಳುವಳಿಕೆಯ ಬಂದಿದೆ. ಅವರ ಕುಟುಂಬದ ಸಲ್ಲಾಪ್ರವಾಯಗಳ ಸಹಾಯದಿಂದ ಇವರ ಕಾಲದಲ್ಲಿ ಅಲ್ಲಿನ ಪ್ರಜೆಗಳಿಗೆ ಸಂಪತ್ಸಮೃದ್ಧಿಯು ಆಗುತ್ತದೆಯೆಂಬುದು ನಿಸ್ಸಂಶಯವಾದ ಮಾತು.

ಬೇರೆ ಕೆಲವು ಸ್ವದೇಶೀ ಸಂಸ್ಥಾನಗಳಲ್ಲಿ ಅರಸರು ಅವರ ಆದಾಯ ವನ್ನು ತಮ್ಮ ಸ್ವಾರ್ಥಕ್ಕಾಗಿ ವಿನಿಯೋಗಿಸುವರು. ಪ್ರಜೆಗಳ ವಿದ್ಯೆಕ್ಕಾಗಿಯೂ, ಅವರ ಅನುಕೂಲತೆಗಳಾಗಿಯೂ ಶ್ರದ್ಧೆಯನ್ನು ತೋರಿಸುವದಿಲ್ಲ. ತಿರುವಾಂಕೂರಲ್ಲಿ ಅರಸರು ಸರಳ ಜೀವನ ಮಾಡುತ್ತ, ನೀತಿವಂತರಾಗಿ ಪ್ರಜೆಗಳ ಹಿತದಲ್ಲಿ ಶ್ರದ್ಧೆಯನ್ನು ವ್ಯಕ್ತಮಾಡುತ್ತಾ ಬಂದಿರುತ್ತಾರೆ. ಅರಸರ ಕುಟುಂಬದ ಖರ್ಚು ಸಂಸ್ಥಾನದ ಆದಾಯ ದಲ್ಲಿ ಸೇಕಡ 100 ಕ್ಕೆ 7 ಕ್ಕಿಂತ ಹೆಚ್ಚು ಯಾವಾಗಲೂ ಆಗಲಿಲ್ಲ, ಅದರಿಂದ ತಿರುವಾಂಕೂರಿನಲ್ಲಿರುವ ವಿದ್ಯಾಭಿವೃದ್ಧಿಯು ಹಿಂದೂದೇಶದಲ್ಲಿ ಬೇರ ಯಾವ ಪ್ರದೇಶದಲ್ಲಾಗಲಿ ಇಲ್ಲ. ಪ್ರತಿ 1000 ಕ್ಕೆ 279 ಮಂದಿ ವಿದ್ಯಾವಂತರಿದ್ದಾರೆ ವಿದ್ಯಾಶಾಲೆಗೆ ಅಲ್ಲಿ ಖರ್ಚುಮಾಡುವಷ್ಟು ಇನ್ನು ಎಲ್ಲಿಯೂ ಸಂಸ್ಥಾನ ಪ್ರಭುತ್ವದವರು ಖರ್ಚು ಮಾಡುವದಿಲ್ಲ. ಅಲ್ಲಿರುವ ರಸ್ತೆಗಳ ಅನುಕೂಲತೆ, ಪ್ರಜೆಗಳಿಗೆ ದೊರಕಿರುವ ಅಧಿಕ ಸೌಕರ್ಯಗಳು ಜೀವನೋಪಾಯ ಮಾರ್ಗಗಳು ಇನ್ನೂವ ಪ್ರದೇಶದಲ್ಲಿಯೂ ಸಿಗುವದಿಲ್ಲ ಆದುದರಿಂದ ಈ ಸಂಸ್ಥಾನದಲ್ಲಿ ಇತ್ತೀಚೆಗೆ ಪಟ್ಟಾಭಿಷಿಕ್ತರಾದ ಮಹಾರಾಜರ ಕಾಲದಲ್ಲಿ ರಾಮರಾಜ್ಯವು ತಥವಾ ಧರ್ಮರಾಜ್ಯವು ಅಭಿವೃದ್ಧಿ ಆಗುವದೆಂದು ನಮ್ಮ ವಿಶ್ವಾಸವು.

ಶ್ರೀ. ಬಾಳಾಜಿರಾಯರು ಬಳ್ಳಾರಿಯ ಪುರಸಭೆಯ ಅಧ್ಯಕ್ಷರಾಗಿ

ದೀಪಾವಳಿ.

ಈ ದಿವಸ ಮತ್ತು ನಾಳೆ ದೀಪಾವಳಿ ಹಬ್ಬವು, ದಕ್ಷಿಣ ದೇಶದ ಹಿಂದೂ ಜನಗಳಿಂದೆಲ್ಲಾ ಆಚರಿಸಲ್ಪಡುವುದು. ಶ್ರೀ ಕೃಷ್ಣ ಭಗವಾನರು, ಸತ್ಯಭಾಮಾ ಸಮೇತರಾಗಿ ನರಕಾಸುರ ವಧೆಯನ್ನು ಮಾಡಿ, ಅಧರ್ಮವನ್ನು ನಿರ್ಮೂಲ ಮಾಡಿ, ಧರ್ಮವನ್ನು ಸ್ಥಾಪಿಸಿ, ಪ್ರಪಂಚವನ್ನು ಕಾಪಾಡಿದರು ಈ ಪೌರಾಣಿಕ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡು, ಅ ಹಬ್ಬದ ಮೂಲಕ ಜಗತ್ಕಲ್ಯಾಣವನ್ನು ನಾವು ಕೋರಬೇಕು.

ಈ ಉತ್ಸವವನ್ನು ಯಾವರೀತಿಯಲ್ಲಿ ಆಚರಿಸಬೇಕೆಂಬ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ಕೊಡುತ್ತೇವೆ ಮೃಷ್ಟಾನ್ನವನ್ನುಂಡು, ಝಗ, ಜಗಿಸುತ್ತಿರುವ ಪರದೇಶೀವಸ್ತ್ರ ಧಾರಿಗಳಾಗಿ, ವಿದೇಶಿ ಪಟಾಕಿಗಳನ್ನು ಸುಟ್ಟಮಾತ್ರಕ್ಕೆ ನರಕಾಸುರ ವಧೆಯಾಗುವುದಿಲ್ಲ. ಹೀಗೆ ಮಾಡುವುದು ಅವಜ್ಞಂರವ. ಅನರ್ಥವು ನಿರುಪಯೋಗವು ಈಗ ನಮ್ಮ ದೇಶದಲ್ಲಿ ಪ್ರತಿಯೊಂದು ವ್ಯಕ್ತಿಯಲ್ಲಿಯೂ, ಕಾಮ, ಕ್ರೋಧಾದಿ ದುರ್ಗುಣಗಳಿಂದ ಯುಕ್ತವಾದ, ನರಕಾಸುರನು ತಾಂಡವಾಡುತ್ತಿರುವನು ಪ್ರತಿಯೊಬ್ಬ ಮನುಷ್ಯನೂ, ಅಧರ್ಮವನ್ನು, ಧರ್ಮದಿಂದಲೂ, ಅಸತ್ಯವನ್ನು, ಸತ್ಯದಿಂದಲೂ, ಹಿಂಸೆಯನ್ನು, ಅಹಿಂಸೆಯಿಂದಲೂ ಜಯಿಸಿದರೆ, ನಿಜವಾಗಿಯೂ ನರಕಾಸುರನ ವಧೆ ಯಾಗುವುದು,

ದಾರಿದ್ರ್ಯದಿಂದ, ಅನ್ನಾಹಾರಗಳಿಲ್ಲದೆ ಬಳಲುವ ಜನಾಂಗವು ಕೋಟಿ ಗಟ್ಟಲೆ ಇದೆ ಅಕಾಲಮರಣದಿಂದ, ಸಾವಿರಕ್ಕೆ 328 ಮಂದಿ ಸಾಯುತ್ತಲಿರುವರು, ಹುಟ್ಟುವ ಐದು ಶಿಶುಗಳಲ್ಲಿ ಪ್ರತಿಯೊಂದು ಶಿಶುವೂ ಸಾಯುವುದು ಜನಗಳಿಗೆ ಸಾಕಾದಷ್ಟು ವಿದ್ಯಾಭ್ಯಾಸವಿಲ್ಲ. ಹಿಂದೂಸ್ಥಾನದ ಜನಸಂಖ್ಯೆಯಲ್ಲಿ, ಸರಾಸರಿ, ಶೇಕಡ ಆರು ಮಂದಿ ವಿದ್ಯಾವಂತರು ಎಂದು 1921 ನೇ ಜನಗಣನೆಯ ಪ್ರಕಾರ ಒಂದು ಕೋಟಿ 98 ಲಕ್ಷ ಗಂಡಸರೂ, 28 ಲಕ್ಷ ಹೆಂಗಸರೂ, ಇಡೀ ರಾಷ್ಟ್ರದಲ್ಲಿ ವಿದ್ಯಾ ಶಿಕ್ಷಣವನ್ನು ಹೊಂದಿದ್ದರು

ನಮ್ಮ ದೇಶದಲ್ಲಿ ಏಳು ಲಕ್ಷ ಹಳ್ಳಿಗಳೂ, ಎಂಟು ಸಾವಿರ ಪಟ್ಟಣಗಳೂ ಇವೆ ಹಳ್ಳಿಗಳಲ್ಲಿರುವ ರೈತರದುಸ್ಥಿತಿಯನ್ನು ವರ್ಣಿಸುವಂತಿಲ್ಲ. ಅವರು ವರ್ಷಕ್ಕೆ ಆರು ತಿಂಗಳು ನಿರುದ್ಯೋಗಿಗಳಾಗಿ, ಕೈಗಾರಿಕೆಗಳಿಲ್ಲದೆ ಕಶ್ಮಲವಾದ ವಾತಾವರಣದಲ್ಲಿ ಶಿಕ್ಕು. ರೋಗಗಳಿಗೂ, ಅಕಾಲಮರಣಕ್ಕೂ ಗುರಿಯಾಗುವದಲ್ಲದೆ, ನಾನಾರೀತಿಯಲ್ಲಿ ಸಂಕಟಪಡುತ್ತಿರುವರು. ಪರದೇಶಕ್ಕೆ ಹೋಗುವ ಆಹಾರಸಾಮಗ್ರಿಗಳನ್ನು ನಿಲ್ಲಿಸುವುದಾದರೂ, ಸುಮಾರು ೧೦೦ ಲಕ್ಷ ಟನ್ನುಗಳು ಆಹಾರವು ಹೆಳ್ಳಗರಿತಿ ಕಡಮೆಯಾಗುವುದು.

ಹಿಂದೂಸ್ಥಾನದ ಪರಿಸ್ಥಿತಿಯು ಭಯಂಕರವಾಗುತ್ತಿದೆ.

ಭೇದತಂತ್ರಗಳ ಆಟವನ್ನು ಸಾಕುಮಾಡಿ.

ವೈಸ್ರಾಯ ಸರ್ಕಾರದವರು ಲಂಡನ್ನಿಗೆ ಪತ್ರ ಹಾಕಿದರು.

"ಕಾಂಗ್ರೆಸ್‌ದವರನ್ನು ಒಪ್ಪಿಸಲಿಕ್ಕೆ ಪ್ರಯತ್ನವಾಗಬೇಕು, ಸ್ವಧರ್ಮ ಪ್ರಿಯರಾದ ಮುಸಲ್ಮಾನರನ್ನು ಪ್ರೀತಿಗೊಳಿಸುವ ಭರದಲ್ಲಿ ಕಾಂಗ್ರೆಸ್‌ದವರ ಬೇಡಿಕೆಗಳನ್ನು ಒತ್ತಟ್ಟಿಗೆ ತಳ್ಳಬೇಡಿ, ಅಧಿಕಾರವನ್ನು ಹಿಂದೀಯರಿಗೆ ಕೊಡುವದನ್ನು ಹಿಂದೆ ಹಾಕಲಿಕ್ಕೆ ಈ ಉಪಾಯವು ಹೂಡಿದ್ದಾಗಿರುವುದಾದರೂ, ಕಾಂಗ್ರೆಸ್ ಅಭಿಪ್ರಾಯಗಳನ್ನು ನಿರ್ಲಕ್ಷ್ಯ ಮಾಡುವಂತಿಲ್ಲ.

ಈ ರೀತಿಯಲ್ಲಿ ಹಿಂದೂಸ್ಥಾನದ ಶಿವಿಲ್ ಸರ್ವೀಸ್ ಉದ್ಯೋಗಿಗಳು ತಮ್ಮ ನಿಶ್ಚಿತವಾದ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿರುವರೆಂದು, ಬಾಂಬೆ ಕ್ರಾನಿಕಲ್ ಪತ್ರಿಕೆಯ ವಿಶೇಷ ಬಾತ್ಮೀದಾರರು ಲಂಡನ್‌ದಿಂದ ವಾರ್ತೆ ಮಾಡಿದ್ದಾರೆ,

ಹಿಂದೂಸ್ಥಾನ ಸರಕಾರದ ಕಾರ್ಯದರ್ಶಿಗಳಾದ ಸರ್. ಶಾಮುಯಲ್‌ಹೋರರವರಿಗೂ, ಪರಿಷತ್ತಿನ ಅಧ್ಯಕ್ಷರಾದ ಲಾರ್ಡ ಶಾಂಕೆಯವರಿಗೂ, ಭಿನ್ನಾಭಿಪ್ರಾಯಗಳು ಹೆಚ್ಚುತ್ತಲಿವೆ

ಮಹಾತ್ಮರ ಸಂಭಾಷಣೆಗಳು.

ಮಹಾತ್ಮ ಗಾಂಧಿಯವರು ನವಂಬರ್ ೩ ನೇ ಮಂಗಳವಾರ ಪ್ರಾತಃಕಾಲ ಮುಖ್ಯಮಂತ್ರಿಗಳನ್ನು ಸಂದರ್ಶಿಸಿ, ಸುಮಾರು 15 ನಿಮಿಷಗಳ ವರೆಗೂ, ಸಂಭಾಷಣೆ ನಡೆಸಿದರು ಅವರು ಸ್ವೇತ ಗೃಹವನ್ನು ಬಿಟ್ಟಾಗ ಸರಿಯಾಗಿ 11 ಘಂಟೆ ಹೊಡೆಯಿತು ಹಿಂದೂ ಪತ್ರಿಕೆಯ ಬಾತ್ಮೀದಾರರೊಡನೆ ಮಾತನಾಡುತ್ತಾ ತಮಗೆ ತೃಪ್ತಿ ಯಾಗಲಿ. ಅತೃಪ್ತಿಯಾಗಲಿ ಆಗಲಿಲ್ಲವೆಂದರು. ನವಂಬರ್ ಮೂರನೆಯ ವಾರಕ್ಕೆ ಗುಂಡು ಮೇಜು ಮುಗಿಯಬಹುದೆಂತಲೂ, ತಿಳಿಸಿದರು. ಮ್ಯಾಕ್ಡೊನಾಲ್ಡ್‌ಮಂತ್ರಿಗಳವರ ಪ್ರಕೃತಿಯು ಛಲೋ ಇಲ್ಲದ್ದರಿಂದ ವಿಶ್ರಾಂತಿಯನ್ನು ಹೊಂದ ಬೇಕೆಂತ ಮಹಾತ್ಮರು ಸೂಚಿಸಿದರು ಎರಡುವರೆ ತಿಂಗಳ ಹೆಚ್ಚದಲ್ಲಿ ಯುರೋಪ್ ಖಂಡದ ಇತರ ಭಾಗಗಳಲ್ಲಾಗಲಿ ಹಿಂದೂಸ್ಥಾನದಲ್ಲಾಗಲಿ ಇರಬೇಕೆಂತ ನಿಶ್ಚಯಿಸಿದ್ದೇನೆ ನಾನು ನನ್ನ ಯಜಮಾನರಲ್ಲಿ ಎಲ್ಲಾ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಅವಲಂಭಿಸಿದೆ."

ನಂತರ ನವಂಬರ್ 4 ಸಂಯುಕ್ತ ಸಮಿತಿಯ ಕಾರ್ಯಕ್ರಮವನ್ನು ಮುಗಿಸುತ್ತಾ, ಕೋಮುವಾರು ಸಮಿತಿಯ ಸಮಾವೇಶವಾಗುವದರಿಗೂ, ಇದನ್ನು ಮುಂದುವರಿಸಲಾಗುವುದೆಂದು ಲಾರ್ಡ ಶಾಂಕೆಯವರು ಹೇಳಿದರು. ಕೋಮುವಾರು ಸಮಿತಿಯ ಈ ತಿಂಗಳು 11 ಕ್ಕೆ ಕೂಡಬಹುದು ಅಲ್ಪ ಸಂಖ್ಯಾಕರಿಗೆ ಸಮಿತಿಯನ್ನು ಮುಂದುವರಿಸಿದ್ದುದು ಅನುಕೂಲವಾದಂತಾಗಿದೆ. ತಮ್ಮ ಬೇಡಿಕೆಗಳನ್ನು ಕೊಡದ ಹೊರತು, ಸ್ವರಾಜ್ಯ ಸಾಧನೆಯ ಮಾರ್ಗಗಳಿಗೆ ಕಲ್ಲು ಹಾಕುವೆನೆಂದು, ಮುಸಲ್ಮಾನರೂ, ಸಿಖ್ಖರ್ಗದವರೂ, ಬೆದರಿಸುತ್ತಲಿದ್ದಾರೆ. ಮಂತ್ರಿಗಳಾದ ಮ್ಯಾಕ್ಡೊನಾಲ್ಡರು ಕೋಮುವಾರು ಪಕ್ಷದವರನ್ನು ಸಮರ್ಥಿಸುವರೋ? ಕೆಲವು ದಿವಸಗಳೊಳಗಾಗಿ ಇದರ ಪರಿಣಾಮವು ತಿಳಿದು ಬರುತ್ತದೆ.

ಪಂಡಿತ ಮಾಳವೀಯರು, ಪ್ರಧಾನ ಮಂತ್ರಿಗಳನ್ನು ಸಂದರ್ಶಿಸಿ, ರಾಜಕೀಯ ಕಾರಣಗಳು ಯಾವರೀತಿಯಲ್ಲಿದ್ದರೂ, ಪರಿಷತ್ತು ಮುಗಿಯುವದರೊಳಗಾಗಿ ತೃಪ್ತಿಕರವಾದ ಒಪ್ಪಂದವನ್ನು ನಿರ್ಣಯಿಸುವುದು ಅತ್ಯಾವಶ್ಯಕವೆಂದು ಹೇಳಿದರು.

ಲಾರ್ಡ ಇರ್ವಿನ್ ಸಾಹೇಬರ ಚಿತಣ.

ಇಂಡಿಯಾ ವೈಸ್ರಾಯರಾಗಿ ಈಗ ವಿಲಾಯತಿಯಲ್ಲಿ ವಿಶ್ರಾಂತಿ ಹೊಂದುತ್ತಿರುವ, ಲಾರ್ಡ ಇರ್ವಿನ್ ಸಾಹೇಬರು ದುಂಡುಮೇಜಿನ ಪ್ರತಿನಿಧಿಗಳಿಗೆಲ್ಲಾ ಆಲ್ಪಾಹಾರವನ್ನು ನಿರ್ಪಡಿಸಿದ್ದರು.

ಪಾರ್ಲಿಮೆಂಟ್ ಚುನಾವಣೆಗಳ ಫಲಿತಾಂಶ.

ಬ್ರಿಟಿಶ ಮಂತ್ರಿಮಂಡಲದಲ್ಲಿ ಪ್ರಮುಖ ವ್ಯಕ್ತಿಗಳು.

ಮಿ| ರಾಮ್ಸೆ ಮ್ಯಾಕ್ಡೊನಾಲ್ಡ ಪ್ರಧಾನಮಂತ್ರಿ.
,, ನೆವಿಲ್ ಛೆಂಬರ್ಲಿನ್ ಕೋಶಾಧಿಕಾರಿ.
,, ಸರ್ ಜಾನ್ ಸೈಮನ್ ಪರದೇಶ ವ್ಯವಹಾರಗಳಮಂತ್ರಿ.
,, ಬಿ ಹೆಚ್. ಥಾಮಸ್ ಸಾಮ್ರಾಜ್ಯ ಕಾರ್ಯದರ್ಶಿ
,, ಸರ್ ಶಾಮುಯಲ್ ಹೋರ್ ಹಿಂದೂಸ್ಥಾನ ಸರಕಾರದ ಕಾರ್ಯದರ್ಶಿ.
,, ಬಾಲ್ಡ್ವಿನ್ ಮಂತ್ರಿಮಂಡಲದ ಅಧ್ಯಕ್ಷರು.
ಸರ್ ಹರ್ಬರ್ಟ ಸ್ಯಾಮುಯಲ್ ಬ್ರಿಟಿಶ ದ್ವಿಪಗಳ ರಾಜ್ಯಕಾರ್ಯದರ್ಶಿ
,, ಲಾರ್ಡ ಶಾಂಕೆ. ಲಾರ್ಡ ಛಾನ್ಸಲರ್.

ಚುನಾಯಿಸಲ್ಪಟ್ಟರು. ಅವರಿಗೆ ನಮ್ಮ ಧನ್ಯವಾದಗಳು.

ಕಾಶ್ಮೀರದೇಶದಲ್ಲಿ ಹಿಂದೂ, ಮಹಮದೀಯರ ಕಲಹ.

ಕಲಹಗಳಿಂದ 3 ಮುಸಲ್ಮಾನರೂ, 1 ಹಿಂದುವೂ ಕೊಲ್ಲಲ್ಪಟ್ಟರು.

ಗುಂಡಿನೇಟುಗಳಿಂದ 9 ಜನರು ಮರಣ ಹೊಂದಿದರು.

ಕಾಶ್ಮೀರದ ಪ್ರಕಟನ ಶಾಖಾಧಿಕಾರಿಗಳು ಹೀಗೆ ಬರೆಯುತ್ತಾರೆ.

ನವಂಬರ್ ೪

ಶ್ರೀನಗರ.

"ನಿನ್ನೆಯದಿವಸ ಜಮ್ಮು ಎಂಬ ಸ್ಥಳದಲ್ಲಿ ಮಿಲಿಟರಿಯವರ ಗುಂಡಿನೇಟುಗಳಿಂದ 9 ಜನರು ಸತ್ತರು. ಹಿಂದೂ, ಮಹಮದೀಯ ಕಲಹದಲ್ಲಿ 3 ಮುಸಲ್ಮಾನರೂ, 1 ಹಿಂದುವೂ ಕೊಲ್ಲಲ್ಪಟ್ಟಿದ್ದರು ಎಂದೂ ಅಂಗಡಿಗಳು ಸುಟ್ಟಲ್ಪಟ್ಟು" "ರಾಸಿಬೈಲೂರ" ಎಂಬ ದೇವಸ್ಥಾನವು ಲೂಟಿಯಾಗಿದೆ. ಗುಂಪಿನಿಂದ ಮಿಲಿಟರಿಯವರ ಮೇಲೆ ಗುಂಡುಗಳು ಹಾರಿಸಲ್ಪಟ್ಟುವು. 8 ಹಿಂದೂ ಅಂಗಡಿಗಳೂ, 8 ಮುಸಲ್ಮಾನ ಅಂಗಡಿಗಳೂ ಲೂಟಿಯಾಗಿವೆ. ಮುಸಲ್ಮಾನ ಸ್ವಯಂ ಸೇವಕರು ಬೀದಿಗಳಲ್ಲಿ ಆಯುಧಪಾಣಿಗಳಾಗಿ ಓಡಾಡುತ್ತಿದ್ದುದರಿಂದ, ಅವರ ಆಯುಧಗಳನ್ನು ಕಸಿಯಲು ಅಪ್ಪಣೆಯಾಗಿದೆ. 'ಜಾಥಾ' ಗುಂಪುಗಳು ಹೆಚ್ಚಾಗಿ ಬರುತ್ತಲಿವೆ. ಪಟ್ಟಣದ ಶಾಂತತೆಗೋಸ್ಕರ ಉಭಯ ಜವಾಬ್ದಾರಿಯನ್ನುಳ್ಳ, ಹಿಂದೂ, ಮುಸಲ್ಮಾನರನ್ನೊಳಗೊಂಡ ಸಭೆಗಳೇರ್ಪಟ್ಟವೆ, ಜಾಥಾ ಎಂಬ ಗುಂಪುಗಳನ್ನು ಕ್ರಿಮಿನಲ್ ಪ್ರೊಸೀಜರ್‌ಕೋಡ 151ನೇ ಕಲಮಿನಪ್ರಕಾರ, ಸಡೆಯಕೆಯ ಒರಗಿಸಲಾಗುತ್ತದೆ."

ದೆಹಲಿಯ ನ್ಯಾಯನಿಧಾಯಕ ಸಭೆ.

ತೀರಕಡಮೆ ಸಂಬಳಗಳನ್ನುಳ್ಳ ಪುಟ್ಟನೌಕರರ, ಮತ್ತು ದೊಡ್ಡ ಅಧಿಕಾರಿಸ್ಥರ ಮಾಸಿಕವೇತನಗಳನ್ನು ತಗ್ಗಿಸುವುದರಿಂದ ಸರ್ಕಾರಕ್ಕೆ ವಿಶೇಷ ಲಾಭವಿಲ್ಲವೆಂತಲೂ, ಎಲ್ಲಾ ಉದ್ಯೋಗಿಗಳಿಗೂ ಸಮಾನವಾಗಿ ಸಂಬಳಗಳು ತಗ್ಗಬೇಕಾದುದು ಅವಶ್ಯಕವೆಂತಲೂ ಆರ್ಥಿಕಮಂತ್ರಿಗಳ ಅಭಿಪ್ರಾಯ ಪಡುತ್ತಾರೆ. ಸಂಬಳಗಳನ್ನು ತಗ್ಗಿಸುವುದಲ್ಲದೆ, ರೈಲ್ವೆಶಾಖೆಯಲ್ಲಿ ಐದು ಕೋಟಿ ರೂಪಾಯಿಗಳು ಪೋಷ್ಟು, ತಂತೀ ಇಲಾಖೆಗಳಲ್ಲಿ 16 ಲಕ್ಷ, ಸೈನ್ಯದಲ್ಲಿ ಐದುವರೆ ಕೋಟಿ ರೂಪಾಯಿ, ಕಡಿಮೆ ಮಾಡಲಾಗುವುದೆಂದು ಅವರು ತಿಳಿಸಿದರು ಸದ್ಯಕ್ಕೆ 3 ಕೋಟಿ, 32 ಲಕ್ಷ ರೂಪಾಯಿ ಖರ್ಚುಗಳನ್ನು ಕಡಿಮೆ ಮಾಡಲಿಕ್ಕೆ ಸರ್ಕಾರದವರು ಒಪ್ಪಿಕೊಂಡಂತಾಯಿತು ಹೊಸ ತೆರಿಗೆಗಳನ್ನು ತೆಗೆದು ಹಾಕಬೇಕಾದ ಪ್ರಶ್ನೆಯು ಬಂದಾಗ, ಅವುಗಳ ತಂಟೆ ಹೋಗುವುದಿಲ್ಲೆಂದು ಪ್ರಭುತ್ವ ಪಕ್ಷದ ಮಂತ್ರಿಗಳು ಬಾಯಿ ಕೊಟ್ಟರು.

ಮಹಾತ್ಮ ಗಾಂಧಿಯವರ ಕಾರ್ಯಕ್ರಮ.

ಕಾಂಗ್ರೆಸ್ ಕಾರ್ಯಕಾರೀ ಮಂಡಲದ ತೀರ್ಮಾನ.

ಕಾರ್ಯಕಾರೀ ಮಂಡಲಿಯು ಮಹಾತ್ಮ ಗಾಂಧಿಯವರ ಮುಂದಿನ ಕಾರ್ಯಕ್ರಮದ ಬಗ್ಗೆ, ಅವರಿಂದ ಬಂದ ತಂತಿಯನ್ನು ವಿಮರ್ಶಿಸಿದೆ. ಕಾನ್ಫರೆನ್ಸದಲ್ಲಿ ಇನ್ನುಮುಂದೆ ಭಾಗತೆಗೆದುಕೊಳ್ಳುವುದು ಅನಾವಶ್ಯಕವೆಂದು ಈ ಸಭೆಯು ಅಭಿಪ್ರಾಯಪಡುವುದು. ಅವರು ಅಲ್ಲಿಯ ವಾತಾವರಣಗಳನ್ನೂ, ವಿಷಯಗಳನ್ನೂ, ಚೆನ್ನಾಗಿ ಬಲ್ಲವರಾದ್ದರಿಂದ, ಯಾವುದನ್ನು ನಿರ್ಣಯಿಸಲಕ್ಕೂ, ಅವರೇ ಬಾಧ್ಯರು.

ಬಂಗಾಳ, ವಾಯುವ್ಯಪ್ರಾಂತ, ಸಂಯುಕ್ತ ದೇಶಗಳಲ್ಲಿ ಕೆಡುತ್ತಿರುವ ಪರಿಸ್ಥಿತಿಯಬಗ್ಗೆ, ಈ ಸಭೆಯು ಮಹಾತ್ಮರ ಗಮನವನ್ನೆಳೆಯಲಪೇಕ್ಷಿಸುತ್ತದೆ

ಸದ್ಯದ ಸ್ಥಿತಿಯಲ್ಲಿ ಯೂರೋಪ್ ಖಂಡದ ದೀರ್ಘಪ್ರವಾಸವು ಅಪ್ರಕೃತವಾಗಿದೆ. ಈ ಸಭೆಯು, ಮಹಾತ್ಮರು ಶೀಘ್ರವಾಗಿ ಹಿಂದೂಸ್ಥಾನಕ್ಕೆ ಬರಬೇಕಾದುದವಶ್ಯಕವೆಂಬುದನ್ನು ಸೂಚಿಸುತ್ತದೆ.

ಬಳ್ಳಾರಿ ಸುದ್ದಿ.

ಮುನಿಸಿಪಲ್ ಛೇರ್ಮನ್ನರಾಗಿದ್ದ ಶ್ರೀನಾರಾಯಣಾಯರಿಗೆ, ಮುನಿಸಿಪಲ್ ಹೈಸ್ಕೂಲ್ ಮುಂಭಾಗದ ಉದ್ಯಾನವನದಲ್ಲಿ 9-11-31 ನೇ ಸಾಯಂಕಾಲ ಪುರಸಭೆಯ ಉದ್ಯೋಗಿಗಳು, ಅಸಾಧಾರಣವಾದ, ಪ್ರೀತಿ, ನಿಷ್ಠಾಸಕ್ತಿಂದ ಸತ್ಕರಿಸಿದರು ಅಲ್ಲದೆ ಒಂದು ಬೆಳ್ಳಿಯ ಬಟ್ಟಲನ್ನು ತಮ್ಮ ಪ್ರೇಮ ಪ್ರದರ್ಶನರೂಪವಾಗಿ ಅರ್ಪಿಸಿದರು

ಆರೋಗ್ಯ ಸತ್ತು ಮತ್ತಲಾದವು ಬಹಳ ವಿಜೃಂಭಣೆಯಿಂದ ನಡೆಯುತ್ತಲಿದೆ ಫುಟ್‌ಬಾಲ ಪಂದ್ಯಗಳು ನಿನ್ನೆಯ ದಿವಸ ಮುಗಿದವು. ಈ ಊರಿನ ಜಯರತ್ನಂ ಟೀಮ ಸವರೂ, ಅನಂತಪುರದ ಕಾಲೇಜಿ ಸವರೂ, ಪಂದ್ಯವಾಡಿ ಅನಂತಪುರದವರೇ ಗೆದ್ದರು, ಬೆಳ್ಳಿಯ ಬಟ್ಟಲು ಈ ವರ್ಷ ಅವರ ಸ್ವಾಧೀನವಾಯಿತು.

ಹೊಸಪೇಟೆ ಪತ್ರ.

(ಸ್ವಂತ ಬಾತ್ಮೀದಾರರಿಂದ)

ಕಾಂಗ್ರೆಸ್ ಪ್ರಚಾರ

ಹುನ್ವಿನಹಡಗಲಿ ತಾಲೂಕು ತಂಬ್ರಹಳ್ಳಿ ಗ್ರಾಮಕ್ಕೆ ಹೊಸಪೇಟೆ ವಕೀಲರಾದ ಮತ್ತಿಹಳ್ಳಿ ಬಾಳೆಕೇಂದ್ರಾಯರು, ಹಾಗು ಬಳ್ಳಾರಿಯ ಸ್ವಯಂಸೇವಕರಾದ ಸಿದ್ದಪ್ಪನವರೂ ಹೋಗಿ ಸಾರ್ವಜನಿಕ ಸಭೆಯಲ್ಲಿ ರಾಜಕೀಯ ಪರಿಸ್ಥಿತಿಯನ್ನು ಉಪನ್ಯಾಸ ಮಾಡಿದರು. ಇನ್ನು ವರ್ಗದ ಪ್ರತಿನಿಧಿಗಳಾಗಿ ಮೂರು ಮೇಜಿನ ಪರಿಷತ್ತಿನಲ್ಲಿ ಮಹಾತ್ಮಾ ಗಾಂಧಿಯವರು ನಿನ್ನು ವರ್ಗದ ಪ್ರತಿನಿಧಿಗಳಲ್ಲವೆಂದು ಹಿಯ್ಯಾಳಿಸಿ ಡಾ|| ಅಂಬೆಡಕರವರ ಭಾಷಣವನ್ನು ನಿಷೇಧಿಸೋಣವಾಯಿತು

ಶ್ರೀ ಸಿದ್ದಪ್ಪನವರು ಪ್ರಚಾರಕ್ಕಾಗಿ ಹಳ್ಳಿಗಳಿಗೆ ಹೊರಟರು.

ಪುರಸಭೆ.

ಮುನಿಸಿಪಲ್ ಚುನಾವಣೆಗಳಲ್ಲಿ ಇವರವರಿಗು ಸಾಮಾನ್ಯರಾಗಿ ಕೆಲಸಮಾಡಿದವರ ಪೈಕಿ 4 ಮಂದಿ ಮಾತ್ರ ಚುನಾವಣೆ ಮಾಡಲ್ಪಟ್ಟರು ಮುನಿಸಿಪಲ್ ಛೇರ್ಮನ್ನರಾದ ಡಾಕ್ಟರ್ ನಾಗನಗೌಡರಿಗೆ ಚುನಾವಣೆ ಆಗಲಿಲ್ಲ. ಮಹಿಳೆಯವರ ಸರವಾಗಿ ಶ್ರೀಮತಿ ಮುಳುಸುಂದ ಸುಂದ್ರಮ್ಮನವರು ಕೌನ್ಸಿಲ್ಲಿಗೆ ಬಂದಿದ್ದಾರೆ. ಇವರು ಮುಳುಸುಂದ ಕೃಷ್ಣಾಚಾರ್ಯರ ಸತ್ನಿಯರು ಅಧ್ಯಕ್ಷರ ಚುನಾವಣೆಗಾಗಿ 10-11-31 ತೇದಿ ಹೊಸ ಪುರಸಭೆಯು ಸೇರುತ್ತದೆ.

2 ಕೀರ್ತನೆ.

"ಬಾಲಭಾರತಿ", "ಅಭಿನವಶಾರದೆ", "ಸರಸವಾಣಿ", "ಕೀರ್ತನ ಧುರೀಣಿ" ಎಂಬ ಬಿರುದುಗಳನ್ನು ಪಡೆದ ಶ್ರೀ ಯಮಗಿರಿ ಕುಮಾರಿಯವರು ಕೀರ್ತನೆಗಳನ್ನು ಇಲ್ಲಿ ಮಾಡುತ್ತಾ ಇದ್ದಾರೆ. ಅಚ್ಚುಕನ್ನಡದಿಂದ ಬಿಕ್ಕುವಯಸ್ಸಿನವರಾದ ಶ್ರೀಕುವರಿಯರು ಮಾಡುವ ಕೀರ್ತನೆಗಳಿಗೆ ಜನರು ಆಶ್ಚರ್ಯಚಕಿತರಾಗಿದ್ದಾರೆ ಉಪಾತ್ತ ವಿಚಾರಪ್ರೇರಿತರಾಗಿ ಕರ್ನಾಟಕ ಭಾಷಾವೇಷ ಮಾಡುವ ಸಲುವಾಗಿ ಶ್ರೀಕುವರಿಯರಿಗೆ ಉದಾರ ಆಶ್ರಯವನ್ನು ಕೊಟ್ಟ ಯಾವೂರ ವೀರಶೈವ ಮಂಡಲಿಯವರಿಗೆ ನಮ್ಮ ವಂದನೆಗಳು.

ಹಡಗಲಿ.

ಈ ತಾಲೂಕನ್ನು ತೆಗೆದು ಡೆಪ್ಯುಟಿ ತಹಶೀಲ್ದಾರರ ಕೈಕೆಳಗೆ ಸ್ವತ್ರೇಕವಾಗಿರುವಂತೆ ಏರ್ಪಾಟಾಗಿದೆಯೆಂದು ತಿಳಿದುಬಂದಿದೆ

ಸಿರುಗುಪ್ಪ.

ಈ ಊರಿನ ಸಬ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ತೆಗೆದು ಹಾಕಿರುವರೆಂದು ತಿಳಿದು ಬಂದಿದೆ.

ಹೆಚ್ಚಿದ ಕೂರತೆಯಿಂದ, ಸರ್ಕಾರದವರು ಈ ಕಾರ್ಯಾಗಾರನ್ನು ಕೈಕೊಂಡಿರುವರು.

ಕೂಡ್ಲಿಗೆ ತಾಲೂಕು ಹೊಸಹಳ್ಳಿ.

ಈ ಊರಿನಲ್ಲಿ ಕಾಲರಾ ಗಲಾಟೆಯಿಂದ ಈವರೆಗೆ ಸುಮಾರು 30 ಜನಗಳವರಿಗೂ ಸತ್ತಿರುವನೆಂತಲೂ, ಸರ್ಕಾರದವರು ಇನಾಕುಲೇಷನ್ ಆದ ತರುವಾಯ ಪುನಃ ಅಲ್ಲಿಗೆ ಹೋಗಿಲ್ಲವೇ ಇಲ್ಲವೆಂತಲೂ. ಇನ್ನು ಚಿಕ್ಕಹಳ್ಳಿಗಳಲ್ಲಿ ಅಂಟುಜಾಡ್ಯವು ಇನ್ನು ಪ್ರಬಲ ಸ್ಥಿತಿಯಲ್ಲಿದ್ದರೂ, ಸರ್ಕಾರದವರು ಉದಾಸೀನರಾಗಿರುವರೆಂತಲೂ, ವಗೈರೆ ಅಲ್ಲಿನಜಮೀನ್ದಾರರಾದ ಶ್ರೀಸುಬ್ಬಯ್ಯನವರು ಪತ್ರ ಹಾಕಿರುವರು. ಸರ್ಕಾರದವರು ಈ ಕಡೆಗೆ ಗಮನಕೊಡಬೇಕು,

ವರ್ತಮಾನಗಳು.

ಕಾಶ್ಮೀರ ದೇಶಕ್ಕೆ ತುಂಟರ ತಂಡಗಳು ಹೋಗಿ ಗಲಭೆ ಎಬ್ಬಿಸಿದರಲು, ಇಂಡಿಯಾ ಸರ್ಕಾರದ ಸರವಾಗಿ ಸೈನ್ಯವು ಒಂದು ಅಸಾಧಾರಣ ಕಾಯಿದೆಯನ್ನು ಅಲ್ಲಿಗೆ ಮಾಡಿರುತ್ತಾರೆ. ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಕಾಯಿದೆಯ ಸರ್ಕಾರವಾಗಿ ತಕ್ಕ ಚರ್ಯಗಳನ್ನು ತೆಗೆದು ಕೊಳ್ಳಬಹುದು, ಈ ಹೊಸಕಾಯಿದೆಯು ಪಂಜಾಬು ಪ್ರಾಂತ್ಯಕ್ಕೆ ಮಾತ್ರ ಅನ್ವಯಿಸುವುದು.

ಢಾಕಾ ನಗರದಲ್ಲಿ ಡೋನೋಯವರನ್ನು ಕೊಲೆ ಮಾಡಲು ಪ್ರಯತ್ನವಾದುದೆಂಬ ಮೇಲೆ, 64 ಮಂದಿಗಳು ಸೆರೆ ಹಿಡಿಯಲ್ಪಟ್ಟಿರ್ತಾರೆ. ಸಿರೀಶಚಂದ್ರ ಭಾಟಚರ್ಜಿ ಎಂಬವರು ವರ್ಷದ ಮುದಿವಕೀಲನನ್ನು ಹಿಡಿದಿದ್ದಾರೆ. ಅಕ್ಟೋಬರು 29 ನೇ ತಾರೀಖು ಈತನ ಮೂವರು ಮಕ್ಕಳನ್ನು ಸೆರೆ ಹಿಡಿದಿದ್ದರು.

ಪೆಷಾವರಪಟ್ಟಣದಲ್ಲಿ 144ನೇ ಕಲಂ ಪಾಸಾಗಿ, ಮೆರವಣಿಗೆಗಳೂ, ಸಭೆಗಳೂ ತಡೆಯಾಗಿವೆ.

ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಮುಖಂಡರಿಗೂ, ಅಧಿಕಾರಿಸ್ಥರಿಗೂ, ಮಧ್ಯ ಸಭೆಯು ನಡೆಯಿತು. ಎರಡು ಪಕ್ಷಗಳವರೂ, ತಮ್ಮ ತಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡಲಿಲ್ಲ.

ಕರ್ನಾಟಕ ಸಾಹಿತ್ಯ ಮಂಡಲಿ, ಅನಂತಪುರ.

[ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ.]

" No scheme of self government however benevolently bestowed upon us, will ever make us self governing nation if we have no respect to the language of our mother tongue."

MAHATMA GANDHI.

ಪ್ರತಿಯೊಬ್ಬ ಮಾನವನಲ್ಲಿ 'ನನ್ನ ನಾಡು' 'ನನ್ನ ನುಡಿ' ಎಂಬ ಸದ್ವಿಚಾರ ತರಂಗಗಳು ಶಾಶ್ವತಾಗಿಯೇ ಉದ್ಭವಿಸಬೇಕು. ಪ್ರತಿ ಒಬ್ಬ 'ಪೂ ತನ್ನ ನಾಡಿನ ಉಜ್ವಲಕಾದ ಇತಿಹಾಸವನ್ನು ತಿಳಿದೇನೇ 'ಇದು ನನ್ನ ನಾಡು, ನನ್ನ ನುಡಿ' ಎಂದು ಹೆಮ್ಮೆಪಡಬೇಕಾದ ಸಂಭವವಿರುತ್ತದೆ. ಮಾನವನಿಗೂ, ಅವನು ಜನಿಸಿರುವ ನಾಡಿಗೂ, ಸ್ವಾಭಾವಿಕ ಗಾಢ ಪ್ರೇಮಸಂಬಧವಿರುವುದರಿಂದ ಅವನು ಎಲ್ಲಿ ಹೋದರೂ,ತನ್ನ ಜನ್ಮ ಸ್ಥಳವನ್ನು ಮರೆಯುವುದಿಲ್ಲ ಇದೇ ಸರ್ವವ್ಯಾಪಿಯಾದ ರಾಷ್ಟ್ರೀಯ ತತ್ವವು.

ಈ ವಿಶ್ವ ತತ್ವವು ನಮ್ಮ ಕನ್ನಡ ನಾಡಿನಲ್ಲಿ ಅಂಕುರಿಸಬೇಕಾದರೆ ರಾಷ್ಟ್ರ ವೈಭವವನ್ನೂ, ಪುರಾತನ ಕವಿಗಳ, ಕರ್ನಾಟಕ ವೀರಪುಂಗವರ ಚರಿತ್ರೆಯನ್ನೂ, ಚಿಕ್ಕ ಮಕ್ಕಳ ಹೃದಯ ಪಟದಮೇಲೆ ಚಿತ್ರಿಸಬೇಕು. ಇದು 'ನನ್ನ ನಾಡು' 'ನನ್ನ ನುಡಿ' ಎಂದು ಬಾಯಿಂದ ಪದೇ ಪದೇ ಹೇಳುವುದು ಒಣ ಅಭಿಮಾನವಾಗುವುದು ನಾಡಿನ ನೆಲದೇವನದ ಸಾರವು ನಮ್ಮ ರಕ್ತದಲ್ಲಿ ಬೆರೆಯಬೇಕು,ಹೃದಯದಲ್ಲಿ ಸ್ಥಿರವಾಗಬೇಕು, ಆತ್ಮದಲ್ಲಿ ಬಿಂಬಿಸಬೇಕು. ಈ ತತ್ವವು ಮರೆತು ದೇಶಕ್ಕೆ ವಿಷಮ ಸ್ಥಿತಿಯೊದಗಿದಾಗ, ಅಲ್ಲಿ ವಾಸಿಸುವವರ ಮನಸ್ಸು ಕ್ಷೀಣಗೊಳ್ಳದಿದ್ದರೆ, ಅದು ಬಾಳಲ್ಲಿ ಭೂಭಾರ, ಹೃದಯದಲ್ಲಿ ಕಲ್ಲಿನ ಬಂಡೆ. ದೇಹದಲ್ಲಿ, ನೋಟುಮರ.

ಸದ್ಯದಲ್ಲಿ ಬಳ್ಳಾರಿಯ ಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡರೆ ಎದೆಯು ಧಸಕ್ಕೆಂದೆನಿಸುವುದು. ಬಳ್ಳಾರಿಯಂಥ ಶುದ್ಧ ಕನ್ನಡ ಜಿಲ್ಲೆಯಲ್ಲಿ ಅನೇಕ ಸ್ಥಳಗಳಲ್ಲಿ ಕನ್ನಡಿಗರ ಮಕ್ಕಳು ತೆಲುಗನ್ನು ಕಲಿಯಬೇಕಾಗಿದೆ. ಮನೆಯಲ್ಲಿ ಮಾತನಾಡುವುದು ಕನ್ನಡ, ಶಾಲೆಯಲ್ಲಿ ಕಲಿಯಬೇಕಾದುದು ತೆಲುಗು. ಹೀಗಾಗಿ ಭಾಷೆಯು ಒಹಳ ಅಶುದ್ಧಿಯಾಗಿದೆ ವರ್ತಕರು ಕನ್ನಡ ಲೆಕ್ಕಗಳನ್ನು ಕನ್ನಡದಲ್ಲಿಟ್ಟು, ಕೋರ್ಟುಗಳಲ್ಲಿ ತೆಲುಗು ಭಾಷೆಯಲ್ಲಿ ವ್ಯವಹರಿಸಬೇಕಾಗಿದೆ. ಇಂಥಾ ವ್ಯಸನಕರವಾದ ಪರಿಸ್ಥಿತಿಯನ್ನು ಪಟ್ಟಣಿಗರು ನಿವಾರಿಸಲು ಯತ್ನಿಸಬೇಕು.

ವಿದ್ಯಾಖಾತೆಯವರಿಂದ ದೊರಕಿದ ಪಟ್ಟಿಯಲ್ಲಿ ಬಳ್ಳಾರಿ ನಗರದ ಪ್ರಾಥಮಿಕ ಶಾಲೆಗಳು 34 ಇವೆ. ಅವುಗಳಲ್ಲಿ 14 ತೆಲುಗು, 2 ತೆಲುಗು ಕನ್ನಡ 2 ತೆಲುಗು ತಮಿಳು 2 ಉರ್ದು, 4 ಕನ್ನಡ ಶಾಲೆಗಳವೆ.. ಇದರಿಂದ ತೆಲುಗುಭಾಷೆಗೆಷ್ಟು ಪ್ರೋತ್ಸಾಹವು ಕೊಡಲ್ಪಡುತ್ತಿರುವುದೆಂಬುದು ವ್ಯಕ್ತವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ 100 ಕ್ಕೆ 80 ಜನರು ಕನ್ನಡಮಾತನಾಡುವವರಿದ್ದರೂ ಕನ್ನಡ ಶಾಲೆಗಳು ಸಾಕಷ್ಟು ಇಲ್ಲದಿರುವುದು ಶೋಚನೀಯವು. ಕನ್ನಡ ಶಾಲೆಗಳಲ್ಲಿ, ವಿದ್ಯೆಯ ಬಲೆಯು ಅಭಿವೃದ್ಧಿಯಲ್ಲಿರುವುದು ಕನ್ನಡಿಗರ ಸುದೈವ ಮೊದಲೆನಿಸಬೇಕು.

ಈ ರೀತಿಗೆ ಸೇರಿದ ಕಪ್ಪಗಲ್, ಕುಂಟನಹಾಳು ಕೊಳಗಲ್ ತಾರೇಕಲ್ಲು ಚಾಗನೂರುಗಳು ಪಕ್ಕಾ ಕನ್ನಡ ಮಾತನಾಡುವ ಸ್ಥಳಗಳಾಗಿದ್ದರೂ ತೆಲುಗು ಭಾಷೆಯಲ್ಲಿ ಶಿಕ್ಷಣವು ಕೊಡಲ್ಪಡುತ್ತದೆ. ಪುರಸಭೆ, ಜಿಲ್ಲಾ ಕು ಬೋರ್ಡುಗಳವರು, ಈ ವಿಷಯಕ್ಕೆ ಗಮನವನ್ನು ಕೊಟ್ಟು, ಹೆಚ್ಚಾಗಿ ಕನ್ನಡ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಭಾಷೆಯ ಏಳ್ಗೆಯನ್ನು ಕೋರುವರೆಂದು, ಆಶಿಸುತ್ತೇವೆ.

ಸಿಂಗನ್ನವರ ಗೆಳೆ.

ಕನ್ನಡಿಗರ ಕರ್ತವ್ಯ

(ಓರ್ವ ಕನ್ನಡಿಗ,)

ಯಾವ ದೇಶದವರಾದರೂ, ಪರರಾಷ್ಟ್ರೀಯರಿಂದ ಆಳಲ್ಪಟ್ಟರೆ ಆ ದೇಶದಲ್ಲಿ ಇಲ್ಲದ ತೊಂದರೆಗಳು, ಇಲ್ಲದ ಅನೈಕಮತ್ಯವು, ಇಲ್ಲದ ಭೇದತಂತ್ರಗಳು ಬಾಗುತ್ತವೆ.ಹೀಗೆ ಅವರು ಯಾವಾಗಲೂ, ಭೇದ ತಂತ್ರೋಪಾಯಗಳಿಂದ ಪ್ರಜೆಗಳಲ್ಲಿ ಯಿಲ್ಲದ ಒಡಕುಗಳನ್ನು ಹುಟ್ಟಿಸಿ ತಮ್ಮ ರಾಜ್ಯಾಧಿಕಾರಕ್ಕೆ ಸೌಲಭ್ಯವನ್ನು ಸಾಧಿಸಿಕೊಳ್ಳುತ್ತಾರೆ. ಪ್ರಜೆಗಳಿಗೆ ಬೇಕಾದ್ದನ್ನು ಮಾಡುವುದಿಲ್ಲ ಪ್ರಜೆಗಳಿಗೆ ಬೇಡವಾದ್ದನ್ನು ಸಾಧಿಸುವರು. ಮಂಗನಿಂಗಳನೆಯು ಯಾರಿಗೂ ಬೇಕಾಗುವುದಿಲ್ಲ. ಆದರಿಂದ ಹಿಂದೂ ಮುಸಲ್ಮಾನರ ಅನೈಕಮತ್ಯಕ್ಕೆ ಬೀಜ ಬೋಪಾದಿಯಲ್ಲಿರತ್ತದೆಂದು ತಿಳಿದು ಸರಕಾರದವರು ಬಂಗಾಳಾ ಇಲಾಖೆಯನ್ನು ವಿಂಗಡಿಸಿ ಬಿಟ್ಟರು. ಅದರಿಂದ ಜನರಲ್ಲಿಒಡಕು ಹುಟ್ಟಿತ. ಬಂಗಾಳದವರು ಅತ್ಯುದ್ಭುತ ಚಳವಳಿಯನ್ನು ಮಾಡಿ ಅದನ್ನು ಕೂಡಿಸಿದರು.ಅನಂತರ ಪಂಗಡ ಪಂಗಡಕ್ಕೆ ಉಂಟಾದ ಒಡಕು ಹಾಗೆ ಮುಕದು ಬೆಳೆಯಲಾರಂಭಿಸಿತು. ಈಗ ಹೊರಟಿರುವ ಪ್ರತ್ಯೇಕ ಸಿಂಧೂ ಪ್ರಾಂತ್ಯದ ಸಮಿತಿಯವರಿಂದ ಪ್ರಚಾರವಾದ. ವರದಿಯಿಂದ ಪ್ರತ್ಯೇಕ ಸಿಂಧು ಪ್ರಾಂತ್ಯವಾದರೆ ಸಿಂಧೂ ದೇಶಕ್ಕೆ ಮಹಾಯೋಗವಿಲ್ಲವೆಂದು ತಿಳಿದು ಬಂದಿರುತ್ತದೆ. ಆದರೆ ಸಿಂಧೂ ದೇಶವನ್ನೂ, ಬೊಂಬಾಯಿ ಯಿಲಾಖೆಯಿಂದ ಪ್ರತ್ಯೇತಿಸಿದರೆ ಪಂಗಡ ಪಂಗಡಕ್ಕೆ ಜಗಳವು ಬೆಳೆದು, ತಮ್ಮ ನಿರಂಕುಶ ಪ್ರಭುತ್ವಕ್ಕೆ ಸುಲಭ ಸಾಧ್ಯವಾಗುವುದೆಂದು ತಿಳಿದು ಸರಕಾರದವರು ಅವನ್ನು ಅಂದರೆ ಸಿಂಧು ಪ್ರತ್ಯೇಕ ಪ್ರಾಂತ್ಯವನ್ನು ಸಾಧಿಸೇ ತೀರುವರು.

ಅದರೆ ಆಂಧ್ರ ಕರ್ನಾಟಕಗಳ ಪ್ರತ್ಯೇಕ ಪ್ರಾಂತ ರಚನೆಗೆ ಯಾರೂ,ತಕರಾರುಗಳೆಲ್ಲಾ ಆಂಧ್ರರು, ಕನ್ನಡಿಗರು,ಈ ವಿಷಯದಲ್ಲಿ ಒಮ್ಮನಸ್ಸಿನಿಂದ ಇರುವರು. ಈ ಪ್ರಾಂತಗಳ ರಚನೆಯಿಂದ ದಡ್ಡು ನಷ್ಟವಾಗುವುದಿಲ್ಲ. ಇದರಿಂದ ಈ ಎರಡು ಇಲಾಖೆಗಳು ಬಹಳ ಪ್ರಗತಿಯನ್ನು ಹೊಂದುತ್ತವೆ.ಹೀಗಿದ್ದರೂ ಈ ವಿಷಯದಲ್ಲಿ ಸರಕಾರಕ್ಕೆ ಎಷ್ಟು ದೂರು ಹೇಳಿಕೊಂಡರೂ ಸರಕಾರವು ಮನಸ್ಸು ಹಾಕಿಲ್ಲ.

ಹರಿದು ಹಂಚಿಹೋದ ಬ್ರಿಟಿಷ್ ಕರ್ನಾಟಕವನ್ನು ಕೂಡಿಸಿ ಇದಕ್ಕೆ ಪ್ರತ್ಯೇಕ ಪ್ರಾಂತವನ್ನು ಕೊಡಿರಿ ಎಂದು ಕನ್ನಡಿಗರೆಲ್ಲರೂ ಸರಕಾರವನ್ನು ಕೇಳಿಕೊಂಡಿರುತ್ತಾರೆ. ಮುಂಬಯಿ ಮನ್ಸಾಸು ಮತ್ತು ಕೊಡಗುಸ್ಥಾನಿಯ ವಿಧಾಯಕಸಭೆಗಳಲ್ಲಿ ಈ ಪ್ರಚಾರವಾಗಿ ತೀರ್ಮಾನಗಳು ಮಂಜೂರಾಗಿರುತ್ತವೆ. " ಕೌನ್ಸಿಲ್ ಆಫ್ ಸ್ಟೇಟ್ " ಸಭೆಯಲ್ಲಿಯೂ ವ || ರಾ|| ಡಾ. ಯು. ರಾವ ರಾಯರು ಈ ತೀರ್ಮಾನವನ್ನು ತಂದಿದ್ದರು. ಕರ್ನಾಟಕ ವಿಕೀಕರಣ ಸಭೆಯವರು ಈ ವಿಷಯವನ್ನು ೫ ೬ ವರ್ಷಗಳ ಬಾಯಾಯ್ತು ಮುಂಬೂರು ಮಾಡುತ್ತಾ ಸರಕಾರಕ್ಕೆ ಕಳಿಸುತ್ತಾ ಬಂದಿರುತ್ತಾರೆ. ಸರ್ವಪಕ್ಷೀಯ ಸಮಿತಿಯವರಿಂದ ಪ್ರಚಂಡಲ್ಪಟ್ಟ 'ನೆಹರು ವರದಿ' ಯಲ್ಲಿ ಬ್ರಿಟಿಷ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಾಗುವುದು ವಿಧಾಯಕವಾಗಿರುತ್ತದೆಂದು ತಿಳಿಸಿರುತ್ತಾರೆ. ಇದೆಲ್ಲಾ ಸರಕಾರದವರಿಗೆ ಗೊತ್ತಿದ್ದರೂ, ಮೊನ್ನೆ ರಾವು ಬಹದ್ದೂರ ಬಿ ಎಲ್. ಪಟೇಲರು ಬ್ರಿಟಿಷ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತದ ವಿಷಯವಾಗಿ ಸರಕಾರದವರು ಏನು ಮಾಡಿರುತ್ತೀರೆಂದು ಅಸೆಂಬ್ಲಿಯಲ್ಲಿ ಕೇಳಿದಾಗ್ಗೆ, ಬ್ರಿಟಿಷ ಕರ್ನಾಟಕ ಪ್ರಾಂತದ ವಿಷಯವಾಗಿ ಕನ್ನಡಿಗರ ಬೇಡಿಕೆಯಿಲ್ಲ ವೆಂತಲೂ, ಸರಕಾರವನ್ನು ಈ ವಿಷಯವಾಗಿ ಯಾರೂ ಕೇಳಿಕೊಂಡಿಲ್ಲವೆಂತಲೂ, ಈ ವಿಷಯದಲ್ಲಿ ಸರಕಾರದವರು ಏನುಮಾಡಲೂ ಇಚ್ಛಿಸಿರುವುದಿಲ್ಲವೆಂತಲೂ, ಸರಕಾರದವರಿಂದ ಪ್ರತ್ಯುತ್ತರ ಬಂದಿರುತ್ತದೆ. ಇದರಿಂದ ಕನ್ನಡಿಗರು ಈ ವಿಷಯವಾಗಿ ಈವರೆಗೂ ಮಾಡಿದ ಚಳವಳಿಯಲ್ಲವೂ ಹೊಳೆಯಲ್ಲಿ ಹುಣಿಸಿ ಹಣ್ಣನ್ನು ತೊಳೆದಂತಾಗಿರುತ್ತದೆ.

ಬ್ರಿಟಿಷ ಕರ್ನಾಟಕಕ್ಕೆ ಪ್ರತ್ಯೇಕಸ್ಥಾನವಾಗದೆ ಹೊತ್ತು ಕರ್ನಾಟಕಕ್ಕೆ ಏಳಿಗೆಯಿಲ್ಲವೆ.ಯಾವ ಕರ್ನಾಟಕವು ಒಂದಾನೊಂದು ಕಾಲದಲ್ಲಿ ದೆಹಲೀವರೆವಿಗೂ, ದಂಡಯಾತ್ರೆ ಮಾಡಿ ದೆಹಲೀ ಚಕ್ರವರ್ತಿಯಾದ ಹರ್ಷವರ್ಧನನ್ನು ಒಯಿಸಿ ವಿಜಯ ಮಾಲೆಯನ್ನು ಸಂಪಾದಿಸಿಕೊಂಡಿತ್ತೋ,ಯಾವ ಕರ್ನಾಟಕವು ಮೊನ್ನೆ ಮೊನ್ನೆ ಕೃಷ್ಣಾನದಿಯಿಂದ ಕನ್ಯಾಕುಮಾರಿ ವರೆವಿಗೂ, ಕರ್ನಾಟಕದ ಸ್ವಾಧೀನವನ್ನು ಮೆರೆಯಿಸಿತ್ತೋ ಅಂಥಾ ಕರ್ನಾಟಕವು ಈಗ ಹುಲ್ಲೆಯ ಪ್ರಾಂತ್ಯಗಳಲ್ಲಿ ನಾಯಿಯ ಬಾಲದೋ ಪಾದಿಯಲ್ಲಿರುತ್ತದೆ. ಹೀಗೆಯೇ ಬಿಟ್ಟರೆ ಯಾವಕಾಲದಲ್ಲಿ ಈ ಬಾಲವು ತುಂಡಿಸಲ್ಪಟ್ಟ ಕರ್ನಾಟಕವು ನಿರ್ನಾಮ ಮಾಗುತ್ತದೋ ತಿಳಿಯದು

ಕಾರಣ ಕನ್ನಡಿಗರೇ ! ನಿಮ್ಮೆಯಿಂದ ಏಕೀಕರ್ನಾಟಕವು ಯಾವ ಸ್ಥಿತಿಯಲ್ಲಿರುತ್ತದೆಂಬುದನ್ನು ಆಲೋಚಿಸಿರಿ.ಈಗ ನಡೆದಿರುವ ದುಂಡ.ಮೇಜಿನ ಪರಿಷತ್ತಿನಲ್ಲಿ ಸಿಂಧು ಮತ್ತು ಒರಿಸ್ಸಾದೇಶಯುವುಗಳ ವಿಷಯವಾಗಿ ಸ್ಪೃಶ್ಯರಿಗೂ ಒರಿಗಿ ಅವುಗಳ ಪ್ರತ್ಯೇಕ ಪ್ರಾಂತ್ಯಗಳ ರಚನೆಯ ವಿಷಯವಾಗಿ ಸಮಿತಿಗಳು ನಿರ್ಮಾಣಗಿರುತ್ತವೆಯೇ ಹೊರತು ಕರ್ನಾಟಕ ವಿಷಯವಾಗಿ ಯಾವ ಪ್ರಶ್ನೆಯೂ ಸಭೆಯ ಪರಿಷತ್ತಿನಲ್ಲಿ ಹೊರಟಿರುವುದಿಲ್ಲ. ಇನ್ನಾದರೂ, ಕನ್ನಡಿಗರು ಎಚ್ಚತ್ತು, ಈ ವಿಷಯವನ್ನು ಮನಸ್ಸಿಗೆ ತಂದ ತೊಂಡು ಕರ್ನಾಟಕಾಂಬೆಯ ಶ್ರೇಯೋಭಿವೃದ್ಧಿಗೆ ಪ್ರಯತ್ನಿಸುತ್ತೀರೆಂದು ನಂಬಿರುವೆನೆ,

ಮಹಾತ್ಮ ಗಾಂಧಿಯವರ ಪ್ರಯಾಣ

ಮಹಾತ್ಮರು ನವಂಬರ್ 27-ನೇ ತಾರೀಖು ಲಂಡನ್ ಪಟ್ಟಣವನ್ನು ಬಿಟ್ಟು, ಯೂರೋಪ್ ಖಂಡದ, ಫ್ರಾನ್ಸ್, ಬೆಲ್ಜಿಯಮ್, ಹಾಲೆಂಡ್, ಇಟಲಿ ಮುಂತಾದ ದೇಶಗಳನ್ನು ಸಂದರ್ಶಿಸಿ ಇಟಲದೇಶದ ಬಂದರಿನಿಂದ, ಡಿಸೆಂಬರ್ 27 ರ ಸುಮಾರಿಕ್ಕೆ ಹಿಂದೂಸ್ಥಾನಕ್ಕೆ ಬರುವರೆಂದು ಬೊಂಬಾಯಿ ಪತ್ರದಿಂದ ತಿಳಿದುಬರುತ್ತದೆ.

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೨೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟಿರಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦...೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಗಾಂಧಿಯರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7-30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು ಸುಮಾರು ೨೫ ಕೋಟಿಜನಗಳಿಗೆ ಚನ್ನಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದುದು ದೇಶಾಭಿಮಾನಿಗಳ ಅಗತ್ಯಕರ್ತವ್ಯ ವಾಗಿದೆ ಭಾರತಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯ ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲವೇಕ್ಷೆಯುಳ್ಳವರು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮ ಗಾಂಧಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ.		
,,	ಒಂದನೆಯ ಭಾಗ	೦—೧೨—೦
,,	ಎರಡನೆಯ ಭಾಗ	೦—೧೩—೦
,,	ಮೂರನೆಯ ಭಾಗ	೦—೯—೦
,,	ನಾಲ್ಕನೆಯ ಭಾಗ	೧—೮—೦
,,	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರು ಬರೆದ " ಅನಾಸಕ್ತಿ ಯೋಗ "		೦—೧೨—೦

(ಆತ್ಮ ಕಥೆಯ ಸದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ.)

ಮಹಾತ್ಮ ಗಾಂಧಿ "	ಚಿಕ್ಕ ಪುಸ್ತಕ	೦—೧—೦
ರಾಷ್ಟ್ರೀಯ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor		1—0—0
ಹಿಂದೀ ಬಾಲ ಬೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
,,	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೫—೦
ದೂಸರೀ		೦—೬—೦
ಮಲೇದಾರ ಕಹಾನಿಯೂ,		೦—೫—೦
ಅನುವಾದ ಮೂಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ.

ಕರ್ನಾಟಕ ಕೇಸರಿ ಕಾರ್ಯಾಲಯ. ಬಳ್ಳಾರಿ.

ಪ್ರೇಮ ಚಿಕಿತ್ಸಾಲಯ.

ಕಿಷ್ಣಮಾಚಾರ್ಲು ರೋಡು ಬಳ್ಳಾರಿ.

[ಸಬ್ ಏಜೆಂಟರು :—ಝಾಂಡ ಫಾರ್ಮ್ಯಕ್ಯೂಟಿಕಲ್ ವರ್ಕ್ಸ್ ಬೊಂಬಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನಮ್ಮಲ್ಲಿ ವಿದ್ಯುಚ್ಛಕ್ತಿ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

TO LET

FOR SALE

1 Boston hand Press :—

Prints 5" × 8" matter neatly, in good working order

Price moderate & reasonable.

2 New cyclostyle Machine:—

Used only Twice or thrice. Perfectly new

Price considerably cheap. Apply sharp:—

KARNATAKA KESARI. OFFICE

Bellary.

ಶ್ರೇಷ್ಠವಾದ ಮಿಷನ್ ದಾರದ ಪುಂಡೆಗಳು.



ಈ ದಾರದ ಪುಂಡೆಗಳು ಫಟ್ಟಿಯಾಗಿಯೂ, ನಯವಾಗಿಯೂ, ಇರುವುದರಿಂದ ಮಿಷನ್ನಿನಲ್ಲಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳಿ, ಕಪ್ಪು, ಕಾಕಿ, ಮತ್ತು ಇತರ ರಂಗುಗಳಲ್ಲಿ ಅನೇಕ ಸೈಜಿನ ದಾರದ ವ್ಯಾಳುಗಳು ಕಡಿಮೆ ಧಾರಣೆಗೆ ದೊರೆಯುತ್ತವೆ.

ದರ ಬರೆದು ತಿಳಿದುಕೊಳ್ಳಿರಿ

K. V. & Sons.
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್,
ತೇರು ಬೀದಿ ಬಳ್ಳಾರಿ.

THE GRADUATES' TRADING ASSOCIATION,

General merchants, Gramaphone Dealers & News Agents

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್, ಗ್ರಾಮಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜಂಟ್ಸ್,

ತೇರು ಬೀದಿ ಬಳ್ಳಾರಿ

ದಿ ಎಂಪೈರ್ ಆಫ್ ಇಂಡಿಯಾ. ಲೈಫ್ ಅಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಕಂಪನಿಯ ಮುಖ್ಯ ಲಕ್ಷಣಗಳು

೧. ಅತಿ ಕಡಿಮೆ ಬಡ್ಡಿಯಿಂದ ಸಮಯಕ್ಕೆ ಸರಿಯಾಗಿ ಸಾಲ ಕೊಡುವುದು.
೨. ಪೊಲಿಸಿದಾರರ ಹಣಕ್ಕೆ ಶುಂಬ ಭದ್ರತೆಯುಳ್ಳದ್ದು.
೩. ಕಂಪೆನಿಯ ಬಂದವಾಳವೆಲ್ಲ ಇಂಪೀರಿಯಲ್ ಟ್ರಸ್ಟ್ ಆಕ್ಟಿನಿಂದ ಮಂಜೂರಾದ ಸಂಸ್ಥೆಗಳಲ್ಲಿ ಹಾಕಿರುವುದು.
೪. ಪ್ರೀಮಿಯಮಿನ ದರವು ಬೇರೆ ಕಂಪೆನಿಗಳ ದರಕ್ಕಿಂತ ಕಡಿಮೆ.
೫. ಪೊಲಿಸಿಗಳಲ್ಲಿ ತೊಡಕಾದ ಶರತ್ತುಗಳಿಲ್ಲದೂ ಇಲ್ಲವೆ ಸರಳವಾಗಿರುವುದು
೬. ಸರ್ವಿಸ್ ಪೊಲಿಸಿಗಳನ್ನು ಹೆಚ್ಚು ಕರ್ಚು ಇಲ್ಲದೆ ಊರ್ಜಿತಕ್ಕೆ ತರಬಹುದು.
೭. ಕಂಪೆನಿಯ ಲಾಭದಲ್ಲಿ ಸೇಕಡಾ ೯೦ನ್ನು ಪೊಲಿಸಿದಾರರೊಳಗೆ ಹಂಚಲಿಕ್ಕಿರುವುದು.
೮. ಪೊಲಿಸಿಯು ಬೇಡದೆಂತ ಕಂಡು ಬಂದಾಗ ಕಂಪೆನಿಯಿಂದ ತೆಗೆದೊಯ್ದಾಗಿನ ಪ್ರತಿಫಲವು ಬಹಳ ಉದಾರತರವಾಗಿರುವುದು.
೯. ಪೊಲಿಸಿಯ ಪ್ರತಿಫಲವನ್ನು ಪಡೆಯುವ ಸಂದರ್ಭ ಬಂದಾಗ ಅಭ್ಯಂತರವಿಲ್ಲದೆ ಕೂಡಲೆ ಹಣವು ಸಿಕ್ಕುವುದು.

ಏಜಂಟ್:— **ಎಂ. ವೆಂಕೋಬರಾವ್, ಬಿ. ಎ.**
ಸತ್ಯನಾರಾಯಣ ಪೇಟೆ
ಬಳ್ಳಾರಿ.

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE,
& Commercial Agency.
Bangalore Road, Bellary.

Agents & dealers in:-
Wood-stock, Corona and other typewriters of all makes. Best Ribbons carbons, and Swadeshi fountain pens etc.

HOW TO LEARN TOJCH TYPE-WRITING IN 20 days short hand a speciility.

(Seperate accommodation for lady students)

Job works & repairs undertaken on moderate charges

ಅರ್ಜಿಗಳನ್ನು ಕಳಿಸಿ ದರವನ್ನು ಕೇಳಿ ಪಡೆದಲ್ಲಿ ಕೈಪು ಮಾಡಲಾಗುತ್ತೆ.

Prospectus sent free on application.

ARYA VAIDYALAYA BELLARY

Pandit C.S. Shastry's
Patent Medicines

MONEY RETURNED IF NOT CURED

1 FEVER KILLER.

Any fever completly cured in 4 days — 8 oz Bottle Rs 2—0—0

2 NAVAJEEVAN PAK.

King of Tonic foods (sweet) — 1 lb Rs 1—8—0

3 PRAMEHA BHANJINI

Gonorhoea of two years duration cured in 12 days — Rs 6—0—0

ಅರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್. ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. — ಗ್ಯಾರಂಟಿಯಿದ್ದರೆ ಹಣ ಹಿಂತಿರುಗಿಸಲಾಗುವುದು

" ಜ್ವರ ಸಂಹಾರಿ. "

ಸಾಮಾನ್ಯ ಎಲ್ಲಾ ಜ್ವರಗಳು ಸಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ. 2—0—0

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ ರೂ. 1—8—0

ಪ್ರಮೇಹ ಭಂಜಿನಿ

ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ. — ರೂ 6—0—0

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಗತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯದಾದರೂ ಕಷ್ಟಸಾಧ್ಯವಾಗಿದ್ದವುದರೂ ಶೀಘ್ರ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ಪಾಸಿಮಾಡಲ್ಪಡುತ್ತವೆ. ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO
AT SRI VIDYARANYA PRESS. BELLARY.

ಕರ್ನಾಟಕ ಕೇಸರಿ

ಮಾತೃಭೂಮಿ ಕೃಷ್ಣಾತ್ಪರೋ ! ಕುಪ್ಪಕ್ಷಸ್ಸಂಗ ವರ್ಜಿತಃ ॥
ಇಷ್ಟೈರಸ್ಸರ್ವ ಭೂತೇಷು ! ಯಸ್ಯ ನಾಮಾಪಿ ಪಾಂಡವ ॥ ಗೀತಾ. ಅ. ೧೧ ಶ್ಲೋ -೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

ವಾರ್ಷಿಕ ಚಂದಾ		ಸಂಪಾದಕ	ಅರು ತಿಂಗಳಿಚಂದಾ.
ಸ್ಥಳದವರಿಗೆ	... ೨—೮—೦	ಟೀಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.	ಸ್ಥಳದವರಿಗೆ ... ೧—೪—೦
ಪರಸ್ಥಳದವರಿಗೆ	... ೩—೦—೦	(ಒಂದು ಪ್ರತಿಗೆ ೦—೦—೨)	ಪರಸ್ಥಳದವರಿಗೆ ... ೧—೧೨—೦

ವರ್ಷ ೧ ಬಳ್ಳಾರಿ ನಗರ—ನವಂಬರ್ ೧೬ ನೇ ಸೋಮವಾರ ೧೯೩೧ ಸಂಚಿಕೆ ೫

ಸರ್ವವ್ಯಾಪಿಯಾದ ಸತ್ಯವನ್ನು ನೋಡಬೇಕೆಂದಿರುವ ಮನುಷ್ಯನು ಸೃಷ್ಟಿಯಲ್ಲಿರುವ ತೀರ ಕನಿಷ್ಟ ಜೀವಿಗಳನ್ನೂ ಸಹ, ತನಗೆ ಸಮಾನವಾಗಿ ಪ್ರೇಮಿಸಬೇಕು.

ಈ ಸ್ಥಿತಿಯನ್ನು ಹೊಂದಲಪೇಕ್ಷಿಸುವ ಪ್ರತಿವ್ಯಕ್ತಿಯೂ ಪ್ರಪಂಚದ ಪ್ರತಿ ವ್ಯವಹಾರದಲ್ಲಿಯೂ ಭಾಗ ತೆಗೆದುಕೊಳ್ಳಬೇಕು, ಆದುದರಿಂದಲೇ, ಸತ್ಯ, ಪ್ರೇಮ, ಎಂಬೀ ಗುಣಗಳು ನನ್ನನ್ನು ರಾಜಕೀಯ ರಂಗಕ್ಕೆಳೆದವು. ಮತಧರ್ಮಕ್ಕೂ ರಾಜ್ಯಾಂಗ ತತ್ವಕ್ಕೂ, ಯಾವಸಂಬಂಧವೂ ಇಲ್ಲ ವೆಂದು ಹೇಳುವವರಿಗೆ, ನಿಜವಾದ ಮತಾಂತರ ಜ್ಞಾನವಿಲ್ಲೆಂದು, ನಿಸ್ಸಂಶಯವಾಗಿ, ನಮ್ರಭಾವದಿಂದ ಹೇಳಬಲ್ಲೆನು.

ಮಹಾತ್ಮ ಗಾಂಧಿ

ಕಾಂಗ್ರೆಸ ಸೇವಕರು ಯಾರು ಆಗ ಬಹುದು?

ರಾಷ್ಟ್ರೀಯ ಮಹಾಸಭೆಯ ಕಾರ್ಯವನ್ನು ಇನ್ನು ಮುಂದೆ ಹಿಂ ಸೇ. ದಲಿದ ಮಾತ್ರತಾ ಪತ್ರಗಳನ್ನು ಪಡೆದ ಸ್ವಯಂಸೇವಕರಿಂದ ಲೇ ಮಾಡಿಸಬೇಕೆಂದೂ ಉಳಿದವರಿಂದ ಮಾಡಿಸಕೂಡದೆಂದೂ ಕಾಂಗ್ರೆಸ ವರ್ಕಿಂಗ ಕಮಿಟಿಯು ನಿರ್ಬಂಧಿಸಿರುವದು. ಅಲ್ಲದೆ ಸೈನಿಕರು ಶಿಬಿರಗಳಲ್ಲೇ ಶಿಕ್ಷಣಪಡೆಯಬೇಕೆಂದೇ ನಿರ್ಧರಿಸಿರುವರು ಅದರಿ ಶಿಕ್ಷಣಪಡೆಯಲು ಅನುಕೂಲತೆಯಿಲ್ಲದ, ಕಾಂಗ್ರೆಸ್ ಕಾರ್ಯಮಾಡಲು ಕುತೂಹಲವುಳ್ಳ, ವಿಶಿಷ್ಟ ಪ್ರಸಂಗದಲ್ಲಿ ನಿಷ್ಠುರೀತಿಯಿಂದ ಕಾರ್ಯ ಮಾಡಲು ಬಯಸುವ, ಜನರಿಗೆ ಮೊಣಿ ಗಾರರ ಕೈಕಳಗೆ ಕಾರ್ಯಮಾಡಲು ಸೇವಕರೆಂಬ ಭಾಗವನ್ನು ಮಾಡಿ ಅನುವು ಮಾಡಿಕೊಟ್ಟಿರುವರು.

ಆದರೆ ಸೇವಕನು ಕೆಳಗಿನ ನಿಯಮಗಳನ್ನು ಪಾಲಿಸಬೇಕಾಗುವುದು:—

೧ ಸೈನಿಕನ ಪ್ರತಿಜ್ಞಾ ಪತ್ರಿಕೆಯನ್ನೊಪ್ಪಿ ಅಂಕಿತವನ್ನು ಮಾಡುವುದು

೨ ವಯಸ್ಸು ೧೮ ಕ್ಕೆ ವಿರಕ್ತಿಯೂ ೪೮ ಕ್ಕೆ ಮಿಕ್ಕದೆಯೂ ಇರಬೇಕು

೩ ಮುನ್ನ ಖಾದಿಯನ್ನೇ ಧರಿಸಬೇಕು

೪ ಮಾಸಿಕ ಧ್ವಜವಂದನೆಗೆ ತಪ್ಪದೆ ಬರಬೇಕು

೫. ಸ್ಥಾನಿಕ ಕಾಂಗ್ರೆಸ ಕಮಿಟಿಗಳ ಆಜ್ಞೆಯ ಪ್ರಕಾರ ಕಾಂಗ್ರೆಸ ಕಾರ್ಯ ಕ್ರಮವನ್ನು ನಡೆಯಿಸಬೇಕು,

೬. ತಾನುಮಾಡಿದ ಕಾರ್ಯದ ವರದಿಯನ್ನು ಮೇಲಧಿಕಾರಿಗಳಿಗೆ ಒಪ್ಪಿಸಬೇಕು.

೭. ಸೈನಿಕನ ಶಾರೀರಿಕ ಯೋಗ್ಯತೆಯೇ ಸೇವ ಕನದೂ ಇರಬೇಕು. ಒಂದುವೇಳೆ ಇರದಿದ್ದರೂ ಕಾರ್ಯಮಾಡುವನ್ನಾದರೂ ದೃಢ ಕಾಯನಾಗಿರಬೇಕು.

೮ ದಿನಾಲು ಯಾವದಾದರೊಂದು ವ್ಯಾಯಾಮ ತೆಗೆದುಕೊಳ್ಳುತ್ತಿರಬೇಕು.

೯ ಕೊಡ ವ ಶಿಕ್ಷಣ ಪಡೆಯ ಬೇಕು

೧೦. ಮೇಲಧಿಕಾರಿಗಳ ಅಪ್ಪಣೆಯನ್ನು ಪಾಲಿಸಬೇಕು.

ಶೈಕ್ಷಿಕ ಶಿಕ್ಷಣ ಪಡೆಯಲು ಆತ್ರವಪಡಿಸಿದ್ದವರೆಲ್ಲರೂ ಸೇವಕ ರಾಗಬೇಕೆಂದು ಬಿನ್ನಹವಿದೆ.

ವಿಶೇಷ ಸೂಚನೆ—ಸೈನಿಕ ಶಿಕ್ಷಣದ ನಿಯಮಾವಲಿಯು ಪ್ರಸಿದ್ಧವಾಗಿದೆ ಬೇಕಾದವರು ೧ ಅಣಿ ತಿಕೆಟು ಕಳುಹಿ ಪಡೆಯಬೇಕು.

[**ರಂಗನಾಥ ದಿವಾಕರ,** ಕರ್ನಾಟಕ ಸೇವಾದಳ ಧಾರವಾಡ]

ಬಿಸ್ಮಿಲ್ಲಾ

ರಕ್ತಶುದ್ಧಿ ಸುತ್ತು ಧಾತುವೃದ್ಧಿ ಕಾರಕ.

ವನಸ್ಪತಿ ಯುಕ್ತ

ನರ್ವ್ಹಸ್ಟ್ರೆಂಥಿಂಗ್ ಪಿಲ್ಸ

ಅರ್ಥಾತ

ಬಲವಂತ ಗುಟಿಕಾ.

ಈ ಗುಳಿಗೆಗಳಿಂದ ರಕ್ತ ಶುದ್ಧಿ, ಧಾತು ಪುಷ್ಟಿಯಾಗುವದು, ಕಾಮೋತ್ತೇಜಕವಾಗಿ ನಪುಂಸಕತ್ವವು ನಾಶವಾಗುವದಲ್ಲದೆ ಬಿಟೇ ತತಿಸುವದನ್ನು ಅನುಭವಿಸಲಿಕ್ಕೆ ಬರುತ್ತದೆ ಹಾಗೂ ಉಷ್ಣದ ರೋಗಗಳಿಲ್ಲ ಗುಣವಾಗುತ್ತವೆ. ಮತ್ತು ಅನ್ನಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ ಕೋಷ್ಠ ಸಾಫ ಆಗುವದು ಇದು ಅಲ್ಲದೆ ವಾತ, ಪಿತ್ತ, ಕಫ, ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆದೂ ಹೋಗುವವು ಪೂರ್ಣ ಗುಣಕ್ಕೆ ೩ ಡಬ್ಬಿ ತಕೊಳ್ಳಿರಿ. ಒಂದು ಡಬ್ಬಿ ಕಿಮ್ಮತ್ತು ೧೦ ಆಣಿ ೩ ಡಬ್ಬಿ ಕಿಮ್ಮತ್ತು ೧—೧೫—೦ ಒಂದುಡಜನು ಕಿಮ್ಮತ್ತು ೬ ರೂ. ಇದಲ್ಲದೆ ಒಂದು ಡಬ್ಬಿ ಕಮೀಶನ ಸಿಗುವದು ಟಪಾಲ ಪ್ಯಾಕಿಂಗ ಖರ್ಚು ಬೇರೆ ಬೀಳುವದು. ಏಜಂಟರ ನಿಯಮ ತಿಳಿಸಿಕೊಳ್ಳಿರಿ ಬಾಕಿ ರೋಗದ ಬಗ್ಗೆ ವಿಶೇಷ ಖುಲಾಸ ಡಬ್ಬಿ ಸಂಗಡ ಇದ ಅನುಪಾನ ಪತ್ರದಲ್ಲಿ ಇರುತ್ತದೆ. ಅರಕ್ತತೆ ಮತ್ತು ಉಷ್ಣತೆಯ ರೋಗದ ಮೇಲೆ ಸ್ತ್ರೀಯರಿಗೆ ಮತ್ತು ಹುಡುಗರಿಗೆ ಸಹ ಈ ಗುಳಿಗೆಗಳ ಬಹಳ ಉಪಯೋಗ ವಿರುತ್ತವೆ.

ಎಸ್. ಬಿ. ಕದಮ್ ಮತ್ತು ಸನ್,

ಮು, ಪೋಸ್ಟ—ನಿಪ್ಪಾಣಿ [ಜಿ. ಬೆಳಗಾಂವ.]

ಸೋಲ ಏಜಂಟ - ಶ್ರೀ ಹನುಮಾನ ಏಜನ್ಸಿ ಪಂಬಯ ಸರೇಳ.

TO LET

ಕೈ ಸೂಲ ಕೈ ಮಗ್ಗದಲ್ಲಿತಯಾರಾದ

ಶುದ್ಧ ಖಾದಿ **ಅಗ್ಗ ಖಾದಿ**

(ಖಾದಿಯೇ ಸುಖಜೀವನಕ್ಕೆ ಸಮೀಜದದಾರಿ)

ಅನ್ನಸಿಲ್ಲದೆ ಕೊರಗುತ್ತಿರುವ ಕಡುಬಡವರಿಗೆ ನೀವು ಪಪ್ಪತ್ತು ಊಟವನ್ನು ಕೊಟ್ಟು ಪುಣ್ಯ ಕಟ್ಟಿಕೊಳ್ಳ ಬೇಕೆಂದು ಅಪೇಕ್ಷಿಸುವುದಾದರೆ ಶುದ್ಧ ಖಾದಿಯನ್ನೇ ಧರಿಸಿರಿ ! ಮಹಾತ್ಮ ಗಾಂಧಿ, ಒಪಾಹರಲಾಲ ನೆಹರು ಪಗೈರೆ ದೊಡ್ಡ ದೊಡ್ಡ ಮುಖಂಡರ ಚಿತ್ರಗಳನ್ನು ಮಿಲ್ಲಿ ಬಟ್ಟೆಗಳ ಮೇಲೆ ಹಾಕಿ ಮೋಸ ಮಾಡುತ್ತಿರುವರು ಅಲ್ಲದೆ ಮಿಲ್ಲಿನ ಒರಟು ಬಟ್ಟೆಗಳನ್ನು ಖಾದಿಯೆಂತ ಮಾರುತ್ತಾರೆ. ನೀವು ಮೋಸ ಹೋಗ ಬೇಡಿರಿ. ನಮ್ಮಲ್ಲಿ ಒಂದು ಸಲ ಬಂದುನೋಡಿ ತೆಗೆದು ಕೊಳ್ಳಿರಿ

ಖಾದಿ ಕೋ ಅಪರೇಟಿವ್ ಸೊಸೈಟಿ.

ಬ್ರಾಹ್ಮಣರ ಬೀದಿ

ಬಳ್ಳಾರಿ

ಸಂಪಾದಕೀಯ ವಿಚಾರಗಳು.

ತುಮಕೂರಿನಲ್ಲಿ ಅಧಿಕಾರಿಗಳ ವರ್ತನೆ.

ಅತ್ರಿತ ಸಂಸ್ಥಾನಗಳ ಅಳ್ವಿಕೆಯ ವಿಷಯದಲ್ಲಿ ಟೀಕೆ, ಟಿಪ್ಪಣಿಗಳನ್ನು ಬರೆಯುವುದುಸೂಕ್ಷ್ಮವಾಗಿದ್ದರೂ, ಕರ್ನಾಟಕ ಪ್ರಾಂತಕ್ಕೆ ಹೃದಯವಂತಿರುವ ಮೈಸೂರು ರಾಜ್ಯದ ಕೆಲ ಪ್ರಜೆಗಳು ದುಃಖಕ್ಕೂ ಕಳವಳಕ್ಕೂ ಆಕರವಾಗಿದ್ದುದನ್ನು ನೋಡಿ, ಯಾವ ಕರ್ನಾಟಕಸ್ಥನಿಗೇ ಆಗಲೀ ವಿಷಾದವಾಗದಿರದು ಮೈಸೂರಿನಲ್ಲಿ ಕೆಲ ಅಧಿಕಾರಿಗಳು, ಬ್ರಿಟಿಶ ಇಂಡಿಯಾದಲ್ಲಿ ಹೋದ ವರ್ಷ ನಡೆದ ಭೀಷಣ ಪಾಶವಿಕ ಕೃತ್ಯಗಳನ್ನು ಅವಲಂಭಿಸುವಂತೆ ಕಾಣುತ್ತದೆ ಇದು ಕರ್ನಾಟಕ ರಾಜ್ಯವಾದ ಮೈಸೂರಿಗೆ ಭೂಷಣವಲ್ಲ.

ತುಮಕೂರು ಪಟ್ಟಣದಲ್ಲಿ, ಮಧ್ಯಪಾನ ನಿರೋಧ ಚಳವಳಿಯನ್ನು ಉತ್ಸಾಹದಿಂದ ಸಾಗಿಸುತ್ತಲಿದ್ದ ಹುಡುಗರನ್ನು (ಚಿಕ್ಕವರೂ ಸಹ) ಸೆರೆ ಹಿಡಿದು, ಪ್ರಜೆಗಳನ್ನೂ, ದೇವಾಲಯದಲ್ಲಿ ಪೂಜೆಗೋಸ್ಕರ ನೆರೆದ ಮಹಿಳೆಯರನ್ನೂ, ದೊಣ್ಣೆಗಳಿಂದ ಹೊಡೆದವೆಂಬ ವರ್ತಮಾನವು, ದೇಹದ ಮೃದುಭಾಗವನ್ನು ಕತ್ತಿಯಿಂದ ಇರಿಯುವಂತಿದೆ ಪ್ರಜಾ ಭಾವನೆಗಳನ್ನೂ, ನೀತಿಯ ತತ್ವಗಳನ್ನೂ ಲೆಕ್ಕಿಸದ ಈ ಲಾಠೀ ಯೋಧರಿಗೆ ಪರುತತ್ವವು ಎಲ್ಲಿಯವರೆಗೆ ಒಲಿದಿರುವುದು, ಇದರಿಂದ ವ್ಯಕ್ತವಾಗುವುದು ಹೋದ ವರ್ಷ, ಈ ತತ್ವಕ್ಕೆ ಒಯಿನಿಲ್ಲದೆ, ಕೊನೆಗೆ ರಾಜಿಯಾಗುವಸಂಭವಒದಗಿದ್ದುದನ್ನು ಮೈಸೂರಿನ ಉದ್ಯೋಗಸ್ಥರು ಮರೆತಿರಲಿಕ್ಕಿಲ್ಲ ಪ್ರಜಾ ಪ್ರತಿನಿಧಿ ಸಭೆಯಲ್ಲಿ, ಶಾಂತಿಯುಕ್ತ ಬಹಿಷ್ಕಾರಕ್ಕೆ ಸರಕಾರದವರ ಅಡ್ಡಿ ಇಲ್ಲನೆಂದು ಹೇಳಿದ್ದಾರೆ ಮೈಸೂರು ಪ್ರಭುತ್ವದವರು ಈ ರೀತಿ ಒಂದುಕಡೆ ವಾಗ್ದಾನ ಮಾಡಿ, ಮತ್ತೊಂದು ಕಡೆಯಲ್ಲಿ ಪೋಲೀಸ ಅಧಿಕಾರಿಗಳು ಧೂರ್ತ ವರ್ತನೆಗಳನ್ನವಲಂಬಿಸಲು ಅಜ್ಞೆ ಕೊಟ್ಟಿಲ್ಲನೆಂತಲೇ ನಮ್ಮ ನಂಬಿಕೆ ಇದೆ

ಮದ್ಯಪಾನ ನಿರೋಧ ಚಳವಳಿಯಿಂದ ಹಿಡುವಳಿದಾರರಿಗೆ ನಷ್ಟವಾಗುವುದು ಸಹಜವಾಗಿದೆ, ಆದರೆ ಇದು ಲೆಕ್ಕವಿಲ್ಲದನ್ನು ಕುಟುಂಬಗಳನ್ನೂ ಬಡ ಪ್ರಜೆಗಳನ್ನೂ, ಸನ್ಮಾರ್ಗಕ್ಕೆ ತರುವ ಸಮಾಜ ಸುಧಾರಣಾ ಕಾರ್ಯವೆಂಬುದನ್ನು,ದೇಶದ ಸಂಪದಭಿವೃದ್ಧಿಯ ದೃಷ್ಟಿಯಿಂದ' ಅಧಿಕಾರಿಗಳು ಮರೆಯಬಾರದು ಈ ವಿಷಯವು ಭಾವೀ ಸ್ವರಾಜ್ಯ ಸಂಘಟನೆಯಲ್ಲಿ ಅತ್ಯಂತ ಪ್ರಾಮುಖ್ಯ ವಿಷಯವಾಗಿದೆ ಈ ಎಲ್ಲಾ ವಿಷಯಗಳನ್ನೂ ನಿಷ್ಕರ್ಷಿಸಿ, ಸ್ವರಾಜ್ಯ ಸಂಘಟನೆಯ ಉದ್ದೇಶ್ಯವನ್ನು ಪೂರ್ಣಮಾಡಲು, ನೇಟೆವ್ ಸಂಸ್ಥಾನಗಳ ಪರವಾಗಿ ಮೈಸೂರು ದಿವಾನರಾದ ಸರ್. ವಿ. ಪ್ರಭಾ ಸಾಹೇಬರೂ ಕೂಡಾ ಒಬ್ಬರಾಗಿರುವರು ಆಶ್ರಿತ ಸಂಸ್ಥಾನಗಳ ಪ್ರಜೆಗಳನ್ನೂ ಬ್ರಿಟಿಶ್ ಇಂಡಿಯಾಪ್ರಜೆಗಳನ್ನೂ ಮುಂದಿನ ಸರ್ಕಾರದಲ್ಲಿ ಸಮಾನವಾಗಿ ಕಾಣುವ ವಿಧಾಟನ ಒವಾಬ್ದಾರಿಯು, ಆಶ್ರಿತ ಸಂಸ್ಥಾನಗಳ ಪರವಾಗಿ ಮುಂದು ಮೇಜಿಗೆ ಹೋದ, ಪ್ರತಿನಿಧಿಗಳಿಲ್ಲರನ್ನೂ ಅವಲಂಭಿಸಿದೆ

ಮೈಸೂರಿನ ಮೇಲಧಿಕಾರಿಗಳು, ತುಮಕೂರಿನ ವಿಷಯಗಳನ್ನು ಕೂಲಂಕಷವಾಗಿ ವಿಮರ್ಶಿಸಿ,ಅತ್ಯಾಚಾರಗಳು ನಿಲವೆಂದು ಹೊರಟಾಗ ಅಧಿಕಾರಿಗಳ ವರ್ತನೆಗಳನ್ನು ಖಂಡಿಸಿ, ಈ ವಿಷಾಧ ಪರಿಸ್ಥಿತಿಯನ್ನುಂಟು ಮಾಡಿದ ಪೋಲೀಸಂನ್ನೆಚ್ಚರಿಸಿ, ತಮ್ಮ ಕರ್ತವ್ಯವನ್ನು ನೆರವೇರಿಸಬೇಕೆಂದು ನಂಬಲಾಗಿದೆ.

ಬಳ್ಳಾರಿಯಲ್ಲಿ ಆರೋಗ್ಯ ಮತ್ತು ಮಕ್ಕಳ ವಾರ.

ಪೌರ ಸಭೆಯ ಆರೋಗ್ಯಾಧಿಕಾರಿಗಳು, ಸರ್ಕಾರದವರ ದ್ರವ್ಯ, ಒನಸಹಾಯಗಳಿಂದ ಏರ್ಪಡಿಸಿದ ಪ್ರದರ್ಶನಗಳು ಒಂದು ವಾರದ ವರೆಗೂ ವಿಜೃಂಭಣೆಯಿಂದ ನಡೆದವು 12—11—31ನೇ ದಿವಸ ಸಾಯಂಕಾಲ ಕೊನೆಗಂಡವು ಪಟ್ಟಣಕ್ಕೆಲ್ಲಾ ನೀರೊದಗಿಸುವ 'ಜಲ ಶೇಖರಾಲಯ' ದ ಉದ್ಯಾನವನದಲ್ಲಿ ಶೃಂಗಾರಗಳೆಲ್ಲಾ ಆಗಿ, ಪ್ರಾಕೃತಿಕ ಸೌಂದರ್ಯದ ಜೊತೆಗೆ, ಪ್ರದರ್ಶನ ಮಂಟಪವು ನಾಗರೀಕರ ಕಣ್ಣನಗಳನ್ನಾಕರ್ಷಿಸುತ್ತಿದ್ದಿತು ಆಸ್ಥಳವು ನಿತ್ಯವಿಹಾರ ಯೋಗ್ಯವಾದುದರಿಂದ ಗಂಡಸರೂ ಹೆಂಗಸರೂ, ಮಕ್ಕಳೂ ಲೆಕ್ಕವಿಲ್ಲದಷ್ಟು ನೆರೆಯುತ್ತಿದ್ದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಮಲೇರಿಯ, ಕಾಲರಾ, ಪ್ಲೇಗು,ಮುಂತಾದರೋಗಕಾರಣಗಳನ್ನು ವಿವಿಧವಾಗಿ ವರ್ಣಿಸಲ್ಪಟ್ಟು, ದೊಡ್ಡ ದೊಡ್ಡ ಚಿತ್ರ ಪಟಗಳು ಅಲಂಕರಿಸಲ್ಪಟ್ಟು ಶಾಲೆಗಳಲ್ಲಿ ತೂಗಹಾಕಲ್ಪಟ್ಟಿದ್ದವು ಪ್ರಜಾವರ್ಗದಲ್ಲಿ ಹಬ್ಬಿರುವ ಅನೇಕ ತರಹದ ರೋಗೋತ್ಪತ್ತಿಯ ಕಾರಣಗಳು, ನಿವಾರಣೋಪಾಯಗಳು, ರೋಗೋತ್ಪತ್ತಿಯಾಗುವ ಮುಂಚೆ ಎಚ್ಚರದಿಂದಿರಲಿಕ್ಕೆ ಸೂಕ್ತ ಉಪಾಯಗಳು, ವೇಳಾಗಿ ಶಿಶುಪೋಷಣೆಯ ವಿಷಯಗಳನ್ನೆಲ್ಲಾ ಜನತೆಯಲ್ಲಿ ಪ್ರಚಾರ ಮಾಡುವುದೇ ಈ ಪ್ರದರ್ಶನಗಳ ಮುಖ್ಯ ಉದ್ದೇಶವಾಗಿದೆ ಈ ಉದ್ದೇಶದ ದೃಷ್ಟಿಯಿಂದ ಪ್ರದರ್ಶನಗಳು ಅವಶ್ಯಕವೆನಿಸುತ್ತವೆ

ಈ ವರ್ಷ ಅಗಸ್ಟು ತಿಂಗಳು ಸಮಾರಕ್ಕೆ ತಿನ್ನವೆಲ್ಲಿ ನಗರದ ಇದೇ ಪ್ರದರ್ಶನದ ಪ್ರಾರಂಭದಲ್ಲಿ ಸಭೆಯ ಅಧ್ಯಕ್ಷರಾದ ಡಬ್ಲ್ಯೂ. ಬ. ನ್ಯಾಶಾಮು. ಬೆಲ್ಲಾ ಒಡ್ಡಿಗಳವರು. ಇಂಥಾ ಪ್ರದರ್ಶನಗಳಲ್ಲಿ ತಮಗೆ ನಂಬಿಕೆ ಇಲ್ಲವೆಂತಲೂ, ಸಾರ್ವಜನಿಕ ಆರೋಗ್ಯ ಮತ್ತು ಪಟ್ಟಣದ ಪರಿಶುಭ್ರತೆಯನ್ನು ನೋಡಿದರೆ ಇಂಥಾ ಪ್ರದರ್ಶನಗಳು ನಿರರ್ಥಕವೆಂತಲೂ ಸೂಚಿಸಿದರು ನಾವು ಈ ಕಥನವನ್ನು ಬಹು ಮಟ್ಟಿಗೆ ಸಮರ್ಥಿಸಬೇಕಾಗುತ್ತದೆ ಏತಕ್ಕೆಂದರೆ ಈ ಊರ ಸ್ಥಿತಿಯೂ ಹಾಗೆಯೇ ಇದೆ ನೀರು ಹೊರಬೀಳಲಿಕ್ಕೆ ಸರಿಯಾದ ಮಾರ್ಗಗಳಲ್ಲಿ ರಸ್ತೆಗಳು ಕೆಟ್ಟುಹೋಗಿವೆ. ಆರೋಗ್ಯ ಸೂತ್ರಗಳನುಸರಿಸಿ ತಕ್ಕ ವಿಧಾಟುಗಳಿಲ್ಲ. ಅಸ್ಪೃಶ್ಯರ ಕೇರಿಗಳನ್ನೂ, ಮತ್ತಿತರ ಭಾಗಗಳನ್ನೂ ಸಂದರ್ಶಿಸಿದರೆ ಯಾವ ಮನುಷ್ಯನಿಗಾಗಲೀ ದುಃಖವಾಗದಿರದು ಈ ವಿಷಯಗಳೆಲ್ಲಾ ಪುರ ಸಭೆಯವರು ಗಮನವನ್ನು ಕೊಡುವರೆಂದು ನಾವು ನಂಬಿರುತ್ತೇವೆ

ಹೊಸ ಬೌದ್ಧ ವಿಹಾರ.

ಈ ತಿಂಗಳ 11 ನೇ ತಾರೀಖಿನಲ್ಲಿ ಕಾಶಿ ಪಟ್ಟಣಕ್ಕೆ ಸಮೀಪದ ಸಾರಾನಾಥ್ ಎಂಬ ಸ್ಥಳದಲ್ಲಿಒಂದು ನೂತನ ಬೌದ್ಧ ವಿಹಾರವುಸ್ಥಾಪಿತವಾಯಿತ. ಬೌದ್ಧ ಮತಾವಲಂಬಿಗಳಾದವರನೇಕರು ಲಂಕಾ, ಸಯಾಂ, ಚೀನಾ, ಜಪಾನ್, ಬರ್ಮಾ, ಕಾಂಬೋಡಿಯಾ ಮತ್ತು ಸಿಂಹಳ ದೇಶದನೇಕ ಭಾಗಗಳಿಂದ ನೆರೆದಿದ್ದರು

ಎರಡು ಸಾವಿರ ವರ್ಷಗಳ ಕೆಳಗೆ ಮಹಾತ್ಮಗೌತಮ ಬುದ್ಧನು ಮಾನವ ಸಮಾಜದ ಕಲ್ಯಾಣಕ್ಕಾಗಿ ವೈಭವ ಶಾಲಿಯಾದ ರಾಜ್ಯವನ್ನೂ ಸ್ವರ್ಗದೋಪಾದಿಯಲ್ಲಿದ್ದ ಕುಟುಂಬವನ್ನೂ ತ್ಯಜಿಸಿ, ಬೋಧಿ ಸತ್ವದ ಸ್ಥಿತಿಯನ್ನು ಕೊಂಡು, ನಿರ್ಪ್ರಪ್ಂಚದ ಒಂಟಿಯನ್ನು ಸ್ಥಾಪಿಸಿದನು ಅಮಹಾಮಹಿಮನ ಪ್ರಥಮ ಸಂದೇಶವು ಸಾರಾನಾಥದಲ್ಲಾಗಿತ್ತು. ಅಲ್ಲಿಯೆ, ಆತನ ಪ್ರಮುಖ ಶಿಷ್ಯವರ್ಗವು ಏರ್ಪಾಡಾಯಿತು ಆದುದರಿಂದ, ಆಪವಿತ್ರಸ್ಥಳವು ಬೌದ್ಧಮತಸ್ಥರಿಗೇ ಅಲ್ಲದೆ, ಇತರೇ ಹಿಂದೀಯರಿಗೇ ಪವಿತ್ರಕ್ಷೇತ್ರವಾಗಿದೆ ಅನೇಕ ಕಾಲದಿಂದ, ನಿರ್ಲಕ್ಷವಾಗಿದ್ದ ಆಪವಿತ್ರ ಸ್ಥಳವು ಪುನಃ ಜೀರ್ಣೋದ್ಧಾರವಾಯಿತು ನವಚೈತನ್ಯವು ಉದ್ಭವಿಸಿತು. ಮಹಾಬೋಧಿ ಸಮಿತಿಯವರ, ಒಂದು ಸರ್ವಕಾಲಾ ಶಾಲೆಯನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿರುವರು ಇದು ಬಹಳ ಸ್ತುತ್ಯವಾದ ಕೆಲಸವಾಗಿದೆ ಪ್ರಾರಂಭೋತ್ಸವದಲ್ಲಿ ಹಿಂದೂ ಮಹಾ ಸಭೆಯ ಪ್ರತಿನಿಧಿಗಳಾದ ಶ್ರೀ ರಮಾನಂದ ಛಾಟರ್ಜಿಯವರೂ ಪುರಾರಿಗಳಾದ ಜವಾಹಿರ್ ಲಾಲ ನೆಹರು ದಂಪತಿ ಸಮೇತರಾಗಿಯೂ ಹಾಜರಿದ್ದರು.

ಬೌದ್ಧ ಮತವು ಹಿಂದೂ ದೇಶದಲ್ಲಿ ಸ್ಥಾಪಿತವಾಗಿದ್ದರೂ, ಈ ದೇಶದಲ್ಲಿ ಅದರ ಚಿಹ್ನೆಗಳೇ ಇಲ್ಲನೆಂದು ಕೆಲವರು ಹೇಳುವರು ಆದರೆ ಇದು ಯಥಾರ್ಥವಾದುದಲ್ಲ ಬೌದ್ಧ ಮತವು, ಹಿಂದೂ ಮತದಿಂದ ಬೇರೆಯಾಗಿ ಸ್ವತಂತ್ರ ಧರ್ಮವೆಂದೆಣಿಸಲ್ಪಡಬೇಕಾದುದಿಲ್ಲ ಅನೇಕ ವಿಷಯಗಳಲ್ಲಿ ಹಿಂದೂ ಮತಕ್ಕೂ ಬೌದ್ಧ ಮತಕ್ಕೂ ವ್ಯತ್ಯಾಸವೇ ಕಂಡು ಬರುವುದಿಲ್ಲ ಅಹಿಂಸೆ ಇಂದ್ರಿಯ ನಿಗ್ರಹ, ಚಿತ್ತ ಶುದ್ಧಿ, ವಿಶ್ವಪ್ರೇಮ ಮುಂತಾದ ತತ್ವಗಳನ್ನು ಎರಡು ಧರ್ಮಗಳೂ, ಸಮಾನವಾಗಿ ಪ್ರಚುರ ಪಡಿಸುತ್ತಲಿವೆ ಆದುದರಿಂದ ಅವತಾರ ಪುರುಷನಾದ ಬುದ್ಧನು, ಪೂಜನೀಯ ನೆಂದು ಹೇಳಲ್ಪಡಲಿಕ್ಕೆ ತೀರಮಾತ್ರವೂ ಸಂಶಯವಿಲ್ಲ.

ಇನಿ ಸಾರ್ವ ಭೌಮರಾದ ರಬೀಂದ್ರ ನಾಥ ಟಾಕೋರವರು ಕಳುಹಿಸಿದ ಸಂದೇಶವಿದು

"ಒಂದು ಮನುಷ್ಯ ಜನಾಂಗವು ಮತ್ತೊಂದು ಮನುಷ್ಯ ಜನಾಂಗವನ್ನು ಹಿಂಸಿಸಿ, ತಮ್ಮ ಅಕೃತ್ಯಗಳನ್ನೂ ಅನಾಹುತಗಳನ್ನೂ ಚಿರಸ್ಥಾಯಿಯಾಗಿ ಒನರನ್ನೆ ನಸಿನಲ್ಲಿಡಲು ದೊಡ್ಡ ದೊಡ್ಡ ವಿಜಯ ಸ್ತಂಭಗಳನ್ನು ಅಸಂಖ್ಯಾಕವಾಗಿ ನಿರ್ಮಿಸಿರುವರು ಆದರೆ ಪ್ರಾಚೀನ ಹಿಂದೂಸ್ಥಾನದಲ್ಲಿ ಅನೇಕ ರಾಷ್ಟ್ರಗಳ ತತ್ವವೇತ್ತರು ಒಂದೆಡೆಯಲ್ಲಿ ಕೂಡಿ ಮಾನವ ಸಮಾಜದ ಕಲ್ಯಾಣಕ್ಕಾಗಿ, ಪ್ರೇಮವನ್ನು ವಿಸ್ತರಿಸುವ ಸಾಧನವನ್ನು ಕಂಡುಹಿಡಿಯ ಮಾಡುವುದರ ಮೂಲಕ ಆತ್ಮಶಕ್ತಿಯನ್ನು ಬೆಳೆಸುವ ಸಲುವಾಗಿ ಸಮಾವೇಶವಾದುದನ್ನು ಜ್ಞಾಪಕವಾಗಿ ಜ್ಞಾಪಕವಲ್ಲಿಡಲು ಅಮಹಾಪವಿತ್ರ ಕ್ಷೇತ್ರವನ್ನು ಪ್ರಾಚೀನ ಘನಸ್ಥಿತಿಗೆತರೋಣ'

ಅಸ್ತ್ರ ಶಸ್ತ್ರಗಳ ಉಪಯೋಗವನ್ನು ದೂರಮಾಡಿ ಹಿಂಸಾ ಮಾರ್ಗವನ್ನು ಬಿಟ್ಟು . ಶಾಂತಿಮಾರ್ಗಗಳನ್ನನುಸರಿಸುವುದು ಗೌತಮ ಬುದ್ಧನ ಜನ್ಮದಿಂದ ಪಾವನವಾದ ಭರತಖಂಡಕ್ಕೆಸಲ್ಲುವುದು

ಸ್ವೀಕಾರ ಮತ್ತು ವಿಮರ್ಶೆ

ಜನ್ಮಭೂಮಿ ಹುಬ್ಬಳ್ಳಿಯ ೩೪ ನೇ ಸಂಚಿಕೆಗಳು ಕೈ ಸೇರಿವೆ ಮುದ್ರಣವು ಸುಧಾರಿಸಿದೆ ಪತ್ರಿಕೆಯ ವಾಚನದಿಂದ ಇದು ರಾಷ್ಟ್ರೀಯ ಧ್ಯೇಯಗಳಿಗೆ ಬೆಂಬಲಕೊಡುವ ಪತ್ರಗಳಲ್ಲೊಂದಾಗಿದೆಯೆಂದು ಧಾರಾಳವಾಗಿ ಹೇಳಬಹುದು ಶ್ರೀ ಪಟೇಲರಂಥ ಲೇಖಕರ ನೇತೃತ್ವದಲ್ಲಿ, ಈ ಪತ್ರವು ಉತ್ತರೋತ್ತರ ಅಭಿವೃದ್ಧಿಯಾಗಿ ಕರ್ನಾಟಕದಲ್ಲೆಲ್ಲಾ ಪ್ರಚಾರವಾಗಲೆಂದು ನಮ್ಮ ಹಾರೈಕೆ

ಸೂಚನೆ— ನಮ್ಮ ಕಾರ್ಯಾಲಯಕ್ಕೆ ಹೆಸರಿಲ್ಲದ ಪತ್ರಗಳನ್ನು ಮಾಡಿ ಕೆಲವರು ವರ್ತಮಾನಗಳನ್ನು ಪ್ರಕಟಿಸಲು ಕೋರಿದ್ದಾರೆ. ಇದು ಸರಿಯಾದುದಲ್ಲ. ತಮ್ಮ ಪೂರಾ ಪತ್ತೆಯನ್ನು ಕೊಟ್ಟರೆ ನಾವು ಪ್ರಕಟಿಸುತ್ತೇವೆ, ಇಲ್ಲವಾದರೆ ಪ್ರಕಟಿಸಲಾಗುವುದಿಲ್ಲವೆಂಬಂಶವನ್ನು ಎಲ್ಲರೂ ತಿಳಿಯತಕ್ಕದ್ದು.

(ಸಂಪಾದಕ ಕರ್ನಾಟಕ ಕೇಸರಿ.)

ಮದ್ರಾಸ್ ಪ್ರಾಂತದಲ್ಲಿ ಮದ್ಯನಿಷೇಧ.

ಹಿಂದೀಯರೂ, ಕಾಂಗ್ರೆಸ್ ಸಂಸ್ಥೆಯೂ ಮದ್ಯನಿಷೇಧದಬಗ್ಗೆ ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಪ್ರಭುತ್ವದ ಸಹಕಾರವು ಕಿಂಚಿತ್ತೂ ಇಲ್ಲವೆಂಬುದಾಗಿ ಮಹಾತ್ಮ ಗಾಂಧಿಯವರು ವೈರಲೆಸ್ ಮೂಲಕ, ಆ ಮೆರಿಕಾ ಖಂಡಕ್ಕೆ ಸಂದೇಶವನ್ನು ಕಳುಹಿಸಿರುವರು. ಮದ್ರಾಸ್ ನ್ಯಾಯಶಾಸನ ಸಭೆಯಲ್ಲಿ ನಿಷೇಧದಬಗ್ಗೆ ಠರಾವುಗಳಾದಾಗ್ಯೆ, ಸರ್ಕಾರದ ಕಡೆಯಿಂದ ಮಂತ್ರಿಗಳು, ಇಪ್ಪತ್ತು ವರ್ಷಗಳೊಳಗಾಗಿ ಸಂಪೂರ್ಣ ನಿಷೇಧವನ್ನು ಜಾರಿಯಲ್ಲಿ ತರುವರೆಂದೂ, ಆಲ್ಪಯವರೆಗೂ, ಮಿತಪಾನ ಚಳವಳಿಯನ್ನು ಹೂಡುವೆವೆಂತಲೂ ವ್ಯಕ್ತಪಡಿಸಿದರು. ಎರಡು ವರ್ಷಗಳಕಾಲ ಮದ್ರಾಸಿನಲ್ಲಿ ಒಂದು ಕೇಂದ್ರ ಪ್ರಚಾರಕ ಸಮಿತಿ ಯೇರ್ಪಟ್ಟು, ಬೆಲ್ಲಾ ಸಂಘಗಳ ಮೂಲಕ ಚಳವಳಿವು ಏರ್ಪಟ್ಟಿತು. ಚಿತ್ರಸಲ್ಪಟ್ಟ ದೊಡ್ಡ ದೊಡ್ಡ ಕರಪತ್ರಗಳಿಂದಲೂ, ಪೊಯಗೊಂಬೆಗಳಿಂದಲೂ, ಜನತೆಯಲ್ಲಿ ನಿಷೇಧದ ಪರಿಣಾಮಗಳನ್ನು, ಪ್ರಚಾರಕರ ಮೂಲಕ ಹೇಳಿಸಿದರು. ಇದರಿಂದ ಎಷ್ಟರಮಟ್ಟಿಗೆ ಲಾಭವಾಯಿತೆನ್ನುವದು ಎಲ್ಲರಿಗೂ ತಿಳಿದ ಅಂಶವಾದಿದೆ ಆದರೆ ಹಣದ ಅಭಾವದಿಂದ ಈ ಪ್ರಚಾರವೂ ಮುಗಿಯಿತು ಸರ್ಕಾರದವರಿಗೆ, ತಮ್ಮ ತಾಬೆಯಲ್ಲಿ ನಡೆಯುವ ಚಳವಳಿವೇ ಸಹನವಾಗಲಿಲ್ಲ.

ಒಂದೆರಡು ಜಿಲ್ಲೆಗಳಲ್ಲಾದರೂ ನಿಷೇಧವನ್ನು ಮಲಿನಪಟ್ಟಿ ಪರೀಕ್ಷಿಸಿರೆಂದು ಸಾರ್ವಜನಿಕಾಭಿಪ್ರಾಯವು ನ್ಯಾಯವಿಧಾಯಕ ಸಭೆಯ ಮೂಲಕ, ಕೇಳಿಕೊಂಡರೂ ಸರ್ಕಾರದವರು ಒಪ್ಪಲಿಲ್ಲ. ಸ್ಥಾನೀಕ ಸಂಸ್ಥೆಗಳು ನಿಷೇಧವನ್ನು ಜಾರಿಯಲ್ಲಿಡಲಿಕ್ಕೂ ಅವರು ಸಮ್ಮತಿಸುವಂತಿಲ್ಲ. ಇದರಿಂದ ಸರ್ಕಾರದವರ ಅಂತರ್ಯ ಅರಿಯು ಚೆನ್ನಾಗಿ ಪ್ರಕಟವಾಗುತ್ತದೆ. ಕಾಂಗ್ರೆಸದವರ ಪಿಕೆಟಿಂಗ್ ಚಳವಳಿಯಿಂದಲೂ, ಮತ್ತಿತರ ಆರ್ಥಿಕ ಕಾರಣಗಳಿಂದಲೂ ಮಾದಕ ವಸ್ತುಗಳ ಆದಾಯವು ೧೩ ಲಕ್ಷ ರೂಪಾಯಿ ಕಡಿಮೆ ಬೀಳುವುದೆಂದು, ಅಬ್ಕಾರಿ ಮಂತ್ರಿಗಳು ಹೇಳಿದರು. ಇದ್ದರಿಂದಪ್ರಜೆಗಳಿಗೆ ಸಂಪೂರ್ಣ ನಿಷೇಧದ ಬಗ್ಗೆ ಸಹಾನುಭೂತಿಯೂ ಮಾದಕ ವಸ್ತುಗಳವಿಷಯದಲ್ಲಿ ಕ್ರೌರ್ಯವೂ ಸ್ಪಷ್ಟವಾಗಿದೆ.

ಆದರೆ ಸರ್ಕಾರದವರು ತಮ್ಮ ಪ್ರಾಮುಖ್ಯ ಕೆಲಸಗಳನ್ನು ಸಾಗಿಸಲು ಅನೀತಿ ಮಾರ್ಗಗಳಿಂದ ಬರುವ ಈ ಅಪಾಯ ವನ್ನೇ ನಂಬಿಕೊಂಡಿರುತ್ತಾರೆ ಆದುದರಿಂದಲೇ ಕಾಂಗ್ರೆಸದವರ ಶಾಂತಿ, ಸತ್ಯ ಮಾರ್ಗಾವಲಂಬಿಯಾದ ಬಹಿಷ್ಕಾರವನ್ನು ಪ್ರತಿಬಂಧಿಸಲಿಕ್ಕೆ ನಾನಾ ಬಗೆಯ ಸೋಗುಗಳಿಂದ ಯತ್ನಿಸುತ್ತಿರುವ ಇಂಥಾ ಸಮಾಜ ಸುಧಾರಣೆಯ ಕಾರ್ಯವನ್ನು ಪ್ರಜೆಗಳ ಹಿತಕೋರುವ ಸರ್ಕಾರದವರು, ಪ್ರತಿಬಂಧಿಸುತ್ತಲಿರುವುದು,ಅತ್ಯಂತ ಖಂಡನೀಯವಾಗಿದೆ.

ಇತ್ತೀಚೆಗೆ ನಡೆದ ಶಾಸನ ಸಭೆಯ ಅಧಿವೇಶನದಲ್ಲಿ ಶ್ರೀ ರಡ್ಡಿಯವರು ಕೇಳಿದ ಪ್ರಶ್ನೆಗೆ ಪ್ರತ್ಯುತ್ತರ ಹೇಳುತ್ತಾ, ಮದ್ಯ ಪಾನ ನಿಷೇಧವನ್ನು ತಾವು ಧ್ಯೇಯವಾಗಿಟ್ಟುಕೊಂಡಿದ್ದರೂ, ಇಪ್ಪತ್ತು ವರ್ಷಗಳಲ್ಲಿ ಸಂಪೂರ್ಣ ನಿಷೇಧವನ್ನು ಮಲಿನಪಟ್ಟಿತರಲು ತಾವು ಒಪ್ಪಲಿಲ್ಲವೆಂತಲೂ, ನಿಷೇಧದ ಧ್ಯೇಯವನ್ನು ಸಾಧಿಸಲಿಕ್ಕೆ ಕೃಷಿ ಮಾಡುವರೆಂತಲೂ, ತಿಳಿಸಿದರು. ಇದು ಬಹಳ ಅಸಮಂಜಸವಾದದ್ದು. ಇವರ ರಾಜ್ಯದಲ್ಲಿ ಎಷ್ಟು ಶತಾಬ್ದಿಗಳಾದರೂ, ಸಂಪೂರ್ಣ ನಿಷೇಧವು ಅಮಲಿನಪಟ್ಟಿ ಬರಲಾರದೆಂದು ನಮ್ಮ ನಂಬಿಕೆಯದೆ.

ಪ್ರಾಂತದಿಂದಲೂ ಮಹಾತ್ಮಾಜಿಯವರು, ಸ್ಪಷ್ಟಿಕರವಾದ ರಾಜ್ಯಾಂಗ ಘಟನೆಯು ಸಂಪೂರ್ಣ ನಿಷೇಧವನ್ನವಲಿನಪಟ್ಟಿಡಲಿಕ್ಕೆ, ಪ್ರಜಾಪ್ರತಿನಿಧಿಗಳಿಗೆ ತಕ್ಕ ಅಧಿಕಾರವಿರಬೇಕಂತ ಹೇಳುತ್ತಲೇ ಬಂದಿದ್ದಾರೆ. ನಮ್ಮ ಪ್ರಾಂತದಲ್ಲಿ ಸಂಪೂರ್ಣ ನಿಷೇಧದ ಪ್ರತಿಬಂಧಕವು ಸರ್ಕಾರದವರಿಂದಲೇ ಬರುವುದೆಂಬುದನ್ನು ಎಲ್ಲರೂ ತಿಳಿದಿರುವರು.

ದುಂಡುಮೇಜಿನ ಸಮಾಚಾರಗಳು

ಮುಖ್ಯಮಂತ್ರಿಗಳ ಅಸ್ಪಷ್ಟಭಾಷಣ.

ಅಲ್ಪಸಂಖ್ಯಾಕರ ಒಪ್ಪಂದ

ಮಹಾತ್ಮ ಗಾಂಧಿಯವರ ಖಂಡನೆ.

ಈ ವಾರ ಚಕ್ರಗೋಷ್ಠಿಯಲ್ಲಿ ವಿಶೇಷ ವರ್ತಮಾನವೆಂದರೆ ಪ್ರಾಂತೀಕ ಸ್ವಪರಿಪಾಲನೆಯ ವಿಷಯ. ಬ್ರಿಟಿಶ ಮಂತ್ರಿ ವರ್ಗದಲ್ಲಿ, ಇನ್ನೂ ಭಿನ್ನಾಭಿಪ್ರಾಯಗಳಿರುವುವೆಂತಲೂ, ಮಂತ್ರಿಗಳಾದ ಮ್ಯಾಕ್ಡೊನಾಲ್ಡರು, ಟೋರಿಗಳ ಗುಂಪಿನಲ್ಲಿ ಸಿಕ್ಕು ಉಪಯೋಗವಿಲ್ಲದಿರುವರೆಂತಲೂ, ಎಲ್ಲಾ ಕಡೆಗಳಿಂದಲೂ ಸ್ಪಷ್ಟವಾಗುತ್ತಿದೆ.ಗಾಂಧೀಜಿ,ಸಪ್ರು, ಜಯಕರ,ಶಾಸ್ತ್ರಿ ವಗೈರೆ ಪ್ರಭುತಿಗಳು, ಪ್ರಾಂತೀಕ ಸ್ವಪರಿಪಾಲನೆಯಬಗ್ಗೆ ತಮ್ಮ ಸಂಪೂರ್ಣ ಅಸಮ್ಮತಿಯನ್ನು ವ್ಯಕ್ತ ಪಡಿಸಿರುತ್ತಾರೆ. ಈ ವಿಷಯದಲ್ಲಿ ಹಿಂದೂಸ್ಥಾನ ಕಾರ್ಯದರ್ಶಿಗಳಾದ ಸರ್. ಶಾಮುಯಲ್‌ಹೋರರವರ ಸಂಗಡ ಗಾಂಧೀಜಿಯವರ ಮಾತು ಕಥೆಗಳಾಗಿ ತಮ್ಮಭಿಪ್ರಾಯಗಳನ್ನು ಪುನಃ ಹೇಳಿರುತ್ತಾರೆ.

ಮಹಮ್ಮದೀಯ ಪ್ರತಿನಿಧಿಗಳು, ಡಾ. ಅಂಬೇಡ್ಕರ್, ಗಿಡ್ನಿ, ಕಾರ್ ಮುಂತಾದ ಅಲ್ಪಸಂಖ್ಯಾಕರ ಮುಖಂಡರೊಡನೆ ಬೆರೆತು, ತಮಗೆಲ್ಲರಿಗೂ, ಒಪ್ಪಿಗೆಯಿರುವ ಒಂದು ವರದಿಯನ್ನು ಸಿದ್ಧಪಡಿಸಿ, ಆಗಾಖಾನ ರವರ ಅಧಿಪತ್ಯದಲ್ಲಿ, ಮುಖ್ಯ ಮಂತ್ರಿಗಳಿಗದನ್ನೊಪ್ಪಿಸಿದರು. ಅಲ್ಪಸಂಖ್ಯಾಕರ ಸಮಿತಿಯು ಮುಖ್ಯಾಕ್ಡೊನಾಲ್ಡರ ಅಧ್ಯಕ್ಷತೆಯಲ್ಲಿ ಕೂಡಿದಾಗ, ಅಧ್ಯಕ್ಷರು ಭಾಷಣಮಾಡಿದ ಸಾರಾಂಶವಿದು.

" ಸ್ನೇಹಿತರೇ! ನಾನು ಬೇರೆ ಕೆಲಸದಲ್ಲಿ ತೊಡಗಿದ್ದರೂ, ಆರ್ಡ್ ಸಾಂಕೆಯವರ ಮೂಲಕ, ಈ ಸಭೆಯ ಕಲಾಪಗಳನ್ನೆಲ್ಲಾ ಅರಿತಿರುವೆನು. ಹಿಂದೂ ಮುಸಲ್ಮಾನರು ಒಂದು ವಿಧವಾದ ಒಪ್ಪಂದಕ್ಕೆ ಬರದಿರುವ ವಿಷಯವು ಬಹಳ ದುಃಖಸ್ಪದವಾದ ದು. ನಿಮ್ಮಲ್ಲಿ ಒಪ್ಪಂದವಾಗದ ಮಾತ್ರಕ್ಕೆ, ಸರ್ಕಾರದವರಾದ ನಮಗೆ, ನಿಮಗೆ ಯಾವ ತರದ ಸುಧಾರಣೆಗಳನ್ನು ಕೊಡಬೇಕೆಂಬ ಬಗ್ಗೆ ಜವಾಬ್ದಾರಿಯು ಇದ್ದೇ ಇದೆ ಇನ್ನು ಕೆಲವು ದಿವಸಗಳಲ್ಲಿ ಸರ್ಕಾರದವರ ವರವಾಗಿ ನಾನು ಒಂದು ಸೂಚನೆ ಮಾಡುತ್ತೇನೆ."

ಪ್ರೀಮಿಯರ್ ರವರು ಪ್ರಾರಂಭ ಭಾಷಣ ಮಾಡಿದ ವೇಳೆ, ಮೈನಾರಿಟಿ ಸಂಗಡಿಗಳ ಒಪ್ಪಂದದ ಬಗ್ಗೆ ಚರ್ಚೆಯಾಯಿತು,

ಸರ್ದಾರ್ ಉಜ್ಜಲ್ ಸಿಂಗರು ಮೈನಾರಿಟಿ ಸಂಗಡಿಗಳ ಒಪ್ಪಂದವು ಪ್ರಜಾ ಸತ್ತಾತ್ಮಕ ಧ್ಯೇಯಕ್ಕೆ ವಿರುದ್ಧವಾಗಿದೆ ಎಂದರು. ವಿ ॥ ಜೋಷಿ ಮಿ॥ ಶಿವರಾವ್ ಮತ್ತು ಮಿ॥ ಗಿರಿ ಇವರುಗಳು ಒಪ್ಪಂದದ ಬಗ್ಗೆ ತಮ್ಮ ಸಮ್ಮತಿ ಇಲ್ಲವೆಂದರು. ವಿಶೇಷ ಪ್ರಾತಿನಿಧ್ಯತೆಯನ್ನು ಹೊಂದುವ ಸಲುವಾಗಿ ಕೆಲಸಗಾರರು ತಮ್ಮತಮ್ಮಲ್ಲೇ ಒಡೆಗುಗಳುಂಟುಮಾಡಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲವೆಂದೂ, ಅವರು ತಿಳಿಸಿದರು. ಮಿ॥ ದತ್ತರೂ ತಮ್ಮ ಅಸಮ್ಮತಿಯನ್ನು ವ್ಯಕ್ತ ಪಡಿಸಿದರು.ತಾವು ಪ್ರಾತಿನಿಧ್ಯತೆ ಹೊಂದಿರುವ ವತ್ತ ಪ್ರತಿಪಾದಿಸುತ್ತಿರುವ ಪಂಗಡದವರು ನೋಲ್ಕಂಡ ಒಪ್ಪಂದಕ್ಕೆ ಭಾಗಿಗಾಗಲಾರರೆಂದೂ ಹೇಳಿದರು

ಕರ್ನಲ್ ಗಿಡ್ನಿಯವರೂ ಮತ್ತು ಸರ್. ಕಾರ್‌ರವರೂ. ಒಪ್ಪಂದವನ್ನು ಸಮರ್ಥಿಸಿ ಮಾತನಾಡಿದರು. ಸ್ತ್ರೀಯರಿಗೆ ವಿಶೇಷ ಪ್ರಾತಿನಿಧ್ಯತೆ ಬೇಕಿಲ್ಲವೆಂಬುದನ್ನು ಸಮರ್ಥಿಸಿ ಶ್ರೀಮತಿ ಸರೋಜಿನಿದೇವಿಯರೂ, ಮತ್ತು ಬೇಗಂಜಹಾನಾರಾ ರವರೂ, ತಮ್ಮ ಅಭಿಪ್ರಾಯಕೊಟ್ಟರು.ವಿದ್ಯಾವಂತರಾದ ಸ್ತ್ರೀಯರು ಈ ಅಭಿಪ್ರಾಯಗಳನ್ನು ಒಪ್ಪುವುದಿಲ್ಲವೆಂದೂ, ನ್ಯಾಯವಿಧಾಯಕ ಸಭೆಗಳಲ್ಲಿ ಸ್ತ್ರೀಯರಿಗೆ ಸ್ಥಾನಗಳನ್ನು ಕಲ್ಪಿಸುವ ಭರವಸೆ ಬೇಕೆಂದೂ ಮಿಸೆಸ್ ಸುಬ್ಬರಾಯಾರವರೂ ನುಡಿದರು.

ಕೋಮುವಾದ ಸಮಸ್ಯೆಯ ತೀರ್ಮಾನವನ್ನು ಗವರ್ನರ್ ತೆಗೆದುಕೊಂಡು ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಕೆಲಸವನ್ನು ಮುಂದೆ ಸಾಗಿಸಬೇಕೆಂದು ಸರ್ ಚಿಮನ್ ಲಾಲ್ ಸೆಟಲ್ ವಾಡರವರು ಪ್ರೀಮಿಯರ್ ರವರನ್ನು ಪ್ರಾರ್ಥಿಸಿದರು.

ಹಿಂದುಗಳಿಂದ ಪ್ರತ್ಯೇಕ ಚುನಾವಣೆಯನ್ನು ಅಥವಾ ಸಮತೂಕವನ್ನೂ ತೆಗೆದುಕೊಳ್ಳುವುದಕ್ಕೆ ಹಿಂದೂ ಮಹಾ ಸಭೆಯವರು ಸಮ್ಮತಿಸಲಾರರೆಂದು ಡಾ॥ ಮೂಂಜೆಯವರು ಹೇಳಿದರು.

ಮಹಾತ್ಮಗಾಂಧಿಯವರ ಭಾಷಣ.

ನಾವು ಇಲ್ಲಿ ಬಂದಿರುವುದು ಜಾತಿವಾರಿ ಜಗಳಗಳನ್ನು ಪರಿಹರಿಸುವದಕ್ಕಲ್ಲ. ಆದರೆ ಸ್ವರಾಜ್ಯ ವಿಷಯವನ್ನು ಇತ್ಯರ್ಥಪಡಿಸಿ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ಬಂದಿದ್ದೇವೆಂಬುದನ್ನು ತಿಳಿಯಿರಿ. ಕೋಮುವಾರಿ ಸಮಸ್ಯೆಯು ಪರಿಹಾರವಾಗದೆಹೊಂತು, ರಾಜ್ಯಾಂಗಕಾರಣಗಳನ್ನು ನಿರ್ಣಯಿಸಲಿಕ್ಕಾಗುವದಿಲ್ಲೆಂಬಂಶವನ್ನು ನಾನು ಒಪ್ಪುವುದಿಲ್ಲ ಮುಖ್ಯ ಮಂತ್ರಿಗಳ ಈ ಅಭಿಪ್ರಾಯಕ್ಕೆ ನಾನು ವಿರುದ್ಧ ವಿರುತ್ತೇನೆ. ನಮ್ಮನ್ನು ಆರುಸಾವಿರ ಮೈಲುಗಳ ದೂರದಿಂದ, ಏನೋ ದೊಡ್ಡ ಕೆಲಸ ಮಾಡುವೆವೆಂದು ಕರೆಸಿ, ನಿಮ್ಮನಿಮ್ಮಲ್ಲಿ ಒಪ್ಪಂದ ವಿಲ್ಲದಿದ್ದರಿಂದ ಸ್ವರಾಜ್ಯಕೊಡುವಬಗ್ಗೆ ಸೂಚನೆಗಳನ್ನು ಹೇಳುವೆವೆಂದರೆ, ಅದು ಸಭೆಯನ್ನು ವ್ಯಸನಕರವಾಗಿ ಮುಗಿಸಿದಂತಾಗುವುದು. ಹಿಂದೂಸ್ಥಾನದ ಅಖಾಧವಾದ ರಾಷ್ಟ್ರೀಯ ಸಂಸ್ಥೆಯ ಪರವಾಗಿ, ಮೈನಾರಿಟಿಗಳ ಒಪ್ಪಂದವನ್ನು ನಾನು ಒಪ್ಪುವುದಿಲ್ಲ. ಇದನ್ನೆಲ್ಲಾ ನಾನು ಪ್ರಪಂಚಕ್ಕೇ ಸಾರುತ್ತೇನೆ. (ಸಂಪುಟನೋಡಿ)

ತುಮಕೂರಿನಲ್ಲಿ ಮುಖಂಡರ ದಸ್ತಗಿರಿ.

ಪೋಲೀಸರ ಲಾಠೀ ಪ್ರಯೋಗ.

ಕಾಂಗ್ರೆಸ್ ಅಧ್ಯಕ್ಷತೆಯಲ್ಲಿ ಶಾಂತಿಯುಕ್ತ ಬಹಿಷ್ಕಾರವು ಹೆಂಡದಂಗಡಿಗಳಮುಂದೆ ಸಾಗಿತ್ತು. ಕೆಲ ಅಧಿಕಾರಗಳಿಗೆ ಇದು ಹೊಟ್ಟೆಬೇನೆಯಾಗಿ, ಈ ತಿಂಗಳು 8-ನೇ ತಾರೀಖು ದಿವಸ, ಅವರ, ಬಹಿಷ್ಕಾರಿಸುತ್ತಿದ್ದ ನಾಲ್ಕು ಜನರನ್ನು ಸೆರೆಹಿಡಿದರು. ತುಮಕೂರಿನ ಕಾಂಗ್ರೆಸ್ ಕಾರ್ಯಕರ್ತರಿಗಳಾದ ಶ್ರೀ ಸುಬ್ರಹ್ಮಣ್ಯಂಗರವರನ್ನು ಉಪಾಯಾಂತರಗಳಿಂದ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ನಂತರ ಸೆರೆಯಲ್ಲಿಟ್ಟರು. ಆ ದಿವಸ ಊರಲ್ಲೆಲ್ಲಾ ಹರತಾಳವಾಯಿತು. ಜನರೆಲ್ಲಾ ಬಯಕಾರ ಧ್ವನಿಮಾಡುತ್ತಾ. ಅವರನ್ನ ಬೀಳ್ಕೊಡಲಿಕ್ಕೆ ಬರುವಾಗ ರಿಜರ್ವ್ ಪೋಲೀಸಿನವರು ಅವರನ್ನು ದೊಣ್ಣೆಗಳಿಂದ ಪ್ರಹರಿಸಿದರು. ಹೋಟಲನಲ್ಲಿ ಕಾಫಿ ಕುಡಿಯುತ್ತಿದ್ದ ಶ್ರೀ ಶಿವರಾವ್ ಎಂಬುವರೂ, ಸರಾಫ್ ಅಂಗಡಿಯಲ್ಲಿದ್ದ ಶ್ರೀ ವೀರಾಚಾರ್ಯ ಎಂಬುವರೂ, ಲಾಠೀಪ್ರಹಾರಕ್ಕೆ ಗುರಿಯಾದರು 20-30 ಜನರು ಈ ಪ್ರಹಾರಗಳಿಗೆ ಗುರಿಯಾದರೆಂದು ತಿಳಿದು ಬಂದಿದೆ.

ಆದಿವಸ 6 ಘಂಟೆಗೆ ಸುಮಾರು ಇಪ್ಪತ್ತು ಸ್ಥಳಗಳಲ್ಲಿ ಸ್ವಯಂಸೇವಕರು, ಮದ್ಯಪಾನನಿರೋಧ ಮತ್ತು ಪೋಲೀಸರ ಅತ್ಯಾಚಾರಗಳನ್ನು ಕುರಿತು ಭಾಷಣಮಾಡಿದರು. ಮಳೆಯು ವಿಶೇಷವಾಗಿ ಬಂದದ್ದರಿಂದ, ಜನರೆಲ್ಲಾ ಬಸವಣ್ಣ, ಆಂಜನೇಯ ದೇವಸ್ಥಾನಗಳಿಗೆ ಹೋಗಿ ಸೇರಿಕೊಂಡರೆಂತಲೂ, ಪೂಜೆಗಾಗಿ ಬಂದಿದ್ದ ಹೆಂಗಸರೂ, ಮಕ್ಕಳನ್ನು ಲಕ್ಷ್ಯಮಾಡದೆ, ಬೂಡ್ಸುಕಾಲ ಗಳಿಂದ ಒಳಗುಗ್ಗಿ ಎಲ್ಲರನ್ನೂ ಸರಿಸಮಾನವಾಗಿ ಬಡೆದರೆಂತಲೂ, ಆಸೈಕಿ ಪ್ರಜಾಪ್ರತಿನಿಧಿ ಸದಸ್ಯರಾದ ಯಜಮಾನ್ ಸಿದ್ದಪ್ಪನವರಿಗೂ ಭಾವಿಕಟ್ಟಿ ಚನ್ನಪ್ಪನವರಿಗೂ, ಏಟುಗಳು ಬಿದ್ದವೆಂತಲೂ ತಿಳಿದುಬಂದಿದೆ. ಪಟ್ಟಣದಲ್ಲೆಲ್ಲಾ ಕಳವಳವುಂಟಾಗಿದೆ.

ವರ್ತಮಾನಗಳು.

ಪರದೇಶ.

ಚೀನಾ, ಜಪಾನುಗಳ ನಡುವೆ, ಯುದ್ಧವು ಭೀಕರ ಸ್ವರೂಪವನ್ನು ತಾಳುತ್ತಲಿದೆ. ಲೀಗ್ ಆಫ್ ನೇಷನ್ಸ್ ಎಂಬ ಅಂತರಾಷ್ಟ್ರೀಯ ಶಾಂತಿಸಂಘದ ಪ್ರಯತ್ನಗಳು ನಿರರ್ಥಕವಾಗುತ್ತಲಿವೆ. ಈ ವಾರ ಜಪಾನಿನ ಮಂತ್ರಿವರ್ಗವನ್ನೆಲ್ಲಾ ನಿಷ್ಪಹಾರ ಎಂಬಸ್ಥಳದಲ್ಲಿ ಚೀನದವರು ಸೆರೆ ಹಿಡಿದಿದ್ದಾರೆ. ಅಲ್ಲದೆ, ತಾಪ್ಸಿಂಗ್ ಎಂಬ ಪಟ್ಟಣವನ್ನು ಮುತ್ತಿರುವರು.

ಸ್ಪೆಯಿನ ರಾಜರಾದ ಆಲ್ಫಾನ್ಸೊ ಎಂಬುವರು ಹೊಸ ಸರ್ಕಾರವು ಸ್ಥಾಪಿತವಾದಾಗ ರಾಜ್ಯಭ್ರಷ್ಟರಾಗಿ ಹೋದುದು ಸರಿಯಷ್ಟೆ. ನೂತನ ಸರ್ಕಾರವು ಅವರ ಮೇಲೆ ದೊಡ್ಡ ದೊಡ್ಡ ಅಪರಾಧಗಳನ್ನು ಹೊರಿಸಿ, ಅವರನ್ನು ಯಾವಜ್ಜೀವವೂ ಜೈದಿನಲ್ಲಿಡಲು ನಿರ್ಣಯಿಸಿದೆ. ಅವರ ಆಸ್ತಿಪಾಸ್ತಿಗಳೆಲ್ಲವೂ ಹೊಸ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟುವು.

ಹಿಂದೂಸ್ಥಾನ.

ಬಂಗಾಳದ ಪ್ರಮುಖ ಪ್ರಚಾರಿಗಳಾದ ಶ್ರೀ ಸುಭಾಷಚಂದ್ರಬೋಸರು ಡಾಕ್ಟಾ ಪಟ್ಟಣಕ್ಕೆ ಆಜ್ಞಾ ವಿರುದ್ಧ ಹೋಗುವರೆಂತ, ತಡೆಯಲ್ಪಟ್ಟು ಸೆರೆಯಾದರು. ಕೋರ್ಟನಲ್ಲಿ ಜಾಮೀನು ಕೇಳಲು ಕೊಡುವುದಿಲ್ಲೆಂದರು. ಈಗ ಸ್ವಂತ ಜಾಮೀನದ ಮೇಲೆ ಬಿಟ್ಟಿರುತ್ತಾರೆ.

ಕಲ್ಕತ್ತಾ ಯೂರೋಪಿಯನ್ ಸಂಘಾಧ್ಯಕ್ಷರಾದ ಮಿಲ್ ವಿಲ್ಲಿಯರ್ಸ್ ಎಂಬವರ ಮೇಲೆ ಪಿಸ್ತೂಲದಿಂದ ಗುಂಡುಹಾರಿಸಿದ, ವಿವಾದಾಸ್ಪದ ಎಂಬ ಬಂಗಾಳಿ ಯುವಕನಿಗೆ, 10 ವರ್ಷಗಳ ಕಠಿಣ ಶಿಕ್ಷೆಯಾಗಿದೆ.

"ಸ್ವರಾಜ್ಯವು ಬಂದಾಗ ದೀಪಾವಳಿ ಹಬ್ಬವು ಸಾರ್ಥಕವಾಗುವುದು. ಹಿಂಸೆ, ಅಸತ್ಯ ಎಂಬ ರಾವಣ ರಾಜ್ಯವು, ಅಹಿಂಸೆ, ಸತ್ಯನೆಂಬ ರಾಮರಾಜ್ಯದಿಂದ ಗೆಲ್ಲಲ್ಪಡುವುದೇ ನಿಜವಾದ ದೀಪಾವಳಿ" ಯೆಂದು ಮಹಾತ್ಮಗಾಂಧಿಯವರು ಬೊಂಬಾಯಿ ಕ್ರಾನಿಕಲ ಪತ್ರಕ್ಕೆ ಸಂದೇಶವನ್ನು ಕಳುಹಿಸಿರುವರು

ಹೈದರಾಬಾದಿನ ನೈಜಾಮರು ಬೀರಾರ್ ಪ್ರಾಂತ್ಯಗಳನ್ನು ತಮ್ಮ ಆಧಿಪತ್ಯಕ್ಕೆ ವಾಪಸುಪಡೆದುಕೊಳ್ಳಲು ಪೂರಾ ಯತ್ನಿಸುತಿದ್ದಾರೆ. ಈ ವಿಷಯದಲ್ಲಿ ಸರ್. ಅಕ್ಬರ್ ಹೈದರಿಯವರು, ಹಿಂದೂಸ್ಥಾನ ಕಾರ್ಯದರ್ಶಿಗಳ ಸಂಗಡ, ಮಾತುಕಥೆಗಳನ್ನು ನಡೆಸುತ್ತಲಿದ್ದಾರೆ.

ದೇಶಕ್ಕೋಸ್ಕರ ಸರ್ವಸ್ವವನ್ನೂ ತ್ಯಜಿಸಿದ ಪಂಜಾಬ್ ಕೇಸರಿ, ಲಾಲಾಲಜಪತರಾಯರ ಶ್ರಾದ್ಧ ದಿನವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲೂ ಆಚರಿಸಲು ಪಂಜಾಬ ಪ್ರಾಂತೀಕ ಕಾಂಗ್ರೆಸಸಭೆಯ ಅಧ್ಯಕ್ಷರಾದ ಲಾಲಾಧನಿಚಂದರು ಕೋರಿದ್ದಾರೆ.

ಬೀಹಾರ ಸ್ಥಾನಿಕ ಸರ್ಕಾರದ ಮಂತ್ರಿಗಳಾದ ಶ್ರೀ ಗಣೇಶದತ್ತಸಿಂಗರೆಂಬ ಶ್ರೀಮಂತರು, ಪಾಟ್ನಾ ವಿಶ್ವವಿದ್ಯಾಲಯಕ್ಕೆ, ವಿಜ್ಞಾನ, ಮತ್ತು ವೈದ್ಯಶಾಸ್ತ್ರಗಳಲ್ಲಿ ಪ್ರಾದೇಶಿಕ್ಷಣಕ್ಕನುಕೂಲ ಮಾಡಲು **ಒಂದು ಲಕ್ಷ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.**

ಶ್ರೀಲಕ್ಷ್ಮೀನಾರಾಯಣರೆಂಬ ನಾಗಪುರದ ಶ್ರೀಮಂತರೋರ್ವರು, ಅಲ್ಲಿಯ ವಿಶ್ವವಿದ್ಯಾಲಯಕ್ಕೆ, ಕೈಗಾರಿಕೆ ಶಿಕ್ಷಣಕ್ಕೆಂದು ನಾಲ್ವತ್ತು ಲಕ್ಷರೂಪಾಯಿಗಳನ್ನು ದಾನಮಾಡಿ, ತಮ್ಮ ಮರಣಶಾಸನದಲ್ಲಿ ಬರೆದಿದ್ದರು. ಇದು ಅವರ ಪತ್ನಿಯರಿಂದ ವಿರೋಧಿಸಲ್ಪಟ್ಟು, ಕೋರ್ಟನ ವಿಚಾರಣೆಗೊಳಪಟ್ಟಿತ್ತು. ಕೋರ್ಟನವರು ವಿಶ್ವವಿದ್ಯಾಲಯದ ಪರವಾಗಿ ತೀರ್ಮಾನಿಸಿರುವರು.

ಇಂಥಹ ದಾನಶೂರರು ಕರ್ನಾಟಕದಲ್ಲಿ ಎಂದು ಉದ್ಭವಿಸುವರು ?

ಬಳ್ಳಾರಿ.

10-11-31-ನೇ ಮಂಗಳವಾರ ಪ್ರಾತಃಕಾಲ ಶ್ರೀ ರಾಘವಯ್ಯಂಗಾರ್ ಡೆಪ್ಯೂಟಿ ಕಲೆಕ್ಟರರವರು ಪುರಾಧ್ಯಕ್ಷರ ಚುನಾವಣೆಯನ್ನು ನಡೆಸಿದರು. ಶ್ರೀಬಾಳಾಜಿರಾಯರಿಗೆ 15 ಮತಗಳೂ, ಶ್ರೀನಾಯಿಡುಯವರಿಗೆ 11 ಮತಗಳೂ ಬಂದು ಶ್ರೀ ಬಾಳಾಜಿರಾಯರೇ ಅಧ್ಯಕ್ಷರಾಗಿ, ಕೂಡಲೇ ಭಾರ್ಜನ್ನು ವಹಿಸಿಕೊಂಡರು ಸಾಯಂಕಾಲ ಹೊಸ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯನ್ನು ನಡೆಸಿದರು. ಆ ಪದವಿಗೆ ಶ್ರೀ ಮುಂಡ್ಲೂರು ಗಂಗಪ್ಪನವರೊಬ್ಬರೇ ನೀತಿದ್ದರಿಂದ ಪೋಟು ಯಲ್ಲದೆ ಚುನಾಯಿಸಲ್ಪಟ್ಟರು. ಆ ದಿವಸ ಸಾಯಂಕಾಲ ಸಾನಿವಾರು ಜನರು ಶ್ರೀ ಬಾಳಾಜಿರಾಯರ ಮನೆಗೆ ಹೋಗಿ, ಅವರನ್ನು ಅಭಿನಂದಿಸಿದರು.

ಜಿಲ್ಲಾ ಬೋರ್ಡ್ ಸಭೆಯು ಇಷ್ಟರಲ್ಲೇ ಕೂಡಿ ಪ್ರಾಮುಖ್ಯ ವಿಷಯಗಳು ಚರ್ಚೆಗೆ ಬರಲಿಕ್ಕಿವೆ ಸಾಮಾಜಿಕ ಸುಧಾರಣೆಯಲ್ಲಿ ಉತ್ಸಾಹವುಳ್ಳ ಕೆಲ ಸದ್ಗೃಹಿಣಿಯರು ಆರೋಗ್ಯವಾರದಲ್ಲಿ, ಅಸ್ಪೃಶ್ಯರ ಕೇರಿಗಳಿಗೆ ಹೋಗಿ, ಅವರಿಗೆ ಆರೋಗ್ಯ ತತ್ವಗಳನ್ನೆಲ್ಲಾ ಬೋಧಿಸಿಬಂದರು. ಈ ವಾರದಲ್ಲಿ ಒಂದು ದಿವಸ, ಅಸ್ಪೃಶ್ಯರಿಗಾಗಿ ಏರ್ಪಟ್ಟಿದ್ದು, ಆ ದಿವಸ ವಿವಿಧ ಕಾರ್ಯಕ್ರಮಗಳು ನಡೆದವು ಆ ಜಾತಿಯ ಶಿಶುಗಳಿಗೆ ಊರಿನ ಕೆಲವು ಸ್ಥಳಗಳಲ್ಲಿ, ಸ್ನಾನ, ಪಾನಾದಿಗಳನ್ನು ಮಾಡಿಸಿ, ಹಾಲನ್ನೂ, ಮಿಠಾಯಿಯನ್ನು ಕೊಟ್ಟರು. ಆರೋಗ್ಯದಿಂದಿದ್ದ ಕೆಲವು ಶಿಶುಗಳಿಗೆಲ್ಲಾ ಬಹುಮಾನವು ಸಿಕ್ಕಿತು.

ಡಾಕ್ಟರ್ ಲಕ್ಷ್ಮೀದೇವಿಯವರು ಹೀಗೆ ತಿಳಿಸುತ್ತಾರೆ.

"ಐದನೆಯ, ಆಂಧ್ರರಾಷ್ಟ್ರೀಯ ಮಹಿಳಾ ಸಭೆಯು ಗುಂಟೂರಿನಲ್ಲಿ, ಶ್ರೀಮತಿ ಅದಿಪೂಡಿ ವಸಂಧರಾದೇವಿ ಎಂ ಎ ಬಿ, ಎಸ್. ಸಿ. ಯವರ ಅಧ್ಯಕ್ಷತೆಯಲ್ಲಿ, ಈ ತಿಂಗಳು 21, 22-ನೇ ತಾರೀಖುಗಳಲ್ಲಿ ಕೂಡುವುದು. ವಿದ್ಯಾ ಸಾಂಘಿಕ ವಿಷಯಗಳಿಗೆ ಸಂಬಂಧಿಸಿದ ತೀರ್ಮಾನಗಳೂ, ಸ್ತ್ರೀಯರ ಹಕ್ಕುಗಳೂ ಪ್ರತಿಪಾದಿಸಲ್ಪಡುವುವು. ಸಂಘಸೇವಾ ಕುತೂಹಲವುಳ್ಳ ಸ್ತ್ರೀಯರೆಲ್ಲಾ ಬರಬೇಕಾಗುವುದೆ. ಸ್ತ್ರೀಯರಿಗೆ ಅನುಕೂಲಗಳು ಕಲ್ಪಿಸಲ್ಪಟ್ಟಿವೆ"

ಆದವಾನಿ.

ಪುರಸಭೆಯ ಅಧ್ಯಕ್ಷರು - ಮಿ॥ ಅಜಮತುಲ್ಲಾಖಾನ್ ಸಾಹೇಬರು.

ಉಪಾಧ್ಯಕ್ಷರು - ಮಿ॥ ಅಬ್ದುಲ್ ರಹೀಂ ಸಾಹೇಬರು.

ಹೊಸಪೇಟೆ.

ಪುರಸಭೆಯ ಅಧ್ಯಕ್ಷರು - ಮಿ॥ ವೆಂಕಟಸ್ವಾಮಿಯವರು.

ಉಪಾಧ್ಯಕ್ಷರು - ಮಿ॥ ಉದ್ದಾನಯ್ಯನವರು.

ಮಹಾತ್ಮ ಗಾಂಧೀ ಯವರ ಭಾಷಣ.

[ನಾಲ್ಕನೇ ಪುಟದಿಂದ ಮುಂದುವರಿದಿದೆ.]

ಮೇಲ್ಕಂಡ ಒಪ್ಪಂದವು ಜವಾಬ್ದಾರಿ ಸರಕಾರವನ್ನು ಹೊಂದಬೇಕೆಂದು ಇಷ್ಟಪಟ್ಟಿರುವುದಿಲ್ಲ. ಅಸ್ಪೃಶ್ಯರವಿಷಯದಲ್ಲಿ ಒಂದುಮಾತು. ಪ್ರತ್ಯೇಕಚುನಾವಣೆಯಿಂದ, ಅವರು ತಿರಿಗಿ ಪ್ರತ್ಯೇಕವಾಗಿಯೇ ಇರಬೇಕಾಗುತ್ತದೆ. ಸ್ವರಾಜ್ಯವಿಲ್ಲದಿದ್ದರೂ ಚಿಂತೆಯಿಲ್ಲ. ಹಿಂದೂಧರ್ಮದಲ್ಲಿ ನಡೆಯುವ ಈ ಅವಮಾನವನ್ನು ಇನ್ನುಮುಂದೆ ಸಹಿಸಲಾರೆನು. ಡಾ, ಅಂಬೇಡ್ಕರರವರು ಹಿಂದೂಸ್ಥಾನದ ಅಸ್ಪೃಶ್ಯರಿಗೆಲ್ಲಾ ಮುಖಂಡರೆಂಬುದನ್ನು ನಾನು ಒಪ್ಪಲಾರೆ, ಕಾಂಗ್ರೆಸ್ ಸಂಸ್ಥೆಯಲ್ಲಿ ಎಲ್ಲಾಮತಾಂತರದವರೂ, ಸಾವಿರ ಗಟ್ಟಲೆ ಇದ್ದು ಅದು ಸಾರ್ವಜನಿಕರ ಸಂಸ್ಥೆಯಾಗಿದೆ.

ಬಳ್ಳಾರಿ ಪುರಪಾಲಕ ಸಂಘವೂ, ಜನತ ಕರ್ತವ್ಯವೂ.

[ಕ್ರ. ಸ. ಶ್ರೀ.]

ಬಳ್ಳಾರಿಯ ಪುರವಾಸಿಗಳು ಇದ ನವಿಗಳ ತನ್ನ ಪುರಜನರ ಕರ್ತವ್ಯವನ್ನು ಗಮನಿಸಿದಂತೆ ತೋರುವುದಿಲ್ಲ. ಮನಸಿಪಾಲಿಟಿಯಂದರೇನು? ಅದರಿಂದ ಜನಗಳಿಗೆ ಯಾವ ಪ್ರಯೋಜನಗಳಾಗಬೇಕು? ಅದರಕಡೆ ಸಂದೇಹ ಪುರಪಾಲಕಸಂಘವು ಎಷ್ಟರವಟ್ಟಿಗೆ ಲಕ್ಷ್ಯ ಕೊಟ್ಟಿರುವದು? ಆಲಕ್ಷ್ಯವು ತೃಪ್ತಿಕರವಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಯಾರು? ಅನ್ಯಾಯತೆಯನ್ನು ಹ್ಯಾಗೆ ಹೋಗಲಾಡಿಸ ಬಹುದು? ನಾವು ಎಷ್ಟರವಟ್ಟಿಗೆ ಈ ಸಂಘದಕಡೆಗೆ ಲಕ್ಷ್ಯಕೊಡತಕ್ಕದ್ದು? ನಾವು ಪುರಪಾಲಕ ಸಂಘದಿಂದಲೇನಾದರೂ ಕೆಲಸಗಳು ಗೂಡಿಸಲು ಸಾಧ್ಯವೆ? ಮುಂತಾದ ಪ್ರಶ್ನೆಗಳನ್ನು ಕೇಳಿ ಯೋಚಿಸುವ ದಾದರೆ ನಮ್ಮನ್ಯಾಯತೆಗಳೂ, ಪುರಪಾಲಕ ಸಂಘದನ್ಯಾಯತೆಗಳೂ, ಹೊರ ಬೀಳುವುವು ಮುಂದೆ ನಮ್ಮ ಗ್ರಾಮಕ್ಕೆ ಕ್ಷೇಮವು ಬಾದೆ ಇರದು.

ಪುರಪಾಲಕ ಸಂಘದ ಚುನಾವಣೆಯ ಕಾಲದ ? ನಿಂತ ಅಭ್ಯರ್ಥಿಗಳ ಯೋಗ್ಯತೆಯನ್ನೇ ಮುಖ್ಯವಾಗಿ ಯಾರೂ ಲಕ್ಷ್ಯದಲ್ಲಿ ಇಡುವಂತೆ ಕಾಣಬರುವದಿಲ್ಲ ಈ ಅಭ್ಯರ್ಥಿ ಈ ಪಕ್ಷಕ್ಕೆ ಬೇರಿದವನು, ಆ ಅಭ್ಯರ್ಥಿ ಆ ಪಕ್ಷಕ್ಕೆ ಬೇರಿದವನೆಂತಲೂ, ಈ ಅಭ್ಯರ್ಥಿ ಒಯಿಂದರೆ ಇಂಥಹ ಭೇದಾಭಾವಗಳಿಗೆ ತನ್ನ ಓಟು ಕೊಡುವನೆಂತಲೂ, ನಮ್ಮವಾಹುಕಾರರು, ನಮ್ಮವರು ಇಂತಹವರಿಗೇ ಓಟು ಕೊಡುವಂತೆ ಹೇಳಿದ ರೀತಿಯೂ ಯೋಚಿಸದ ರಾಗಲೀ ಬೇರೆ ವಿಷಯಗಳು ದೃಷ್ಟಿಗೆ ಬೀಳುವದೇ ಇಲ್ಲ. ಈ ಚುನಾವಣೆಗಳಲ್ಲಿ ದುರ್ಜನರ ಸಹಾ ಆಗುವಬೆಂಬ ಸಾಮಾನ್ಯ ವಾಡಿಕೆ ಇದ್ದರೂ, ವಾಚಕರೇ ಇದನ್ನು ಊಹಿಸಬೇಕಲ್ಲದೆ, "ಇದನಿಧ್ಯಂ" ಎಂದು ನಾನು ಹೇಳಲಾರೆನು ಚುನಾವಣೆಯ ಕಾಲದಲ್ಲಿ ಅಭ್ಯರ್ಥಿಗಳಾಗಿ ನಿಲ್ಲುವವರು, ಅದ ವರಿಗಾಗಿ ಕೌನಿಲ್‌ನಲ್ಲಿದ್ದ ವರೇ ಅಥವಾ ಹೊಸಬರೇ? ಕೌನಿಲ್‌ನಲ್ಲಿ ಇದ್ದವರಾದರೆ ಅದು ವರಿಗಾಗಿ ಏನುಮಾಡಿದರು? ಜನಗಳಾಗಲಿಯೋಗವಾಗುವ ಶರಾವನ್ನೊಂದಾದರೂ ತಂದರೇ? ಅಥವಾ ವಿನ ಸ್ಥಿತಿಗತಿಗಳೇನು? ಅಂಥಹವರು ಪುನಃ ಕೌನಿಲ್‌ನಲ್ಲಿ ಪ್ರವೇಶಿಸಬಾರದೆಂಬರೇ? ಅವರು ತಮ್ಮ ಪ್ರತಿಷ್ಠಾ ಗೌರವಗಳಿಗಾಗಿ ಕೌನಿಲ್‌ನಲ್ಲಿ ಪ್ರವೇಶಿಸುವರೆ? ಹೊಸಬರಾದರೆ ಅವರಿಂದಲೇನಾದರೂ ಕಾರ್ಯವಾಗ ಬಹುದೆ? ಇತ್ಯಾದಿ ಸಂಗತಿಗಳನ್ನು ಯೋಚಿಸಿ ಓಟು ಕೊಟ್ಟಲ್ಲಿ ನಾವು ನಮ್ಮ ಕರ್ತವ್ಯವನ್ನು ಮಾಡುವೆವು ಇಲ್ಲದಿದ್ದರೆ "ಸಾಕ್ಷಾತ್ಪಶುಃ ಪುಚ್ಛವಿಷಾಣ ಹೀನಃ" ಬಾಲಕಾಂಡಗಳಿಲ್ಲದ ಪಶುವೇಸರಿ "ಎಂಬುದು ಅತಿಶಯೋಕ್ತಿ ಯಾದೀತೇ! ವಾಚಕರೇ ಯೋಚಿಸಬೇಕು

ಈ ಯಾವತ್ತು ವಿಷಯಗಳು ನಾವು ಯೋಚಿಸಿ ನಮ್ಮ ಕರ್ತವ್ಯವನ್ನು ಮಾಡುವದು ಅವಶ್ಯಕವೆಂದು, ಬಳ್ಳಾರಿಪುರ ನಿವಾಸಿಗಳು ನಿರ್ಧರಿಸಿದಲ್ಲಿ, ಈ ಕೆಳಗಿನ ಸೂಚನೆಗಳನ್ನು ನಿವರ್ಕೆ ಮಾಡಬೇಕಾದುದು ಅವಶ್ಯಕ ವೆಂದು ನಂಬಿರುತ್ತೇನೆ.

[ಸಶೇಷ]

ಮೈಸೂರು ರಾಜ್ಯವೂ ಗೋರಕ್ಷಣೆಯೂ

ಮೂವರು ಸಂಸ್ಥಾನವಾದ ಮೈಸೂರಿನಲ್ಲಿ ಗೋವಧೆಯನ್ನು ಕಾನೂನಿನ ಮೂಲಕ ನಿಲ್ಲಿಸಬೇಕೆಂಬುದಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ, ನ್ಯಾಯವಿಧಾಯಕ ಸಭೆಯಲ್ಲಿಯೂ ಮೆಂಬರುಗಳು ಬಲವಾಗಿ ಮಾತಾಡಿದ್ದರಿಂದ ಮೈಸೂರು ಸರ್ಕಾರದವರು ಗೋವಧೆಯನ್ನು ನಿಲ್ಲಿಸುವ ವಿಷಯದಲ್ಲಿ ಸಾಧಕ ಬಾಧಕಗಳನ್ನು ಆಲೋಚಿಸಲು ೩-೪ ವರ್ಷದಕೆಳಗೆ ದಿವಾಣಬಹದ್ದೂರ್ ಸರ್ ಕೆ. ಪಿ ಪುಟ್ಟಣ್ಣ ಶೆಟ್ಟಿರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಿಸಿದರು. ಈ ಕಮಿಟಿಯವರು ಬಹು ಪ್ರಯಾಸಪಟ್ಟು ಈ ವಿಷಯವಾಗಿ ಯಾವಯಾವ ಬೇಸದಲ್ಲಿ ಏನೇನು ಕಾನೂನುಮಾಡಿರುವರೆಂಬದನ್ನು ಪರಿಶೀಲಿಸಿ ಅನೇಕ ಹಿಂದೂ, ಮಹಮ್ಮದೀಯ, ಕ್ರೈಸ್ತ, ದೊಡ್ಡಮನುಷ್ಯರ ಹೇಳಿಕೆಯನ್ನು ತೆಗೆದುಕೊಂಡು ಕೆಲವು ಸರತ್ತುಗಳೊಂದಿಗೆ ಗೋವಧೆಯನ್ನು ಕಾನೂನಿನ ಮೂಲಕ ನಿಲ್ಲಿಸಬೇಕೆಂಬುದಾಗಿ ಸರಕಾರಕ್ಕೆ ವರದಿಮಾಡಿರುವರೆಂಬ ವಿಷಯವನ್ನು ಕೇಳಿ ಅನೇಕರು ಬಹು ಸಂತೋಷಪಟ್ಟರು. ಬೇರೆ ರಾಜ್ಯದವರು ಮೈಸೂರಿನವರ ಗೋವಧೆಯನ್ನು ನಿಲ್ಲಿಸುವ ಕಾನೂನನ್ನು ಮಾಡುತ್ತಿರುವದನ್ನು ಕೇಳಿ ತಮ್ಮ ಧನ್ಯವಾದಗಳನ್ನರ್ಪಿಸಿದರು ಇನ್ನೇನು ಸ್ವಲ್ಪದಿವಸಗಳಲ್ಲಿಯೇ ಗೋಮಾತೆಯ ಕಷ್ಟವು ತೀರಲಿರುವುದೆಂದು ಎಲ್ಲರೂ ಹರ್ಷಿತರಾದರು.

ಪ್ರಾಣಿದಯಾ ಸಂಘದವರು ಸರ್ಕಾರದವರು ಕಾನೂನನ್ನು ಮಾಡುವವರಿಗೂ ತಮ್ಮ ಪ್ರಚಾರ ಕೆಲಸವನ್ನು ಮಾಮೂಲು ಪ್ರಕಾರ ಮಾಡಿಯೇ ತೀರಬೇಕೆಂದು ಯಥಾಪ್ರಕಾರ ಪ್ರಚಾರಕೆಲಸವನ್ನು ಮಾಡುತ್ತಲೇ ಬಂದಿದುವರು ನಮ್ಮ ಸಂಘದ ಪ್ರಚಾರಕರೂ, ಬೆಂಗಳೂರು ತುಮಕೂರು ಗೋರಕ್ಷಣ ಸಂಘದವರೂ ಮೈಸೂರಿಗೆ ಹೋಗಿ ಮೊನ್ನೆ ನಡೆದ ದರಬರದಲ್ಲಿ ಅಲ್ಲಿ ಸೇರಿದ್ದ ಜನಗಳಿಗೆಲ್ಲಾ ಗೋರಕ್ಷಣೆಯ ವಿಷಯವಾಗಿ ವ್ಯಾಖ್ಯಾನಮಾಡಿ, ಕರಪತ್ರ, ಪುಸ್ತಕ ಮೊದಲಾದುವುಗಳನ್ನು ಕೊಟ್ಟು ಪ್ರಚಾರ ಕೆಲಸಮಾಡಿದರು. ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳನ್ನು ಕಂಡು ಗೋರಕ್ಷಣೆ ಕಾನೂನು ಮಾಡಲಿಲ್ಲವೆಂದೂ ಶಕ್ಷಣವೇ ಮಾಡಬೇಕೆಂದೂ ಶ್ರೀಮನ್ಮಹಾರಾಜರವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಗಿದೆ. ಕಮಿಟಿಯವರ ಅಭಿಪ್ರಾಯದ ಮೇರೆಗೆ ಕಾನೂನನ್ನು ಎಂದು ಮಾಡ ವರು ಎಂದು ಇದುವರೆಗೆ ಕಾದರೂ ಪ್ರಯೋಜನವಾಗಲಿಲ್ಲ. ಎಲ್ಲಾ ಗೋವುಗಳೂ ಸಂಹರಿಸಲ್ಪಟ್ಟನಂತರ ಕಾನೂನು ಮಾಡಿದರೂ ಪ್ರಯೋಜನವೇನಿದೆ?

ನಮ್ಮಸ್ಥಾನದ ಶ್ರೀಮನ್ಮಹಾರಾಜರವರು ತಮ್ಮ ರಜತೋತ್ಸವಕಾಲದಲ್ಲಿ ಮೂಕಪ್ರಾಣಿಗಳಲ್ಲಿರುವ ತಮ್ಮ ದಯೆಯನ್ನು ತೋರ್ಪಡಿಸಿರುವರು, ಈಗ ತಾನೆ ನಮ್ಮ ಸಹಾರಾಜರು ಯಾವರಾರೂ ಮಾಡಲಿರುವ ಮತ್ತು ಅತಿ ಕಠಿಣವಾದ ಕೈಲಾಸ ಯಾತ್ರೆಯನ್ನು ನಮಗಿಸಿಕೊಂಡು ವಾಪಸು ದಯಮಾಡಿಸಿರುವರು. ಇದೇ ಸಂದರ್ಭದಲ್ಲಿ ಗೋವಧೆಯನ್ನು ನಿಲ್ಲಿಸಿಬಿಟ್ಟರೆ ಗೋಮಾತೆಯನ್ನು ರಕ್ಷಿಸಿದ ಪುಣ್ಯಬರುವುದಲ್ಲದೆ ಅಚಂದ್ರಾರ್ಕವಾದ, ಸಂಸ್ಥಾನದ, ಬಹುಜನಗಳಿಂದ ಪೂಜೆಗೊಳ್ಳಲ್ಪಡುತ್ತಿರುವ ಮತ್ತು ಶ್ರೀಮನ್ಮಹಾರಾಜರವರಿಂದಲೇ ಪೂಜೆಗೊಳ್ಳಲ್ಪಡುತ್ತಿರುವ ಗೋಮಾತೆಯನ್ನು ಕಟುಕರ ಕತ್ತಿಯಿಂದ ತಪ್ಪಿಸಲು ಕಾನೂನನ್ನು ಆದಷ್ಟು ಜಾಗ್ರತೆಯಾಗಿ ಮಾಡಬೇಕಾಗಿ ಶ್ರೀಮನ್ಮಹಾರಾಜರವರನ್ನು ಅತ್ಯಂತ ನಮ್ರತೆಯಿಂದ ಪ್ರಾರ್ಥಿಸುವೆನು.

ಪ್ರಾಣಿದಯಾಜ್ಞಾನ ಕೆ. ಎ. ಶ್ರೀನಿವಾಸ ಶೆಟ್ಟಿ,
ಪ್ರಸಾರಕಸಂಘ, ದಾವಣಗೆರೆ ಗೌ॥ ಕಾರ್ಯದರ್ಶಿ.

ಹಾಸ್ಯತೋಷನಿಷತ್ತು.

(ಎಂ. ಜಿ. ಸಿ.)

ಓಂ. ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಓಂ॥ ಶಾಸ್ತ್ರಾ ಶಾಸ್ತ್ರಾ ಶಾಸ್ತ್ರಾ.

ಶಾಸ್ತ್ರಕ್ಕೆ ॥ ಸೊನ್ನೆಯಿಂದ ಸೊನ್ನೆಯನ್ನು ತೆಗೆದು ಹಾಕಿದರೆ ಸೊನ್ನೆ. ಸೊನ್ನೆಗೆ ಸೊನ್ನೆಯನ್ನು ಸೇರಿಸಿದರೆ ಸೊನ್ನೆ ಸೊನ್ನೆಯನ್ನು ಸೊನ್ನೆಯಿಂದ ಗುಣಿಸಿದರೂ ಸೊನ್ನೆ.

(ಶಾಂತಿ ಪಾಠ)

ಹರಿಃ ಓಂ ॥ ಈಶಾವಾಸ್ಯಮಿದಗಂ ಸರ್ವಂ ಯತ್ಕಿಂಚ ಜಗತ್ಯಾಂಜಗತ್ ।
ತೇನತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ ॥ ೧ ॥

ಶಾಸ್ತ್ರಕ್ಕೆ ॥ ಈ ಜಗತ್ತಿನಲ್ಲಿ (ಸ್ಥಾವರ) ಜಂಗಮಾತ್ಮಕವಾದದ್ದು ಏನೇನಿದೆಯೋ ಇದೆಲ್ಲವೂ ಈಶಾಂದ ಮುಚ್ಚಲ್ಪಡತಕ್ಕದ್ದು. ಆದುದರಿಂದ ತ್ಯಾಗದಿಂದ ಕಾಪಾಡಿಕೊಳ್ಳಬೇಕು. ಯಾರಧನವನ್ನೂ ಬಯಸಬೇಡ.

ಟೀ ॥ ಇಲ್ಲಿ ಸ್ಥಾವರ ಜಂಗಮ ಮೊದಲೆ ಚರಾಚರವಸ್ತುಗಳೆಂದರ್ಥ. ಈ ವಾಕ್ಯವು ಈಶಎಂದರೆ ಅಳುವವರ ಶಕ್ತಿಯನ್ನು ಮನಸ್ಸಿಗೆ ನಾಟುವಂತೆ ವಿಶದ ಪಡಿಸುತ್ತದೆ. ಚರವಸ್ತುಗಳೆಂದರೆ, ರೈಲು, ವಿಮಾನ ಮೊದಲಾದವುಗಳು. ಸ್ಥಿರವಸ್ತುಗಳೆಂದರೆ ಕೋಟೆ ಕೊತ್ತಲುಗಳು, ಬಟ್ಟೆನಲ್ಲಿ ಎಲ್ಲಾವಸ್ತುಗಳಿಗೂ ಎಲ್ಲರಿಗೂ ಒಡೆಯನಾಗಿರುವವನು; ಸಕಲಶ್ರಾಣಿಗಳನ್ನು ಆಳುತ್ತಿರುವನು.

ತ್ಯಕ್ತದಿಂದ ಎಂದರೇ ತ್ಯಾಗದಿಂದ; ತ್ಯಾಗದಿಂದ ನಿನ್ನನ್ನು ಕಾಪಾಡಿಕೋ. ಇಲ್ಲಿ ತ್ಯಾಗವೇನೆಂದರೆ- ನಾನಾವಿಧವಾದ ತೆರಿಗೆಗಳನ್ನು ಕೊಡುವುದು ಮನೆಯ ತೆರಿಗೆ, ನೀರಿನ ತೆರಿಗೆ ಆದಾಯ ತೆರಿಗೆ, ಪಾದಪೂಜೆಯ ತೆರಿಗೆ, ತಮೂಸೆಯ ತೆರಿಗೆ, ಇವೇ ಮುಂತಾದುವುಗಳು. ದೇವರು ಕೊಟ್ಟ ನೀರಿಗೆ ನಾವೇತಕ್ಕೆ ಕಂದಾಯ ಕೊಡಬೇಕು. ಎನ್ನಬಾರದೆಂದರ್ಥ.

ಏಕಂದರೆ, ತ್ಯಾಗವೇ ಆತ್ಮಜ್ಞಾನಕ್ಕೆ ಸಾಧನವು. ನಾವು ಎಷ್ಟೆಷ್ಟು ತೆರಿಗೆಗಳನ್ನು ಕೊಟ್ಟರೆ ಅಷ್ಟಷ್ಟು ತ್ಯಾಗಮಾಡಿದಂತಾಯಿತು. ಎಷ್ಟು ತ್ಯಾಗಮಾಡಿದರೆ ಅಷ್ಟು ಆತ್ಮಜ್ಞಾನ; ಆತ್ಮಜ್ಞಾನದಿಂದಲೇ ಮೋಕ್ಷ. ಆದುದರಿಂದ ಮೋಕ್ಷಕ್ಕೆ ಸಹಕಾರಿಯಾದ ಈ ತ್ಯಾಗದಿಂದ ನಿನ್ನ ಆತ್ಮವನ್ನು ಕಾಪಾಡಿಕೋ.

ಇದಕ್ಕೆ ಮತಾಂತರ ಪ್ರೋದುಂಟು, ನೋಡಿಕೋರು

ಪುದಾ ಕೇವಲ ವೇದಾಂತ ವಿಚಾರವೆಂದೂ, ಅದು ಸಾಮಾನ್ಯರಿಗೆ ಅರ್ಥವಾಗುವುದು ಕಷ್ಟವೆಂತಲೂ ಈ ಕೆಳಗೆ ಕೊಟ್ಟಿರುವ ಅಭಿಪ್ರಾಯವೇ ಒಳ್ಳೆಯದೆಂತಲೂ ಕೆಲವರು ಅನುಮೋದಿಸುವರು. ನಮ್ಮ ಸ್ನೇಹಿತರೊಬ್ಬರು ಇದನ್ನು ಕೇಳಿ ರೋಷಾವೇಶ ರಾಗಿ ಹೀಗೆ ಉಪನಿಷತ್ ವ್ಯಾಖ್ಯಗಳಿಗೆ ಅನರ್ಥಗಳನ್ನು ಕಲ್ಪಿಸುವವನ್ನು ಜಾತಿ ಭ್ರಷ್ಟರನ್ನಾಗಿ ಮಾಡಬೇಕೆಂದು ಹೇಳಿ, ಈ ಅಭಿಪ್ರಾಯದ ಕಡಿಗೆ ನೋಡುವುದುಮೂಡ ಬಹಳ ಪಾಪ ಮೆಂದು ಒತ್ತಿ ಹೇಳಿದರು. ಅದಾಗ್ಯೂ ನಾವು ಇಷ್ಟತ್ತೆಯ ಶತ ಮಾನದಲ್ಲಿರುವುದರಿಂದ ಈ ಮತವನ್ನೂ ಸಹ, ಕೇವಲ ಸಮದೃಷ್ಟಿಯಿಂದ ನೋಡತಕ್ಕದ್ದು. ಆದುದರಿಂದ ಅದನ್ನು ಇಲ್ಲಿ ಕೊಡಲಾಗಿದೆ.

ತ್ಯಾಗದಿಂದ ನಿನ್ನನ್ನು ಕಾಪಾಡಿಕೋ." ಇದು ಬಹಳ ಯುಕ್ತವಾದ ಚತುರತೆಯಮಾತು. ಇದರ ಜಾತ್ಯರ್ಥವೂ ಮಾಧುರ್ಯವೂ ಪ್ರತಿಯೊಬ್ಬ ಪ್ರಜೆಗೂ ತಿಳಿದೇ ಇರಬೇಕು. ಅದರಲ್ಲಿಯೂ ಚರಸ್ಥಿರ ಸ್ವತ್ತುಗಳಿದ್ದು ಕಂದಾಯಗಳನ್ನು ಕೊಡದೇ ತಪ್ಪಿಸಿಕೊಂಡವನಿಗೆ ಇನ್ನು ಚೆನ್ನಾಗಿಯೇ ತಿಳಿದಿರಬೇಕು. ಸ್ವಂ ತಿಯನ್ನು ಕೊಡದಿದ್ದರೆ, ಬಾಗಿಲಮುಂದೆಯೇ ಬರುತ್ತೆ ನೋಡಿರೆಸು. ಕದನರತರನಿನ್ನನ್ನೇ ಹಿಗ್ಗಟ್ಟುಮುಗ್ಗಟ್ಟು ಕಟ್ಟಿಸಿಕೊಂಡುಹೋಗಿ ನಾನಾವಿಧವಾಗಿ ಹಿಂಸಿಸಿ ಮನೆ ಮತವನ್ನೆಲ್ಲಾ ಹರಾಜು ಹಾಕಿ ತೆರಿಗೆಯನ್ನು ಬಿಡದೆ ವಸೂಲು ಮಾಡುತ್ತಾರೆ. ಆಗ ನಿನ್ನನ್ನು ಕಾಪಾಡುವರಾರು ?

[ಸಶೇಷ]

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೦೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೨೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೮೦—೦—೦	೨೫—೦—೦	೧೫—೦—೦	೫—೦—೦
ಎಂಟರಲ್ಲೊಂದು ಪುಟಕ್ಕೆ	೭೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7-30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು. ಸುಮಾರು ೩೫ ಕೋಟಿಜನಗಳಿಗೆ ಚನ್ನಾಗಿ ಪರಿಚಿತವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದುದು ದೇಶಾಭಿಮಾನಿಗಳ ಅಗತ್ಯಕರ್ತವ್ಯವಾಗಿದೆ ಭಾವೀ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯು ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲಬೇಕ್ಷೆಯುಳ್ಳವರು ಈಗಲೇ ಸೇರಬೇಕು

ನಮ್ಮಲ್ಲಿ ದೊರೆಯುವ ಪುಸ್ತಕಗಳು.

ಮಹಾತ್ಮ ಗಾಂಧಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ		ಕ್ರಯ
,,	ಒಂದನೆಯ ಭಾಗ	೦—೧೨—೦
,,	ಎರಡನೆಯ ಭಾಗ	೦—೧೨—೦
,,	ಮೂರನೆಯ ಭಾಗ	೦—೯—೦
,,	ನಾಲ್ಕನೆಯ ಭಾಗ	೧—೮—೦
,,	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರು ಬರೆದ " ಅನಾಸಕ್ತಿ ಯೋಗ "		೦—೨—೦

(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ.)

ಮಹಾತ್ಮ ಗಾಂಧಿ "	ಚಿಕ್ಕ ಪುಸ್ತಕ	೦—೧—೦
ರಾಷ್ಟ್ರೀಯ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor.		1—0—0
ಹಿಂದೀ ಬಾಲ ಬೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
,,	ನಂ ೨	೦—೨—೦
ಹಿಂದೀ ಸಹೇಲೀ ಪುಸ್ತಕ		೦—೮—೦
ದೂಸರೀ		೦—[illegible]—೦
ಮಜೇದಾರ ಕಹಾನಿಯಾ		೦—೨—೦
ಅನುವಾದಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ.

ಕರ್ನಾಟಕ ಕೇಸರಿ ಕಾರ್ಯಾಲಯ. ಬೆಳ್ಳಾರಿ.

ಪ್ರೇಮ ಚಿಕಿತ್ಸಾಲಯ.

ಕಿಷ್ಣಮಾಚಾರ್ಲು ರೋಡು ಬೆಳ್ಳಾರಿ.

[ಸೆಬ್ ಏಜೆಂಟರು.—ಝಾಂಡೆ ಫಾರ್ಮಕ್ಯೂಟಿಕಲ್ ವರ್ಕ್ಸ್ ಬೊಂಬಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನಮ್ಮಲ್ಲಿ ವಿದ್ಯುಚ್ಛಕ್ತಿ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ

ವಿ. ಎಂ, ಗಿರಿ ಅಂಡ್ ಸನ್ಸ್.

ಕೇಮಬೇದಿ ಬೆಳ್ಳಾರಿ.

ಏಜಂಟರು :- ಲೋಧ್ರಾ

(ಗರ್ಭಾಶಯ ರೋಗನಿವಾರಿಣಿ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳೂ ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾಗುವ ಚಿಲ್ಲರೆವಸ್ತುಗಳೂ, ಸ್ವೀಸನರಿ ಸಾಮಾರ್ಥಗಳೂ,ಸುಲಭ ಬೆಲೆಗೆ ದೊರೆಯುತ್ತವೆ.

FOR SALE

1 Boston hand Press :—

Prints 5 " × 8 "matter neatly, in good working order

Price moderate & reasonable.

2 New cyclostyle Machine:—

Used only Twice or thrice. Perfectly new

Price considerably cheap. Apply sharp:—

KARNATAKA KESARI. OFFICE

Bellary.

ಶ್ರೇಷ್ಠವಾದ ಮಿಷ್ ದಾರದ ಪುಂಡೆಗಳು.



ಈ ದಾರದ ಪುಂಡೆಗಳು ಫಿಟ್ಟಿಯಾಗಿಯೂ, ನಯವಾಗಿಯೂ, ಇರುವುದರಿಂದ ಮಿಷನ್ನಿನಲ್ಲಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳಿ, ಕಪ್ಪು, ಕಾಕಿ, ಮತ್ತು ಇತರ ರಂಗುಗಳಲ್ಲಿ ಅನೇಕ ಸೈಜಿನ ದಾರದ ಪ್ಯಾಕುಗಳು ಕಡಿಮೆ ಧಾರಣೆಗೆ ದೊರೆಯುತ್ತವೆ.

ದರ ಬರೆದು ತಿಳಿದುಕೊಳ್ಳಿರಿ

K. V. & Sons.
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್.
ತೇರು ಬೀದಿ ಬಳ್ಳಾರಿ

ದಿ ಎಂಪೈರ್ ಆಫ್ ಇಂಡಿಯಾ. ಲ್ಯಾಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈ ಕಂಪನಿಯ ಮುಖ್ಯ ಲಕ್ಷಣಗಳು

೧. ಅತಿ ಕಡಿಮೆ ಮಿಚ್ಚಸಿಂದ ನಡೆಯುತ್ತಿರುವ ಸಂಸ್ಥೆ.
೨. ಪೊಲಿಸಿದಾರರ ಹಣಕ್ಕೆ ತುಂಬ ಭದ್ರತೆಯುಳ್ಳದ್ದು.
೩. ಕಂಪೆನಿಯು ಬಂಡವಾಳವೆಲ್ಲ ಇಂಡಿಯನ್ ಟ್ರಸ್ಟ್ ಆಕ್ಟಿನಂದ ಮಂಜೂರಾದ ಸಂಸ್ಥೆಗಳಲ್ಲಿ ಹಾಕಿರುವುದು.
೪. ಪ್ರೀಮಿಯಂ ಮನೆ ದರದ ಬೇರೆ ಕಂಪೆನಿಗಳ ದರಕ್ಕಿಂತ ಕಡಿಮೆ.
೫. ಪೊಲಿಸಿಗಳ್ಳು ತೊಡಕಾದ ಶರತ್ತುಗಳಿಲ್ಲದೂ ಇಲ್ಲದೆ ಸರಳವಾಗಿರುವುದು
೬. ಹಣ್ಣಾದ ಪೊಲಿಸಿಗಳನ್ನು ಹೆಚ್ಚು ಖರ್ಚು ಇಲ್ಲದೆ ಉಜ್ಜೀವಿಸಿಕೊಳ್ಳಬಹುದು.
೭. ಕಂಪೆನಿಯ ಲಾಭದಲ್ಲಿ ಸೇಕಡಾ ೧೦೦ನ್ನು ಪೊಲಿಸಿದಾರರೊಳಗೆ ಹಂಚಲಿಕ್ಕಿರುವುದು.
೮. ಪೊಲಿಸಿಯು ಬೇಡವೆಂತ ಕಂಡು ಬಂದಾಗ ಕಂಪೆನಿಯಿಂದ ಕೊಡೋಣಾಗುವ ಪ್ರತಿಭಲವು ಬಹಳ ಉದಾರತರವಾದ್ದಾಗಿರುವುದು.
೯. ಪೊಲಿಸಿಯ ಪ್ರತಿಭಲವನ್ನು ಪಡೆಯುವ ಸಂದರ್ಭ ಬಂದಾಗ ಅಧ್ಯಂತರವಿಲ್ಲದೆ ಕೂಡಲೆ ಹಣವು ಸಿಕ್ಕುವುದು.

ಏಜಂಟ್:— ಎಂ. ವೆಂಕೋಬರಾವ್. ಬಿ. ಎ.
ಸತ್ಯನಾರಾಯಣ ಪೇಟೆ
ಬಳ್ಳಾರಿ.

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE,
& Commercial Agency.
Bangalore Road, Bellary.

Agents & dealers in:-
Wood-stock, Corona and other typewriters of all makes. Best Ribbons carbons, and Swadeshi fountain pens etc.

HOW TO LEARN TOUCH TYPE-WRITING IN 20 days
short hand a speciality.
(Seperate accommodation for lady students)
Job works & repairs undertaken on moderate charges

ಅರ್ಜಿಗಳನ್ನು ಕಳಿಸಿ ದರಪಟ್ಟಿ ಕೈಬಿಟ ಮಾಡಲಾಗುತ್ತಿ.

Prospectus sent free on application.

THE GRADUATES' TRADING ASSOCIATION,

General merchants, Gramaphone Dealers & News Agents

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್ ಗ್ರಾಮಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜಂಟ್ಸ್.

ತೇರು ಬೀದಿ ಬಳ್ಳಾರಿ

ARYA VAIDYALAYA BELLARY

Pandit C.S. Shastry's Patent Medicines — Money Refunded if not cured

1 FEVER KILLER.
Any fever completly cured in 4 days — 8 oz Bottle Rs 2—0—0

2 NAVAJEEVAN PAK.
King of Tonic foods (sweet) — 1 lb Rs 1—8—0

3 PRAMEHA BHANJINI
Gonorhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್. ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. ಗುಣವಿಲ್ಲದಿದ್ದರೆ ಹಣ ಹಿಂತಿರುಗಿಸುವೆವು

" ಜ್ವರ ಸಂಹಾರಿ. "
ಸಾಮಾನ್ಯ ಎಲ್ಲಾ ಜ್ವರಗಳು ನಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ. 2—0—0

ನವಜೀವನಪಾಕ
ಪೌಷ್ಟಿಕ ರಸಾಯನ — ಒಂದು ಪೌಂ ರೂ. 1—8—0

ಪ್ರಮೇಹ ಭಂಜಿನಿ
ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಪಾತ್ರಿ ಗುಣ ಹೊಂದುತ್ತದೆ. — ರೂ. 6—0—0

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಜೆತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯವಾದರೂ ಕಷ್ಟಸಾಧ್ಯವಾಗಿದ್ದವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ಗುಣಮಾಡಲ್ಪಡುತ್ತವೆ. ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO
AT SRI VIDYARANYA PRESS. BELLARY.

Registered No. M. 2736.

ಕರ್ನಾಟಕ ಕೇಸರಿ

ಪುಷ್ಕರ್ಮ ಕೃಷ್ಣ ಸ್ವರೂಪೋ । ಮದ್ಭಕ್ತಸ್ಸಂಗ ವರ್ಜಿತಃ ॥
ನಿರ್ವೈರಸ್ಸರ್ವ ಭೂತೇಷು । ಯಸ್ಸ ಪಾಮೇತಿ ಪಾಂಡವ ॥ ಗೀತೆ. ಅ. ೧೧ ಶ್ಲೋ -೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

ವಾರ್ಷಿಕ ಚಂದಾ
ಸ್ವದೆಶದವರಿಗೆ .... ೨—೮—೦
ಪರಸ್ವದೆಶದವರಿಗೆ .... ೩—೦—೦

ಸಂಪಾದಕ
ಟೀಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.
(ಬಿಡಿ ಪತ್ರಿಕೆ ೦—೧—೦)

ಆರು ತಿಂಗಳಚಂದಾ.
ಸ್ವದೆಶದವರಿಗೆ .... ೧—೮—೦
ಪರಸ್ವದೆಶದವರಿಗೆ .... ೧—೧೩—೧

ವರ್ಷ ೧ ಬಳ್ಳಾರಿ ನಗರ.—ನವಂಬರ್ ೩೩ ನೇ ಸೋಮವಾರ ೧೯೩೧ ಸಂಚಿಕೆ ೬

ಜಿಜ್ಞಾಸವಿಲ್ಲದೆ ಜ್ಞಾನವುಂಟಾಗುವುದಿಲ್ಲ.

ದುಃಖವಿಲ್ಲದೆ ಸುಖವು ದೊರಕುವುದಿಲ್ಲ.

ಧರ್ಮ ಸಂಕಟವೂ, ಹೃದಯಮಂಥನವೂ, ಎಲ್ಲಾ ಜಿಜ್ಞಾಸುಗಳಿಗೆ

ಒಂದೇಬಾರಿ ಒದಗೇ ಒದಗುತ್ತವೆ.

ಮೋಹಪರವಶನಾದ ಮನುಷ್ಯನು ಅಧರ್ಮವನ್ನು ಧರ್ಮವೆಂದೆಣಿಸುತ್ತಾನೆ.

ಮೋಹದಕಾರಣ ಮನುಷ್ಯನು ತನ್ನದು, ಪರರದು ಎಂಬ ಭೇದವನ್ನು

ಮಾಡುವನು.

ಮನುಷ್ಯನು ಪುರುಷಾರ್ಥಕ್ಕೆ ಮಾತ್ರ ಅಧಿಕಾರಿಯು, ಪರಿಣಾಮಕ್ಕಲ್ಲ.

ಆದುದರಿಂದ ಅವನು ತನ್ನ ಕರ್ತವ್ಯವನ್ನು ನಿಶ್ಚಯಿಸಿ, ನಿಶ್ಚಿಂತೆಯಿಂದ,

ಅದರಲ್ಲಿ ತೊಡಗಿರಬೇಕು.

[ಮಹಾತ್ಮ ಗಾಂಧಿಯವರ ಅಹಿಂಸಾಶಕ್ತಿಯೊಗ.]

ಕಿಲೋಸ್ಕರ ಬಂಧುಗಳಿಗಾಗಿ ಕಾದಿಡಲ್ಪಟ್ಟಿದೆ.

ರಿಜಿಸ್ಟರ್ಡ್

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ವನಸ್ಪತಿ ಯುಕ್ತ

ನರ್ವ್ಹಸ್ಟ್ರೆಂಥಿಂಗ್ ಪಿಲ್ಸ

ಅರ್ಥಾತ

ಬಲವಂತ ಗುಟಿಕಾ.

ಈ ಗುಳಿಗೆಗಳಿಂದ ರಕ್ತ ಶುದ್ಧಿ, ಧಾತು ಪುಷ್ಟಿಯಾಗುವದು, ಕಾರ್ಯೋತ್ತೇಜಕ ನಾಗಿ ನಪುಂಸಕತ್ವವು ನಾಶವಾಗುವದಲ್ಲದೆ ಖರೇ ರತಿಸುಖವನ್ನು ಅನುಭವಿಸಲಿಕ್ಕೆ ಬರುತ್ತದೆ ಪಾಗೂ ಉಷ್ಣದ ರೋಗಗಳೆಲ್ಲ ಗುಣವಾಗುತ್ತವೆ. ಮತ್ತು ಅನ್ನಸೆ ಚನವಾಗಿ ಹಸಿವು ಜಾಸ್ತಿಗಿ ಆಗುತ್ತದೆ ಶೌಚ ಸಾಫ ಆಗುವದು ಇದು ಅಲ್ಲದೆ ವಾತ, ಪಿತ್ತ, ಕಫ, ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯೂ ಹೋಗುವವು. ಪೂರ್ಣ ಗುಣಕ್ಕೆ ೩ ಡಬ್ಬಿ ತಕೊಳ್ಳಿರಿ. ಒಂದು ಡಬ್ಬಿ ಕಿಮ್ಮತ್ತು ೧೦ ಆಣಿ ೩ ಡಬ್ಬಿ ಕಿಮ್ಮತ್ತು ೧—೨—೦ ಒಂದುಡಜನು ಕಿಮ್ಮತ್ತು ೬ ರೂ. ಇವಲ್ಲದೆ ಒಂದು ಡಬ್ಬಿ ಕಮೀಶನ ಸಿಗುವದು ಟಪಾಲು ಪ್ಯಾಕಿಂಗ ಖರ್ಚು ಬೇರೆ ಬೀಳುವದು. ಏಜಂಟರ ನಿಯಮ ತರಿಸಿಕೊಳ್ಳಿರಿ. ಬಾಕಿ ರೋಗದ ಬಗ್ಗೆ ವಿಶೇಷ ಖುಲಾಸ ಡಬ್ಬಿ ಸಂಗಡ ಇದ್ದ ಅನುಸಾನ ಪತ್ರದಲ್ಲಿ ಇರುತ್ತದೆ. ಅರಕ್ತತೆ ಮತ್ತು ಉಷ್ಣತೆಯ ರೋಗದ ಮೇಲೆ ಸ್ತ್ರೀಯರಿಗೆ ಮತ್ತು ಹುಡುಗರಿಗೆ ಸಹ ಈ ಗುಳಿಗೆಗಳು ಬಹಳ ಉಪಯೋಗ ಬಿರುತ್ತವೆ.

ಎಸ್. ಬಿ. ಕದಮ್ ಮತ್ತು ಸನ್,

ಮು, ಪೋಸ್ಟ—ವಿಸ್ಪಾಣ [ಜಿ. ಬೆಳಗಾಂವ.]

ಸೋಲ ಏಜಂಟ - ಶ್ರೀ ಹನುಮಾನ ಏಜನ್ಸಿ ಮುಂಬಯಿ ಸಕೇಳ.

ಶ್ರೀ **ಶುದ್ಧಖಾದಿ** **ಕೈ ಸೂಲು ಕೈ ಮಗ್ಗದಲ್ಲಿತಯಾರಾದ** **ಅಗ್ಗ ಖಾದಿ** **ಶ್ರೀ**

(ಖಾದಿಯ ಸುಖಕ್ಕಾಗಿ ಸಮೀಕ್ಷಿಸಿರಿ)

ಅನ್ನವಿಲ್ಲದೆ ಕೊರಗುತ್ತಿರುವ ಕಡುಬಡವರಿಗೆ ನೀವು ವಸ್ತ್ರವು, ಊಟವನ್ನು ಕೊಟ್ಟು ಪುಣ್ಯ ಕಟ್ಟಿಕೊಳ್ಳ ಬೇಕೆಂದು ಆಪೇಕ್ಷಿಸುವುದಾದರೆ, ಶುದ್ಧ ಖಾದಿಯನ್ನೇ ಧರಿಸಿರಿ ! ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು ವಗೈರೆ ದೊಡ್ಡ ದೊಡ್ಡ ಮನುಷ್ಯರ ಚಿತ್ರಗಳನ್ನು ಮಿಲ್ಲು ಬಟ್ಟೆಗಳ ಮೇಲೆ ಹಾಕಿ ಮೋಸ ಮಾಡುತ್ತಿರುವರು. ಅಲ್ಲದೆ ಮಿಲ್ಲಿನ ಒರಟು ಬಟ್ಟೆಗಳನ್ನು ಖಾದಿಯೆಂತ ಮಾರುತ್ತಿರಿ ನೀವು ಮೋಸ ಹೋಗ ಬೇಡಿರಿ. ನಮ್ಮಲ್ಲಿ ಇಂದು ಸೆಲ ಇದುಪರೀಕ್ಷಿಸಿ ತೆಗೆದು ಕೊಳ್ಳಿರಿ

ಖಾದಿ ಕೋ ಆಪರೇಟಿವ್ ಸೊಸೈಟಿ.

ಬ್ರಾಹ್ಮಣರ ಬೀದಿ

ಬೆಳ್ಳಾರಿ.

TO LET

ಸಂಪಾದಕೀಯ ವಿಚಾರಗಳು.

ಕರ್ನಾಟಕ ಪ್ರಾಂತ ರಚನೆ.

ಲಂಡನ್ ಪರಿಷತ್ತಿಗೆ ಸಭ್ಯರಾಗಿ ಹೋಗಿರುವ ಶ್ರೀ ಬಿ. ಶಿವರಾಯರು ಹಿಂದೂಸ್ತಾನ ಸರ್ಕಾರದ ಸಹಾಯ ಕಾರ್ಯದರ್ಶಿಗಳಾದ ಲಾರ್ಡ್ ಲೋಥಿಯನ್ ರವರಿಗೆ, ಕರ್ನಾಟಕ ಪ್ರಾಂತ್ಯ ರಚನೆಯ ವಿಷಯದಲ್ಲಿ, ಗಭೀರಕರಸಲ್ಪಟ್ಟ ಎಲ್ಲಾ ವಿಷಯಗಳನ್ನೊಳಗೊಂಡ ಒಂದು ವರದಿಯನ್ನೊಪ್ಪಿಸಿದರು. ಲಂಡನ್ನಿನಲ್ಲಿರುವ ಆಂಧ್ರ ಪ್ರಮುಖರ ಸಭೆ, ಆಂಧ್ರ ಪ್ರಾಂತ ರಚನೆಯ ವಿಷಯಕ್ಕೆ ಲಾರ್ಡ್ ಲೋಥಿಯನ್ರವರೊಡನೆ ಚರ್ಚಿಸಿದರು.

ನೂತನ ರಾಜಕೀಯ ಘಟನೆಯಲ್ಲಿ ಪ್ರಾಂತಿಕ ಭಾಷೆಯನ್ನನುಸರಿಸಿ, ಪ್ರಾಂತ ರಚನೆಯನ್ನು ಮಾಡುವುದು ಅಗತ್ಯವೂ, ಅವಶ್ಯಕವೂ ಆಗಿದೆ. ಕೇಂದ್ರ ಪ್ರಭುತ್ವವು ನಿರ್ಣಯವಾಗಿ, ಅಮಲಿಗೆ ಬರುವ ಸಮಯದಲ್ಲೇ, ಪ್ರಾಂತ ರಚನೆಯಾಗುವುದೂ, ಕೂಡ ಕ್ರಮವಾದ ಪದ್ಧತಿಯಾಗಿದೆ

ಹಿಂದೂದೇಶದ ಯಾವಭಾಗದಲ್ಲಿರುವ ಜನರಾಗಲೀ ತ್ರಿಕ ವ್ಯತಿರಿಕ್ತದಿಂದ, ತಮ್ಮ ಭಾಷಾವಿಧಜನೆಗನುಸಾರವಾಗಿ ತಮಗೆ ಪ್ರತ್ಯೇಕ ಪ್ರಾಂತ ವಿರಬೇಕೆಂತಲೂ ಸರ್ಕಾರ ಪ್ರಾಂತ ಪ್ರಭುತ್ವದ ಎಲ್ಲಾ ಖರ್ಚುಗಳನ್ನು ತಾವು ವಹಿಸುವರೆಂತಲೂ, ಒಪ್ಪುವುದಾದರೆ, ಅವರಿಗೆ ಪ್ರಾಂತವನ್ನು ಏರ್ಪಡಿಸಲು ಅವ್ಯಂತರವಿರಬಾರದು ಭಾಷಾ ಸಂಸ್ಕೃತಿ, ರಾಷ್ಟ್ರೀಯ ಭಾವನೆ ವ್ಯಾಪಾರ ಸುಧಾರಣೆ, ಸಮಾಜೋನ್ನತಿ ಮುಂತಾದ ಶುಭಕಾರ್ಯಗಳು, ದೇಶದ ವಾತಾವರಣವನ್ನವಲಂಬಿಸಿ, ಅವುಗಳ ಅಭಿವೃದ್ಧಿಯಾಗುವುದಕ್ಕಾಗಿ ಭಾಷೆಯನ್ನವಲಂಬಿಸಿದೆ ಪ್ರತ್ಯೇಕಪ್ರಾಂತಗಳಾದವಾಸ್ತವಕ್ಕೆ ಏಕಮತ್ಯಕ್ಕೆ ಕುಂದು ಬರುವುದೆಂದು ಹೇಳುವುದು ಸತ್ಯ ವಿರುದ್ಧವಾಗುವುದು, ಏಕಕ್ಕೆಂದರೆ ಭಿನ್ನವಾದ ಪ್ರಾಂತಿಕ ಭಾಗಗಳು ಒಂದಾಗುವುದೆಂದರೆ ವಿವಿಧ ಸಂಸ್ಥೆಗಳು ಏರ್ಪಾಡಾದಂತಾಗಿ, ರಾಷ್ಟ್ರೀಯ ಕೆಲಸವು ಸುಂದರ ಸಾಗಲಿಕ್ಕೆ ಅನುಕೂಲವಾಗುವುದು. ಸಹೋದರ ಭಾವವು ಬೆಳೆಯುವುದು

ಆದುದರಿಂದ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ತಮಿಳು, ಉತ್ಕಳ,ಮುಂತಾದಪ್ರಾಂತಗಳ ರಚನೆಯಾಗಬೇಕಾದುದು ದೇಶ ಕಲ್ಯಾಣಕ್ಕೆಂದು ಭಾವಿಸಬೇಕು.

ಕರ್ನಾಟಕ ಪ್ರಾಂತ.

(ಮೈಸೂರು ದೇಶವು ಇದಕ್ಕೆ ಸಂಬಂಧಿಸಿಲ್ಲ.)

ವಿಸ್ತಾರ	35,408 ಚದರಮೈಲಿ
ಜನಸಂಖ್ಯೆ	63,57,762
ಆದಾಯ	2,57,99,383 ರೂ, ಗಳು
ಖರ್ಚು	2,09, 19,367

ದೇವತೆಗಳ ಮುಂದೆ ಪ್ರಾಣವಧೆ.

ಅಹಿಂಸಾ ಸಂಘಿಗಳು, ದೇವಸ್ಥಾನಗಳಮುಂದೆ ಪ್ರಾಣವಧೆಯನ್ನು ನಿಲ್ಲಿಸಲು, ಸುಮಾರು 10 ವರ್ಷಗಳಿಂದಲೂ ಅವಿಶ್ರಾಂತ ಶ್ರಮವನ್ನು ವಹಿಸಿ ತಮ್ಮ ನಿರ್ಗಳವಾದ ಪ್ರಾಣಿದಯೆಯನ್ನು ವ್ಯಕ್ತ ಪಡಿಸುತ್ತಲಿರುವುದು ಜನಜನಿತ ವಿಷಯವಾಗಿದೆ.ಪಾವಣಗೆರೆಯ ಪ್ರಾಣಿದಯಾ ಸಂಘದವರು, ತಮ್ಮ ಖರ್ಚಿನಿಂದಲೇ ಪರಸ್ಥಳಗಳಿಗೆ ಹೋಗಿ ಚಿತ್ರಿತ ಕರಪತ್ರಗಳನ್ನೂ, ದಯಾ ಸಂಘದ ಪುಸ್ತಕಗಳನ್ನೂ ಪುಕಟ್ಟೆ ಹಂಚಿ, ತಮ್ಮ ಹೃದಯದಾಳವಿಕ ಭಾಷಣಗಳಿಂದ ಜನರ ಕಲ್ಲಿನಂಥಾಮನಸ್ಸುಗಳನ್ನೂ ಕರಗಿಸಿದ್ದಿರುವರು. ಈ ಏಳು ವರ್ಷಗಳ ಸತತ ಪ್ರಚಾರದಿಂದ ನೂರಾರು ಹೆಣ್ಣಿಗಳಲ್ಲಿ, ಸಾತ್ವಿಕ ಜಾತ್ರೆಯು ಒಂದು ಪ್ರಾಣಿಯ ವಧೆಯೂ ಇಲ್ಲದೆ ನಡೆಯುವುದು. ಗದಗ, ಹುಬ್ಬಳ್ಳಿ, ತುಮಕೂರು, ಗೋಕಾಕ, ಬೆಂಗಳೂರು, ಮತ್ತು ಮೈಸೂರುಗಳಲ್ಲಿರುವ ಜೀವದಯಾ ಮತ್ತು ಗೋರಕ್ಷಣ ಸಂಸ್ಥೆಯವರು, ಇಡೀ ಕರ್ನಾಟಕದಲ್ಲೇ ಪ್ರಚಾರವನ್ನು ಸಾಗಿಸಿರುವರು

ಆಂಗ್ಲೇಯರು ಮಾಂಸಹಾರಿಗಳಾಗಿ, ಪ್ರಾಣಿವರ್ಗದಲ್ಲಿ ಅವರಿಗೆ ದಯಾ ದಾಕ್ಷಿಣ್ಯಗಳಿಲ್ಲವೆಂಬ ಭಾವನೆಯು ನಮ್ಮಲ್ಲಿಸ ಚಲಿತವಾಗಿದೆ ಅವರಲ್ಲಿಯೂ ಕೂಡ ಕೆಲವರು ಮೃದು ಮನಸ್ಕರಾಗಿದ್ದು, ಹಿಂಸೆಯೆಂದರೆ ಹೇಸುವವರೂ, ಇದ್ದಾರೆಂಬುದನ್ನು ನಾವು ಕುರಿಯ ಬಾರದೆ. S. P, C A. ಎಂಬ ಹಿಂಸಾ ನಿಷೇಧಕ ಸಂಸ್ಥೆದ ಅಧ್ಯಕ್ಷರಾದ ಜಸ್ಟಿಸ್ ಜಾಕ್ಸನ್ ಐ. ಸಿ. ಎಸ್ ಎಂಬ ಸುಹೃದಯರು, ಸರ್ಕಾರದ ಅಧಿಕಾರಿಗಳಿಗೂ, ಸರ್ವ ಜನಗಳಿಗೂ, ಒಂದು ಮನವಿ ಮಾಡಿ ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿದ್ದಾರೆ. " ಧರ್ಮ ಮಿತ್ರ ಮತದ ಪದ್ಧತಿ " ಯೆಂದು ಕೆಲಬರು ಪ್ರಾಣಿಗಳನ್ನು ಅನಿಷ್ಟವೂ, ಅಸಹ್ಯವೂ ಅದರಂತಿಯಲ್ಲಿ ಕೊಲ್ಲುವುದನ್ನು ಅಮಹನೀಯರು ವಿವಿಧ ರೀತಿಯಲ್ಲಿ ವರ್ಣಿಸಿ, ಇದನ್ನು ನಿಲ್ಲಿಸಲು ಮೇಲಧಿಕಾರಿಗಳನ್ನೂ, ಪುರಸಭೆಯವರನ್ನೂ ಬೇಡಿದ್ದಾರೆ ಮಾರಿ ಜಾತ್ರೆಗಳಲ್ಲಿಯೂ, ಹಬ್ಬಗಳಲ್ಲಿಯೂ, ಯಾವ ಪ್ರಾಣಿಗಳು, ಯಾವರೀತಿಯಲ್ಲಿ ಕೊಲ್ಲಲ್ಪಡುವುದೆಂಬುದನ್ನು ಹಿಂದೂಗಳೆಲ್ಲಾ ಕಣ್ಣಾರೆ ನೋಡಿದ್ದಾರೆ ಕಾಳೀದೇವಸ್ಥಾನದ ಬಲಿಯಿಂದ ಮಿಸ್. ಮೇಯೋರವರ ಪುಸ್ತಕದಲ್ಲಿ, ನಾವು ಅನಾಗರೀಕರಾದ ಒರಟರೆಂಬುದು ಪ್ರತಿಪಾದಿತವಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಕ್ರೂರ ಹತ್ಯೆಯನ್ನು ಇನ್ನು ಮುಂದೆ ಪುರಸಭೆಯವರಾಗಲೀ ಗಮನಿಸಬೇಕು.

ಹೆಣ್ಣಿ ಉಪಾಧ್ಯಾಯರ ಕರ್ತವ್ಯ.

ಉಪಾಧ್ಯಾಯನ ಜೀವನವು, ದೈನ್ಯ ಮತ್ತು ಸಾಧಾರಣಗಳಿಂದ ಯುಕ್ತವಾಗಿ, ದರಿದ್ರ ನಾರಾಯಣನಸ್ನೇಹವನ್ನು ಸಂಪಾದಿಸಿರುವುದು. ಮುಂದಿನ ನಾಗರೀಕರಲ್ಲಿ ನಿಜವಾದ ಮನುಷ್ಯತ್ವವನ್ನು ಬೆಳೆಸಿ, ಪ್ರಪಂಚದ ಸಾಮಾಜಿಕ, ನೈತಿಕ ಆರ್ಥಿಕ ಸುಧಾರಣೆಗಳಲ್ಲಿ ಸಹಾಯವನ್ನೀಯಲು; ಆಳರವಾದ 'ವಿದ್ಯೆ' ಎಂಬ ಅಮೂಲ್ಯ ಶಿಕ್ಷಣವು 'ಉಪಾಧ್ಯಾಯ' ನೆಂಬ ಸಾಧನ ವಿಲ್ಲದೆ, ಸಾಗಲಾರದು. ಪಾಶ್ಚಿಮಾತ್ಯ ದೇಶಗಳಲ್ಲಿ ಉಪಾಧ್ಯಾಯರಿಗೆ ಬಹಳ ಗೌರವವು ಇದೆ; ಅಲ್ಲದೆ ಅವರಿಗೆ ತಮ್ಮ ಮಾಸಿಕ ವೇತನಗಳಿಂದ ಸುಖಜೀವನವು ನಡೆಯುವುದು. ಆದರೆ ನಮ್ಮ ದೇಶದಲ್ಲಾದರೋ, ಎಲ್ಲವೂ ಇದರವಿರುದ್ಧವೇ! ಅಲ್ಪಸಂಬಳ, ಹೆಚ್ಚಿನ ಕೆಲಸ, ಗೌರವವಿಲ್ಲ. ಅಧಿಕಾರಿಗಳ ದರ್ಪಕ್ಕೂ, ಕೋಪಕ್ಕೂ ಹೊಣೆ, ಸಿಕ್ಕಿದಕಡೆ ವರ್ಗಾವಗಿ. ಅಧಿಕಾರಿಗಳನ್ನು, ಇಂದ್ರ, ಚಂದ್ರ, ದೇವೇಂದ್ರರೆಂದು ಸೇವಿಸಿದರೆ, ಶೀಘ್ರ ಬಡ್ತಿ, ಇಲ್ಲದಿದ್ದರೆ ಶಾಲೆಯ ಬಡ್ತಿ. ಹಾಗೂಹೀಗೂ, ಬಡಉಪಾಧ್ಯಾಯನು ಸಾಂಸಾರಿಕ ತಾಪತ್ರಯಗಳೊಂದಿಗೆ, ಊರಿನ ಪಾರ್ಟೀ ವ್ಯಾಜ್ಯಗಳಲ್ಲಿ ಸಿಕ್ಕು, ಅಧಿಕಾರಿಗಳ ಕೋಪಕ್ಕೊಳಗಾಗಿ ಸಂಕಟ ಪಡಬೇಕಾಗಿದೆ.

ಆತ್ಮಸಂತೋಷಿಯೂ, ಶಾಂತಮನಸ್ಕನೂ ಆದ ಉಪಾಧ್ಯಾಯನಿಂದ ಲೋಕೋದ್ಧಾರವಾಗುವುದು. ಅಸಂತೋಷಿಯೂ, ಅಶಾಂತಮನಸ್ಕನೂ, ಸಾಂಸಾರಿಕ, ವ್ಯವಹಾರಿಕ, ತಾಪತ್ರಯಗಳಲ್ಲಿ ತೊಳಲಿಬಳಲುವನೂ, ಆದ ಉಪಾಧ್ಯಾಯನಿಂದ, ಬಾಲಕರು ಸುಶಿಕ್ಷಣೆಯನ್ನು ಪಡೆಯುವುದೊಂದೆಯಲ್ಲಿರಲಿ, ಪ್ರಪಂಚದ ವಿದ್ಯಾವೃಕ್ಷದ ಬೆಳವಣಿಗೆಗೆ ಇಂದುಬರುವುದು.

ಮುಂದಿನ ರಾಜ್ಯಾಂಗ ಪದ್ಧತಿಯು ಬಂದು ಉಪಾಧ್ಯಾಯರ ಜೀವನವು ಸುಧಾರಿಸುವವರೆಗೂ, ಅವರು ದೇಶಾಭ್ಯುದಯದೃಷ್ಟಿಯಿಂದ ಈ ಕೆಳಗಿನ ಪ್ರಾಮುಖ್ಯ ಸೂಚನೆಗಳನ್ನು ಮನ್ನಿಸವರಿಲಾರರೆಂದು ಆಶಿಸುತ್ತೇವೆ

1)ತಮಗೆ ಬರುವ ಅಲ್ಪವಾಸಿಕವೇತನದಲ್ಲಿಯೇ ತೃಪ್ತರಾಗಿ, ಶಿಕ್ಷಣವೃತ್ತಿಯ ಗೌರವವನ್ನು ಪ್ರಾಮಾಣಿಕರೀತಿಯಿಂದಲೂ' ಶ್ರದ್ಧಾ, ಭಕ್ತಿಗಳಿಂದಲೂ, ಕಾಪಾಡಬೇಕು ತಮಗಿರುವ ಕಾಂಕ್ಷೆ, ಕೊರತೆಗಳಿಂದ ಲೋಕ, ಅಥವಾ ವೇಲಧಿಕಾರಿಗಳ ವರ್ತನದಿಂದಲೋ ಸಂಕುಚಿತ ದೃಷ್ಟಿಯುಳ್ಳವರಾಗಿ, ಉಪದೇಶ ಕಾರ್ಯದಲ್ಲಿ ವಂಚ್ಚು ಮರೆಯಬಹುದು

2)ನ್ಯಾಯವೂ, ಧರ್ಮವೂ, ಆದವಿನಯಗಳಲ್ಲಿ ಧೈರ್ಯದಿಂದ ಪ್ರವರ್ತಿಸುತ್ತಾ, ಮೇಲಧಿಕಾರಿಗಳಿಗೆ ಸಲಿಕ್ಕ ಸಲಹೆಗಳನ್ನು ಕೊಡುವುದರಲ್ಲಿ ಹಿಂಜರಿಯ ಬಾರದು.

3) ಬಾಲಕರನ್ನು ಪುತ್ರವತ್ ಪ್ರೇಮದಿಂದ ಪ್ರೀತಿಸುತ್ತಾ, ಅವರು ಕೇಳುವ ಪ್ರಶ್ನೆಗಳಿಗೆಲ್ಲಾ ಸಮತ್ತರಗಳನ್ನು ಬೇಜಾರಿಲ್ಲದೆ ಕೊಡಬೇಕು..

4)ಅವರ ಮನೋ ಭಾವನೆಗಳಲ್ಲಿ ಉದಾತ್ತ ಧ್ಯೇಯಗಳನ್ನು ಕಲ್ಪಿಸಲನುಕೂಲವಾಗುವ ಭೂಮಿಯನ್ನು ಕಲ್ಪಿಸಬೇಕು. ಧೈರ್ಯ, ಸಾಹಸ, ಸ್ವದೇಶಾಭಿಮಾನ, ಮತ್ತು ಪರಮತ ಸಹಿಷ್ಣುತೆ ಮುಂತಾದ ಸದ್ಗುಣಗಳು ಪ್ರಜ್ವಲಿತ ರೀತಿಯಲ್ಲಿ ಹುಟ್ಟಲು, ಪ್ರಾಚೀನ, ಆಧುನಿಕ ಉದಾಹರಣೆಗಳನ್ನು ಕೊಡುತ್ತಾ, ಚಿತ್ರಗಳನ್ನು ಉಪಯೋಗಿಸಬೇಕು.

5) ಇತರ ಪರ ಸಾಧನೆಗನುಕೂಲವಾದ, ಈ ಶಿಕ್ಷಣವೃತ್ತಿಯು ಪವಿತ್ರತೆಯನ್ನು ತೊಂದಬೇಕೆಂಬ ದೃಷ್ಟಿಯಿಂದ ಉಪಾಧ್ಯಾಯರು ತಾವೇಉದಾಹರಣೆಗಳಾಗಿ ಪರಿಣಮಿಸಬೇಕು. ಅಂದರೆ ದುಶ್ಚಟಗಳನ್ನು ಬಿಡಬೇಕು,

ಪ್ರಾಂತಿಕ ಸ್ವರಾಜ್ಯವೂ, ಮಿ॥ ಗಾಂಧಿಯವರೂ

ಬ್ರಿಟಿಶ ಸರಕಾರದವರು ಗೊತ್ತುಪಡಿಸಿದ ಪ್ರಾಂತಿಕ ಸ್ವರಾಜ್ಯದ ಧೋರಣೆಗೆ ಮ. ಗಾಂಧಿಯವರು ತಮ್ಮ ಸಮ್ಮತಿಯನ್ನು ಕೊಟ್ಟಿರುವರೆಂದೂ, ಕೇವಲ ಸರ ತೇಜಬಹಾದ್ದೂರ ಸಪ್ರೂ, ನಾ. ಶಾಸ್ತ್ರಿ ಮತ್ತು ಇನ್ನಿತರ ಕೆಲವು ಮುಂವಾಳುಗಳೂ ಕೂಡ ಅವರ ಮತಭೇದವಾಗಿರುವರೆಂದೂ, ಪ್ರಕಟಿಸಲ್ಪಟ್ಟ ಸುದ್ದಿಯು ನಿರಾಧಾರವಾದುದೆಂದೂ, ಮತ್ತು ಇದಕ್ಕೆ ತಮ್ಮ ಸಮ್ಮತಿಯು ಇಲ್ಲವೆಂದೂ,ಈ ಸುದ್ದಿಯು ವಿಪರ್ಯಸ್ತವಾದುದೆಂದೂ ಮದ್ರಾಸದ ಹಿಂದೂ ಪತ್ರಿಕೆ ಮಹಾತ್ಮರು ತಂತೀ ಕಳಿಸಿರುವರು.

ಸೂಚನೆ—: ಭಾನುವಾರ (29—11—31) ಸಾಂಬಮೂರ್ತಿ ಮೈದಾನದಲ್ಲಿ ಪ್ರಾತಃಕಾಲ, ಮಾಸಿಕ ಧ್ವಜವಂದನೆಯು ಯಥಾ ಪ್ರಕಾರ ನಡೆಯುವುದು, ಎಲ್ಲರೂ ಭಾಗತೆಗೆದು ಕೊಳ್ಳಲು ವಿನಂತಿ

(ಕಾರ್ಯದರ್ಶಿ)

ಸೈನ್ಯ

ಸಂಯುಕ್ತ ಕಮಿಟಿಯಲ್ಲಿ ಸೈನಿಕ ವಿಷಯಗಳ ಮೇಲೆ ಚರ್ಚೆಯುನಡೆದಾಗ ಕಾಂಗ್ರೆಸ್ ಧ್ಯೇಯಗಳಿಗೂ, ಮಿತವಾದಿಗಳಾದ ಶ್ರೀ ಸಪ್ರು, ಶಾಸ್ತ್ರಿ, ಜಯಕರರ ಧ್ಯೇಯಗಳಿಗೂ ಎಷ್ಟು ವ್ಯತ್ಯಾಸವಿದೆಯೆಂಬುದು ಪೂರ್ಣ ವ್ಯಕ್ತವಾಯಿತು ಸೈನಿಕ ವ್ಯವಹಾರಗಳು ಗೌರ್ನರ್ ಜನರಲ್ ರವರ ಅಧೀನವಾಗಿರುವುದು ಸರಿಯಾದುದೆಂತಲೂ, ಕೇಂದ್ರಸಭೆಯ ಪ್ರತಿನಿಧಿಗಳಿಗೊಳಪಡುವುದು ಅಸಮ್ಮತವೆಂತಲೂ, ಮಿತವಾದಿಗಳು ವಾದಿಸಿದರು ಈವಿಷಯದಲ್ಲಿ ಭಾರತೀಯರು ಜವಾಬ್ದಾರಿಯನ್ನು ಹೊರುವುದು ಅನವಶ್ಯವೆಂತಲೂ ಸೂಚಿಸಿದರು.

ಕಾಂಗ್ರೆಸ್‌ನಿರ್ಣಯಗಳನ್ನು ಮಹಾತ್ಮರು ನಿರ್ಘಾಯದಿಂದ ಸ್ಪಷ್ಟವಾಗಿ ಪ್ರತಿಪಾದಿಸುತ್ತಾ, ಸೈನಿಕ ವ್ಯವಹಾರಗಳ ಜವಾಬ್ದಾರಿಯು ಭಾರತೀಯರಿಗಿಲ್ಲದಿದ್ದರೆ ಜವಾಬ್ದಾರೀ ಪ್ರಭುತ್ವವೆಂದು ಯಾವುದಕ್ಕೆ ನಾವು ಧೇಯ ಮಾಡಿರುವರೋ, ಆ ರಾಜ್ಯವು, ವಾಸ್ತವರೀತಿಯಲ್ಲಿ ಅಧೀನ ಪ್ರಭುತ್ವವೆನ್ನಲ್ಪಡಲು ಯಾವ ಸಂಶಯವೂ ಇಲ್ಲವೆಂದರು ರಾಷ್ಟ್ರವನ್ನು ಕಾಪಾಡುವ ಸಾಧನೆಯು, ಹಿಂದೀಯರಾದ ನಮ್ಮ ಕೈಯ್ಯಲ್ಲಿಲ್ಲದಿದ್ದರೆ ಅದು ಆತ್ಮವಂಚನೆಯಾಗುವುದೆಂದು ಅವರ ಅಭಿಪ್ರಾಯ ಆಂಗ್ಲೇಯರ ರಾಜ್ಯಾಂಗ ಪದ್ಧತಿಯಿಂದ, ನಿಶ್ಶಸ್ತ್ರರಾಗಿ, ಆ, ಕಲೆಯನ್ನು ಮರೆತು ಕೂತಿರುವ ನಮಗೆ ಈಗಲಾದರೂ ಯುದ್ಧ ಕಲೆಯ ಜವಾಬ್ದಾರಿಯನ್ನು ಒಪ್ಪಿಸಬೇಕಾದುದು ಅಳರಸರ ಅಗತ್ಯ ಕರ್ತವ್ಯವಾಗಿದೆ, ಇಂಥಾ ಪ್ರಾಮುಖ್ಯ ವಿಷಯಗಳಲ್ಲಿ ಮತಭೇದವಾಗುವುದಾದರೆ, ಸ್ವಾತಂತ್ರ್ಯ ಯುದ್ಧದಲ್ಲಿ ಎಷ್ಟು ಕಷ್ಟ ನಷ್ಟಗಳನ್ನು ಎಂಥಾ ಸಹನ ರೀತಿಯಲ್ಲಿ ಸಹಿಸುವರೆಂಬುದು ಅನುಭವಕ್ಕೆ ಬಂದೇ ಬರುವುದು.

ಶ್ರೀ ಸಪ್ರು, ಶಾಸ್ತ್ರಿ, ನೊವಲಿಯಾರ್ ಮಿತವಾದಿ ಸ್ವಭಾವಗಳು ಭಾರತೀಯರ ವಿಜ್ಞಾನ, ಧೈರ್ಯ ಸ್ಥೈರ್ಯ, ಸಾಹಸಗಳ ಪರಿವೆಯಿಲ್ಲದೆ, ರಾಷ್ಟ್ರದ ಅಪಮಾನಕ್ಕೆ ಕಾರಣವಾಗುವ, ಇಂಥಾ ಸಂಕುಚಿತ ಹೇಳಿಕೆಗಳಿಗೆ ಅವಕಾಶವಿತ್ತುದು ನಮ್ಮ ದುರ್ದೈವವೇ ಸರಿ. ಇವರಮಾನಸಿಕ ತತ್ವಗಳನ್ನವಲಂಭಿಸಿರುವವರೂ, ಇವರೂ, ನಮ್ಮ ಪ್ರತಿನಿಧಿಗಳಲ್ಲಾ ಇವರ ಮಾನಸಿಕ ಅಬಲತೆಯು, ಆತ್ಮಗೌರವವನ್ನು ಕೂತ ಮುಟ್ಟಿದೆ.

ಪರದೇಶ ವೇಷ, ಭಾಷೆಗಳಿಗೂ, ಪಾಶ್ಚಿಮಾತ್ಯ ಸಂಸ್ಕೃತಿಗೂ ಬೆರಗಾಗಿ, ತಮ್ಮ ದೇಶದ ಪ್ರಾಚೀನವೈಭವವನ್ನು ಮರೆತು ಮನೆಯಲ್ಲಿ ಕೂತು, ಚರ್ಚೆಯಿಂದ ಸ್ವರಾಜ್ಯವನ್ನು, ತರುತ್ತೇವೆನ್ನುವ, ಈ ಮಿತವಾದಿಗಳೂ, ಸ್ವಾತಂತ್ರ್ಯಯುದ್ಧದಲ್ಲಿ,ಸಹಸಲಾರದ ಯಾತನೆಗಳನ್ನನುಭವಿಸಿ, ಲಾಠಿ ಪೆಟ್ಟು ತಿಂದು, ತಮ್ಮ ತನು ಮನ ಧನಗಳನ್ನರ್ಪಿಸಿ, ಸಾವಿರಗಟ್ಟಲೆ ಶುರಂಗವಾಸಿಗಳಾದ, ಸತ್ಯಾಗ್ರಹೀಗಳಮುಖಂಡರಾದ ಮಹಾತ್ಮರಿಗೂ, ಅಜಗಜಾಂತರ ವ್ಯತ್ಯಾಸವಿದೆಯೆಂಬುದು ಎಂಥಾ ಮೂಢನಿಗಾದರೂ, ವ್ಯಕ್ತವಾಗುವುದು, ಮಹಾತ್ಮರ ವಾದಗಳನ್ನು ಕೋಟಿಗಟ್ಟಲೆ ಜನರುಮಾನ್ಯ ಮಾಡುವರು, ಯಾವರಾಜಕೀಯ ಘಟನೆಯಾಗಲೀ ಜವಾಬ್ದಾರಿ ತಿರುಳಲ್ಲದೆ ಉಪಯೋಗಕ್ಕೆ ಬೀಳುವುದೂ ಇಲ್ಲ, ಅಂಥಾ ಸರ್ಕಾರವು ಕಾರ್ಯಕ್ಕನುದಲ್ಲೂ ಬರುವುದಿಲ್ಲ, ಈ ದೇಶದ ಪರಿಸ್ಥಿತಿಯಲ್ಲಿ ಪೂರ್ಣ ಸ್ವಾತಂತ್ರ್ಯಕ್ಕೆ ಸರ್ವಸ್ವವನ್ನೂ ಅರ್ಪಿಸುವರೆಪ್ಪೋ ಸಂದಿ ಇರುತ್ತಾರೆ

ಲಂಡನ್ ವಾರ್ತೆಗಳು.

ಈ ವಾರ ಮುಖ್ಯವಾಗಿ ವ್ಯಾಪಾರವ್ಯವಹಾರಗಳ ಮೇಲೆ ಚರ್ಚೆಯಾಯಿತು ಹಿಂದೂಸ್ಥಾನದ ವ್ಯಾಪಾರವನ್ನೆಲ್ಲಾ ತಮ್ಮ ಅಧೀನದಲ್ಲಿಟ್ಟುಕೊಂಡ, ಲಾಭಾದಿಗಳನ್ನೆಲ್ಲಾ ತಾವೇ ಹೊಂದಬೇಕೆಂಬ ಆಶೆಯಿಂದ, ಬ್ರಿಟಿಶ ಪ್ರತಿನಿಧಿಗಳು ಜವಾಬ್ದಾರೀ ಸರ್ಕಾರದವರಿಗೆ ವ್ಯಾಪಾರದಬಗ್ಗೆ ಬಂಧನಗಳನ್ನು ಕಲ್ಪಿಸಲಸಕಾಶವಿದೆಯೆಂದು ವಾದಿಸುತ್ತಿರುವರು 1920 ರಲ್ಲಿ ಇಂಡಿಯಾ ವೈಸ್ರಾಯರಾಗಿದ್ದ ಲಾರ್ಡ್ ರೀಡಿಂಗರವರು ಬ್ರಿಟಿಶ ವ್ಯಾಪಾರವನ್ನು ಕಾಪಾಡುವುದೇಶ್ಯದಿಂದ, ಸಂಸ್ಥಾನ ಸರ್ಕಾರದವರಿಗೆ ವ್ಯಾಪಾರದ ತಂಟೆ ಬೇಡವೆಂತ ವಾದಿಸಿದರು ಕಲ್ಕತ್ತಾದಿಂದ ಬ್ರಿಟಿಶ ಪ್ರತಿನಿಧಿಯಾಗಿ ಹೋಗಿರುವ ಮಿ| ಬೆಂಥಾಲರವರು ವ್ಯಾಪಾರದಲ್ಲಿ ತನಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಹೇಳಿದರು, ಇಂಗ್ಲೀಷಿನವರು ತಮ್ಮ ಸಮರ್ಥನೆಗಾಗಿ ಪುಷ್ಟಿಯನ್ನೀಯುವ ಮುಸಲ್ಮಾನರ ಸ್ನೇಹ ಮಾಡುತ್ತಿರುವರು ಮಿ| ಬೆಂಥಾಲರವರು ಟಿಪ್ಪಾಳರ ಸೇಖರ್‌ಮಿಲ್ಲಿನಲ್ಲಿ ಚೀಫ್ ಆಫೀಸರಾಗಿದ್ದಾರೆ ಅವರು ಮೌಲಾನ ಶವುಕತ್ತಲ್ಲಿಯವರ ಮಗನಿಗೆ ತಮ್ಮ ಮಿಲ್ಲಿನಲ್ಲಿ ಒಂದು ಅಧಿಕಾರ ಕೊಟ್ಟಿದ್ದಾರೆ ಅಲ್ಲದೆ ಕಂಪನಿದು ಬರ್ಚಿನಿಂದಲೇ ಕೆಲಸ ಕಲಿಯಬಲಯುತೊಪಿಗೆ ಕಳುಹಿಸುವರಂತೆ, ಇನ್ನುಮುಂದೆ ಮುಸಲ್ಮಾನರು, ಇಂಗ್ಲಾಂಡದವರೊಡನೆ ಸ್ನೇಹ ಬೆಳಸಬೇಕಂತಲೂ, ಸರದೇಶದ ಮುಸಲ್ಮಾನರು ಯಾರಾದರೂ, ಇಂಗ್ಲಾಂಡೆದೊಡನೆ ದ್ವೇಷಮಾಡಿದರೆ, ಅವರನ್ನು ಕೂಡಿಸಬೇಕೇತಲೂ, ತಾವು ಇನ್ನುಮುಂದ ಹಿಂದೂಸ್ಥಾನಕ್ಕೆ ಬಂದನಂತರ ಇಂಗ್ಲಿಷರ ಪರವಾಗಿ ಹೊಡೆದಾಡುವರೆಂತಲೂ, ತಮ್ಮ ಪಿಲಾಸತ ಪತ್ರಿಕೆಗೆ ಲಂಡನ್ನಿನಿಂದ ಬರೆದಿರುತ್ತಾರ ಇದರಿಂದ ಮುಸಲ್ಮಾನರ ಸ್ವಾರ್ಥಪರತೆಯು ಚೆನ್ನಾಗಿ ವ್ಯಕ್ತವಾಗುತ್ತದೆ

ಕಾಸರ್ಸ್‌ಹೆಸ್ಟ್ ಪ್ರಭುವರಿಂದ ತುಂಬಿರುವ, ಮಂತ್ರಿ ಮಂಡಲದಲ್ಲಿ, ಜವಾಬ್ದಾರೀ ಸರ್ಕಾರವನ್ನು ಕೊಡಬಾರದೆಂದು ಒತ್ತಾಯಮಾಡುತ್ತಿರುವರು. ಮಂತ್ರಿಗಳಾದ ಮ್ಯಾಕ್ಡೊನಾಲ್ಡರವರಿಗೂ, ಇತರಸದಸ್ಯರಿಗೂ, ಭೇದಗಳು ದೆಚ್ಚುತ್ತಲಿವೆ. ಸಭೆಯ ಕಲಾಪಗಳೆಲ್ಲಾ ಈವಾರದೊಳಗೇ ಮುಗಿಯಬೇಕಾಗಿತ್ತು. ಇನ್ನೂ ಮುಂದಕ್ಕೆ ಹಾಕಿದ್ದಾರೆ. ಮಂತ್ರಿಗಳು ಹಿಂದೂಸ್ಥಾನದ ವಿಷಯವಾಗಿ ಹೇಳಬೇಕಾದ್ದನ್ನು,ಹೇಳಲ್ಲಾ ಮಹಾತ್ಮಗಾಂಧಿಯವರನ್ನು ಪಕ್ಷಣ ಆಫ್ರಿಕದ ಜನರಲ್ ಸ್ಮಟ್ಸರವರೂ, ಮಂತ್ರಿಗಳಾದ ಮ್ಯಾಕ್ಡೊನಾಲ್ಡರವರೂ ಸಂದರ್ಶಿಸಿ, ಘಂಟೆ ಗಟ್ಟಲೆ ಮಾತಾಡಿದರು. ಏನಾದರೂ ಮಾಡಿ ಅವರನ್ನೊಪ್ಪಿಸಬೇಕೆಂದು, ವಿವಿಧ ಪಕ್ಷಗಳ ಮುಖಂಡರು ಘೂರಾ ಯತ್ನಿಸುತ್ತಿರುವರು. ಮಹಾತ್ಮಗಾಂಧಿಯವರು ಹಿಂದೂ ದೇಶಕ್ಕೆ ಬರುವುದನ್ನು ಇನ್ನೂ ಮುಂದೆ ಹಾಕಿರುವರು.

ಬಾಡೋಲೀ ವಿಚಾರಣೆ.

ಬಡೋಲೀ ರೈತರ ಮೇಲೆ, ಸರ್ಕಾರದವರಿಂದ ನಡೆದ ನ್ಯಾಯಾನ್ಯಾಯವಿಚಾರಗಳನ್ನು ವಿಮರ್ಶಿಸಲು ನಾಸಿಕ್ ಕಲೆಕ್ಟರ್ ಮಿ| ಗಾರ್ಡನ್ ರವರು ಸರ್ಕಾರದವರಿಂದ ನಿಯಮಿಸಲ್ಪಟ್ಟಿದ್ದರು. ರೈತರ ಪಕ್ಷವನ್ನು ವಹಿಸಿ. ಕಾಂಗ್ರೆಸದವರು ರುಜುವಾತು ಮಾಡುವ ಅನ್ಯಾಯಗಳನ್ನು ಸಮರ್ಥಿಸಲಿಕ್ಕೆ, ಶ್ರೀ ಬಾಲುಭಾಯಿ ದೇಶಾಯಿಯವರು, ಸರ್ದಾರ್ ವಲ್ಲಭ ಭಾಯಿ ಪಟೇಲರವರಿಂದ ಅಧಿಕಾರ ಹೊಂದಿದ್ದರು ಈ ವಿಚಾರಣೆಯು ಸುಮಾರು ಒಂದು ತಿಂಗಳವರಿಗೂ ಚೆನ್ನಾಗಿ ನಡೆದು, ತೀರ ಕೊನೆಯಲ್ಲಿ ಮಂಜಾರವಾದ ರೀತಿಯಲ್ಲಿ ಸಮಾಪ್ತಿಗೊಂಡದ್ದಕ್ಕೆ ಎಲ್ಲರೂ ವಿಶಾಧಿಸಬೇಕಾಗಿದೆ.

ಸರ್ದಾರ್ ವಲ್ಲಭಭಾಯಿ ಪಟೇಲರವರು ಈ ತಿಂಗಳು 14 ನೇ ತಾರೀಖಿನಲ್ಲಿ ಹೊರಡಿಸಿದ ಪ್ರಸಿದ್ಧ ಪತ್ರಿಕೆಯಿಂದ ಎಷ್ಟು ಭೇದ ವರ್ತನೆ ಯಿರುವುದೆಂಬುದು ಸ್ಪಷ್ಟವಾಗುತ್ತದೆ ವಿಚಾರಣಾಧಿಕಾರಿಗಳ ನುಡಿ, ಕಾಂಗ್ರೆಸಿನವರ ಹೇಳಿಕೆಗಳನ್ನು ವಿಮರ್ಶಿಸಿ, ತಾರತಮ್ಯವನ್ನು ನೋಡುವುದಾದರೆ, ಕಾಂಗ್ರೆಸದವರಲ್ಲಿ ತಪ್ಪಿಲ್ಲವೆಂದು ನಿಷ್ಪಕ್ಷಪಾತವಾಗಿ ಹೇಳಬಹುದು.

"ಸರ್ಕಾರದವರ ಸಾಕ್ಷಿಯಾದ ಮಾಮಲೇದಾರನನ್ನು, ನಮ್ಮ ವಕೀಲರು ಎರಡು ದಿನಗಳ ವರೆಗೂ ಪರೀಕ್ಷಿಸಿದರು. ಈ ವಿಷಯದಲ್ಲಿ ಸರ್ಕಾರದವರ ಸ್ವಾಧೀನವಾಗಿದ್ದ, ಕೆಲ ರಿಕಾರ್ಡಗಳು ನಮಗೆ ಬೇಕಾಗಿ, ನಮ್ಮ ವಕೀಲರು, ಪರೀಕ್ಷಗೋಸ್ಕರ, ಅವನ್ನು ಒದಗಿಸಲು ವಾದಿಸಿದರು ಮುಖ್ಯವೆಂದು ತೋರಿದ ಕೆಲಕಾರಣಗಳನ್ನು ಹೇಳಿ, ಕೊಡಲಿಕ್ಕಾಗದೆಂಬುತ್ತರವನ್ನು ಸರ್ಕಾರದ ಪರ ವಕೀಲರು ಸಾಧಿಸಿದರು ಅವರ ಹೇಳಿಕೆಯನ್ನೇ ವಿಚಾರಣಾಧಿಕಾರಿಗಳು ಸಮರ್ಥಿಸಿದರು

ನಾನು ಕೊನೆಯವರೆಗೂ ಬಾಡೋಲಿ ಯಲ್ಲಿದ್ದು, ವಿಚಾರಣೆಯನ್ನು ಅವಲೋಕಿಸಿದೆನು ವಿಚಾರಣೆಯು ಶತ್ರುಭಾವನ ಯುಕ್ತವೂ, ನಿಷಪಕ್ಷಪಾತಿಯೂ ಆಗಿರುವುದೆಂದು ನನಗೆ ತೋರಿದೆ, ಇಂಥಾವಿಚಾರಣೆಯು ನಿರುಪಯೋಗವಾದುದು ನಮ್ಮ ವಕೀಲರಾದ ಶ್ರೀ ಬಾಲುಭಾಯಿ ಯವರನ್ನಾಲೋಚಿಸಿ, ವಿಚಾರಣೆಯಿಂದ ನಾವು ಹೊರಗೆ ಬಂದಿರುತ್ತೇವೆ ಈ ವಿಷಯವನ್ನು ಮಹಾತ್ಮಗಾಂಧಿಯವರಿಗೆ ತಿಳಿಸಿದ್ದೇನೆ."

ಸರ್ಕಾರ ದವರ ಅನ್ಯಾಯಗಳನ್ನು ವಿಚಾರಿಸಲು ಸರ್ಕಾರದವರಿಂದಲೇ ನಿಯುಕ್ತರಾದ, ಒಬ್ಬ ಸರ್ಕಾರೀ ನೌಕರರು, ವಿಚಾರಣೆಯನ್ನು ನಡೆಸುವುದೇ ನಮಗೆ ವಿಚಿತ್ರವಾಗಿ ತೋರುತ್ತದೆ.

ಆರ್ಥಿಕ ಮಸೂದೆ.

1000 ರೂ ಉತ್ಪನ್ನಕ್ಕೂ ಆದಾಯ ತೆರಿಗೆ.

ದೆಹಲಿಯಶಾಸನ ಸಭೆಯಲ್ಲಿ ಸರ್ಕಾರದ ಆರ್ಥಿಕ ಮಂತ್ರಿಗಳಿಂದ 1000 ರೂ ಗೂ ಕೂಡ ಆದಾಯ ತೆರಿಗೆ ಇರಬೇಕೆಂಬ ಆರ್ಥಿಕ ಮಸೂದೆಯಲ್ಲಿನ ವಿಷಯಗಳು ಎಲ್ಲಾ ಅನಧಿಕಾರಿ ಸದ್ಯರಿಂದಲೂ ವಿರೋಧಿತವಾಯಿತು ಶ್ರೀ ಹರಬಿಲಾಸಶಾರದರವರು ತೆರಿದುಹಾಕಬೇಕೆಂಬ ಉಪಸೂಚನೆಯು ಅಧಿಕ ಮತದಿಂದ ಸಾಸಾಯಿತು. ಈ ತೆರಿಗೆಯಿಂದ ಸಾಧಾರಣ ಶ್ರೀಮಂತರಿಗೂ, ಕಷ್ಟವಾಗುವುದು. ಈಗ ಜಾರಿಯಲ್ಲಿರುವ ಪದ್ಧತಿಯೇ ಅಸಮಾಧಾನವಾದ ಸ್ಥಿತಿಯಲ್ಲಿದೆ.

ಬಳ್ಳಾರಿ.

ಜಿಲ್ಲಾ ಬೋರ್ಡಿನ ಸಭೆಯು 16-11-31 ನೇ ಸೋಮವಾರ ಕೂಡಿತ್ತು. ಜಿಲ್ಲೆಗೆಲ್ಲಾ 50 ಸಭ್ಯರು ನಿಯಮಕವಾಗಿರಬೇಕೆಂದು ನಿಶ್ಚಯಿಸಲ್ಪಟ್ಟು, ಜಿಲ್ಲೆಯ 41 ಫಿರ್ಕಾಗಳಿಗೆ, ಫಿರ್ಕಾಕ್ಕೆ, ಒಬ್ಬರಂತೆ ಚುನಾವಣೆ ಯಾಗಬೇಕೆಂದು ನಿರ್ಣಯಿಸಲ್ಪಟ್ಟಿತು. ಕೆಳದುಳಿದ 9 ಸಭ್ಯರ ಸ್ಥಳಗಳನ್ನು ಕ್ರಮಪ್ರಕಾರವಾಗಿ, ಈ ಕೆಳಗೆ ಕಂಡಂತೆ ಹಂಚಿರುವರು.

ಮುಸಲ್ಮಾನರಿಗೆ	3	ಸ್ಥಳಗಳು	
		ಕುರುಗೋಡು ಸರ್ಕಲ್	1
		ಎಮ್ಮಿಗನೂರು	1
		ಕಂಪ್ಲಿ	1
ಆದಿದ್ರಾವಿಡ	3	ಕಕೇಕಲ್	1
		ಕೂಟ್ಲೂರು	1
		ಚಿಗಟೇರಿ	1
ಇಂ. ಕ್ರಿಶ್ಚಿಯರ	1	ಚಿಪ್ಪಿಗೆರೆ	1
ಸ್ತ್ರೀಯರಿಗೆ	2	ಹಡಗಲಿ	1
		ಸಿರುಗುಪ್ಪ	1
		ಒಟ್ಟು	9

ಸ್ಮಶಾನ ಭೂಮಿಯ ಸಹಾಯನಿಧಿ.

ಸ್ಮಶಾನ ಜೀರ್ಣೋದ್ಧಾರಕ ಸಂಘದ ಕಾರ್ಯದರ್ಶಿಗಳಾದ ಶ್ರೀ. ಎ. ಆರ್. ಗಂಗಾವತಿ ಯವರು ಹೀಗೆ ತಿಳಿಸುತ್ತಾರೆ.

ಬಳ್ಳಾರಿಯ ಸ್ಮಶಾನ ಭೂಮಿಯ ಜೀರ್ಣೋದ್ಧಾರದ ಸಹಾಯಕ್ಕೆ ಶ್ರೀ. ಟಿ. ರಾಘವಾಚಾರ್ಯ ಮತ್ತು ಮಿತ್ರಮಂಡಲಿಯವರು "ಸರಿಬೀಳದ ಸಂಗತಿಗಳು" ಎಂಬ ನಾಟಕವನ್ನಾಡಿ (12-9-1931) ಸದರಿ ನಾಟಕದ ಆಯವ್ಯಯವನ್ನು ಪರೀಕ್ಷಸಲಿಕ್ಕೆ ಕಾರ್ಯಕಾರೀಮಂಡಲವು ಈ ತಿಂಗಳು 5 ನೇ ತಾರೀಖು ಗುರುವಾರ ಕೂಡಿತ್ತು. ಸಾರ್ವಜನಿಕರಿಗೆಲ್ಲಾ, ಇದರ ಆಯ, ವ್ಯಯಗಳನ್ನು ತಿಳಿಸುವುದು ನಮ್ಮ ಕರ್ತವ್ಯವಾಗಿದೆ.

	ರೂ. ಆ. ಪೈ.
ನಾಟಕದ ಒಟ್ಟು ಆದಾಯ	443 - 10 - 0
.... ಖರ್ಚು	139 - 12 - 3
ಉಳಿದಿರುವುದು.	303 - 13 - 9

ಉಳಿದಿರುವ ಹಣವನ್ನೆಲ್ಲಾ 250 ರೂ. ಪೋಸ್ಟ್ ಸೇವಿಂಗ್ಸ್ ನಲ್ಲಿಡಲಾಗಿದೆ. ಮಿಕ್ಕ ಹಣವು, ಇನ್ನು ಮುಂದೆ ಆಡುವ ನಾಟಕಗಳ ಪ್ರಾಥಮಿಕ ಖರ್ಚುಗಳಿಗೆ ವಿನಿಯೋಗವಾಗಲಿಕ್ಕಿದೆ. ಇನ್ನು ಮುಂದೆ ಸಹಾಯ ದ್ರವ್ಯವನ್ನು ಸೇರಿಸಲು ಶ್ರೀ ಗಳಾದ ಧರ್ಮವರಂ ಗೋಪಾಲಾಚಾರ್ಲು, ಆಂಜನೇಯುಲು, ಬಾಳಾಜಿರಾವ್, ವಿಟ್ಟಾ ಶೇಷಪ್ಪ ಮತ್ತು ಕೆ. ಎಸ್. ನಾರಾಯಣಸ್ವಾಮಿ ಯವರಿಂದ ಕೂಡಿದ ಒಂದು ಸಭೆ ಏರ್ಪಾಟಾಗಿದೆ. ಕೋಶಾಧ್ಯಕ್ಷರು:— ಟ್ರೆಜರಿ ಡೆಪ್ಯುಟಿಕಲೆಕ್ಟರ್ ಆದ ಶ್ರೀ ಎಸ್. ವಿ. ರಾಯರು. ಕಾರ್ಯದರ್ಶಿಗಳು:— ಎ. ಆರ್. ಗಂಗಾವತಿ. ಈ ವರೆಗೆ ದ್ರವ್ಯಸಹಾಯ ಮಾಡಿದವರಿಗೆ ಸಭೆಯ ಪರವಾಗಿ ವಂದನೆಗಳು.

ಇಂಥಾ ಸದುದ್ದೇಶದಿಂದ ಕೂಡಿದ ಸಂಘಕ್ಕೆ ದ್ರವ್ಯ ಸಹಾಯಮಾಡಬೇಕೆಂದೂ ಮುಂದೆ ಆಡುವ ನಾಟಕಗಳಿಗೆ ಯಥಾರೀತಿ, ಆಶ್ರಯ ಕೊಡಬೇಕೆಂದೂ ಕೋರಿಕೆ.

ಕೌಲುಬಜಾರು ಹೆಂಡದಂಗಡಿ ಹಾವಳಿ

[ಕೌಲುಬಜಾರದ ಸದ್ಗೃಹಸ್ಥರಿಂದ]

ಈ ಅಂಗಡಿಯಲ್ಲಿ ನಡೆಯುವ ಹಾವಳಿಯೂ, ಅನಾಂತ್ರ್ಯವೂ, ಸಹಿಸಲಶಕ್ಯವಾಗಿದೆ, ಬ್ರೂಸುಪೇಟೆ, ಮತ್ತು ಕೌಲುಬಜಾರದ ಅಂಗಡಿಯವರಿಗೆ ಪರಸ್ಪರ ಪೋಟಿಯುದ್ದು, ಇಲ್ಲಿ ಸೇರಿಗೆ ಅರ್ಧಾಣೆ ಕಡಿಮೆ ಮಾಡಿದ್ದಾರೆ. ಈಗ 15-20 ದಿನಗಳಿಂದಲೂ, ಮಧ್ಯಾನ್ಹ 3 ರಿಂದ, ರಾತ್ರಿ 10 ಘಂಟೆಗಳ ವರೆಗೂ ದೊಡ್ಡ ಜಾತ್ರೆಯುಕೂಡಿ, ಜನರು ಓಡಾಡುವರಸ್ತೆಯಲ್ಲಿ ಹೆಂಡ ಕುಡುಕರ ಅಸಭ್ಯ ವರ್ತನವು ಎಂತಹವರಿಗಾದರೂ ಹೇಸಿಗೆ ಬರುತ್ತಲಿದೆ ಸ್ತ್ರೀಯರು ಕ್ಷೇಮದಿಂದ ಮನೆಸೇರುವುದು ಕಷ್ಟಕ್ಕೆ ಬಂದಿದೆ ತಮ್ಮ ಆಟೋಪ ಮೀರಿದೆಯೆಂದು ಪೋಲೀಸಿನವರು ಹೇಳುತ್ತಿದ್ದಾರೆ. ಯಾವನ ಸ್ತ್ರೀಯರೂಸಹ ಮಿತಿಮೀರಿ ಕುಡಿದು ಜ್ಞಾನತಪ್ಪಿ, ನಾಲಾಡುತ್ತಾ ಹೋಗುತ್ತಿರುವುದು ಮನೋವ್ಯಾಕುಲವಾಗಿದೆ. ಕುಡಿಕರನ್ನು ಕರೆಮಕೊಂಡುಬರಲು ಚಟಕಾಗಾಡಿಗಳನ್ನು ಏರ್ಪಡಿಸಿರುತ್ತಾರೆ. ಇಷ್ಟುನಿರ್ಭಯವಾಗಿ ಈ ದುಷ್ಕಾರ್ಯವು ಊರ ಮಧ್ಯದಲ್ಲಿ ನಡೆಯುತ್ತಿರುವುದನ್ನು ನೋಡಿಯೂ, ಅಧಿಕಾರಿಗಳು ಸುಮ್ಮನಿರುವುದು ಆಶ್ಚರ್ಯ.

(ಈ ಅಂಗಡಿಯ ಕಂಟ್ರೋಮೆಂಟ್‌ಗೆ ಹೋಗುವ ಹಾದಿಯಲ್ಲಿದೆ ಎಲ್ಲಾ ಅಧಿಕಾರಿಗಳೂ ಇದನ್ನು ಗಮನಿಸಿರುತ್ತಾರೆ. ತಮಗೆ ಆದಾಯನಿರುವ ಈ ಕಾರ್ಯವನ್ನು ಅವರೇಕೆ ನಿಲ್ಲಿಸುವರು? ಸ್ವರಾಜ್ಯವು ಬಂದಾಗಲೇ ಸಂಪೂರ್ಣ ನಿರೋಧವು ಸಾಧ್ಯ. ಅಲ್ಲಿಯವರೆವಿಗೂ, ಸುಧಾರಣೆ ಇಚ್ಛೆಯುಳ್ಳವರು, ಸಿಕೆಟಿಂಗ್ ಮಾಡಬೇಕು.) **ಸಂಪಾದಕ**

ಕೊಟ್ಟೂರು.

(ಸ್ವಂತಸುದ್ದಿ ಗಾರರಿಂದ)

ತಾ|| 11-11-31 ರದಿನ ಭದ್ರಶೆಟ್ಟಿ ಸಣ್ಣ ರುದ್ರಪ್ಪನವರು ನೂತನ ಗೃಹಪ್ರವೇಶಮಾಡಿ, ಕಾಂಗ್ರೆಸ್ಸಿಗೆ ಸಹಾಯ ದ್ರವ್ಯವನ್ನೊದಗಿಸಿದರು. ಇಂಥಾ ಶುಭಕಾರ್ಯಗಳಲ್ಲಿ ಪ್ರತಿಯೊಬ್ಬ ದೇಶಾಭಿಮಾನಿಯೂ ಕಾಂಗ್ರೆಸ್ಸಿಗೆ ಧನಸಹಾಯಮಾಡಬೇಕು. ಅಸ್ಪೃಶ್ಯರೂ ಕೂಡ ಪ್ರತಿನಿತ್ಯವೂ ನಡೆಯುವ ಪ್ರಭಾತಫೇರಿಯಲ್ಲಿ ಭಾಗಿಗೆದುಕೊಳ್ಳುತ್ತಿರುವರು. ಅವರ ಕೇರಿಯಲ್ಲಿ ಇದರಿಂದ ಬಹಳ ಪರಿಣಾಮ ವುಂಟಾಗಿದೆ. ಈ ವರಿವಿಗೆ ಮೂರು ಪ್ರಭಾತ ಫೇರಿಗಳಾಗಿವೆ.

ಹರಪನಹಳ್ಳಿ

(ಸ್ವಂತ ಸುದ್ದಿ ಗಾರರಿಂದ)

ಈ ಊರಿನಲ್ಲಿ ಆರೋಗ್ಯವಾರವು ವಿಜೃಂಭಣೆಯಿಂದ ನಡೆಯಿತು. ಪ್ರತಿನಿತ್ಯವೂ ಆರೋಗ್ಯ ವಿಷಯದಲ್ಲಿ ಉಪನ್ಯಾಸಗಳಾದವು ಜಟ್ಟಿಗಳಿಂದ ಕುಸ್ತಿಗಳೇರ್ಪಟ್ಟು, ಗೆದ್ದವರಿಗೆ ಡಾ. ರಾಮರಾಯರ ಸ್ವಹಸ್ತದಿಂದ ಬೆಳ್ಳಿಯ ಪದಕಗಳು ಕೊಡಲೇರ್ಪಡಿಸಿದ್ದರು, ಡಾ. ರಾಮರಾಯರು ಬಹುಮಾನಗಳನ್ನು ಕೊಡುತ್ತಾ, ಶಾರೀರಿಕ ಶಿಕ್ಷಣದಮೇಲೆ ಉಜ್ವಲ ಭಾಷಣವಿತ್ತರು. ವಾಚನಾಲಯದಲ್ಲಿ ಪ್ರದರ್ಶನ ವಸ್ತುಗಳನ್ನಿಟ್ಟು ಜನಗಳಿಗೆ ತಿಳಿಯ ಹೇಳಿದರು. ಪ್ರಾಥಮಿಕ ಶಾಲೆಯಲ್ಲಿ ಆರೋಗ್ಯ ವಿಷಯಕ ನಾಟಕವಾಗಿ, ಕೊನೆಯದಿವಸ, ಆಟಗಳೇರ್ಪಟ್ಟು, ಗೆದ್ದವರಿಗೆ ಬಹುಮಾನಗಳನ್ನು ಹಂಚುವದರ ಮೂಲಕ, ಆರೋಗ್ಯ ವಾರವು ಕೊನೆಗಂಡಿತು.

ಈ ಊರಿನ ಶ್ರೀ ವೆಂಕಟರಮಣ ಸ್ವಾಮಿ ಪರ್ಮನೆಂಟ್ ಭಂಡಾರದ ಚುನಾವಣೆಯ ಬಗ್ಗೆ 15-11-31 ರ ದಿವಸ ಸಭೆಯುಕೂಡಿ, 1-12-31 ರಿಂದ ಪ್ರಾರಂಭವಾಗುವ ವರ್ಷಕ್ಕೆ ಈ ಕೆಳಗಿನ ಮಹನೀಯರು ಸಭ್ಯರಾಗಿ ಆರಿಸಲ್ಪಟ್ಟರು.

ಶ್ರೀಗಳವರು. ಶ್ರೀನಿವಾಸ ಮೂರ್ತಾಚಾರ್.
" ಮಂಚಾಲಿ ಹನುಮಂತಾಚಾರ್.
" ದಂಡಿಗ ಸದಾಶಿಗೆಚಾರ್.
" ವಿರುಪಾಕ್ಷ ಶೋಮಯಾಜಿ.
" ಬೆಳ್ಳೂರು ಮೂಸಪ್ಪ.
" ಟಿ. ಹೆಚ್. ಯಾಂ. ಚಿನವೀರಪ್ಪಯ್ಯ.
" ತಿಗ್ಗಿನವಳದ ಚಿನವೀರಪ್ಪಯ್ಯ.
" ಆ. ನಾರಾಯಣ ಭಟ್ಟರು. (ಆಡಿಟರ್)

ಹೊಸಪೇಟೆ

(ಸ್ವಂತ ಸುದ್ದಿ ಗಾರರಿಂದ)

ಶ್ರೀ ಮುಳಗುಂದದ ರಾಮಶಾಸ್ತ್ರಿಗಳ ಹರಿಕಥೆಗಳು ಜನರನ್ನಾಕರ್ಷಿಸುತ್ತಿವೆ. ಶಾಸ್ತ್ರಿಗಳು, ಮಹರಾಷ್ಟ್ರ ಭಾಷೆಯ, ಹಾಡುಗಳನ್ನು ವಿಶೇಷವಾಗಿ ಹೇಳುವರಲ್ಲದೆ, ಕರ್ನಾಟಕ ಭಾಷೆಯ, ರಸವತ್ತಾದ ವಾಸರಪದಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ.

ಈ ಊರಿನ ವಿಕ್ಟೋರಿಯಾ ಗಾರ್ಡನ್, ಜನರ ಮಲವಿಸರ್ಜನೆಯ ಸ್ಥಳವಾಗಿ ಪರಿಣಮಿಸಿದೆ. ಸೀನೀರಿಗೆ ಹೋಗಿ ಬರುವ ಸದ್ಗೃಹಿಣಿಯರಿಗೆ, ಪ್ರಾತಃಕಾಲ ಸಾಯಂಕಾಲಗಳ ದೃಶ್ಯವು ಅಸಹ್ಯನೆನಿಸುವುದು, ಪುರಸಭೆಯವರು ಇದಕ್ಕೆ ಗಮನಕೊಡಬೇಕು.

ವರ್ತಮಾನಗಳು.

ಯುದ್ಧದ ಅನರ್ಥಗಳನ್ನು ವರ್ಣಿಸುತ್ತಾ, ಎಫ್. ಇ. ಚೇಮ್ಸ್‌ರವರು ಮದ್ರಾಸದಲ್ಲಿ ಪರಿಣಾಮಕಾರಿಕ ಭಾಷಣವಿತ್ತರು ಬ್ರಿಟನ್‌ದೇಶವು ಯುದ್ಧದಿಂದ ಮಾಡಿದ ಸಾಲ 13,000 ಕೋಟಿ ರೂಪಾಯಿ ಪರರಾಷ್ಟ್ರಗಳವರು ಮಾಡಿರುವ ಸಾಲ 36,000 ಕೋಟಿ ರೂಪಾಯಿ, ಇಂಗ್ಲಾಂಡದವರು ಪ್ರತಿವರ್ಷಕ್ಕೂ, ಸಾಲಗಾರರಿಗೆ ಕೊಡುತ್ತಿರುವ ಬಡ್ಡಿ 406 ಕೋಟಿ ರೂಪಾಯಿ. ಹೀಗೆ 146 ವರ್ಷ ಕೊಟ್ಟರೂ ಸಾಲ ಬಡ್ಡಿ ತೀರುವುದಿಲ್ಲವಂತೆ.

"ಮದ್ರಾಸ್ ಸರ್ಕಾರದವರು ಧೂ ಕಂದಾಯ ಪುನರ್ವಿಚಾರಣೆಯ ಸಂಬಂಧ ನಡೆಯುವ ಚಳವಳಿಯನ್ನು ಬಗ್ಗುಬಡಿಯುವ ಉದ್ದೇಶಗಳನ್ನಿಟ್ಟುಕೊಂಡ ಕಾಂಗ್ರೆಸ್ ಕಾರ್ಯಕರ್ತರನ್ನು ಹಿಡಿಯುತ್ತಲಿರುವರು ನೀವು ತಕ್ಕ ಕ್ರಮಗಳನ್ನು ಜಾರಿಯಲ್ಲಿ ತರಬಹುದು." ಎಂದು ಕಾಂಗ್ರೆಸ್ ಅಧ್ಯಕ್ಷರಾದ ಸರ್ದಾರ್ ವಲ್ಲಭಭಾಯಿ ಪಟೇಲರು, ಶ್ರೀ ಕಾಳೇಶ್ವರರಾಯರಿಗೆ ಸಂದೇಶವನ್ನು ಕಳುಹಿಸಿರುವರು.

S S. ನಾಲ್ಕೂರ ಎಂಬ ಹಡಗು 21-11-31 ನೇ ತಾರೀಖು ಹೊರಡುವುದಿದ್ದು, ಅದರಲ್ಲಿ ಸುಮಾರು 11 ಕೋಟಿ ರೂಪಾಯಿ ಧಂಗಾರವು ಇಂಡಿಯಾ ದೇಶದಿಂದ ಹೊರಬೀಳುವುದು.

ವೈಸ್ರಾಯರ ಉಪಯೋಗಕ್ಕಾಗಿ ಒಂದು ಆಕಾಶ ವಿಮಾನವು ಹಿಂದೂ ದೇಶಕ್ಕೆ ಹೊರಟಿರುವುದು. ನೊನ್ನೆ ತಾನೆ ಅವರ ಸ್ಪೆಷಲ್ ಟ್ರೇನಕ್ಕೆ 60,000 ಖರ್ಚಾಯ್ತು. ಹಿಂದೂಸ್ಥಾನದ ಬಡತನ ಸ್ಥಿತಿಯಲ್ಲಿ ಈ ವೈಭವ !!

ಡಿಶಂಬರ್ 17-ನೇ ತಾರೀಖಿನ ದಿವಸ ಪಂಡಿತ ಜವಾಹರಲಾಲನೆಹರೂರವರು, ಹುಬ್ಬಳ್ಳಿಯಲ್ಲಿ ಸ್ವದೇಶೀ ವಸ್ತು ಪ್ರದರ್ಶನಾಲಯವನ್ನು ತೆರೆಯುವರು.

ಬಳ್ಳಾರಿ ಪುರಪಾಲಕ ಸಂಘವೂ, ಜನರ ಕರ್ತವ್ಯವೂ.

(ಕೃ. ತಿ. ಶಿ.)

(ಕಳೆದ ಸಂಚಿಕೆಯಿಂದ ಮುಂದುವರಿದಿದೆ.)

೧. ಪ್ರತಿವಾರ್ಡಿಗೂ ಒಂದು ವಾರ್ಡುಉಪಸಂಘ ಇರಲಿಕ್ಕೆಬೇಕು.

೨. ಪ್ರತಿ ವಾರ್ಡಿನಲ್ಲಿಯೂ ಬುದ್ಧಿವಂತರಾದವರೂ, ಪುರದ ಶ್ರೇಯೋಭಿವೃದ್ಧಿಯನ್ನು ತಿಳಿದು ಕೋರುವರೂ, ೧೫ ರಿಂದ ೨೦ ರ ವರಿಗೆ ಸದಸ್ಯರಾಗಿರಬೇಕು. ಮುಂದೆ ಇವರು ಅಯಾವಾರ್ಡಿನಿಂದ ಚುನಾಯಿಸಲ್ಪಡಬೇಕು

೩. ಪ್ರತಿವಾರ್ಡು ಉಪಸಂಘಕ್ಕೂ ಒಬ್ಬ ಅಧ್ಯಕ್ಷರೂ, ಒಬ್ಬ ಕಾರ್ಯದರ್ಶಿಯೂ, ಇವರಿಬ್ಬರೊಡನೆ ಗೂಡಿದ ೫ ಸದಸ್ಯ ಕಾರ್ಯನಿರ್ವಾಹಕ ಸಭೆಯೂ ಇರತಕ್ಕದ್ದು.

೪. ಪ್ರತಿವಾರ್ಡಿನ ಉಪಸಂಘವೂ ತಮ್ಮ ವಾರ್ಡಿಗೆ ಸಂಬಂಧಿಸಿದ ಯಾವತ್ತು ಕಾರ್ಯಗಳನ್ನೂ, ಪುರಕ್ಕೆ ಸಂಬಂಧಿಸಿದ ವಿಶೇಷಾಂಶಗಳನ್ನೂ ಚರ್ಚಿಸಿ ಠರಾವು ಮಾಡಿ, ಠರಾವುಗಳನ್ನು ತಮ್ಮ ವಾರ್ಡಿನ ಕೌನ್ಸಿಲರಿಗೂ, ಮುನಿಸಿಪಾಲಿಟಿಗೂ ಕಳುಹಿಸತಕ್ಕದ್ದು.

೫. ಸಮಯಾನುಸಾರ ವಿಶೇಷಾಂಶಗಳು ಬಂದಾಗ್ಯೆ ಬಳ್ಳಾರಿಯ ಯಾವತ್ತು ವಾರ್ಡುಗಳ ಉಪಸಂಘಗಳೂ ಕಲೆತು ಮೇಲಿನಠರಾವಿನಂತೆ ನಡೆಯಬೇಕು,

೬. ಪ್ರತಿವಾರ್ಡಿನ ಉಪಸಂಘವೂ ಪ್ರತಿ ಭಾನುವಾರ ತಮ್ಮ ವಾರ್ಡಿನಲ್ಲಿ ಯಾವದಾದರೊಂದು ಸ್ಥಳದಲ್ಲಿಯೂಗಲಿ, ಇತರ ವಾರ್ಡಿನ ಉಪಸಂಘದ ಸಲಹೆಯಿಂದ ಮತ್ತಾವ ಕಡೆಯಾಗಲಿ, ಸಾಮಾನ್ಯ ಉಪನ್ಯಾಸ, ವ ಮಹಿಳೆಯಾಂಟರ ಸಹಾಯದಿಂದ ಉಪನ್ಯಾಸ ಇಟ್ಟು ವಾರ್ಡಿನ ವರಿಗೆ ಅವರ ಆರೋಗ್ಯ, ಶುಭ್ರತೆ, ಸಾಂಕ್ರಮಿಕ ರೋಗ ವಗೈರೆ ಉಪನ್ಯಾಸ ಮಾಡುವದು.

೭. ಚುನಾವಣೆಯ ಕಾಲದಲ್ಲಿ ಆಯಾವಾರ್ಡಿನ ಉಪಸಂಘವು, ತಮಗೆ ಉಪಯುಕ್ತರಾದ ಅಭ್ಯರ್ಥಿಗಳನ್ನು ನಿಲ್ಲಿಸಿ ಅವರಿಗೆ ಸಹಾಯ ಮಾಡುವದು.

ಮೈಸೂರು ದರ್ಬಾರು ಮತ್ತು ರಿಟ್ರೆಂಚ ಮೆಂಟ್ ಕಮಿಟಿ.

(ಎಸ್. ಶಿ. ಹಾಗಯ್ಯಕಡ್ಡಿ, ಬಿ. ಎ. ಯವರಿಂದ)

ಮೈಸೂರು ಸರ್ಕಾರದವರು, ತಮ್ಮ ಆರ್ಥಿಕದುಸ್ಥಿತಿಯನ್ನು ಸರಿಪಡಿಸುವನಿಮಿತ್ಯ, ಕಡಿಮೆಬೇಕಾದ 37 ಲಕ್ಷರೂಪಾಯಿಗಳನ್ನು, ಅನೇಕ ವಿಧಗಳಿಂದ ಉಳಿಸುತ್ತಿರುವರು. ಸರ್ಕಾರಿ ಉದ್ಯೋಗಸ್ಥರ ಸಂಬಳಗಳಿಂದ ಒಂದು ಲಕ್ಷ ಅರುವತ್ತು ಸಾವಿರ ರೂಪಾಯಿಗಳನ್ನು ಮಿಗಿಸಿರುವರು. ರೈತನ ಪುರೋಭಿವೃದ್ಧಿಗಾಗಿ ನಿಯಮಿತವಾಗಿರುವ, ಇರಿಗೇಷನ್, ಫಂಡಿನಿಂದ 14 ಲಕ್ಷರೂಪಾಯಿಗಳನ್ನು ಮಿಗಿಸಿರುತ್ತಾರೆ.

ಇದು ವಿಷಾದ ಕರವಾದ ವಿಷಯ ಮಿಡಿಲಸ್ಕೂಲಗಳ ವಿದ್ಯಾಭ್ಯಾಸಕ್ಕೆ ವೇತನಗಳನ್ನು (ಮಾಸಿಕ) ಕಲ್ಪಿಸಿರುವುದರಿಂದ, ಒಂದು ಲಕ್ಷ ರೂಪಾಯಿ ಆದಾಯವು ಎಬ್ಬಿ ಶೇತನಲ್ ಸೂಪರ್ ವೈಸರ್ ಸಂಬಳವನ್ನು ನಿಲ್ಲಿಸಿದುವುದರಿಂದ 10 15 ಸಾವಿರ ರೂಪಾಯಿ ಆದಾಯವು ಬರಬಹುದಾಗಿದೆ.. ಮಿಡಲಸ್ಕೂಲ ವಿದ್ಯಾಭ್ಯಾಸವನ್ನು ಮುಗಿಸಿ, ಸಾಲೆ ಬಿಟ್ಟು ಬಿಡುವ ರೈತಾಪಿ ಜನರ ಮಕ್ಕಳಿಗೆ ಕಷ್ಟವುಂಟು. ಅವರು ಪ್ರತಿ ತಿಂಗಳೂ ಫೀಜು ಕೊಟ್ಟು ವಿದ್ಯೆಯನ್ನು ಪಡೆಯುವುದು ಕಷ್ಟ ಸಾಧ್ಯ.

ಮೈಸೂರು ಸರ್ಕಾರೀ ಉದ್ಯೋಗಸ್ಥರ ಸಂಬಳಗಳನ್ನು ಈನ್ನೂ ಕಡಮೆ ಮಾಡಬಹುದಿತ್ತು. ಸಂಬಳಗಳನ್ನು ಕಡಮೆ ಮಾಡಿದ ಮೂಲಕ ಒಂದುಲಕ್ಷ ಅರುವತ್ತು ಸಾವಿರರೂಪಾಯಿ ಮಿಡಲಿಸ್ಕೂಲ ವೇತನವನ್ನು ಕಲ್ಪಿಸಲು ಬಡವರಮೇಲೆಬೇರಿರುವ ಹೊರೆ ಒಂದು ಲಕ್ಷ ರೂಪಾಯಿ. ತಾರತಮ್ಯವೇ ಇಲ್ಲ, ಇಂಥಾ ಆಗ್ಗದ ಕಾಲದಲ್ಲಿ, ಸಂಬಳಗಳನ್ನು ತಗ್ಗಿಸುವುದರಿಂದ ನೌಕರರಿಗೆ ಕಷ್ಟವಾಗುತ್ತಿರಲಿಲ್ಲಾ ಆರ್ಥಿಕ ಸ್ಥಿತಿಗೂ, ಸರಿ ಹೋಗುತ್ತಿತ್ತು. ಮೈಸೂರು ಜರ್ತಾರಿ ರುಮಾಲಿನ ಸಡಗರಕ್ಕೂ. ವೋಟಾರು ಬಂಡಿಗಳ ಉತ್ಸವಕ್ಕೂ, ಸೆಂಚುರಿ ಕ್ಲಬ್ಬಿನ ಸಮ್ಮೇಳನಕ್ಕೂ, ಕೊಂಚ ಹೊಂದರೆ ಉಂಟಾಗಿದ್ದರೂ, ಭಯವಿರುತ್ತಿರಲಿಲ್ಲ. ಯಾವ ಅಧಿಕಾರಿಯೂ, ಕೆಲಸ ಬಿಡುತ್ತಿರಲಿಲ್ಲ. ಬಿಟ್ಟರೂ, ಉಚ್ಚ ಶಿಕ್ಷಣ ಹೊಂದಿದ ಮೇಧಾವಿಗಳು ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದರು. ಪಾಶ್ಚಾತ್ಯ ದೇಶಗಳ ಆದಾಯ, ಖರ್ಚು, ಅಲ್ಲಿ ನೌಕರರಿಗೆ ಕೊಡುವ ವೇತನಗಳ ದೃಷ್ಟಿಯಿಂದ ಕಾಂಗ್ರೆಸ್ ನಾಯಕರಾದ ಮಹಾತ್ಮ ಗಾಂಧಿಯವರು, ವೈಸ್ರಾಯರಿಗೆ ಭವಿಷ್ಯ ಸರ್ಕಾರದಲ್ಲಿ 500 ಇರತಕ್ಕದ್ದು ಸರಿಯಾದುದೆಂದು ತೀರ್ಮಾನಿಸಿರುತ್ತಾರೆ. ಕಾಂಗ್ರೆಸ ತೀರ್ಮಾನದಂತೆ ಹೋಲಿಸಿ ನೋಡಿದರೆ ನಮ್ಮ ಮಂತ್ರಿಗಳಿಗೆ 5000 ಕೊಡುವುದು ಅನ್ಯಾಯವಾಗಿದೆ.. ಬಡವರಾದ ರೈತರು ರಾತ್ರೀ, ಹಗಲೂ, ದುಡಿದು, ತಾವು ನಿರ್ಗತಿಕರಾಗಿ ಸರ್ಕಾರೀಖಜಾನೆಯನ್ನು ಭರ್ತಿ ಮಾಡುವರು, ಅದರೆ ಅವರಿಗೆ ಅನುಕೂಲಗಳೆಲ್ಲ ಪ್ರಜೆಗಳ ಸುಖ ದುಃಖಗಳನ್ನು ನೋಡಬೇಕೆಂಬಜವಾಬ್ದಾರಿಯುಳ್ಳ ಸರಕಾರದವರು, ರೈತರನ್ನು ಸದ್ಯವೆ ಸಂಕಟಗಳಿಂದ ಪಾರುಮಾಡುವಂತಿಲ್ಲ.

ತೋಲಾರ ಜಿಲ್ಲಾ ಒಣ ಪ್ರದೇಶ, ಹೊಟ್ಟೆಗೆ ಅನ್ನ, ಮೈಗೆ ಬಟ್ಟೆಯಿಲ್ಲದೆ, ದಟ್ಟದರಿದ್ರರನೇಕರಿರುವರು. ಆದರೂ, ಕಂದಾಯವನ್ನು ವಸೂಲ್ ಮಾಡದೆ ಬಿಡಲಿಲ್ಲ. ಹೇಡಿ,ಸಾರಾಯಿಗಳಿಂದೊದಗುವ ಅಬ್ಕಾರೀ ಆದಾಯವನ್ನು ತಗ್ಗಿಸಿ ರೈತನಿಗೆ ಉಪಕಾರಮಾಡಲಿಲ್ಲ. ಸೊಸೈಟಿಗಳಲ್ಲಿದ ಸಾಲತೆಗೆಯುವಬಗ್ಗೆ ಸ್ಪಾಂಪೀ ಇಟ್ಟು ರೈತನಹೊರೆಯನ್ನು ಇನ್ನುಹೆಚ್ಚಿಸಿದ್ದಾರೆ. ಸ್ಟಾಂಪ್ ವೆಂಡರುಗಳಲ್ಲಿ, ಸ್ಟಾಂಪ್ ತೆಗೆಯುವಾಗಲೂ, ಸಬ ರಿಜಿಸ್ಟ್ರಾರ್ ಆಫೀಸಿನಲ್ಲಿಯೂ, ಮಾಮೂಲು ಪದ್ಧತಿಗಳನ್ನು ತಪ್ಪಿಸಬೇಕು. ಅಬ್ಕಾರಿ ಇಲಾಖೆಯಲ್ಲಿರುವ ಅವ್ಯವಸ್ಥೆಯನ್ನು ತಪ್ಪಿಸಬೇಕು. ಜಮಾಬಂದಿ ಕಾಲದಲ್ಲಾಗುವ ಮನ್ಸಾಯವನ್ನು ಇನ್ನುಮುಂದೆ ನಿಲ್ಲಿಸಬೇಕು. ಸರ್ಕಾರದವರ ಗಮನಕ್ಕೆ ಬಂದಿರುವ ವಿಷಯಗಳನೇಕವನ್ನು ಬಿಟ್ಟು. ಬಡರೈತನಿಗೆ ಕಷ್ಟವಾಗುವಂತೆ, ರಿ. ಕಮಿಟಿಯವರು ವರ್ತಿಸಿದುದಕ್ಕೆ ನಾವೆಲ್ಲಾ ವಿಷಾದಿಸುವೆವು.

ಹಾಸ್ಯತೋಷಣಿಹತ್ತು.

[ಕಳೆದ ಸಂಚಿಕೆಯಿಂದ ಮುಂದುವರಿದಿದೆ.]

ಒಂದೊಂದುಸಲ ಬಿಲ್ಲಳಿಕ್ಕರುಗಳು ಹೊಸರಿನ ಮೇಲೆ ಬಂದುನಿಂತಾಗ ಬಾಳ್ಳುದ್ಧವು ಮುಕ್ತಾಯುದ್ಧವಾಗಿ ಪರಿಣಮಿಸಿ, ಹಮಾಸ್ಕಾಗಿ ರಕ್ತ ಕಲೆಗಳು ಕಾಣಬೇಕಾಯುತ್ತವೆ ಉಂಟು. ಇಂಥಹಲಿಕೀಕ್ರಮದಲ್ಲಿ ಒಡಗದಿತಕೊಂಡೂ, ತಮತಮ ರಾಜರವರು ಓಡಿ ಹೋಗಿ ತಮಿಗೆ ಯುದ್ಧದಿತಕೊಳ್ಳೂ, ಹೇಳಿ ಕಿವಿಮಾ - ತ್ಯಾಗದಿಂದ ಕಾಪಾಡಿಕೋ.

ಇದೇ ಬೀಳಾಕಾರರು ಸೂಚನೇ ಪಾಕ್ಕನ್ನು ಈ ರೀತಿಯಲ್ಲಿ ಬೆಳೆಸಿರುತ್ತಾರೆ. ಸಾವಿರಾರು ತಿಂಗಳಕ್ಕಿತ್ತ ಸಂತರ ಸಾಮಾನ್ಯ ಮಾನಸಾಗಿ ಧನವಲ್ಲಿಂದ ಬರಬೇಕು? ಹಾಲನ್ನು ಬರಿದು ಹಬ್ಬಿಗೆ ಹಾಕಿದಂತೆ ಮತ್ತೊಬ್ಬರ ಹಣವನ್ನು ಮೂರೆ ಸೈದು ತ್ಯಾಗಮಾಡಿ ಮೋಕ್ಷವನ್ನು ಪಡೆಯಬೇಕೆಂಬ ಅಭಿಲಾಷೆಯು ತುಟ್ಟಬಹುದು. ಅದಕ್ಕೋಸುಗ ಎಲ್ಲರಿಗೂ ವಿಷದವಾಗಿ ತಿಳಿಯುವಂತೆ ಯಾರ ಧನವನ್ನು ಬಯಸ ಬೇಡ, ಎಂದು ತೋರಲಾಗಿದೆ.

ಮೇಲಿನ ಬೀಳೆಯಲ್ಲಿ ಒಂದು ಲೋಪವುಂಟು. ಸ್ವಿತ್ ಎಂಬ ನಿಜಾಕ್ಕೆ ಯಾರ ಅರ್ಥವನ್ನು ಕೆಟ್ಟಿಲ್ಲ. ಇದಕ್ಕೆ ಅರ್ಥ ಇಲ್ಲದೆಂದು ಅವರ ಭಿಪ್ರಾಯ. ಹೀಗೆ ಹೇಳಲು ಕಾರಣವೇನೆಂದರೆ, ಈ ಬೀಳಾ ಕಾರರು ಅಂತ್ರೈಯನ್ನೋದಿಲ್ಲ ಇದು ಸ್ವಿತ್ ಎಂದಿರಬೇಕು. ಈಗಾಗಿದ್ದರೆ ಈ ಸ್ವಿತ್ ಹೀಗೆ ಅರ್ಥವಾಗುವುದು ಸ್ವಿತ್ತನ ಧನವನ್ನು ನೀವು ಬಯಸ ಬೇಡಿರಿ. ಇದಕ್ಕೆ ಬೈಬಲ್ ಸಲ್ಲಿಯೂ ಆಧಾರವಿದೆ. ಧಾರ್ಮಿಯರೂ ಯಾರು ನೀಯರೂ ಕ್ರಿಸ್ತವನ್ನು ಶಿಲ್ಪಿಸಿ ಲೋಕಸುಗ ಪ್ರಶ್ನೆಯನ್ನು ಹಾಕಿದರು - ನಾವು ನೀಸರಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಬೇಕೇ ಅಥವಾ ಬೇಡವೆ? ಕ್ರಿಸ್ತನು ಆಗ ಬೆಲಾಪಣೆಯಲ್ಲಿದ್ದ ನಾಣ್ಯವನ್ನು ತೋರಿಸಿ ಎಂದನು. ಅದರ ಮೇಲಿನ ಚಿತ್ರವನ್ನು ತೋರಿಸಿ, ನೀಸರನ ಹೆಸರನ್ನು ಹೇಳಿದೆ ಕ್ಕಿಟ್ಟುಕೊಳ್ಳುವರಿ ಎಂದು ಕೇಳಿದನು. ಇಲ್ಲಿಯೂ ಸಹ ಸ್ವಿತ್ತನ ಹೆಸರನ್ನು ಬಯಸದೆ ನೋಕ್ಕೆನ್ನು ಹೊಂದಿರಿ ಎಂದು ಘಂಟಿ ಹೊಡೆದಾಗಿ ಹೇಳಲಾಗಿದೆ.

ಉಪನಿಷದ್ವಾಕ್ಯಗಳಲ್ಲಿ ಅರ್ಥವಿಲ್ಲದ ಶಬ್ದಗಳೆಂದು ಎಂದುದು ಕೇವಲ ಅಜ್ಞಾನ, ಸ್ವಿತ್ ಎಂಬುದು ಅಂ ಬರುವ ಕಾರಣವೆನು? ಅಗಿನ ಕಾಲದಲ್ಲಿ ಮುದ್ರಣಾಲಯಗಳೂ, ಪುಸ್ತಕ ಸೋಡುವುದೂ ದುರಲ್ಲಿ. ಅಲ್ಲದೆ ಮೋಟಿಕ್ಕೆ ಇಲ್ಲ ದಿದ್ದರೂ ಒಂದು ದೊಡ್ಡ ಕೊರತೆ. ಆದುದರಿಂದ ಕಸ್ಮಿನ್ನೇಂ ಎಂದು ಹೇಳಿದಾಗ ಕಸ್ಮಿನ್ನೇಂ ಎಂದು ಬರೆದುಕೊಳ್ಳುವುದೇನೂ ಅಶ್ಚರ್ಯವಲ್ಲ.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗಂ
ಸಮಾಃ ಏವಂ ತ್ವಯಿ ನಾನ್ಯಥೇ = ತೋ = ಸ್ತಿ ನ
ಕರ್ಮ ಲಿಪ್ಯತೇ ನರೇ ॥೨॥

ವಾಸ್ತವ್ಯ॥ ಇಲ್ಲಿ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷಗಳು ಬಾಳುವುದಕ್ಕೆ ಬಯಸಬೇಕು. ಹೀಗಿರುವ ಮನುಷ್ಯನಾದ ನಿನಗೆ ಕರ್ಮವು ಲೇಪವಾಗದೆ ಇದಕ್ಕಿಂತ ಬೇರೆಯಾದ ಯಾವ ಮಾರ್ಗವೂಇಲ್ಲವೆ

[ಸಂಗ್ರಹ]

ಇದು ವಿಜ್ಞಾನ.

೩೦ ವಯಸ್ಸಿನ ತರುಣರೊಬ್ಬರಿಗೂ ಅವರ ಸ್ನೇಹಿತನಿಗೂ ನಡೆದ ಸಂಭಾಷಣೆ ಕೇಳಿ :—

ಸ್ನೇಹಿತ—ಏನು.....ರಾಯರೇ ! ನಿಮಗೇನು ಮಕ್ಕಳಿಲ್ಲವೆ?

ತರುಣ—ನನಗೆ ಮಕ್ಕಳು ಬೇಡ. ಅದಕ್ಕಾಗಿ ಸಂತಾನವನ್ನು ನಿರೋಧಿಸುವ ಪಕ್ಷದವನು ನಾನು

ಸ್ನೇ — ಅದೇ ಆ 'ಬರ್ತ್ ಕಂಟ್ರೋಲೋ' !

ತ — ಹೌದು. ಹೆತ್ತು, ಹೆತ್ತು, ಹೆಂಗಸರು ಹಾಳಾಗುತ್ತಾರೆ. ದುಡಿದು, ದುಡಿದು, ಬಡತನ ಸಹಿಸಲಾರದೆ ನಾವು ಹಾಳಾಗುತ್ತೇನೆ. ಆ ತಾಪತ್ರಯವೇ ಬೇಡ ದೇಶವೆಲ್ಲ ಹಾಳಾಗಿ ಹೋಗುತ್ತಿದೆ. ಆರೋಗ್ಯ ಬಡತನ, ದೌರ್ಬಲ್ಯ.

ಸ್ನೇ — ಇದಕ್ಕೆಲ್ಲ 'ಬರ್ತ್ ಕಂಟ್ರೋಲು' ಔಷಧವೋ?

ತ — ಹೌದು. ಜರ್ಮನಿ ಚರಿತ್ರೆ ಓದಿ,ಗೊತ್ತಾಗುತ್ತೆ. ಪ್ರತ್ಯಯದೊಳಗೆ ವಿವಾಹವಾದ ಸತಿಪತಿಗಳಲ್ಲಿ ೧೦೦ ಕ್ಕೆ ೫೫-೪೦ ಮಂದಿಗೆ ಮಕ್ಕಳೇ ಇಲ್ಲ! ಆ ದೇಶಕ್ಕೆಷ್ಟೋ ಸುಖವುಂಟಾಗಿದೆ. ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆಷ್ಟೋ ಸಹಾಯವಾಗಿದೆ. ಸಂತಾನ ಹೆಚ್ಚಿದಷ್ಟೂ ಸಂಕಟ ಹೆಚ್ಚು. (ವಿ. ಶ.)

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೫೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟರಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7-30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು ಸಮಾರು ೨೫ ಕೊಂಟಿಜನಗಳಿಗೆ ಚನ್ನಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದುದು ದೇಶಾಭಿಮಾನಿಗಳ ಅಗತ್ಯಕರ್ತವ್ಯವಾಗಿದೆ ಭಾವೀ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯು ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲಿಚ್ಛೆಯುಳ್ಳವರು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮ ಗಾಂಧಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ.		
"	ಒಂದನೆಯ ಭಾಗ	೦—೧೨—೦
"	ಎರಡನೆಯ ಭಾಗ	೦—೧೨—೦
	ಮೂರನೆಯ ಭಾಗ	೦—೯—೦
"	ನಾಲ್ಕನೆಯ ಭಾಗ	೧—೮—೦
"	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರ ಬರೆದ " ಅನಾಸಕ್ತಿ ಯೋಗ "		೦—೧೨—೦
(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗ ಉಚಿತ)		
ಮಹಾತ್ಮ ಗಾಂಧಿ "	ಚಿಕ್ಕ ಪುಸ್ತಕ	೦—೧—
ರಾಷ್ಟ್ರೀಯ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor.		1—0—0
ಹಿಂದೀ ಬಾಲ ಶೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
"	ನಂ ೨	೦—೨—೦
ಹಿಂದೀ ಜಹಲೀ ಪುಸ್ತಕ		೦—೫—೦
ಡೂಸರೀ		೦—೬—೦
ಮಜೇದಾರ ಕಹಾನಿಯಾ		೦—೫—೦
ಅನುವಾದಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ.

ಕರ್ನಾಟಕ ಕೇಸರಿ ಕಾರ್ಯಾಲಯ, ಬೆಳ್ಳಾರಿ.

ಪ್ರೇಮ ಚಿಕಿತ್ಸಾಲಯ:

ಕಿಷ್ಣಮಾಚಾರ್ಲು ರೋಡು ಬೆಳ್ಳಾರಿ.

[ಸಬ್ ಏಜೆಂಟರು :—ಝಾಂಡ ಫಾರ್ಮಕ್ಯೂಟಿಕಲ್ ವರ್ಕ್ಸ್, ಬೊಂಬಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನಮ್ಮಲ್ಲಿ ವಿದ್ಯಾ ಶ್ರದ್ಧೆ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

ವಿ. ಎಂ, ಗಿರಿ ಅಂಡ್ ಸನ್ಸ್.

ತೇರುಬೀದಿ ಬೆಳ್ಳಾರಿ.

ಏಜಂಟರು :- ಲೋಧ್ರಾ

(ಗರ್ಭಾಶಯ ರೋಗನಿವಾರಣ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳು ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾಗುವ ಚಿಲ್ಲರೆವಸ್ತುಗಳೂ, ಸ್ವೀಡನರಿ ಸದಾರ್ಥಗಳೂ, ಸುಲಭ ಬೆಲೆಗೆ ದೊರೆಯುತ್ತವೆ.

FOR SALE

1 Roteria [illegible]—

Prints 5" × 8" matter neatly, in good working order.

Price moderate & reasonable

2 New cyclostyle Machines—

Used only twice or thrice. Perfectly new.

Price considerably cheaper. Apply sharp—

KARNATAKA KESARI OFFICE

Bellary.

ಶ್ರೇಷ್ಠವಾದ ಮಿಷನ್ ದಾರದ ಪುಂಡೆಗಳು.



ಈ ದಾರದ ಪುಂಡೆಗಳು, ಗಟ್ಟಿತನವುಳ್ಳವು, ಸಮವಾಗಿದ್ದು, ಇರುವುದರಿಂದ ಮಿಷನ್ನಿನಲ್ಲಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ ಸುಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳಿ, ಕಪ್ಪು, ಕಾಕಿ, ಗುಲಾಬಿ, ಇತರ ರಂಗುಗಳಲ್ಲಿ ಆಕರ್ಷಕ ಸೃಷ್ಟಿದ ದಾರದ ಪ್ಯಾಕುಗಳು ಕಡಿಮೆ ಧಾರಣೆಗೆ ದೊರೆಯುತ್ತವೆ

ಪತ್ರ ಬರೆದು ತರಿಸಿಕೊಳ್ಳಿರಿ

K. V. & Sons,
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್,
ತೇರು-ಬೀದಿ ಬಳ್ಳಾರಿ

THE GRADUATES' TRADING ASSOCIATION;

General merchants, Gramophone Dealers & News Agents,

CAR STREET BELLARY.

ದಿ ಗ್ರಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್, ಗ್ರಾಮಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜೆಂಟ್ಸ್,

ತೇರು ಬೀದಿ ಬಳ್ಳಾರಿ.

ದಿ ಎಂಪೈರ್ ಅಕ್ಷರ ಇಂಡಿಯನ್ ಟೈಪ್ ರೈಟಿಂಗ್ ಇನ್ಸ್ಟಿಟ್ಯೂಟ್, ಲಿಮಿಟೆಡ್.

ಈ ಕಂಪನಿಯ ಕೆಲವು ಲಕ್ಷಣಗಳು

೧. ಈ ಕಛೇರಿ ಬಹಳ ಮಟ್ಟದ ನಡೆದ ಸ್ಥಳದಲ್ಲಿ ಸ್ಥಾಪಿತವಾಗಿದೆ.

೨. ಪ್ರಾಂತ್ಯದಾದ್ಯಂತ ಪ್ರಾಂತ್ಯ ಶಾಖೆ ಪ್ರಸ್ತಾಪಿಸುವುದು.

೩. ಕಂಪನಿಯ ಬಿಲ್ಲುಗಳನ್ನು ಇಂಡಿಯನ್ ಪ್ರೆಸ್ಸ್ ಲಿಮಿಟೆಡ್ ಮುಖಾಂತರ ಸಂಸ್ಥೆಗಳಲ್ಲಿ ಪ್ರಸಿದ್ಧಪಡಿಸುವುದು.

೪. ಪ್ರ[illegible] ಯಂತ್ರದ ಪರ್ಯಾಯ ಬೆಲೆ ಕಂಪನಿಗೆ ದರ್ಜೆಯ ಕಡಿಮೆ.

೫. ಪ್ರತಿಯೊಂದು ತೊಡಕಿನ ಸರಿಯಾಗಿದ್ದೂ ಇಲ್ಲದೆ ಸರಿಯಾದ ನಿರ್ಣಯ.

೬. ಕಂಪನಿಯ ಪ್ರತಿಯೊಂದನ್ನು ಹೆಚ್ಚು ಕೆಲಸ ಇಲ್ಲದೆ ಉಪಯೋಗಿಸಿಕೊಳ್ಳ ತಕ್ಕುದು.

೭. ಕಂಪನಿಯ ಪ್ರತಿಯೊಂದನ್ನು ಸ್ವಚ್ಛತೆಗಾಗಿ ಪ್ರಯೋಗಿಸುವುದು.

೮. ಪ್ರತಿಯೊಂದು ಪ್ರತಿಕೃತಿಯನ್ನು ಕಡೆಯಿಂದ ಸಂದರ್ಭಾನುಸಾರ ಅಚ್ಚು ಕಡಿಮೆ ಕೊಡಲಿ ಪ್ರಯತ್ನ ಮಾಡುವುದು.

ವಿಳಾಸ— ಎಂ. ವೆಂಕಟೇಶರಾವ್. ಬಿ. ಎ.
ಸತ್ಯನಾರಾಯಣ ಪೇಟೆ
ಬಳ್ಳಾರಿ

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE,
& Commercial Agency.
Bangalore Road, Bellary.

Agents & dealers in Wood-stock, Corona and other typewriters of all makes, best ribbons carbons, and Swides in fountain pens etc.

HOW TO LEARN TOUCH TYPE-WRITING IN 20 days shorthand a speciality.

(Seperate accommodation for lady students)

Job works & repairs undertaken on moderate charges.

ಆಗಾಗ್ಗೆ ಕಷ್ಟ ಕಡಿಮೆ ಪ್ರಯತ್ನ ಮಾಡಲಾಗುವುದು.

Prospectus sent free on application.

ARYA VAIDYALAYA BELLARY

Pandit C. S. Shastry's Patent Medicines

MONEY RETURNED IF NOT CURED

1 FEVER KILLER.

Any fever completely cured in 4 days — 8 oz Bottle Rs 2—0—0

2 NAVAJEEVAN PAK.

King of Tonic foods (sweet) — 1 lb Rs 1—8—0

3 PRAMEHA BHANJINI

Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್ ಸಿ. ಎಸ್. ಶಾಸ್ತ್ರಿಯವರ ಪೇಟೆಂಟ್ ಔಷಧಗಳು. ಗ್ಯಾರಂಟಿಯಿದ್ದ ಹಣ ಪರತ

1. ಜ್ವರ ಸಂಹಾರಿ.

ಸಾಮಾನ್ಯ ಎಲ್ಲಾ ಜ್ವರಗಳು ನಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ. 2—0—0

2. ನವಜೀವನಪಾಕ

ಶಾಸ್ತ್ರೀಕ ರಸಾಯನ — ಒಂದು ಪೌಂ ರೂ 1—8—0

3. ಪ್ರಮೇಹ ಭಂಜಿನಿ

ಎರಡು ವರ್ಷದಿಂದ ಇರುವ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ — ರೂ 6—0—0

ಈ ಔಷಧಾಲಯದಲ್ಲಿ ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಒಂಬತ್ತನೆ ಮಾಸದ ಸುಖ ವ್ಯಾಧಿಗಳು ಎಷ್ಟು ಹಳೆಯದಾದರೂ ಕಷ್ಟಸಾಧ್ಯವಾಗಿದ್ದರೂ ಸರಿ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ವಾಸಿಮಾಡಲ್ಪಡುತ್ತವೆ. ಒಮ್ಮೆ ಬಂದು ಪರೀಕ್ಷಿಸಿದರೆ ಖಾತ್ರಿಯಾಗಿ ತೀರ್ಮಾನ ಬರುವುದು.

ಸಿ. ಎಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO AT SRI VIDYARANYA PRESS, BELLARY.

REGISTERED NO M—2736

ಕರ್ನಾಟಕ ಕೇಸರಿ

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ

ವಾರ್ಷಿಕ ಚಂದಾ		ಸಂಪಾದಕ	ಆರು ತಿಂಗಳಿಗೆಂದಾ.	
ಸ್ವದೇಶದವರಿಗೆ	೨—೮—೦	ಟೀಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.	ಸ್ವದೇಶದವರಿಗೆ	೧—೪—
ಪರಸ್ವದೇಶದವರಿಗೆ	೩—೮—೦	(ಬಿಡಿಪ್ರತಿ ೦—೧೧)	ಪರಸ್ವದೇಶದವರಿಗೆ	೧—೧೨—

ವರ್ಷ ೧ ಬಳ್ಳಾರಿ ನಗರ—ನವಂಬರ್ ೩೦ನೇ ಸೋಮವಾರ ೧೯೩೧ ಸಂಚಿಕೆ

ಸುರಾಜ್ಯಕ್ಕಿಂತಲೂ, ಸ್ವರಾಜ್ಯವೇ ಲೇಸು.

ಹಿಂದೂಸ್ಥಾನವು ಪರದೇಶೀಯರಿಂದ ಆಳಲ್ಪಡುವವರೆಗೂ,

ಹಿಂದೂ ಮುಸಲ್ಮಾನ್ ಅನೈಕಮತ್ಯವೃದ್ಧಿಯು,

ಪೋಷಣೆಯಾಗುತ್ತಲೇ ಇರುವುದು.

ಭಾರತೀಯರ ಅಭ್ಯುದಯವು, ಭಾರತೀಯರನ್ನೇ ಅವಲಂಬಿಸಿರುವುದು.

ಸ್ವರಾಜ್ಯವು, ತ್ಯಾಗ, ದುಃಖಸಹನೆಗಳಿಂದಲ್ಲದೆ, ಬೇಡಿಕೆ, ಚರ್ಚೆಗಳಿಂದ,

ದೊರೆಯುವುದಿಲ್ಲ.

(ಮಹಾತ್ಮಗಾಂಧಿ.)

ಉತ್ತಮ ಜಮೀನು ಬಗ್ಗೆ

ಕಿರ್ಲೋಸ್ಕರ ನೇಗಿಲನ್ನು ಉಪಯೋಗಿಸಿರಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನೆ ಮಾಡುತ್ತದೆ.

ನೇಗಿಲುಗಳ ಸಿಫಾರಸ್ ಪತ್ರವೊದರೆ, ಒಕ್ಕಲಿಗರ ಸಂತೋಷ ವೆಂಬುವದನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ನಮೂನೆಯ ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್.

ಕಿರ್ಲೋಸ್ಕರವಾಡಿ

ಜಿ. ಸಾತಾರಾ.

ಬಿಪ್ಪರ್

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಪನಸ್ಪತಿ ಯುಕ್ತ

ನರ್ವಸ್ಟೆಂಥಿಂಗ್ ಪಿಲ್ಸ

ಅಥಾತ

ಬಲವಂತ ಗುಟಿಕಾ.

ಈ ಗುಳಿಗೆಗಳಿಂದ ರಕ್ತ ಶುದ್ಧಿ, ಧಾತು ಪುಷ್ಟಿಯಾಗುವದು, ಕಾಮೋತ್ತೇಜಿಸಿ ವಾಗಿ ನಪುಂಸಕತ್ವವು ನಾಶವಾಗುವದಲ್ಲದೆ ಮತೇ ರತಿಸುಖವನ್ನು ಅನುಭವಿಸಲಿಕ್ಕೆ ಬರುತ್ತದೆ. ಹಾಗೂ ಉಷ್ಣದ ರೋಗಗಳಿಲ್ಲ ಗುಣವಾಗುತ್ತದೆ. ಮತ್ತು ಅನ್ನಪ ಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಶೌಚ ಸಾಫ ಆಗುವದು ಇದು ಅಲ್ಲದೆ ವಾತ, ಪಿತ್ತ, ಕಫ, ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯೂ ಹೋಗುವವು. ಪೂರ್ಣ ಗುಣಕ್ಕೆ ೬ ಡಬ್ಬಿ ತಕೊಳ್ಳಿರಿ. ಒಂದು ಡಬ್ಬಿ ಕಿಮ್ಮತ್ತು ೧೦ ಆಣೆ ೬ ಡಬ್ಬಿ ಕಿಮ್ಮತ್ತು ೧—೧೭—೦ ಒಂದುಡಬ್ಬಿ ಕಿಮ್ಮತ್ತು ೬ ರೂ. ಇದಲ್ಲದೆ ಒಂದು ಡಬ್ಬಿ ಶಮೀಕರ ಸಿಗುವದು ಟಪಾಲು ಪ್ಯಾಕಿಂಗ ಖರ್ಚು ಬೇರೆ ಬೇಳುವದು ಏಜಂಟರ ನಿಯಮ ತರಿಸಿಕೊಳ್ಳಿರಿ. ಬಾತಿ ರೋಗದ ಬಗ್ಗೆ ವಿಶೇಷ ಖುಲಾಸ ಡಬ್ಬಿ ಸಂಗಡ ಇದ್ದ ಅನುಭಾನ ಪತ್ರದಲ್ಲಿ ಇರುತ್ತದೆ. ಅಶಕ್ತತೆ ಮತ್ತು ಕಾಮ್ಲ ತೆಯ ರೋಗದ ಹೋಲೆ ಸ್ತ್ರೀಯರಿಗೆ ಮತ್ತು ಮುದುಗರಿಗೆ ಸಹ ಈ ಗುಳಿಗೆಗಳು ಬಹಳ ಉಪಯೋಗ ಪಡುತ್ತವೆ.

ಎಸ್. ಪಿ. ಕಪಸೌ ಮತ್ತು ಸನ್,

ಮು, ಪೋಸ್ಟ—ಪಿಕ್ಸಾಣಿ [ಜಿ. ಬೆಳಗಾಂವ.]

ಹೋಲ ಏಜಂಟ - ಶ್ರೀ ಹನುಮಾನ ಪಿಲ್ಸ್ಸ್ ಬಂಬಯಿ ಪರೇಳ.

TO LET

ಹುಬ್ಬಳ್ಳಿಗೆ ಬರುವರು.

ಪಂಡಿತ ಜವಾಹಿರಲಾಲ ನೆಹರು.

ಶ್ರೀ. ಎಸ್. ಎಸ್. ಹರ್ಡೀಕರವರು ಹುಬ್ಬಳ್ಳಿ ಸೇವಾದಲ ಕಛೇರಿಯಿಂದ ಹೀಗೆ ತಿಳಿಸಿದ್ದಾರೆ.

"ಮುಂದಿನ ತಿಂಗಳು (ಡಿಸೆಂಬರ) ೧೮ ನೆಯ ತಾರೀಖಿನ ದಿವಸ ಪಂಡಿತ ಜವಾಹರ್ ಲಾಲ್ ನೆಹರು ಯವರು ಹುಬ್ಬಳ್ಳಿ, ಬಾಗಲಕೋಟೆಗಳನ್ನು ಸಂದರ್ಶಿಸುವರು. ಹುಬ್ಬಳ್ಳಿಯಲ್ಲಿ ಡಿಸೆಂಬರ ೧೮ ನೆಯ ದಿವಸ ಅಖಿಲ ಭಾರತೀಯ ಸ್ವದೇಶೀ ವಸ್ತು ಪ್ರದರ್ಶನವನ್ನು ತೆರೆಯುವುದಕ್ಕಾಗಿ ಮತ್ತು ಹುಬ್ಬಳ್ಳಿಯಲ್ಲಿ ಹಿಂದೂಸ್ಥಾನೀ ಸೇವಾದಲದ ಮುಖ್ಯ ಕಚೇರಿಯ ಮತ್ತು ಬಾಗಲಕೋಟೆಯಲ್ಲಿಯ ಸೇವಾದಲದ ತಿಕ್ಷಣ ಸಂಸ್ಥೆಯ ಕಾರ್ಯಕಲಾಪಗಳನ್ನು ನೋಡುವುದಕ್ಕಾಗಿ ಮಾತ್ರ ಪಂಡಿತ್ ಜೀಯವರು ಸದ್ಯಕ್ಕೆ ಕರ್ನಾಟಕಪ್ರಾಂತಕ್ಕೆ ಬರುತ್ತಿದ್ದಾರೆ. ಅವರು ಮೇಲಿನ ಕಾರ್ಯಗಳನ್ನು ಮುಗಿಸಿಕೊಂಡು ಕೂಡಲೇ ಮುಂಬಯಿಗೆ ಹೋಗುವವರಿದ್ದಾರೆ. ಆದ್ದರಿಂದ ಈ ಪ್ರವಾಸದಲ್ಲಿ ಕರ್ನಾಟಕ ಪ್ರಾಂತದಲ್ಲಿಯ ಬೇರೆಯಾವ ಸ್ಥಳಕ್ಕೂ ಹೋಗಲು ಪಂಡಿತಜೀಯವರಿಗೆ ಸಾಧ್ಯವಾಗುವಂತಿಲ್ಲ."

ಸಂಪಾದಕೀಯ ವಿಚಾರಗಳು.

ಕಾಲ ಪರಿಮಿತಿಯು ಪ್ರತಿಬಂಧಕವೇ?

ಮನುಷ್ಯನ ಎಲ್ಲಾ ಹಕ್ಕುಗಳನ್ನು ನಿರ್ಧಾರಣೆ ಮಾಡುವುದು, ಪಾರಿಶ್ರಾಮಿಕ ಉದ್ಯೋಗಗಳ ಸದ್ಯದ ಹೀನ ಸ್ಥಿತಿಯನ್ನು ಸುಧಾರಣೆ ಮಾಡುವುದ, ಕೋಟಿಗಟ್ಟಲೆ ಜನರ ನಿಸ್ಸಹಾಯ ಸ್ಥಿತಿಯನ್ನು ಪರಿಹಾರ ಮಾಡುವುದ, ಆಳರವರು ತಮ್ಮ ರಾಜ್ಯಭಾರ ಕಾಲದಲ್ಲಿ ಮಾಡಿದ ಸಾಲಗಳ ನಿವೇಚನೆಯನ್ನು ಭಾರತದ ಹಿತದೃಷ್ಟಿಯಿಂದ ವಿಮರ್ಶಿಸುವುದು, ಸ್ವಾರ್ಥ ಲಾಭಕ್ಕಾಗಿ ಮಾಡಿದ ಸಾಲಗಳನ್ನು ಬ್ರಿಟಿಶರಿಗೇ ಒಪ್ಪಿಸುವುದ, ಯೂರೋಪಿಯನರಾಗಲೀ, ಹಿಂದೀಯರಾಗಲೀ, ಅನ್ಯಾಯ ಮಾರ್ಗಗಳಿಂದ ಆಸ್ತಿ ಪಾಸ್ತಿಗಳನ್ನು ಸಂಪಾದಿಸಿದ್ದರೆ, ವಿಚಾರಿಸಿ, ನ್ಯಾಯನಿರ್ಣಯ ಮಾಡುವುದು." ಮುಂತಾದ ಮುಖ್ಯ ವಿಷಯಗಳು, ಹಿಂದೂಸ್ಥಾನಕ್ಕೆ ಸ್ವರಾಜ್ಯ ಬಂದೊಡನೆ ವಿಶದವಾಗಿ ವಿಚಾರಣೆಗೊಳಪಡುವುವು, ಎಂಬುದಾಗಿ ಮಹಾತ್ಮಾಜಿಯವರು ಪರಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದರು. ಸರ್ ಪುರುಷೋತ್ತಮ ದಾಸ್, ಮಾಲವೀಯಾಜೀಯವರೂ ಕೂಡ ಈ ಹೇಳಿಕೆಗಳನ್ನು ಸಮರ್ಥಿಸಿದರು.

ಸರ್. ಸಪ್ರೂ ಮತ್ತು ಅವರನ್ನು ಹೋಲುವ ಇತರ ಮಿತವಾದಿಗಳೂ, ಈ ಹೆಸರುಗಳು ರಾಷ್ಟ್ರೀಯ ಪ್ರಭುತ್ವಕ್ಕೆ ದಿವ್ಯದ ಅಸಮಂಜಸನೆಂತ ವಾದಿಸಿ, ಮಹಾತ್ಮಾಜಿಯವರನ್ನು ಹೀಯಾಳಿಸಿದರು.

ಇಂಗ್ಲೀಷರ ರಾಜ್ಯ ಭಾರವೇ ಇದ್ದು ಕೆಲವು ಕಣ್ಣೊರಸುವ ಸುಧಾರಣೆಗಳು ಬಂದರೆ ಸಾಕೆಂಬ ಆಂತರ್ಯೋದ್ದೇಶದಿಂದ ಮಿತವಾದಿಗಳ. ಈ ರೀತಿಯವರಾಡುತ್ತಿದುವರು. ಸರ್ಕಾರದವರಿಂದ ಪದನಿಗಳನ್ನು ಸಂಪಾದಿಸಿ, ಆಗಾಗ್ಯೆ ಅವರ ದಾಕ್ಷಿಣ್ಯಕ್ಕೊಳಗಾಗುತ್ತಿರುವ ಇವರ ಮನೋಭಾವನೆಗಳನ್ನು ಎಲ್ಲರೂ ತಿಳಿದವರಾಗಿರುತ್ತಾರೆ.

ಇಂಗ್ಲೀಷ ಸರ್ಕಾರರು, ತಮಗಿರುವ ರಾಜಕೀಯ ಅಧಿಕಾರದಿಂದ, ಪ್ರತ್ಯೇಕ ವ್ಯಾಪಾರೀಸೌಕರ್ಯಗಳನ್ನು ಹೊಂದಿ ಅಪರಿಮಿತ ಲಾಭಗಳನ್ನು ಸಂಪಾದಿಸುತ್ತಿರುವರು. ತಮ್ಮ ವ್ಯಾಪಾರ ಸೌಲಭ್ಯಗಳಿಗೆ ಕುಂದು ಬರದಿರುವ ಎಂಥಾ ಪ್ರಭುತ್ವವನ್ನಾದರೂ ಅವರು ಸಮರ್ಥಿಸುವರು. ಪರರಾಷ್ಟ್ರಗಳೆಲ್ಲಾ ಹಾಳಾಗಿ ಹೋದರೂ, ಅಧಿಕಾರ ಬಲದಿಂದ "ಸೂಪರೇಟಿ, ಕ್ಯಾಪಿಚ್ಯುಲೇಷನ್ಸ್ ಟ್ರೇಡ್ ಕಣಿಪನ್ಸ್ ಸ್ಪೆಷಲ್ ಪ್ರಿಫರೆನ್ಸ್" ಎಂಬ ಬೇಸಿ, ಬೇರೆ ಸರುಗಳಿಂದ ತಮ್ಮ ವ್ಯಾಪಾರವನ್ನು ಅಪರಿಮಿತವಾಗಿ ವೃದ್ಧಿ ಮಾಡಿರುವ, ಸ್ವಾರ್ಥವನ್ನು ಮಾತ್ರ ಬಿಡಿಸುವ, ಈ ಜನರಿಗೆ ಪರರಾಷ್ಟ್ರದ ಸ್ವಾತಂತ್ರ್ಯೋದ್ಯಮದಲ್ಲಿ ಏನು ಸಮತೆ?

ಕಾಂಗ್ರೆಸ್ ಮುಖಂಡರೂ, ಮತ್ತು ಸ್ವದೇಶೀ ವ್ಯಾಪಾರ ಸಂಘಗಳ ಪ್ರತಿನಿಧಿಗಳೂ ಈ ಅನ್ಯಾಯಕ್ಕೆ ಒಪ್ಪುವುದಿಲ್ಲ. ಸುಜ್ಞಾತ್ಮರು ಮೇಲೆ ಹೇಳಿರುವ ಹಕ್ಕುಗಳನ್ನೆಲ್ಲಾ, ಸ್ವಾಧೀನಾಪೇಕ್ಷಿಯಾದ ಯಾವ ಭಾರತೀಯನಾದರೂ, ಸಮರ್ಥಿಸುವನು. ಕಾಲಪರಿಮಿತಿಯಿಂದ ಈ ಪ್ರತಿಬಂಧಕಗಳು ಚಿರವಾಗಿರಬೇಕೆಂದು, ಹೇಳುವುದು ಶುದ್ಧ ಅವಿವೇಕವು.

"There is no limitation running against a wrong."

ಅಕ್ರಮವನ್ನು ತೆಗೆದು ಹಾಕಲು ಕಾಲ ಪರಿಮಿತಿ ಇಲ್ಲವೆಂದು ಸುಜ್ಞಾತ್ಮರು ಸಾರುವುದು ಅಸ್ಪಷ್ಟತವಲ್ಲ.

ಆಧುನಿಕ ತುರ್ಕೀಸ್ಥಾನದಲ್ಲಿ ವಿದ್ಯಾ ಪ್ರಸಾರ.

ತುರ್ಕೀಸ್ಥಾನದಲ್ಲಿ ರಾಷ್ಟ್ರೀಯ ಜೀವನಕ್ಕೆ ಪೂರ್ವದ ಚಳವಳಿಗೂ ಮುಖಂಡರಾದ ಗಾಜಿ ಮುಸ್ತಾಫ್, ಕೇಮಾಲ ಪಾಷಾರವರು ಪ್ರಜಾ ಪ್ರಭುತ್ವವನ್ನು ಸ್ಥಾಪಿಸಿದರು. ಈಗಿರುವ ಪ್ರಭುತ್ವವು ಜಾರಿಗೆ ಬರುವ ಮುಂಚೆ ತುರ್ಕಿಸ್ಥಾನವು, ಸಾಂಕುಶ ಪ್ರಭುತ್ವವಾಗಿ, ಸುಲ್ತಾನರ ಆಳಿಕೆಗೆ ಒಳಪಟ್ಟಿತ್ತು. ಆಗ ಆ ದೇಶವನ್ನು "ಸಿಕ್ ಮ್ಯಾನ್ ಆಫ್ ಯೂರೋಪ್" ಅರ್ಥಾತ್ ಯೂರೋಪದ ರೋಗೀ ಮನುಷ್ಯನೆಂದು ಕರೆಯುವ ವಾಡಿಕೆ ಇದ್ದಿತು. ಆದರೆ, ಉಜ್ವಲ ದೇಶಭಕ್ತರಾದ ಕೇಮಾಲ ಪಾಷಾರವರ ಸುಧಾರಣಾ ಯುಕ್ತವಾದ ಸುವ್ಯವಸ್ಥಿತ ರಾಜ್ಯಾಡಳಿತದಿಂದ, ಈಹೆಸರು ಹೋಗಿ ಗೌರವ ಹೊಂದಿದ ರಾಷ್ಟ್ರಗಳಲ್ಲಿ ಇದು ಒಂದಾಗಿದೆ. ದೇಶದ ಅಭಿವೃದ್ಧಿಗೆ ಈ ಮಹನೀಯರು ಸರ್ವಸ್ವವನ್ನೂ ಅರ್ಪಿಸಿದ್ದಾರೆ

ಏಷಿಯಾ ಖಂಡದಲ್ಲಿರುವ ಸಕಲ ದೇಶಗಳೂ, ಸ್ವಾತಂತ್ರ್ಯವನ್ನನುಭವಿಸಬೇಕೆಂತಲೂ, ಆದೇಶಗಳು ತಮ್ಮ ಆರ್ಥಿಕ ರಾಜಕೀಯ ವಿಷಯಗಳಿಗೆ ಯೂರೋಪಿನ ರಾಷ್ಟ್ರಗಳ ಅವಲಂಬನ ಮಾಡಬಾರದೆಂತಲೂ, ಇವರ ಉತ್ಕಟ ಇಚ್ಛೆಯಿದೆ. ಕೇಮಾಲ್ ಪಾಷಾರವರು ಅಮಲಿನಲ್ಲಿ ತಂದ ವಿದ್ಯಾ ಪದ್ಧತಿಗಳು, ಪ್ರಶಂಸಾರ್ಹನೀಯವಾಗಿವೆ. 1922 ನೇ ಇಸ್ವಿಯಲ್ಲಿ ಶೇಕಡ 10 ಮಂದಿಕೂಡ ವಿದ್ಯಾವಂತರಿದ್ದಿಲ್ಲ. ಈಗಲಾದರೋ ಶೇಕಡ 70 ಮಂದಿ ವಿದ್ಯಾವಂತರು ದೊರಕುವರು.

ವಿದ್ಯಾಭ್ಯಾಸಕ್ಕಮವು ದೇಶದೇಶೆಯ ಒಂದು ಅಂಗವೆಂದು ಅಧಿಕ ಸಂಖ್ಯಾತರಾದ ಜನರು ಭಾವಿಸುವುದೇ ಈ ತೀಳ್ವಿ ಅಭಿವೃದ್ಧಿಗೆ ಕಾರಣವಾಗಿದೆ.

ಮತ ಸಂಬಂಧವಾದ ಸಂಸ್ಥೆಗಳಲ್ಲಿಯೂ, ಕೂಡ ವಿದ್ಯಾಭ್ಯಾಸವು ನಡೆಯುವುದು. ಅಲ್ಲಿ ಕಲಾ ಪರಿಶ್ರಮಗಳನ್ನು ಕಲಿಸುತ್ತಿರುವರು. ಹೆಂಗಸರೂ ಕೂಡ, ಕಲಾ ಪರಿಶ್ರಮಗಳಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಿರುವುದು ವಿಶೇಷಾಂಶವಾಗಿದೆ. ಎಲ್ಲಾ ಶಾಲೆಗಳಲ್ಲಿಯೂ ಭೌತಿಕ ಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರಗಾಯ್ನ ಶಾಸ್ತ್ರ, ಮುಂತಾದ ಭಾಗಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಕಲಿಸುವರು. ಚರಿತ್ರೆಗೂ, ಇತಿಹಾಸಕ್ಕೂ ಎಲ್ಲಾ ಕಡೆಯಲ್ಲಿಯೂ ಪ್ರಾಶಸ್ತ್ಯವಿದೆ ಪೂರ್ವಜರು ಯಾವ ಕಾರಣಗಳಿಂದ ಸೋತು ಹೋಗುತ್ತಿದ್ದರೋ ಇವರು ಯಾವ ರೀತಿಯಿಂದ ದಿಗ್ವಿಜಯವನ್ನು ಹೊಂದಿದರೋ, ಮೇಲಾಗಿ ಪ್ರತಿಯೊಬ್ಬ ಪಟ್ಟಣಿಗನೂ, ತನ್ನ ಕರ್ತವ್ಯವನ್ನರಿಯಲಿ ಎಂಬ ಸದುದ್ದೇಶವು ಈ ಮಾಲವರಿಗಿದೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲಾ.

ವಿಲಾಯತೀ ಜನರ ಯಾಜಮಾನ್ಯದಲ್ಲಿರುವ ಶಾಲೆಗಳಲ್ಲಿ ರಾಷ್ಟ್ರೀಯ ಚರಿತ್ರೆಯನ್ನು ಸರಿಯಾಗಿ ಹೇಳದೆ ಸ್ವದೇಶಾಭಿಮಾನವನ್ನು ಹುಟ್ಟಿಸದೆ, ಹುಡುಗರನ್ನು ಕೆಡಿಸುವರೆಂಬ ಭಯದಿಂದ, ಆ ಪ್ರಭುತ್ವದವರು ಶಾಲೆಗಳನ್ನು ತನಿಖೆಮಾಡಲು ಉದ್ಯೋಗಸ್ಥರನ್ನು ಏರ್ಪಾಟು ಮಾಡಿರುವರು. ಅಂಥಾಶಾಲೆಗಳಿಗೆ ಪ್ರತ್ಯೇಕ ಶಿಕ್ಷಣ ಹೊಂದಿದ ಉಪಾಧ್ಯಾಯರನ್ನು ಕಳುಹಿಸುವರಲ್ಲದೆ ಅವರನ್ನು ದೊಡ್ಡ ಅಧಿಕಾರಿಗಳು ಬಹಳ ಗೌರವದಿಂದ ನೋಡುತ್ತಾರೆ.

ವಯಸ್ಸಾದ ಇತರರ ಅನುಕೂಲಕ್ಕೆಂದು ರಾತ್ರಿಯ ಶಾಲೆಗಳನ್ನು ಏರ್ಪಡಿಸಿರುವರು. ಈ ಶಾಲೆಗಳಲ್ಲಿ ಮುದುಕರೂ ಕೂಡ ಉತ್ಸಾಹದಿಂದ ಭಾಗ ತೆಗೆದುಕೊಳ್ಳುತ್ತಲಿರುವರು.

ಶಾಲೆಗಳಲ್ಲಿ ಮಕ್ಕಳನ್ನು ಹೊಡೆಯುವುದಿಲ್ಲ. ಅವರ ಮಾನಸಿಕ ಸ್ಥಿತಿಯನ್ನವಲಂಬಿಸಿ, ತತ್ಕಾಲ ವಿದ್ಯಾಕ್ರಮವನ್ನು ಅನುಸರಿಸುವರು.

(ಮತೇ ಪುಟದಲ್ಲಿ ಮುಂದುವರಿದಿದೆ.)

ಸೂಚನೆ— ಜಾತ್ಯೀಯರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂಬುದನ್ನು ಎಲ್ಲರೂ ತಿಳಿಯಬೇಕು.

ಸಂಪಾದಕ. ಕ. ಕೇ.

ಪರಿಣಾಮವೇನು ? ೦

ಸೊನ್ನೆಯಾಕಾರದ ಮೊಜಿನ ಪರಿಷತ್ತಿನ ಪರಿಣಾಮವು ಸೊನ್ನೆಯೆಂಬುದು ವ್ಯಕ್ತವಾಗುತ್ತಿರಿತೆ. ಬ್ರಿಟಿಷ್ ಮಂತ್ರಿವರ್ಗದವರು ಏನೋ ಮಹಾಕಾರ್ಯವನ್ನು ಮಾಡುವರೆಂದು, ಭೇರಿ, ನಗಾರಿ, ವಾದ್ಯಗಳಿಂದ ಉತ್ಸವವು ಪ್ರಾರಂಭವಾಗುವ ರೀತಿಯಲ್ಲಿ ಪರಿಷತ್ತನ್ನು ಪ್ರಾರಂಭಿಸಿದರು. ಪ್ರಧಾನ ಮಂತ್ರಿಗಳು ಜವಾಬ್ದಾರಿ ಸರಕಾರವನ್ನು ಕೊಡುವೆವೆಂತ ಭಾಷೆ ಕೊಟ್ಟರು. ವೈಸ್ರಾಯರಾಗಿದ್ದ ಲಾರ್ಡ್ ಇರ್ವಿನ್ರೂ ಕೂಡ ಒಪ್ಪಂದ ಮಾಡಿಕೊಳ್ಳುವಾಗ್ಯೆ, ಜವಾಬ್ದಾರೀ ಸರಕಾರವು ಕೊಡಲ್ಪಟ್ಟು, ಕೆಲವು ರಕ್ಷಣೆಗಳು ಮಾತ್ರ ಏರ್ಪಡುವೆವೆಂತಲೂ, ಸಾರಿದರು. ಈ ಒಪ್ಪಂದದ ಪ್ರಕಾರ ಮಹಾತ್ಮ ಗಾಂಧಿಯವರು ಲಂಡನ್ ಪರಿಷತ್ತಿನಲ್ಲಿ ಭಾಗ ತೆಗೆದು ಕೊಂಡರು ಅಲ್ಲದೆ ಪರಿಷತ್ತಿನಲ್ಲಿಯೂ, ಇಂಗ್ಲೆಂಡ್ ದೇಶದ ಲಂಕಾಷೈರು, ಆಕ್ಸ್‌ಫರ್ಡ್, ಡಾರ್ಬಿ ಕೇಂಬ್ರಿಡ್ಜ್, ಮುಂತಾದ ಪುಣ್ಯ ಪಟ್ಟಣಗಳಲ್ಲಿಯೂ, ಕಾಂಗ್ರೆಸ್ ಆಶಯಗಳನ್ನು ನಿರ್ಭಯವಾಗಿ, ಸ್ಪಷ್ಟ ರೀತಿಯಿಂದ ಪ್ರತಿಪಾದಿಸಿದರು.

ಆದರೆ ಬ್ರಿಟಿಶ್ ಮಂತ್ರಿವರ್ಗದವರು ತಮ್ಮ ರಾಜನೀತಿಯನ್ನು ಪ್ರಕಟಿಸದೆ, ನಮ್ಮನಿಮ್ಮಲ್ಲೇ ಯುದ್ಧಾಸಗಳನ್ನೆ ಎಂಬ ನೆಪವನ್ನಿಟ್ಟುಕೊಂಡು ಕಾಲವನ್ನು ದಬ್ಬುತ್ತಾ ಬಂದರು. ಕೇಂದ್ರ ಸಂಘಟನೆಯ ಯಾವ ಜವಾಬ್ದಾರಿಯನ್ನೂ ಕೊಡದೆ ಪ್ರಾಂತಿಕ ಸ್ವಶಾಸನವನ್ನೇನೋ ಇವರು ಕೊಡುವರಂತೆ ! ಸೈನ್ಯ, ಆರ್ಥಿಕ ವಿಷಯಗಳಲ್ಲಿ ಸ್ವತಂತ್ರತೆ ಯಿಲ್ಲದಿದ್ದರೆ, ಮಹಾತ್ಮ ಗಾಂಧಿಯವರು ಯಾವರಾಜ್ಯತ್ರಿಸುವದನ್ನೂ ಒಪ್ಪುವಂತಿಲ್ಲ. ಬ್ರಿಟಿಶ್ ಸಾಮ್ರಾಜ್ಯವಾದಿಗಳು ನಮ್ಮ ಭಾವನೆಗಳನ್ನು ಗೌರವಿಸುವಂತೆಯೇ ಇಲ್ಲ. ಮತವಾದಿಗಳೂ ಕೂಡ ಮಾತ್ರ ಕೆಲವು ಕೋರಿಕೆಗಳನ್ನು ಸಮರ್ಥಿಸಲಿಷ್ಟ. ಸ್ವಧರ್ಮಪ್ರಿಯರಾದ ಮುಸಲ್ಮಾನ ವೃತ್ತ ನಿಧಿಗಳೂ ಬಿಳಿಯ ಜಂಗಡಗಳ ಮುಖಂಡರಾದ ಇತರರೂ, ರಾಷ್ಟ್ರ ಕಲ್ಯಾಣಕ್ಕೆ ಕಲ್ಲು ಹಾಕಿದರು. ಇದರಿಂದ ಮಹಾತ್ಮರ ಕಷ್ಟವು ಹೆಚ್ಚು ಮಾಡುವ ಶಕ್ತಿಗೆ ಸಮಸ್ಯೆಯು ದೂರವಾದಂತಾಯಿತು

ಹಿಂದೂದೇಶದ ಅನೇಕ ಪ್ರಾಂತಗಳಲ್ಲಿ ಕೈತರ ಸ್ಥಿತಿಯು ಸಂಕಟಕರವಾಗಿ ಪರಿಣಮಿಸುತ್ತಲಿದೆ. ನಾವು ಹಿಂದೂಸ್ಥಾನದಲ್ಲಿ ಕಾಲಿಟ್ಟೊಡನೆಯೇ ಸನ್ನನ್ನು ಸೆರೆ ಮಾಡುವರೆಂದು ಮಹಾತ್ಮರು ಸುಡಿದು ಬಿಟ್ಟರು. ಇವನ್ನೆಲ್ಲಾ ನೋಡಿದರೆ, ಗಾಂಧಿ-ಇರ್ವಿನ್ ಒಪ್ಪಂದವು ಅದೃಶ್ಯವಾಗಬಹುದಾಗಿದೆ. ಸತ್ಯಾಗ್ರಹವು ಪ್ರಾರಂಭವಾಗುವ ಲಕ್ಷಣಗಳಿವೆ.

ಚಳವಳಿಯು ಪ್ರಾರಂಭವಾಗಲೀ, ಬಿಡಲಿ. ರಾಷ್ಟ್ರಸೇವೆಗಾಗಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧವಾಗಿರುವ ದೇಶ ಬಾಂಧವರನ್ನು ಬೇಡುವೆವು.

ಲಂಡನ್ ವರ್ತುಲ ಪರಿಷತ್ತಿನ ವಾರ್ತೆಗಳು.

(ಮುಖ್ಯ ಮಂತ್ರಿಗಳ ಜೇಳಿಕೆ.)

ಪಾರ್ಲಿಮೆಂಟ್ ಸಭೆಯಲ್ಲಿ ಬರುವ ಬುಧವಾರ, ಗುರುವಾರ, ಹಿಂದೂಸ್ಥಾನ ವಿಷಯದಲ್ಲಿ ಚರ್ಚೆ ನಡೆಯ ಬೇಕಾದರೆ ಮುಖ್ಯಮಂತ್ರಿಗಳಾದ ಮ್ಯಾಕ್ಡೊನಾಲ್ಡರವರು, ತಮ್ಮ ರೀತಿ, ನೀತಿಗಳ ವಿಷಯದಲ್ಲಿ ಸಮಗ್ರವಾಗಿ ಹೇಳುವೆನೆಂತ ಉಸುರಿದರು. ಆಗ ವರಿಷತ್ತಿನ ವಿಷಯಗಳ ಹೊರತಾಗಿ ಬೇರೆ ಸಂಗತಿಗಳು ಚರ್ಚೆಗೆ ಬರಲವಕಾಶವಿಲ್ಲವೆಂದು ನುಡಿದರು.

ಪಂಡಿತ ಮಾಳವೀಯ, ಸರ್ ಶಾಮುಯಲ್‌ರ ಬಾಕ್ಯುದ್ಧ.

"ಇರ್ವಿಂಡಿನಲ್ಲಿ ಜಹಾಜರಗಳು ನಮ್ಮದಾಗ್ಯೆ ಆಧಿಕಾರದಲ್ಲಿದ್ದ ಸರ್ ಜಾನ್ ಅಂಡರ್‌ಸನ್‌ಎಂಬುವರನ್ನು ಬಂಗಾಳಕ್ಕೆ ನೇಮಿಸಿದುದರಂದ, ನಿಮ್ಮ ರಾಜ್ಯನೀತಿಯು ವ್ಯಕ್ತವಾಗುವಂತಿದೆ ನಗರ ವ್ಯವಸ್ಥೆಯ ಮೇಲ ದ್ವೇಷ ಸಿರಿದ್ದಿದರೂ, ನಿಮ್ಮ ಸಿಂಗೋಸ್ಕರ ಪ್ರತಿಬಂಧಿಸುತ್ತಿದೆ" ಎಂದು ಮಂಡಿಸಿದ ಸಂಯುಕ್ತ ಸಭೆಯಲ್ಲಿ ನುಡಿದರು. ಗ್ರೇಟ್‌ಬ್ರಿಟನ್ ದೇಶದ ಒಬ್ಬ ದೊಡ್ಡ ಮನುಷ್ಯನ ಮೇಲೆ ಅಕ್ರೋಶಗಳನ್ನು ಹೊರಿಸುವುದು ಸರಿಯಾದ್ದಲ್ಲವೆಂದು ಸರ್ ಶಾಮುಯಲ್ ಹೋರಿರವರು ನಿಷ್ಠುರವಂದ ನುಡಿದರು ಇಂತಿರ ಬೆದರಿಕೆ ನಿಮ್ಮ ಪ್ರತಿಯನ್ನು ಬಯಲಿಗಿಟ್ಟಿರುವೆವು. ಎಂದು ಹೇಳಿದರು.

ಹಿಂದಿನ ಕಾರ್ಯದರ್ಶಿಗಳಿ ಖಂಡ, ತುಂಡ, ಮಾತು.

ಲೇಬರ್ ಸರ್ಕಾರದ ಕಾಲದಲ್ಲಿ, ಹಿಂದೂಸ್ಥಾನ ಕಾರ್ಯದರ್ಶಿಗಳಾಗಿದ್ದ ಜೆನರವರು ಬ್ರಿಟಿಶ ಸರ್ಕಾರದವರು ತಮ್ಮ ಮಾತಿನ ಮೇರೆಗೆ ಹಿಂದೂಸ್ಥಾನಕ್ಕೆ ಸರಿಯಾದ ರಾಜ್ಯಾಂಗ ಘಟನೆಯನ್ನು ಮಾಡಿಯೇ ತೀರಬೇಕೆಂದು ಸ್ಪಷ್ಟವಾಗಿ ಹೇಳಿದರು ಲೀಗ್ಯತ್ತಾನವರು ಇದನ್ನು ಸಮರ್ಥಿಸಿದರು. ಮಹಾತ್ಮ ಗಾಂಧಿ, ಸಪ್ರು, ಮಾಳವೀಯರವರು ಪ್ರಾಂತಿಕ ಸ್ವಾತಂತ್ರ್ಯದಿಂದ ಯಾರಿಗೂ ಸಮಾಧಾನವಾಗುವುದಿಲ್ಲವೆಂತಲೂ, ಕೇಂದ್ರ ಪ್ರಭುತ್ವದಲ್ಲಿ ಪೂರ್ಣ ಜವಾಬ್ದಾರಿ ಇರಬೇಕೆಂತಲೂ ಹೇಳಿದರು.

ಮುಸಲ್ಮಾನರ ಬಾಯಿ ತೆರೆದರು.

ಯಾವ ಬುದ್ಧಿವಂತನಾಗಲೀ ಜವಾಬ್ದಾರೀ ಸರಕಾರವನ್ನು ಅಪೇಕ್ಷಿಸಲಾರನು. ಬ್ರಿಟಿಶ ಸರ್ಕಾರದವರೇ ಹಿಂದೂ ಮುಸಲ್ಮಾನ ಪೊರಕು ಬಿಡಿಸಬೇಕು. ಈ ಸಂಧಿಯಿಲ್ಲದೆ, ಯಾವ ರಾಜಕೀಯ ಘಟನೆಯಾಗಲೀ ಹಿಂದೂಸ್ಥಾನದಲ್ಲಿ ತಿಳಿ ಕಾಸ, ನಡೆದುಬಾರದು. ಇಂದಿ ಯಾವ ಅಭಿವೃದ್ಧಿಗೆ ಸಾಧನೆಗೂ ಆಡ್ಡ ಬರುವುದಿಲ್ಲ.

ಮಹಾತ್ಮ ಗಾಂಧಿಯವರು.

ರಾಜಕೀಯ ವಿಷಯವನ್ನು ತಿಳಿಯುವ ನಿಮಿತ್ತ ನಾನು ಸರ್ಕಾರದವರಿಗೆ ಬಾದು ಕೊಟ್ಟಿದ್ದೇನೆ ಅಧಿಕಾರಿಗಳು ಅದನ್ನು ತಡೆಯದಂತೆಯೂ, ಕಡಿಸು ಮಾಡದಂತೆಯೂ, ನನಗೆ ತಲಪಿಸಬೇಕು. ಎಂಬುದಾಗಿ ಗಾಂಧೀಜೀಯವರು ವೈಸ್ರಾಯರಿಗೆ ತಾರು ಮುಖಾಂತರ ಕೇಳಿಕ್ಕಾರೆ. ಸರ್ಕಾರ ಪಟೇಲರು ಹಿಂದೂದೇಶದ ವಿವಿಧ ಭಾಗಗಳಲ್ಲಿಯ ಸ್ಥಿತಿಯನ್ನು ವರ್ಣನ ಮಾಡಿ ತಂತ ಕೊಟ್ಟಿದ್ದಾರೆ.

ಮಹಾತ್ಮ ಗಾಂಧಿಯವರಿಗೆ ವಿಶೇಷ ನೆಗಡಿಯವುಗಿತ್ತು. ಆದರೂ ಸಂಯುಕ್ತ ಪರಿಷತ್ತಿನಲ್ಲಿ ಮಾತನಾಡಲುಹೋದರು. ಸ್ವಲ್ಪ ಆನ್ನಸ್ತೆಯಾದಂತಾಗಿದ್ದರೂ ಯಾವ ಡಾಕ್ಟರನ್ನೂ ಕರೆಸಿಕೊಳ್ಳಲಿಲ್ಲ ಉಸವಾಸವಿದ್ದು ತಮ್ಮ ಪ್ರಕೃತಿಯನ್ನು ಸುಧಾರಿಸಿಕೊಂಡರು. ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಲಾಯಡ್ ಜಾರ್ಜರವರು ಕಾನಸರ್ವೇಟಿವ್ ಸರ್ಕಾರದವಲಂದಲೂ, ಸದ್ಯದ ಪರಿಷತ್ತಿನಿಂದಲೂ, ನಿಮಗೆ ಏನು ಪ್ರತಿಫಲವೂ ದೊರೆಯುವುದಿಲ್ಲ. ನೀವು ಹಿಂದೂಸ್ಥಾನಕ್ಕೆ ಹೋಗಿ ಪುನಃ ಸತ್ಯಾಗ್ರಹವನ್ನು ಆರಂಭಿಸಿದಾಗಲೇ ಅವರಿಗೆ ಬುದ್ಧಿ ಬರುವುದು. ಎಂದು ತಿಲೋನಿಗೆ ಹೊರಡುವಾಗ್ಗೆ ಮಹಾತ್ಮರಿಗೆ ತಂತ ಕೊಟ್ಟರು.

ಮುಸಲ್ಮಾನರ ಬೆದರಿಕೆ.

(ನೀವೆನಮ್ಮಗಳ ಕೆಲಂಗಳನ್ನು ಪೂರೈಸದಿದ್ದರೆ ಗಾಂಧೀ ಚಳವಳಕ್ಕೆ ಸೇರುತ್ತೇವೆ. ಈಗಾಗಲೇ ಬ್ರಿಟಿಶರೊಡನೆ ಸಹಕರಿಸುವೆವೆಂಬಹಾದವು ಬಂದಿದೆ.)

H. H. ಆಗಾಖಾನರು, ಪ್ರಧಾನ ಮಂತ್ರಿಗಳನ್ನೂ, ಇಂಡಿಯಾ ಸರ್ಕಾರದ ಕಾರ್ಯದರ್ಶಿಗಳನ್ನೂ, ಮತ್ತತರರುಖಂಡರನ್ನೂ, ಭೆಟ್ಟಿಯಾಗಬೇಕಾಯಿತು. ಅಲ್ಲಿ ಪರಸ್ಪರ ನಡೆದ ಸಂಭಾಷಣೆಗಳ ಸಾರಾಂಶವನ್ನು ಮುಸಲ್ಮಾ ವೃತ್ತ ನಿಧಿಗಳಿಗೆ ರಿಟ್ಜ್ ಹೋಟೆಲದಲ್ಲಿ ಹೇಳಿದರು. ಈ ಬಗ್ಗೆ ಮುಂಬಯ ಕ್ರಾನಿಕಲದ ಸುದ್ದಿಗಾರರು ಹೀಗೆ ಬರಯುತ್ತಾರೆ.

ಪ್ರ— ಪ್ರಾಂತಿಕ ಸ್ವರಾಜ್ಯವು ನಿಮಗೆ ಒಪ್ಪಿಗೆಯೇ ?

ಆಗಾಖಾನ್- ಸರ್ವಥಾ ಇಲ್ಲ.ನಾವು ಹಿಂದೂಸ್ಥಾನದಲ್ಲಿ ಸಣ್ಣ ಪಂಗಡದವರು. ಎರಡು ಸಂಖ್ಯಾನಗಳಲ್ಲಿ ಮಾತ್ರ ನಮ್ಮ ಜನಸಂಖ್ಯೆಯು ಹೆಚ್ಚಿದೆ. ಅಲ್ಲಾದರೂ, ನಮ್ಮ ಗೌರವವನ್ನು ಕಾಪಿಕೊಳ್ಳದಿದ್ದರೆ ಹೇಗೆ ?

ಪ್ರ— ಹಿಂದೂ ಮುಸಲ್ಮಾನ್ ಒಪ್ಪಂದವಿಲ್ಲದೆ ಜವಾಬ್ದಾರೀ ಸರಕಾರವನ್ನು ಕೊಡುವುದು ಹೇಗೆ ?

ಉ- ಈ ಸಂಗತಿಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ ಈ ಸಮಸ್ಯೆಯನ್ನು ಪರಿಯಸುವುದು ನಿಮ್ಮ ಜವಾಬ್ದಾರಿಯಾಗಿದೆ. ನಿಮ್ಮ ನಿರ್ಣಯವನ್ನು ಹಿಂದೂಸ್ಥಾನದಲ್ಲಿ ಜಾರಿಗೆ ತಂದು ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸಿದರೆ, ಎಲ್ಲಾ ಜನರಲ್ಲಿಯೂ ನಂಬಿಕೆ ಹುಟ್ಟುವುದು.

ಪ್ರ-ಪ್ರಾಂತ್ಯಗಳಲ್ಲಿ ಪೂರ್ಣ ಸ್ವತಂತ್ರತೆಯನ್ನು ಹಾರಿಗೆ ತಂದರೋ ?

ಉ- ಅದು ಯಾವ ಪಂಗಡಕ್ಕೂ ಒಪ್ಪಿಗೆಯಿಲ್ಲ. ನಮ್ಮ ನೀತಿಯನ್ನು ಕಾಂಗ್ರೆಸ್ಸಿನವರಂತೂ ಒಪ್ಪುವುದೇ ಯಿಲ್ಲ ಗಾಂಧಿಯವರ ಚಳವಳಿ ದೊಡ್ಡದಾಗುವುದೇ ನೋ ನಿಜ. ಆಗ ನಮ್ಮ ಯುವಕರೂ ಭಾಗ ತೆಗೆದುಕೊಳ್ಳುವರು.

ಪ್ರ- ಹಿಂದೂ ಮುಸಲ್ಮಾನ ಸಮಸ್ಯೆಯನ್ನು ನಿಮಗೆ ಬಿಟ್ಟರೆ ?

ಉ- ಅದು ಈಗ ಸಾಧ್ಯವಾಗದ ಮಾತಲ್ಲ. ನೀವು ಜವಾಬ್ದಾರಿ ಸರ್ಕಾರವನ್ನು ತೊಡುವೆವೆಂದು ಹೇಳಿರಿ, ಅಂದಮೇಲೆ ನಮ್ಮಲ್ಲಿ ಒಪ್ಪಂದವಾಗುವುದು.

ಕರ್ನಾಟಕ.

ಕರ್ನಾಟಕ ಪ್ರಾಂತಿಕ ಸಭೆಯವರು, ಶ್ರೀ ರಾಮಗೋಪಾಲಾಚಾರ್, ಬಾಬು ರಾಜೇಂದ್ರ ಪ್ರಸಾದ ಹಾ. ಅನ್ಸಾರಿಯವರನ್ನು ಕ್ರಮವಾಗಿ ಪೂರ್ವ ಪಟ್ಟಣದಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನಾಗಿ ಆರಿಸಿದ್ದಾರೆ.

ಮೈಸೂರು ನೀಲಿಯ ದಾವಣಗೆರೆಯಲ್ಲಿ ಮಹಿಳಾಸಭೆಯ ನೆಯ ಸಮ್ಮೇಳನವು ಶ್ರೀಮತಿ ಪಾರ್ವತಮ್ಮ ಪುಟ್ಟಣ್ಣಾ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಕೂಡಿ, ಸ್ತ್ರೀಯರ ವಿವಾಹ ವಯಸ್ಸು ೧೮ ಹಾಗೂ ಪುರುಷರ ವಯಸ್ಸು ೨೧ ಇರಬೇಕೆಂದು ನಿರ್ಣಯಿಸಲ್ಪಟ್ಟಿತು.

ಡಾಕ್ಟರ್ ಕೊಕಟ್ನೂರು ಇವರು ಶಾಸ್ತ್ರ ಕೋಶದ ಬಗ್ಗೆ ಮಂಗಳೂರಿನಲ್ಲಿ ಉಪನ್ಯಾಸಿಸುವರು.

ವಿನೋದ

ಗಂಡ:—(ನಿರುದ್ಯೋಗಿ ಹೆಂಡತಿಗೆ) ನಿರುದ್ಯೋಗಿಯಾಗಿರುವದು ಮನುಷ್ಯ ಲಕ್ಷಣವೇ ? ಉದ್ಯೋಗಂ ಪುರುಷ ಲಕ್ಷಣಂ ಎಂದು ಹೇಳಿಲ್ಲವೇ ?

ಹೆಂಡತಿ :— ಹೌದು. ಉದ್ಯೋಗಂ ಪುರುಷ ಲಕ್ಷಣಂ ಆದರೆ ನಿರುದ್ಯೋಗಂ ಸ್ತ್ರೀ ಲಕ್ಷಣಂ ಅಲ್ಲವೇ ?

ಬಳ್ಳಾರಿ ಜಿಲ್ಲೆ.

ಬಳ್ಳಾರಿ.

26-11-31 ನೇ ಗುರುವಾರ ಸಾಯಂಕಾಲ ಬಳ್ಳಾರಿ ಪಟ್ಟಣದಲ್ಲಿ, ಪುರಸಭೆಯ ಅಧ್ಯಕ್ಷರಾದ ಶ್ರೀ. ಬಾಲಾಜಿರಾಯರಿಗೂ, ಉಪಾಧ್ಯಕ್ಷರಾದ ಶ್ರೀ ಮುಂಡ್ಲೂರು ಗಂಗಪ್ಪನವರಿಗೂ, ಪುರಸಭೆಯ ಉದ್ಯಾನವನ್ನಲ್ಲಿ ಭಾರದಿಂದ ಸತ್ಕರಿಸಿ, ಉರ್ದೂ, ಇಂಗ್ಲೀಷು ಭಾಷೆಗಳಲ್ಲಿ ಮಾನಪತ್ರಗಳನ್ನರ್ಪಿಸಿದರು ಮತ್ತು ಅವರ ಗುಣಕಥನ ಯುಕ್ತವಾದ ಕೀರ್ತನೆಗಳನ್ನು ಪಠಿಸಿದರು ಮಹಿಳಾ ಸೇವಾಸಮಾಜದವರಾಗಿ ಶ್ರೀಮತಿ ಶಾಂತಾಬಾಯಿಯವರು, ತಮ್ಮ ಮಾನಪತ್ರವನ್ನೋದಿದರು. ಉದ್ಯಾನವನವನ್ನಲಂಕರಿಸಿ, ವಿಲಾಸತ ನಾಲಂಬೇರುಗಳು ಎಲ್ಲೆಲ್ಲಿಯೂ ತುಂಬಿದ್ದರು ಗೇಟಿನಲ್ಲಿ ಅವರ ಝಂಡಾವು ಹಾರಾಡುತ್ತಿದ್ದಿತು. ಪೋಲೀಸಿನವರೇಕರು ಶುಂಬಿದ್ದರು. ಶ್ರೀ ಬಾಲಾಜಿರಾಯರು, ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು

ಪುರಸಭೆಯ ಪ್ರಥಮ ಅಧಿವೇಶನ.

ಚುನಾವಣೆಗಾದಮೇಲೆ, ಪ್ರಥಮ ಸಭೆಯು ಈವಿಷಯ ಅಂದರೆ 30-11-31 ಕೂಡುವುದು ಪ್ರಾಮುಖ್ಯವಿಷಯಗಳು ಚರ್ಚೆಗೆ ಬರಬೇಕು

ರಾಷ್ಟ್ರೀಯ ಧ್ವಜಾರೋಹಣ

29 ತಾ ನ ಪ್ರಾತಃಕಾಲ 8 ಘಂಟೆಗೆ ಮಾಸಿಕ ಧ್ವಜ ವಂದನೆಯು, ಶ್ರೀ ಕಲ್ಲೂರು ಸುಬ್ರಾಯರಿಂದ ನೆರವೆ ರಿಸಲ್ಪಟ್ಟಿತು ಸಾಯಂಕಾಲ ಹಿಜರಿ, ಚಿಟ್ಟಗಾಂಗ ಕೃತ್ಯಗಳ ನಿಷೇಧದಬಗ್ಗೆ ಜಾಹೀರ ಸಭೆಯು ಕೂಡಿತ್ತು.

ಕೊಟ್ಟೂರು.

(ಸ್ವಂತಸುದ್ದಿ ಗಾರರಿಂದ.)

ಈ ಊರಿ ಶ್ರೀಮತಿಯರುಕುಮಾರಿಯರು ಹರಿಕಥೆಗೆ ಬಂದಿದ್ದರು. ಕಾಂಗ್ರೆಸವರ ಸಹಾಯದಿಂದ, ದ್ರವ್ಯಸಂಪಾದಿಸಿದರು. ಅವರಿ ಅವರ ಭಾಷೆಯ ಪ್ರಕಾರ ನಡೆಸಲಿಲ್ಲ. " ಹೊಳೆದಾಟಿದಮೇಲೆ ಅಂಬಿಗನ... .. "ಎಂಬುವು ನಮ್ಮ ಜ್ಞಾಪಕಕ್ಕೆ ಬಂದಂತಾಯಿತು. ಯಾವಕೀರ್ತನ ಕಾರರಿಂದಲೆಲಿಗಲೀ, ದ್ರವ್ಯ ಸಹಾಯವನ್ನು ಹೊಂದಲೇಕ್ಷಿಸುವ, ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯೂ, ಆಲೋಚಿಸಿ ಕೆಲಸ ಮಾಡಬೇಕೆಂದು ನಮ್ಮ ಅಪೇಕ್ಷೆ

ಬಾಜಿಗೊಂಡನಹಳ್ಳಿ ಖೂನಿ

(ನಮ್ಮ ತಂಬ್ರಹಳ್ಳಿ ಸುದ್ದಿಗಾರರಿಂದ)

ಹೆಡಗಲಿ ತಾಲ್ಲೂ ಬಾಜಿಗೊಂಡಿನಹಳ್ಳಿ ಗ್ರಾಮದ ಪಟ್ಟೇಗಾರ ಗೋವಿಂದಸಾ ಎಂಬಾತನನ್ನು ಯಾರೋ ಬಾಕಿನಿಂದ ಇರಿದು ಹೋಗಿರುತ್ತಾರೆ. ಆತನು 24-11-31 ನೇ ತೇದಿ ಮರಣಹೊಂದಿರುವನು ಪೋಲೀಸಿನವರು ಪತ್ತೇ ತರದೂರು ಮಾಡುತ್ತಿರುವರು.

ಹೊಸಹಳ್ಳಿ.

ಕೊಟ್ಟೂರು ತಾಲ್ಲೂ ಸ್ವಾಂತ್ಯದಲ್ಲಿ ಕಾಂಡಾ.

ನಮ್ಮ ಪತ್ರಕ್ಕೆ ಜವಾಬು ಕೊಡುತ್ತಾ, ಜಿಲ್ಲಾ ಆಡೋ ಗ್ಯ ಶಾಖಾಧಿಕಾರಿಗಳು ಈರೀತಿ ಬರೆದಿರುತ್ತಾರೆ "ನಿಮ್ಮ 9-11-31 ರ ಪತ್ರದ 5 ನೇ ಪುಟದಲ್ಲಿ ಮಿ ಸುಬ್ರಯ್ಯನವರಿಂದ ಬಂದವರ್ತಮಾನ ನೆಂದು ಪ್ರಕಟಿಸಿರುವುದು ಸುಳ್ಳು. ನಮಗೆ ವರದಿ ಬರುವುದುಂಟೇಯೇ, ನಮ್ಮ ಹೆಲ್ತ್ ಇನ್ಸ್ಪೆಕ್ಟರ್ ಅಲ್ಲಿಗೆಹೋಗಿ, 716 ಜನಗಳಿಗೆ ಪೊಸಪಕ್ಕೆಯಲ್ಲಿಯೂ, ಸುತ್ತಮುತ್ತಲ ಹಳ್ಳಿಗಳಲ್ಲಿ 679 ಜನಗಳಿಗೂ, ಇನಾಕುಲೇಷನ್ ಮಾಡಿದ್ದಾರೆ ಅವರು ಮೊದ ತಾರೀಖುಗಳನ್ನೂ ಮಾಡಿದ ಕೆಲಸಗಳನ್ನೂ ನಿರವಾಗಿ ಕೊಟ್ಟಿದ್ದೇವೆ. ಈ ಪ್ರಾಂತ್ಯಗಳಿಂದ, ಅಗಾಗ್ಯೆ ಒಂದೆರಡು ಮಾತ್ರ ಕೇಸುಗಳಾಗುತ್ತಿದ್ದವು ಸೆಪ್ಟೆಂಬರ್ ತಿಂಗಳಲ್ಲಿ 20 ಜನಕ್ಕೆ ತಗಲಿ, 9 ಜನರು ಮಾತ್ರ ಸತ್ತಿರುತ್ತಾರೆ ನವಂಬರದಲ್ಲಿ ನಾಲ್ಕರಿಗೆ ತಗಲಿ, ನಾಲ್ಕರು ಸತ್ತಿದ್ದಾರೆ 4-11-31 ರಿಂದ ಯಾರಿಗೂ ಕಾಣಿಸಿಕೊಂಡಿಲ್ಲ ಇನ್ನುಮುಂದೆ ಸುಳ್ಳು ಪ್ರಕಟನೆಗಳನ್ನು ಕಳುಹಿಸಬಾರದೆಂದು, ನಿಮ್ಮ ಸುದ್ದಿಗಾರನಿಗೆ ತಿಳುಹಿಸಿರಿ "

(ಸೂಚನೆ — ನಮಗೆ ಸತ್ಯಾಂಶ ವಿಷಯಗಳನ್ನು ತಿಳಿಸಿದ್ದೇವೆಂದರೆ ಅಂತ ಸುದ್ದಿಗಾರರಿಗೆಯನ್ನು ಕಂದಿಸುತ್ತೇವೆ ಪ್ರಜೆಯ ಜಾಣ ಯಾಗಬೇಕಾದ ನಮ್ಮ ಸುದ್ದಿಗಾರರು, ಒಳ್ಳೆಯುಂದ, ಸತ್ಯವಾದ ವಿಷಯಗಳ ಒಗ್ಗೆ ಹೃದಪಡಿಸಿಕೊಂಡು, ನಮಗೆ ಬರಯ ಬೇಕೋರಿಕೆ)

ಸಂಪಾದಕ

ಹೊಸಪೇಟೆ

(ನಮ್ಮ ಸುದ್ದಿಗಾರರಿಂದ)

ಹೊಸ ಪುರಸಭೆಯು 25-11-31 ನೇ ಸಾಯಂಕಾಲ ಮಿ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿಕೂಡಿತ್ತು. ಕಲಸಗಳನ್ನು ಶ್ರದ್ಧೆಯಿಂದ ನಡೆಸಲು ಉಪಸಮಿತಿಗಳು ನಿಯಮಿಸಲ್ಪಟ್ಟವು ತಿಗುಳು ಸಚ್ಚಾಸಂದ ತಿಸಿಮಾವನವು ಮಾತಾಡುವ ಸಿನೆಮಾತರಿಸಿದ್ದರಿಂದ ಜನಗಳವರನೇಕರು ನೋಡಿ ಆನಂದಿಸಿದರು.

ತುಮಕೂರಿನ ಸುದ್ದಿ

(ನಮ್ಮ ಸುದ್ದಿಗಾರರಿಂದ)

ಶ್ರೀ. ಸುಬ್ರಹ್ಮಣ್ಯಂ ರವರಿಗೆ ಶಿಕ್ಷೆ, ಶಾಂತಯುಕ್ತವಾದ ಬಹಿಷ್ಕಾರವು ಸಾಗಿದೆ, ಪೋಲೀಸಿನವರ ಚಿತ್ರಹಿಂಸೆ.

ಶ್ರೀ. ಸುಬ್ರಹ್ಮಣ್ಯಂ .... ೨೦೦ ರೂ ಬಿಲ್ಲಾನೆ, ಅಥವಾ ಎರಡುತಿಂಗಳ ಸಜ.

" ವಿಠೋಬಪಾಲ್... ೧೦೦ ರೂ, " "
ಆರು ವಾರಗಳ "

" ಕೃಷ್ಣಸ್ವಾಮಯ್ಯರ್ ೫೦ ರೂ, " "
ಒಂದು ತಿಂಗಳು "

" ನಂಜಪ್ಪ .... ೫೦ ರೂ. " "
ಒಂದು ತಿಂಗಳು "

ಅಪರಾಧಿಗಳು ಬಲ್ಲಾನೆಕೊಡದೆ ಜೈಲಿಗೆ ಹೋದರು. ಆದಿವಸ ಎಂಟು ಸ್ವಯಂಸೇವಕರು ಏಕೆಟಿಂಗಗೆ ಹೋಗಿ ದಸ್ತಗಿರಿಯಾದರು. ಶ್ರೀ ರಂಗಯ್ಯಂಗಾರ್ ರವರು, ಬೆಂಗಳೂರು ಕೋರ್ಟಿನಲ್ಲಿ ಅಪೀಲು ಮಾಡಿದ್ದಾರೆ. ನಿಷ್ಠಾಚಾಣೆಯು ಸರಿಯಾಗಿನಡೆಯಲಿಲ್ಲ ದಿನಾ ಸಾಹೇಬರವರು ಜಿಲ್ಲಾಧಿಕಾರಿಗಳನ್ನು ತಂತಿಕೊಟ್ಟು ಕರಿಸಿಕೊಂಡಿದ್ದಾರೆ. 19-11-31 ರಿಂದ ಸ್ವಯಂಸೇವಕರ ದಸ್ತಗಿರಿ ಯಾಗುತ್ತಲಿಲ್ಲ. ಪೋಲೀಸಿನವರೇ ಶೇಂಡಿ ಅಂಗಡಿಗಳ ಸರ್ಪಾಸಾಲು ಮಾಡುತ್ತಿರುವರು ಬಂಗಾರಕ್ಕೆ ಹೋಗ, ಸ್ವಯಂಸೇವಕರನ್ನು ದೊಡ್ಡೆಯಿಂದ ಪೊಡೆಯುವುದು ಕುತ್ತಿಗೆ ಹಿಚುಕುವುದು ಸಗ್ಗೆರ ಹಿಂಸಾಕೃತ್ಯಗಳನ್ನನುಸರಿಸುತ್ತಿರುವರು ಅವರೂ ಪಟ್ಟಣಿಗರೂ, ಸ್ವಯಂಸೇವಕರೂ, ಶಾಂತರೀತಿಯಿಂದ ವರ್ತಿಸುತ್ತಿರುವರು

ವರ್ತಮಾನಗಳು

ಪರದೇಶ.

ಚೀನಾ, ಜಪಾನ್ ಯುದ್ಧವು ಸಾಗಿದೆ ಜಪಾನಿನವರು ಮುಂದುವರಿಯುತ್ತಿರುವರು ಜಪಾನಿನವರು ಚೀನ ಕೋಟಪಟ್ಟಣವನ್ನು ಮುಕ್ತುವರೆಂದುಕೇಳಿ, ಅಮೆರಿಕಾದವರು, ಕೋಪಗೊಂಡಿದ್ದಾರೆ. ಅಮೆರಿಕಾದಿಂದ ತಮ್ಮ ರಾಯಭಾರಿಯನ್ನು ಕರೆಸಿ ಕೊಳ್ಳುವರೆಂದು ವರ್ತಮಾನವಿದೆ

ಆಫ್ರಿಕಾ ಖಂಡದ ಜನರಲ್ಸ್ಮಟ್ಸ್‌ರು" ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಕೊಡದಿದ್ದರೆ, ಹಿಂದೂಸ್ಥಾನವು ಬ್ರಿಟಿಶ್ ಚಕ್ರಾದಿ ಪತ್ರದಿಂದ ಬಿಟ್ಟು ಹೋಗುವುದೆಂದೂ, ಅದರಿಂದ ಗಾಂಧಿಯವರೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದೂ, ಬ್ರಿಟೀಶ ಸರ್ಕಾರಕ್ಕೆ ಎಚ್ಚರಕೊಟ್ಟರು

ಹಿಂದೂಸ್ಥಾನ

ಈ ತಿಂಗಳು ತಾ ೪ ನೇ ತಾರೀಖಿನದಿನ ಅಲಹಾಬಾದಿನ "ಸ್ವರಾಜ್ಯ ಭವನ" ದ ಮಾನಪತ್ರಕ್ಕೆ ಪಂಡಿತ ಜವಾಹಿರಲಾಲರು ಸಹಿಹಾಕಿದಂದು, ಟ್ರಸ್ಟಿಯನ್ನು ಏರ್ಪಡಿಸಿದ ಈಸಮಾರಂಭವು ಚರಿತ್ರಾರ್ಹವಾಗಿ, ಮನೋಹರವಾಗಿದ್ದಿತು

ಸೇಟ್ ಜಮನಾಲಾಲ ಬಜಾಜರು ತಮ್ಮ ಸತಕ್ಕರ್ ಗಳೊಡನೆ ಹೋಗಿಹೋಲಿ ಎಂಬ ಸ್ಥಳದಲ್ಲಿ, ಅಸ್ಪೃಶ್ಯರ ಉಪಯೋಗಕ್ಕಾಗಿ, ಹತ್ತು ಭಾವಿಗಳನ್ನು ಪ್ರತಿಷ್ಠಿಸಿದರು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ನೇತೃತ್ವದಲ್ಲಿ ಜೋಬಾಯಿನ ಹತ್ತಿರ ಒಂದು ಶಿಕ್ಷಣ ಶಿಬಿರವು ಏರ್ಪಡುವುದು. ಶಾಂತಿಸಮರದಲ್ಲಿ ಸ್ತ್ರೀಯರು ಹೀಗೆ ಭಾಗತೆಗೆದುಕೊಳ್ಳಬೇಕಂದುಬಗ್ಗೆ ಶಿಕ್ಷಣವು ಕೊಡಲ್ಪಡುವುದು

"ಹೊಸಗತಮಾನ" ಹೆಡಗಿನ ಪ್ರಸಂಗದಲ್ಲಿ ಶಿಕ್ಷಿತರಾದ, ಬಾಬು ಗುರುದತ್ತಸಿಂಗರವರನ್ನು ಲಾಹೋರಿನಲ್ಲಿ ದಸ್ತಗಿರಿ ಮಾಡಿದರು.

ಮಹಾತ್ಮರು ಇಂಡಿಯಾಕ್ಕೆ ಹಿಂದಿರುಗುವರು.

ಮಹಾತ್ಮ ಗಾಂಧಿಯವರ ಪ್ರಕೃತಿಯು ಸುಧಾರಿಸಿರುವುದರಿಂದ ಅವರು ಡಿಶಂಬರ್ ತಿ ನೇ ತಾರೀಖು ಲಂಡನ್ ಪಟ್ಟಣವನ್ನು ಬಿಟ್ಟು, ಜೆನೀವಾ ಪಟ್ಟಣದ ಮಾರ್ಗವಾಗಿ ವೆನಿಸ ಪಟ್ಟಣಕ್ಕೆ ಬಂದು, ಅಲ್ಲಿ ಲೋಕವಿಖ್ಯಾತರಾದ ಮೋಸೋನಿ ಮೋಲಂಡರವರನ್ನು ಭೆಟ್ಟಿಯಾಗಿ, ಇಟಲಿಯ ಮೋಸಾ ಪಟ್ಟಣಕ್ಕೆ ಬಂದು, ಇಟಲೀದೇಶದ ಪ್ರಜಾಪ್ರಭುತ್ವದ ಅಧ್ಯಕ್ಷರಾದ, ಮುಸೋಲಿನಿಯವರೊಡನೆ ಸಂಭಾಷಿಸಿ, ಡಿಶಂಬರ್ ೧೮ ನೇ ತಾರೀಖಿನ, ದಿನ ಇಂಡಿಯಾಕ್ಕೆ ಬಹುಬೆಗ ಹತ್ತುವರೆಂದು ತಿಳಿದು ಬಂದಿದೆ.

ಕ. ಪ್ರಾಂ. ಕಾಂ. ಕಮೀಟಿಯ

ಕಾರ್ಯ ಕಾರೀಮಂಡಲದ ಸಭೆಯು

(ಧಾರವಾಡ ತಾ॥ ೨೩-೧೦-೧೯೩೦)

ಸರ್ವಾನು ಮತದಿಂದ ಗೊತ್ತಾದ ನಿರ್ಣಯಗಳು:—

೧. ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಜಿಲ್ಲಾ ಸ್ಥಳಗಳಲ್ಲಿ ರಾಷ್ಟ್ರದೃಷ್ಟಿಯಿಂದ ಅಸ್ಪೃಶ್ಯರ ವಿದ್ಯಾರ್ಥಿ ವಸತಿ ಗೃಹಗಳನ್ನೆ, ಕಾಂಗ್ರೆಸ್ ಸಂಸ್ಥೆಯವರು ಶಕ್ಯ ವಿದ್ದ ರೀತಿಯಿಂದ ಸಹಾಯ ಮಾಡಬೇಕು. ಸಾರ್ವಜನಿಕ ಕೆರೆ ಬಾವಿಗಳಲ್ಲಿ ಅಸ್ಪೃಶ್ಯರು ನೀರುತುಂಬುವಂತೆ ಪ್ರಚಾರ ಮಾಡಬೇಕು. ಸಾಧ್ಯವಿದ್ದಲ್ಲಿ ಸಾರ್ವಜನಿಕ ದೇವಾಲಯಗಳಲ್ಲಿ ಅಸ್ಪೃಶ್ಯರ ಪ್ರವೇಶ ವಾಗುವಂತೆ ಪ್ರಯತ್ನ ಮಾಡಬೇಕು.

೨. ಅ ಭಾ. ಕಾಂಗ್ರೆಸ ಕಮೀಟಿಯವರು ಕೆಲವು ಸಮಾರಂಭಗಳನ್ನು ಅಖಿಲ ಭಾರತೀಯ ಸಮಾರಂಭಗಳೆಂದು ನಿರ್ಣಯಿಸಿ ಆ ಸಮಾರಂಭಗಳಲ್ಲಿ ಧ್ವಜವಂದನೆಯ ಕಾರ್ಯಕ್ರಮವು ಒಂದಿರುವುದೆಂದು ಗೊತ್ತುಪಡಿಸಿದರೆ ಅಂಥ ಸಮಾರಂಭಗಳಲ್ಲಿ ಪ್ರಾಂತಿಕ ಸಭೆ ಭಾಗ ಜಯಕಾರಗಳನ್ನು ಅನ್ನಕೂಡದು. ಸದ್ಯಕ್ಕೆ ತಿಂಗಳಕೊನೆಯ ರವಿವಾರ ನಡೆಯುವ ಧ್ವಜವಂದನೆಯು ಸಿಂಧ-ಅಖಿಲ ಭಾರತೀಯ ಧ್ವಜವಂದನೆಯು, ವಂದೇಮಾತರಂ ಅಥವಾ ಝಂಡಾಗೀತಾ ಸಭೆಗಳನ್ನು ಅದೇತಾಲಸ್ವರಗಳಲ್ಲಿ ಪ್ರಾಂತಿಕ ಭಾಷೆಯಲ್ಲಿ ಅನ್ನುವದೂ ಈಸಭೆಗೆ ಸಮ್ಮತವಿಲ್ಲ.

೩. ಅ. ಭಾ. ಕಾಂ. ಕಮೀಟಿಯ ಲೆಕ್ಕತಪಾಸಿಗರು ಕ ಪ್ರಾಂ. ಕಾಂ. ಕಮೀಟಿಯ ೧೧-೧-೧೯೩೦ ರಿಂದ ೧೧-೫-೩೦ ವರೆಗಿನ ಲೆಕ್ಕವನ್ನು ಪರೀಕ್ಷಿಸಿ ಬರೆದ ಪತ್ರವನ್ನೂ, ಅದಕ್ಕೆ ಕಾರ್ಯವರ್ತಿಗಳು ಕಳಿಸಿದ ಉತ್ತರವನ್ನೂ ಓದಿ ಮಂಜೂರಮಾಡಲಾಯಿತು.

೪. ಈ ನೇ ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಬರುವ (೧೯೩೧) ಜನೇವರಿಯಲ್ಲಿ ನಿಜಾಪುರ ಜಿಲ್ಲಾ ಕಾಂಗ್ರೆಸ ಕಮೀಟಿಯವರು ತಮ್ಮ ಮೊದಲಿನ ಆಮಂತ್ರಣದ ಮೇರೆಗೆ ಸೇರಿಸಬೇಕೆಂದು ಈ ಸಭೆಯು ಅವರಿಗೆ ವಿಜ್ಞಪ್ತಿಸಿಕೊಳ್ಳುತ್ತದೆ.

೫ ಸದ್ಯಕ್ಕೆ ದೇಶದಲ್ಲಿಲ್ಲ ಉಂಟಾದ ಆರ್ಥಿಕ ಕಷ್ಟಮಯ ಪರಿಸ್ಥಿತಿಯ ದೃಷ್ಟಿಯಿಂದ, ಆಯಾ ಜಿಲ್ಲಾ ಅಥವಾ ತಾಲೂಕ ಕಾಂಗ್ರೆಸ ಕಮೀಟಿಯವರು ತಮ್ಮಲ್ಲಿಯ ಕೈತರ ಸ್ಥಿತಿಯಬಗ್ಗೆ ಅಭ್ಯಾಸಮಾಡಿ ಸರಕಾರ ಹಾಗು ಜನತೆಗೆ ಅವರಕಷ್ಟಗಳನ್ನು ತಿಳಿಸುವದಕ್ಕಾಗಿಯೂ, ಅವರಿಂದ ಕೈತರ ಸಲುವಾಗಿ ಅವ್ಯಾಪಾರ ಸಹಾಯವನ್ನು ಜಡಿಯುವ ದೃಷ್ಟಿಯಿಂದಲೂ ಜಿಲ್ಲಾ ಅಥವಾ ತಾಲೂಕ ಕೈತರ ಪರಿಷತ್ತುಗಳನ್ನು ಸೇರಿಸಬೇಕೆಂದು ಈ ಸಭೆಯು ಆಯಾಕಮೀಟಿಗಳಿಗೆ ವಿನಂತಿ ಮಾಡಿಕೊಳ್ಳುತ್ತದೆ.

೬. ಇತ್ತೀಚೆಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಪಜ್ಜಾಕೆಯನ್ನು ಕುರಿತು ಅವಶ್ಯವಾದ ವಿಚಾರಣೆ ಹಾಗು ಜನಜಾಗೃತಿಗಳನ್ನು ಮಾಡುವದಕ್ಕಾಗಿ ಶ್ರೀ. ರಾ ಶ್ರೀ. ಹುಕ್ಕೇರಿಕರ ಹಾಗು ಶ್ರೀ. ದ. ಸ. ಕರಮರಕರ ಇವರು ತೀವ್ರವೇ ಸಂಸ್ಥಾನದಲ್ಲಿಲ್ಲ ಸಂಚಾರ ಮಾಡಬೇಕು

೭. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಗಾಗಿ ಆಯಾಜಿಲ್ಲೆಗಳಲ್ಲಿ ಧನಸಹಾಯವನ್ನು ಸೇರಿಸಲು ಮುಂದೆ ಕಾಣಿಸಿದ ಮಂಡಲಗಳನ್ನು ನೇಮಿಸಿದೆ. ಆ ಮಂಡಲಗಳು ಇಂದಿನಿಂದ ೧ ತಿಂಗಳೊಳಗಾಗಿ ಕ. ಪ್ರಾಂ. ಕಾಂ. ಕಮೀಟಿಯವರು ೧೯-೫-೧೯೩೧ ರಿಗೆ ದಿನ ಸೇರಿದ ತಮ್ಮ ಸಭೆಯಲ್ಲಿ ಆಯಾಜಿಲ್ಲೆಗಳಿಗೆ ಹಂಚಿ ಕೊಟ್ಟ ಹಣವನ್ನಾದರೂ ಇಂದಿನ ಪ್ರತಿ ಜಿಲ್ಲೆಗೆ ಶೇ ೧೦ ರೂ. ಗಳನ್ನಾದರೂ ಕೂಡಿಸಿ ಕೊಡತಕ್ಕದ್ದು.

ಬೆಳಗಾಂವಿಜಿಲ್ಲೆ:— ಶ್ರೀ. ದ. ವೆಂ. ಬೆಳವಿ, ಗಂಗಾಧರರಾವ ದೇಶಪಾಂಡೆ, ನಾರಾಯಣರಾವ ಜೋಶಿ. ಬಿ. ಯಸ್. ವಾತಾರ.

ಧಾರವಾಡ ಜಿಲ್ಲೆ:— ಶ್ರೀ. ಸ್ವಿ. ಸ್ವಿ. ಪಾಟೀಲ, ಎಸ್. ಕೆ. ಹೊಸಮನಿ, ಅನಂತರಾವ ಜಾಲೀಹಾಳ, ಮಧ್ವರಾವ ಕುಲ್ಕರ್ಣಿ, ರಂ. ರಾ. ದಿವಾಕರ, ಗುರುರಾವ ವಾಳವೇಕರ.

ನಿಜಾಪುರ ಜಿಲ್ಲೆ:— ಶ್ರೀ. ಶ್ರೀನಿವಾಸರಾವ ಕೌಜಲಗಿ, ಎಸ್. ಆರ್. ಕೆರೂರ, ಮಧ್ವರಾವ ಕೆಂಭಾವಿ.

ಕಾರವಾರ ಜಿಲ್ಲೆ:— ಶ್ರೀ. ಜಾನುರಾವ ದೇಸೈ, ಎಸ್. ಆರ್. ಹಳದೀಪುರಕರ, ವೆಂಕಟರಮಣ ಹೆಗಡೆ, ವಾಸುದೇವರಾವ ಧಾರಕಪ್ಪ.

ಮಂಗಳೂರು ಜಿಲ್ಲೆ:— ಶ್ರೀ. ಕರ್ನಾಡ ಸದಾಶಿವರಾವ, ಲಕ್ಷ್ಮಣಕುಡವ ಕಾರ್ಕಳ, ಎಂ. ಎಸ್. ಅಧಿಕಾರಿ.

ಬಳ್ಳಾರಿಜಿಲ್ಲೆ:— ಶ್ರೀ. ಬಿ. ಶ್ರೀನಿವಾಸರಾವ, ಶ್ರೀ. ಬಿ. ಅನಂತಾಚಾರ್ಯ-ವಕೀಲ ಹೊಸಪೇಟೆ, ಶ್ರೀ. ಬಿ. ವಸುಪಾಲಪ್ಪ.

೮ ಕಾರ್ಯವರ್ತಿಗಳು ಒಪ್ಪಿಸಿದ ಕಳೆದ ಅರುತಿಂಗಳ ಜಮಾಖರ್ಚಿನ ಪತ್ರಿಕೆಯನ್ನು ಓದಿ ಸ್ವೀಕರಿಸಲಾಯಿತು. ಹಾಗು ಮುಂದೆನಡೆಯ ಜೀಕಾದ ಮಹತ್ವದ ಕೆಲಸಕ್ಕಾಗಿ ಮುಖಂಡ ಶ್ರೀಪಾದರೊಳಗಿಂದ ಇದುವರೆಗೆ ತೆಗೆದುಕೊಂಡ ೫೦೦ ರೂ. ಅಲ್ಲದೆ ಇನ್ನೂ ೫೦೦ ರೂಗಳ ವರೆಗೆ ಕಾರ್ಯವರ್ತಿಗಳು ವೆಚ್ಚಕ್ಕಾಗಿ ತೆಗೆದುಕೊಳ್ಳ ಬಹುದೆಂದು ಅವರಿಗೆ ಈ ಸಭೆಯ ಅಧಿಕಾರವನ್ನು ಕೊಡುತ್ತದೆ. ಇದಕ್ಕೆ ಕ. ಪ್ರಾಂ. ಕಾಂ. ಕಮೀಟಿಯವರಾದರೂ ತಮ್ಮ ಮುಂದಿನ ಸಭೆಯಲ್ಲಿ ಅನುಮತಿಯನ್ನು ಕೊಡಬೇಕು.

೯. ೧೧-೧೦-೩೧ ರಿಂದ ೧೧-೪-೧೯೩೧ ರವರೆಗಿನ ಕರ್ನಾಟಕ ಸೇವಾದಲದ ಮುಂದಿನ ಅಂದಾಜ ಪತ್ರಿಕೆಯನ್ನು ಮಂಜೂರ ಮಾಡಲಾಯಿತು ಹಣವುದೊರೆತಂತೆ ಆ ವೆಚ್ಚವನ್ನು ಪೂರೈಸ ಬಹುದೆಂದೂ ಗೊತ್ತಾಯಿತು.

ಅಂದಾಜ ಪತ್ರಿಕೆ.

ಶಿಕ್ಷಕರ ಶಿಕ್ಷಣಕ್ಕಾಗಿ	೨೪೦-೦-೦
೬ ಶಿಕ್ಷಕರನ್ನು ಶಿಕ್ಷಣಮುಗಿದಮೇಲೆ ೩ ತಿಂಗಳ ಇಟ್ಟು ಕೊಳ್ಳುವದು	೧೫೦-೦-೦
ಒಬ್ಬ ಸ್ತ್ರೀ ಶಿಕ್ಷಕಿಯ ಶಿಕ್ಷಣಕ್ಕಾಗಿ	೭೫-೦-೦
೬ ತಿಂಗಳ ಸಹಾಯಕ ಸಂಘಟಿಕನಸಂಬಳ	೨೪೦-೦-೦
ಪ್ರವಾಸ	೧೧೦-೦-೦
ಟಪಾಲು ಹಾಗು ಶಾರು	೭೫-೦-೦
ಮುದ್ರಣ "	೭೦-೦-೦
ಸಾದಿಲವಾರ	೨೦-೦-೦
ಅಂತೂ ರೂ.	೧೧೦೦

ಅಲ್ಲಲ್ಲಿಯ ಶಿಬಿರಗಳ ವೆಚ್ಚವನ್ನು ಆಯಾಸ್ಥಳದವರೇ ನೋಡಿ ಕೊಳ್ಳಬೇಕು

೧೦. ಕರ್ನಾಟಕ ಸ್ವಯಂಸೇವಕ ದಲದ ಮುಖ್ಯರಾದ ಶ್ರೀ. ರಂ. ರಾ ದಿವಾಕರರು ಒಪ್ಪಿಸಿದ ಸೇವಾದಲದ ನಿಯಮಗಳನ್ನು ಮಂಜೂರ ಮಾಡಲಾಯಿತು.

ಖಾದಿ ಮತ್ತು ಸ್ವದೇಶಿ.

(ಶ್ರೀ. ರಾಜಗೋಪಾಲಾಚಾರ್)

ಈಗಿನ ನಮ್ಮ ವಿಚಾರ ಕ್ಷೇತ್ರದಲ್ಲಿ ಸ್ವದೇಶೀ ಬಟ್ಟೆಯ ವಿಷಯದ ವಿಚಾರವು ಸೇರಿಸಲ್ಪಟ್ಟಿಲ್ಲ. ನಾವೀಗ ವಿಚಾರ ಮಾಡತಕ್ಕದ್ದೆಂದರೆ (೧) ಸ್ವದೇಶೀ ಅಂದರೆ ಗಿರಣಿಯ ಬಟ್ಟೆ ಹಾಗೂ (೨) ಖಾದಿ, ಇವುಗಳ ವಿಷಯ.

ನಾವು ನಮ್ಮ ಅಸ್ತಿಯ ಕೆಲವು ಭಾಗವನ್ನು ಸ್ವದೇಶೀ ಎಂದು ಗೊತ್ತಾದ ಗಿರಣಿಗಳ ಮಾಲಕರ ಹಾಗೂ ಅವುಗಳ ಪಾಲುಗಾರರ ಲಾಭಕ್ಕಾಗಿ ಹಂಚಿ ಕೊಡುವದು ವಿಹಿತವೋ? ಅಥವಾ ನಿರುದ್ಯೋಗಿಗಳಾಗಿ ತಿರುಗುತ್ತಿರುವ ನಮ್ಮ ದೇಶಬಾಂಧವರನ್ನು ಉದ್ಯೋಗದಲ್ಲಿ ಕೊಡಕಿಸಿ, ಆ ಮಾರ್ಗವಾಗಿ ಸ್ವದೇಶದ ಉನ್ನತಿಯ ಕಾರ್ಯದಲ್ಲಿ ಪಾಲುಗಾರರಾಗುವದು ವಿಹಿತವೋ? ಎಂಬುದೇ ಈಗಿನ ಮುಖ್ಯಪ್ರಶ್ನೆ. ಸ್ವದೇಶಿಯ ಬಟ್ಟೆಯನ್ನು ಕೊಂಡಲ್ಲಿ ೧ ನೆಯ ತರದ ಕಾರ್ಯವನ್ನೂ, ಖಾದಿಯ ಬಟ್ಟೆಯನ್ನು ಕೊಂಡಲ್ಲಿ ೨ ನೆಯ ತರದ ಕಾರ್ಯವನ್ನೂ ಮಾಡಿದಂತಾಗುವದೆಂಬದನ್ನು ನಾವು ಮರೆಯಬಾರದು.

ದೇಶದಲ್ಲಿಯ ಜನರ ನಿರುದ್ಯೋಗ ಸ್ಥಿತಿಯನ್ನು ತಪ್ಪಿಸಿ, ದೇಶದ ಆರ್ಥಿಕಸ್ಥಿತಿಯ ಉನ್ನತಿಯನ್ನು ಮಾಡುವದು ಅತ್ಯಾವಶ್ಯಕವೆಂದು ಸುಧಾರಿಸಿದ ರಾಷ್ಟ್ರಗಳಲ್ಲಿ ನಿರ್ಣಯಿಸಿ ಒಂದು ಒತ್ತಾಯದ ಕರವನ್ನು ತಮ್ಮ ಪ್ರಜೆಗಳ ಮೇಲೆ ಹೇರಿರುವರು. ಖಾದಿಯೂ ನಿರುದ್ಯೋಗವನ್ನು ಕಡಿಮೆ ಮಾಡುವದಕ್ಕೆ ಸಹಾಯ ಮಾಡುವ ಒಂದುತರದ ಕರವೇ ಆಗಿರುವದು. ಆದರೆ ಈ ಕರವು ಒತ್ತಾಯದ್ದಲ್ಲ! ಅಪ್ರತ್ಯಕ್ಷ ರೀತಿಯಾಗಿಯೂ, ಮನಸ್ಸಿನಿಂದಲೂ ಕೊಡಲಿಕ್ಕೆ ಬರುವಂತೆ! ಎಲ್ಲರಿಗೂ ಬಟ್ಟೆಯನ್ನು ಕೊಳ್ಳುವದು ಅವಶ್ಯಕನಿರುವದರಿಂದ, ಎಲ್ಲರೂ ಖಾದಿಯನ್ನೇ ಕೊಂಡಲ್ಲಿ ಈ ಎಲ್ಲ ಕಾರ್ಯಗಳು ಜರುಗಿ ದೇಶದ ಸಾಂಪತ್ತಿಕ ಸ್ಥಿತಿಯು ಸುಧಾರಿಸುವದಲ್ಲದೆ ಇಹರ ನೈತಿಕಾಚರಣೆಯೂ ಸುಧಾರಿಸುವದು.

ಯಾವದೇ ದೇಶದಲ್ಲಿರುವ ನಿರುದ್ಯೋಗ ಸ್ಥಿತಿಯನ್ನು ಕಡಿಮೆ ಮಾಡಲು ಪ್ರಯತ್ನಿಸುವದು ಮುಖ್ಯವಾಗಿ ಆ ದೇಶದ ಸರಕಾರದ ಕರ್ತವ್ಯ! ನಮ್ಮ ದೇಶದಲ್ಲಿ ಈ ನಿರುದ್ಯೋಗ ಸ್ಥಿತಿಯು ಬಹಳ ದಿವಸಗಳಿಂದಲೂ ಪ್ರಸಾರವಾಗಿಹತ್ತಿದೆ; ಆದರೂ ನಮ್ಮ ಸರಕಾರವು ಆ ಕಡೆ ಸಂಪೂರ್ಣವಾಗಿ ದುರ್ಲಕ್ಷಿಸಿದೆ ಹೀಗೆ ಪರಿಸ್ಥಿತಿಯಿದ್ದರೂ ಕೂಡ, ನಾವು ಖಾದಿಯನ್ನೇ ಉಪಯೋಗಿಸಿದಲ್ಲಿ, ಈ ತರದ ಸ್ಥಿತಿಯು ನಿರ್ಮೂಲವಾಗಿ, ಸಮೂಲ ನಾಶವಾಗುವದು ನಮ್ಮ ಸರಕಾರವು ಏನಾ ಕಾರಣ 'ಸಿಲ್' ಮತ್ತು 'ಮಿಲಿಟರಿ' ಖಾತೆಗಳಾಗಿ ಕಂಜಾಬಟ್ಟೆ ನೆಚ್ಚ ಮಾಡುತ್ತಿದೆ. ಹೀಗೆ ದೆಚ್ಚವು ಬೆಳೆದು, ಹಣವು ಬೇಕಾಗಲು, "ಪ್ರತಿಯೊಬ್ಬನಿಗೂ ಉಪ್ಪು ಅವಶ್ಯವಾಗಿ ಬೇಕು; ಕಾರಣ ಅದರ ಮೇಲಿನ ಕರವನ್ನು ಅಸರಿಮಿತವಾಗಿ ಏರಿಸಿದಲ್ಲಿ, ಎಲ್ಲರೂ ಕೊಟ್ಟೇ ಕೊಡಬೇಕಾಗುವದು. ಮತ್ತು ತಮಗೆ ಹಣವು ಸುಲಭವಾಗಿ ಸಿಕ್ಕುವದು" ಎಂದು ತಿಳಿದು ಸರಕಾರದವರು ಉಪ್ಪಿನ ಕರವನ್ನು ಏರಿಸಿಬಿಟ್ಟರು. ಪ್ರತಿಯೊಬ್ಬನಿಗೂ ಉಪ್ಪು ಬೇಕಾಗಿರುವದರಿಂದ, ಆ ಕರವು ಅಸಹ್ಯವಾಗಿದೆ. ಮತ್ತು ಈ ಕರವನ್ನು ಕೊಡಲಿಕ್ಕೆ ಪ್ರತಿಯೊಬ್ಬನ ಹತ್ತರ ಹೊದಲಿನಕ್ಕಿಂತ ಸ್ವಲ್ಪ ಹೆಚ್ಚಿಗೆ ಹಣವಿರಬೇಕು ಆದರೆ, ಹಣದ ಕೊರತೆಯಿಂದಲೂ, ನಿರುದ್ಯೋಗದಿಂದಲೂ, ಅವನು ಬೇಚಾಡಬೇಕಾಗಿದೆ

ಬರಬರುತ್ತ ಪ್ರತಿಯೊಬ್ಬ ಹಿಂದುವಿನ ಬಡತನವು ಹೆಚ್ಚುತ್ತಾ ನಡೆದಿದೆ; ದಿನದಿನಕ್ಕೆ ಅವನು ತೆರುವ ಪಟ್ಟು, ಬೆಳೆದ ಫಲಗಳ ಬೆಲೆಯು ಬಹಳೇ ಸ್ವಮಾಣದಿಂದ ಕಡಿಮೆಯಾಗುತ್ತ ನಡೆದಿರುವದರಿಂದಲೂ, ಸಾಲಗಾರನಾಗಿರುವದರಿಂದಲೂ, ಸಾಹುಕಾರರಿಗೆ ಬಡ್ಡಿಯ ಹಣವನ್ನು ಕೊಡಲಿಕ್ಕೆ ಅವನಲ್ಲಿ ಶಕ್ತಿಯುಳಿದಿಲ್ಲ. ಇಂತಹ ಸ್ಥಿತಿಯಲ್ಲಿಯೂ ಕೂಡ ಬಡವನಾದ ಹಿಂದೀಯನ ಬೆನ್ನಿಗೆ ಹೆಚ್ಚಾಗಿ ಕರದಭಾರವೊಂದು!

ಧಾನ್ಯಾದಿ ವಸ್ತುಗಳ ಬೆಲೆಯು ಅರ್ಧಕ್ಕಿಂತಲೂ ಹೆಚ್ಚು ಕಡಿಮೆ ಯಾಗಿದ್ದರೂ ಕೂಡ್ಯ ಸರಕಾರವು ತನ್ನ ನೌಕರರ ಸಂಬಳವನ್ನು ಆ ಪ್ರಮಾಣದಲ್ಲಿ ಇಳಿಸಲು ಒಪ್ಪುವಾಗಿದೆ.

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೫೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೩೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟನೆಯ ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರನೆಯ ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ತಿಳ್ಳಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7 30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು. ಸುಮಾರು ೨೫ ಕೋಟಿಜನಗಳಿಗೆ ಜನ್ನಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದ ಮತ್ತು ದೇಶಾಭಿಮಾನಿಗಳ ಅಗತ್ಯಕರ್ತವ್ಯ ವಾಗಿದೆ. ಭಾವೀ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯು ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1933 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲಬೇಕ್ಷೆಯುಳ್ಳವರು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮ ಗಾಂಧಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ.		
"	ಒಂದನೆಯ ಭಾಗ	೦—೧೨—೦
"	ಎರಡನೆಯ ಭಾಗ	೦—೧೨—೦
	ಮೂರನೆಯ ಭಾಗ	೦—೯—೦
"	ನಾಲ್ಕನೆಯ ಭಾಗ	೧—೮—೦
"	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರು ಬರೆದ "ಅನಾಸಕ್ತಿ ಯೋಗ"		೦—೧೨—೦
(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ)		
ಮಹಾತ್ಮ "ಗೀತೆ"	ಚಿಕ್ಕ ಪುಸ್ತಕ	೦—೧—೦
ರಾಷ್ಟ್ರೀಯ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor.		1—0—0
ಹಿಂದೀ ಬಾಲ ಬೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
"	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೫—೦
ದೂಸರೀ		೦—೬—೦
ಸಂಬೇದಾರ ಕಹಾನಿಯಾ		೦—೫—೦
ಅನುವಾದಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ

ಕರ್ನಾಟಕ ಕೇಸರಿ ಕಾರ್ಯಾಲಯ. ಬೆಳಗಾಂ.

ಪ್ರೇಮ ಚಿಕಿತ್ಸಾಲಯ.

ಕಿಷ್ಣಮಾಚಾರ್ಲು ಕೇಳಿದು ಬಳ್ಳಾರಿ.

[illegible] ಎಲೆಂಟಿಯ:—ಸ್ವಾಂತ ಧಾತ್ರ್ಯಕ್ಯೂಟಿಕಲ್ ವರ್ಕ್ಸ್ ಜೊಂಡಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನವ್ಯ ಶ್ರೀ ವಿದ್ಯೆ ಚ್ಯುತಿ, ಶಸ್ತ್ರಗಳಿಂದಲೂ. ಆಯುರ್ವೇದೀಯ ಔಷಧ ಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

ವಿ. ಎಂ, ಗಿರಿ ಅಂಡ್ ಸನ್ಸ್.

ಕೇಳಬೇಕಿ ಬಳ್ಳಾರಿ.

ವಿಜಂಟರು:- ಲೋಧ್ರಾ

(ಗರ್ಭಾಶಯ ರೋಗನಿವಾರಣೆ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳು. ಅಧಿಕಾರಿಗಳಿಗೂ, ಗೃಹ ಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾಗುವ ಚಲ್ಲರೆವಸ್ತುಗಳೂ, ಸ್ವೀ ಪನರಿ ಪದಾರ್ಥಗಳೂ, ಸಾಲಭ ಬೆಲೆಗೆ ದೊರೆಯುತ್ತವೆ.

ಪಿ. ಎ. ಪಿ, ಯವರಾದ ತಯಾರಾದ ಅತ್ಯುತ್ತಮ ಹೆಣ್ಣಿನ ಕಬುಬ್ರಗಳು ಇಲ್ಲಿ ಇಂಗ್ಲಿಷ್ ದರಕ್ಕೆ ದೊರೆಯುತ್ತವೆ.

TO LET

FOR SALE

1 Boston hand Press —

Prints 5" 8" matter neatly, in good working order

Price moderate & reasonable

2 New cyclostyle Machines—

Used only twice or thrice Perfectly new

Price considerably cheap Apply sharp —

KARNATAKA KESARI. OFFICE

Bellary

ದಿ ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್

ಈ ಕಂಪನಿಯ ಮುಖ್ಯ ಲಕ್ಷಣಗಳು

೧. ಆಯಿಕೆಯ ತಿರ್ಮಾನ ಮಾಡಿಕೊಳ್ಳುವದರ ಸರಿಯಾದ ಸಮಯ

೨. ಪೊಲಿಸಿದಾರರ ಹಣಕ್ಕೆ ಹೆಚ್ಚು ಭದ್ರತೆ ಕೊಡುವದು

೩. ಕಂಪನಿಯ ಒಡವಾಳದಲ್ಲಿ ಇಂಡಿಯನ್ ಪ್ರಜೆಗಳಿಗೆ ಸೇರಿದ ಮಂಜೂರಾದ ಸಂಖ್ಯೆಗಳಲ್ಲಿ ಪಾಲಿದಾರರು

೪. ಪ್ರೀಮಿಯಂ ಸಂಗ್ರಹದವರು ಪೆಟ್ಟಿ ಕಂಪನಿಗಳ ದರಕ್ಕಿಂತ ಕಡಿಮೆ

೫. ಪೊಲಿಸಿಗಳನ್ನು ತೊಡಕಾದ ಶರತಗಳಾವುದೂ ಇಲ್ಲದೆ ಸರಳವಾಗಿರುವುದು

೬. ಸದ್ಯದ ಪೊಲಿಸಿಗಳನ್ನು ಹೆಚ್ಚು ಕರ್ಚು ಇಲ್ಲದೆ ಬೋನಸ್‌ದಲ್ಲಿ ತರಿಸುವುದು.

೭. ಕಂಪನಿಯ ಲಾಭದಲ್ಲಿ ಸೇಕಡಾ ೯೦ನ್ನು ಪೊಲಿಸಿದಾರರಿಗೆ ಹಂಚಲಿಕ್ಕಿರುವುದು

೮. ಪೊಲಿಸಿ ಬೆಲೆಯಂತೆ ಕಂಡು ಎಂದಾಗ ಕಂಪನಿಯಿಂದ ಕೊಡತಕ್ಕಂಥಾ ಸ್ವತ್ತಿಗಳನ್ನು ಬಾಕಿ ಸುದುತರವಾಗಿರುವುದು

೯. ಪೊಲಿಸಿಯ ಪ್ರತಿಗಳನ್ನು ಸಮಯದ ಸುದ್ದಿಗೆ ಎಂದಾಗ ಅಭ್ಯಂತರವಿಲ್ಲದೆ ಕೂಡಲೆ ಪಡೆಯಬಹುದು

ವಿಳಾಸ:— ಎಂ. ಸೆಂಕಟೋಬರಾವ್. ಬಿ. ಎ.
ಸತ್ಯನಾರಾಯಣ ಪೆಟೆ
ಬಳ್ಳಾರಿ

ಶ್ರೀಮತಿ ವಾಣಿ ಮಿಷನ್ ದಾರದ ಪುಂಜೆಗಳು.



ಈ ದಾರದ ಪುಂಜೆಗಳು ಶುದ್ಧಿಯಾಗಿಯೂ, ನಯವಾಗಿಯೂ, ಇರುವದರಿಂದ ಮಿಷನ್ನಿನಲ್ಲಿ ಓಡುವುದಕ್ಕೂ, ಕೈಲಿ ಹೊಲಿಯುವದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ ಬಿಳಿ, ಕೆಂಪು, ಕಪ್ಪು ಮತ್ತು ಇತರ ರಂಗುಗಳಲ್ಲಿ ತಯಾರಾದ ಪ್ರಕಾರಗಳು ಕಡಿಮೆ ಧಾರಣೆಗೆ ದೊರಕುತ್ತವೆ

ದರ ಬರದು ತಿಳಿಸಿಕೊಳ್ಳಿರಿ

K. V. & Sons,
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್,
ತೇರು ಬೀದಿ ಬಳ್ಳಾರಿ

Commerce has conquered the world

FREE INSTRUCTIONS.

THE KARNATAKA TYPE WRITING-INSTITUTE,
& Commercial Agency.
Bangalore Road. Bellary

Agents & dealers in:

Wood stock, Corona and other typewriters of all makes, best ribbons carbons, and Swadesni fountain pens etc.

HOW TO LEARN TOUCH TYPE-WRITING IN 20 days short hand a speciality.

(Seperate accommodation for lady students)

Job works & Repairs undertaken on moderate charges.

ಆರ್ಜಿಗಳನ್ನು ಕಳಿಸಿ ದರದ ಪಟ್ಟಿಯನ್ನು ಕೊಳ್ಳಿರಿ

Prospectus sent free on application.

THE GRADUATES' TRADING ASSOCIATION,

General merchants, Grammophone Dealers & ens Agents,

CAR STREET BELLARY

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್ ಗ್ರಾಮಫೋನ್ ಡೀಲರ್ಸ್ ಅಂಡ್ ಸ್ಯೂಸ್ ಏಜೆಂಟ್ಸ್

ತೇರು ಬೀದಿ ಬಳ್ಳಾರಿ.

ARYA VAIDYALAYA BELLARY

Pandit C. S. Shastry's Patent Medicines

MONEY RETURNED IF NOT CURED.

1 FEVER KILLER.

Any fever completely cured in 4 days — 8 oz Bottle Rs 2—0—0

2 NAVAJEEVAN PAK.

King of Tonic foods (sweet) — 1 lb Rs 1—8—0

3 PRAMEHA BHANJINI

Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್ ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಔಷಧಿಗಳು — ಗಣನೆಯಿದ್ದ ಪ್ರಹಣ ಪರತ

"ಜ್ವರ ಸಂಹಾರಿ."

ಸಾಮಾನ್ಯ ಎಲ್ಲಾ ಜ್ವರಗಳು ನಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — ೮, ಔನ್ಸಿನ ಬಾಟ್ಲಿ ರೂ ೨— —೦

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ ರೂ ೧—೮—೦

ಪ್ರಮೇಹ ಭಂಜಿನಿ

ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಪಾತ್ರಿ ಗುಣ ಹೊಂದ ತ್ತದೆ — ರೂ ೬—೦—೦

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಜೆತನ ಮುಂತಾದ ಕಠಿಣ ವ್ಯಾಧಿಗಳು ಎಷ್ಟು ಹಳೆಯವಾದರೂ ಕಷ್ಟಸಾಧ್ಯವಾಗಿದ್ದವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ಮಾಸಿಹಿಡಲ್ಪಡುತ್ತವೆ ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು

ಸಿ. ಯಸ್. ಶಾಸ್ತ್ರಿ
ಪ್ರೊಪ್ರೈಟರ್

PRINTED & PUBLISHED BY T. S. KESHAVA RAO AT SRI VIDYARANYA PRESS BELLARY.

EGISTERED NO M—2736.

ಕರ್ನಾಟಕ ಕೇಸರಿ

ಸುಕೃತಿನಾಂ ಕೃಷ್ಣಕ್ಷರೋ ! ಸುಪ್ರಕ್ಷಸ್ವಂಗ ಸಜೀತಃ ॥
ಬಿಸ್ಮೈರನ್ನಸ್ವ ಭಾಷಿತಃ (ಯಸ್ಯ ಸೂಸೀಃ ಪಾಂಡವ ॥ ಗೀತ. ೪. ೧೧ ಶ್ಲೋ -೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

ವಾರ್ಷಿಕ ಚಂದಾ		ಸಂಪಾದಕ	ಆರು ತಿಂಗಳ ಚಂದಾ.
ಸ್ಥಳದವರಿಗೆ ...	೩—೮—೦	ಟೇಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.	ಸ್ಥಳದವರಿಗೆ .... ೧—೮—೦
ಪರಸ್ಥಳದವರಿಗೆ ...	೩—೦—೦	(ಪ್ರತಿ ಸ್ಯಾಂಕ ೨-೦-೦)	ಪರಸ್ಥಳದವರಿಗೆ .... ೧—೧೩—೦

ವರ್ಷ ೧ ಬಳ್ಳಾರಿ ನಗರ—ಡಿಸೆಂಬರ್ ೬ ನೇ ಸೋಮವಾರ ೧೯೩೧ ಸಂಚಿಕೆ ೮

ಲಂಡನ್ ಸಭೆಯಲ್ಲಿ ಗಾಂಧೀಜಿಯವರ ಅಂತ್ಯ ಭಾಷಣ.

ಇಂಡಿಯಾದ ಸ್ವಾತಂತ್ರ್ಯಕ್ಕೆ ಎಂಥಾ ಸ್ವಾರ್ಥತ್ಯಾಗವೂ ಒಹಳ ದೊಡ್ಡದಲ್ಲ.

ಮಹಾತ್ಮ ಗಾಂಧಿಯವರು ತಾ ೧೩೦—11—31 ರಾತ್ರಿ 12 ಘಂಟೆಗಳಾದ ಮೇಲೆ ಮಧ್ಯರಾತ್ರಿಯಲ್ಲಿ ತಮ್ಮ ಸ್ಥಾನದಲ್ಲಿಯೇ ಕೂತು, ಸುಮಾರು 70 ನಿಮಿಷಗಳ ವರೆಗೂ ಮಾತಾಡಿದರು. ಅವರ ಭಾಷಣವು ಭಾವ ಗರ್ಭಿತವೂ, ದೈವೀಶಕ್ತಿಯನ್ನುಳ್ಳದೂ, ಕಾಂಗ್ರೆಸ್ಸಿನ ಪ್ರಚಂಡ ವೈಭವವನ್ನು ಬೀರುವ ಪ್ರತಿಭಾಶಾಲಿಯುಕ್ತವೂ, ಆಗಿದ್ದಿತು. ಚಿತ್ರ ಪ್ರತಿಮೆಗಳಂತೆ ಕೂತು ಎಲ್ಲರೂ ಸದರಿ ಭಾಷಣವನ್ನು ಕೇಳಿದರು. ಮಧ್ಯ ರಾತ್ರಿಯಾದಮೇಲೆ, ಹಿಂದೂಸ್ಥಾನದ ಸ್ವಾತಂತ್ರ್ಯ ವಿಷಯದಲ್ಲಿ ಬ್ರಿಟಿಶ ನೀತಿಯನ್ನು ವ್ಯಕ್ತ ಪಡಿಸುವ, ಪತ್ರವನ್ನು ತಯಾರುಮಾಡಿಸಲು ಮುಖ್ಯ ಮಂತ್ರಿಗಳು ಎದ್ದುಹೋದರು.

ಇಲ್ಲಿ ಭಾಷಣವನ್ನು ಕೊಡಬೇಕೇ ನನ್ನ ಕೆಲಸವನ್ನು ಮುಗಿಸಬೇಕೆಂದಿದ್ದೆನು ಆದರೆ ಕಾಂಗ್ರೆಸದ ಪರವಾಗಿ ಒಂದೆರಡು ಮಾತುಗಳನ್ನು, ನನ್ನ ತತ್ವಗಳಿಗನುಸಾರವಾಗಿ ಹೇಳಲೇಕ್ಷಿಸುತ್ತೇನೆ. ಈ ವಿಷಯದಲ್ಲಿ ನನಗೇನೂ ಭೀತಿಯಿಲ್ಲ. ಅಲ್ಲದೆ ನಾನುಹೇಳುವವಿಷಯಗಳಾದರೂ, ಕ್ಯಾಬಿನೆಟನವರಾದನೀವು ಈಗಾಗಲೇ ನಿಶ್ಚಯಿಸಿರುವ ನಿರ್ಣಯವನ್ನು ಕಿಂಚಿತ್ತಾದರೂ, ಬದಲು ಮಾಡುವಂಥ ಉದ್ದೇಶವನ್ನೂ ಕೂಡ ನಾನು ಇಟ್ಟುಕೋಂಡಿಲ್ಲ. ಇಂಡಿಯಾದಂಥ ದೊಡ್ಡದೇಶದ ಹಣೆಯ ಬರಹವು ಬರೀಚರ್ಚೆಯಲ್ಲಿ ಕೊಸರಾಣಾಗುವದಿಲ್ಲ ರಾಯಭಾರವನ್ನು ನಡಿಸುವುದರಲ್ಲಿಯೂಕೂಡ, ಪರಿಸ್ಥಿತಿಯೂ, ಅರ್ಥವೂಕೂಡ ಇದೆ ಈ ವಿಷಯಗಳನ್ನೆಲ್ಲಾ ನಾನು ಈಗತರಲೇಳಸುವದಿಲ್ಲ.

ಪರಿಪತ್ತಿನ, ಮುಂದಿರುವ ವರದಿಗಳು.

ಈ ಸಭೆಗೆ ಚರ್ಚೆಗೆಇಡಲ್ಪಟ್ಟ ಅನೇಕವಿಷಯಗಳಮೇಲೆ, ಹಿಂದೂಸ್ಥಾನದ ಪ್ರತಿನಿಧಿಗಳ ಅಭಿಪ್ರಾಯಗಳನ್ನೂ ಒಳಗೊಂಡ ವರದಿಗಳು ಒಪ್ಪಿಸಲ್ಪಟ್ಟಿವೆ. ಈ ವರದಿಗಳಲ್ಲೆಲ್ಲಾ ಬಹುಪಾಲು ಅಭಿಪ್ರಾಯಗಳೆಂದು ಉಳ್ಳೀಯವಾಗಿ, ಅದರ ವಿರುದ್ಧವಿರುವವರನ್ನು ತೀರಕುಚ್ಚು ಮಾಡಿದ್ದಾರೆ. ಇಂಥಾವರದಿಗಳನೇಕವುಗಳಲ್ಲಿ ನಾನೇನಿರುದ್ಧ ವಿರುವುದು ನನಗೇ ವಿಷಾದಜನಕವಾಗಿದೆ, ಏತಕ್ಕಂದರೆ, ನಮ್ಮ ಇತರೇ ಪ್ರತಿನಿಧಿಗಳ ವಿರುದ್ಧವಿರುವುದು ಸಂತೋಷವಿಷಯವಲ್ಲ ಅದರ ಸತ್ಯವಾದ ವಿಷಯಗಳನ್ನು ನಾನು ಹೇಳಬೇಕಾದ್ದಲ್ಲಿ ಕಾಂಗ್ರೆಸದ ಪ್ರತಿನಿಧಿಯಾಗಿ ವ್ಯರ್ಥವಾಗ ತ್ತಿದ್ದಿತು.

ಕಾಂಗ್ರೆಸ್ ಸಭೆಯ ಮಹತ್ವ

ಹಿಂದಿನ ಸಭೆಗಳಲ್ಲಿ ಕಾಂಗ್ರೆಸ್‌ಸಭೆಯು ಶೇಕಡ 85 ಭಾಗದ ಹಿಂದೂಸ್ಥಾನದ ಜನಸಂಖ್ಯೆಯ ಪರವಾಗಿ ಮಾತಾಡುತ್ತೇಂದು ಹೇಳಿರುವೆನು, ಅದೂಅಲ್ಲದೆ, ಮಹಾರಾಜರು, ಜಮೀನ್ದಾರರು ಮತ್ತಿತರ ಶ್ರೀಮಂತರವರವಾಗಿಯೂಕೂಡ, (ಅವರ ಕ್ಷಮೆಯನ್ನು ಬೇಡಿ) ಕಾಂಗ್ರೆಸ್ ಸಭೆಯು ಮಾತಿಸಬಲ್ಲುದೆಂದು ಈಗಹೇಳುವೆನು ಕಾಂಗ್ರೆಸ್ಸಿಗೆ ಈ ಅಧಿಕಾರವಿರುವುದೆಂದು ನಾನು ಈದಿವಸ ಪುನಃ ಒತ್ತಿಹೇಳುವೆನು ಈ ಸಭೆಯಲ್ಲಿರುವ ಇತರಭಾಗಗಳೆಲ್ಲಾ ವ ತಭಾಗಗಳ ಪರವಾಗಿರುವರು ಆದರೆ ಕಾಂಗ್ರೆಸ್ ಹಿಂದೂಸ್ಥಾನದ ಎಲ್ಲಾಮತಾಂತರಗಳನ್ನೂ, ಎಲ್ಲಾ ಭಾಗಗಳನ್ನೂ, ಪ್ರದರ್ಶಿಸುವದೆಂದು ಹೇಳುವೆನೆ. ಕಾಂಗ್ರೆಸ್ಸಿಗೆ, ಜಾತಿ, ಮತಭೇದಗಳಾಗಲೀ ಇತರೇ ಸ್ವಾರ್ಥಸಂಬಂಧಿ ವಿಷಯಗಳಾಗಲೀ ಇಲ್ಲ. ಇಂಥಾಸಭೆಯಲ್ಲಿ ದೋಷಗಳೇಇಲ್ಲವೆಂದು ನಾನು ಹೇಳಲಾರೆನು ಏತಕ್ಕೆಂದರೆ ಪ್ರಪಂಚದಲ್ಲಿರುವ ಇತರ ಯಾವ ಸಂಸ್ಥೆಗಳಾಗಲೀ, ನಿರ್ದೋಷವಲ್ಲ ವೆಂದು, ನಾನು ನಂಬಲಾರೆನು. ಹಿಂದೂಸ್ಥಾನದ ಮೂಲೆ ಮೂಲೆಯಲ್ಲಿರುವ ಹಳ್ಳಿಗಾಡುಕೂಡ ಕಾಂಗ್ರೆಸ್ ಎಂದರೆ ಏನೆಂಬುದು ಗೊತ್ತಾಗಿ, ನಮ್ಮ ಸಭೆಯು ದಿನೇ ದಿನೇ ವೃದ್ಧಿಯಾಗುತ್ತಿರುವುದೆಂಬುದನ್ನು ನೀವು ಲಕ್ಷ್ಯದಲ್ಲಿಡತಕ್ಕದ್ದು.

ಕಾಂಗ್ರೆಸದವರೇ ನಿರ್ಣಾಯ ಮಾಡಲಿಕ್ಕೆ ಅರ್ಹರು.

ಕಾಂಗ್ರೆಸ್ಸಿಗೆ ಇಂಥಾ ಮಹತ್ವವಿದ್ದೂಕೂಡ, ಇದನ್ನು ಹಿಂದುಪಾರ್ಟಿಯೆಂದು ನೀವು ಗಣಿಸುತ್ತಿರುವುದು ಪರಮ ಅನ್ಯಾಯ. ಇವನ್ನೇನೂ ನಾನು ಲಕ್ಷಿಸತಕ್ಕದಲ್ಲ ನೀವು ಹಾಗೆ ಗಣಿಸುವದರಿಂದ ಕಾಂಗ್ರೆಸ್ ಸಭೆಗೆ ಯಾವ ಬಾಧೆ ಬರುವುದಿಲ್ಲ. ಅದರೆ ನೀವು ಯಾವ ಉದ್ದೇಶದಿಂದ ಇಲ್ಲಿ ನೆರವಿರುವಿರೋ, ಅಂಥಾಉದ್ದೇಶಕ್ಕೆ ಮಾತ್ರ ಬಾಧೆತಟ್ಟುವುದು. ಬ್ರಿಟನ್‌ದೇಶದವರಿಗೂ ಬ್ರಿಟಿಶ್ ಮಂತ್ರಿಗಳಿಗೂ, ಕಾಂಗ್ರೆಸ್‌ಸಭೆಯು ಹಿಂದೂಸ್ಥಾನದ ನಿಜವಾದ ಪ್ರತಿನಿಧಿಎಂದು ನಂಬಿಕೆಕೊಡಿಸಲು ನನಗೆ ಆಶಿಸಿದೆ ನಮ್ಮ ಈಸ್ವಾತಿನಿಧ್ಯವನ್ನು ಶಾಂತರೀತಿಯಿಂದ ಬ್ರಿಟಿಶವರು ಅಂಗೀಕರಿಸಿದರೆ ಎಂಥಾ ಕ್ಷೇಮವಾದೀತು.

ಕಾಂಗ್ರೆಸ್ ಸಭೆಗೆ ಪ್ರತಿ ಸರ್ಕಾರವನ್ನು ನಡೆಸುವ ಶಕ್ತಿ ಇದೆ.

ಕಾಂಗ್ರೆಸದವರು ಕಾಮಿಡೇ ಸರ್ಕಾರದ ಮಧ್ಯ ಪ್ರತಿ ಸರ್ಕಾರವನ್ನು ಹೂಡಿದವರೆಂದು ಆರೋಪಣೆ ಮಾಡಿದವು ಆ ಆರೋಪಣೆಯನ್ನು ನಾನು ಅಂಗೀಕರಿಸಿದ್ದೇನೆ. ನೀವು ಕಾಂಗ್ರೆಸದ ಒಳ ಆಡಳಿತಗಳನ್ನೆಲ್ಲಾ ಬಲ್ಲವರಾಗಿದ್ದರೆ, ನಿಮಗೆ ಕಾಂಗ್ರೆಸದ ಅಂಥಾ ಶಕ್ತಿಯು ತಿಳಿಯುತ್ತಿದ್ದಿತು ನೀವು ಕಾಂಗ್ರೆಸ್ಸಿಗೆ ಅಮಾನತಣಿ ಕೊಡುವುದನ್ನು ಕೊಟ್ಟು, ನೀವು ಅದನ್ನು ನಂಬುವದಿಲ್ಲ

ಕಾಂಗ್ರೆಸದವರಿಗೆ ಅಂಥಾ ಶಕ್ತಿಯನ್ನು ಪಾಶ್ಚಿಮಾತ್ಯ ದೇಶದ ಈ ಮೂಲೆಯಲ್ಲಿ ಕೂತು ಬಾಯುಮಾತಿನಿಂದ ತೋರಿಸಲಿಕ್ಕಾಗುವುದಿಲ್ಲ. ಅದರೆ ನೀವು ನನ್ನ ಮಾತಿನಲ್ಲಿ ವಿಶ್ವಾಸ ವಿಡತಕ್ಕವರಾಗಿದ್ದರೆ ಹಾನಿ ಮಾಡುತ್ತಿರಲಿಲ್ಲ. ನನ್ನ ತಲೆಯ ಮೇಲೆ ಅಗಾಧವಾದ ಜವಾಬ್ದಾರಿ ಯಿರುವುದರಿಂದ ನಾನುಹೀಗೆ ಮಾತಾಡುತ್ತಿರುವೆನು.

ಮುಂದಕ್ಕೆ ಶೂನ್ಯಕ್ಕೆ ಮುಂಬರುವುದು)

ಉತ್ತಮ ಜಮೀನು ಬಗ್ಗೆ

ಕೆಲ್ಲೋಗ್ಸ್‌ರ

ನೇಗಿಲನ್ನು ಉಪಯೋಗಿಸಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನೆ ಮಾಡುತ್ತದೆ.

ನೇಗಿಲುಗಳ ಸಿಫಾರಸ್ ಪತ್ರವೆಂದರೆ, ಒಕ್ಕಲಿಗರ ಸಂತೋಷ ಎಂಬುವದನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ನಮೂನೆಯ ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕೆಲ್ಲೋಗ್ಸ್‌ರ ಬಂಧುಗಳು, ಲಿಮಿಟೆಡ್

ಕೆಲ್ಲೋಗ್ಸ್‌ರವಾಡಿ

ಪಿ. ಸಾ. ಬಾ.

ರಿಜಿಸ್ಟರ್ಡ

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ವನಸ್ಪತಿ ಯುಕ್ತ

ನರ್ವ್‌ಸ್ಟ್ರೆಂಥಿಂಗ್ ಪಿಲ್ಸ

ಅರ್ಥಾತ್

ಬಲವಂತ ಗುಟಿಕಾ.

ಈ ಗುಟಿಗೆಗಳಿಂದ ರಕ್ತ ಶುದ್ಧಿ, ಧಾತು ವೃದ್ಧಿಯಾಗುವದು, ಕಾಮೋತ್ತೇಜಕವಾಗಿ ನಪುಂಸಕತ್ವವು ನಾಶವಾಗುವದಲ್ಲದೆ ಮರೀ ರತಿಸುಖವನ್ನು ಅನುಭವಿಸಲಿ ಬರುತ್ತದೆ. ಹಾಗೂ ಉಷ್ಣದ ರೋಗಗಳಿಗೆ ಗುಣವಾಗುತ್ತವೆ. ಮತ್ತು ಇನ್ನು ಹನವಾಗಿ ಹಸಿವು ಚನ್ನಾಗಿ ಆಗುತ್ತದೆ. ಬೌಚಿ ಸಾಫ ಆಗುವದು ಇದು ಅಲ್ಲದೆ ವಾತ, ಪಿತ್ತ, ಕಫ, ಈ ತ್ರಿದೋಷಗಳ ಮೂಲದಿಂದಾದ ಬೇನೆಯೂ ಹೋಗುವುದು. ಪೂರ್ಣ ಗುಣಕ್ಕೆ ೬ ಪಟ್ಟಿ ತಕೊಳ್ಳಿರಿ. ಒಂದು ಡಬ್ಬಿ ಕಿಮ್ಮತ್ತು ೧೦ ಆಣೆ ೩ ಡಬ್ಬಿ ಕಿಮ್ಮತ್ತು ೧—೧೨—೦ ಒಂದುಡಜನು ಕಿಮ್ಮತ್ತು ೬ ರೂ. ಇದಲ್ಲದೆ ಒಂದು ಡಬ್ಬಿ ಕಮೀಶನ ಸಿಗುವದು. ಟಪಾಲು ಪ್ಯಾಕಿಂಗ ಖರ್ಚು ಬೇರೆ ಬೀಳುವದು ಏಜಂಟರ ನಿಯಮ ತರಿಸಿಕೊಳ್ಳಿರಿ. ಬಾಕಿ ರೋಗದ ಬಗ್ಗೆ ವಿಶೇಷ ಖುಲಾಸ ಡಬ್ಬಿ ಸಂಗಡ ಇದ್ದ ಅನುಪಾನ ಪತ್ರದಲ್ಲಿ ಇರುತ್ತದೆ. ಅಶಕ್ತತೆ ಮತ್ತು ಉಷ್ಣತೆಯ ರೋಗದ ಮೇಲೆ ಸ್ತ್ರೀಯರಿಗೆ ಮತ್ತು ಹುಡುಗರಿಗೆ ಸಹ ಈ ಗುಟಿಗೆಗಳು ಬಹಳ ಉಪಯೋಗ ಮಾಡುತ್ತವೆ.

ಎಸ್. ಬಿ. ಕಪಸ್ ಮತ್ತು ಸನ್ಸ್,

ಮು, ಪೋಸ್ಟ—ನಿಪ್ಪಾಣಿ [ಜಿ. ಬೆಳಗಾಂವ.]

ಸೋಲಿ ಏಜಂಟ - ಶ್ರೀ ಹನುಮಾನ ಏಜನ್ಸಿ ಪಂಚಮುಖಿ ಪರೇಖ.

TO LET

ಲಂಡನ್ ಸಭೆಯಲ್ಲಿ ಗಾಂಧೀಜಿಯವರ ಅಂತ್ಯ ಭಾಷಣ.

ಒಂದನೇ ಪುಟದಿಂದ ಮುಂದುವರಿದಿದೆ.

ದಂಗೆಯೇಳುವ ಗುಣ.

ಕಾಂಗ್ರೆಸ್ ಸಭೆಯ್ಯುದಂಗೆ ಯೇಳುವ ಗುಣವನ್ನು ಪ್ರದರ್ಶಿಸುವುದು. ಇಂಥಾ ವಿಷದ ಗಳನ್ನು ಇಲ್ಲಿ ಚರ್ಚಿಸುವುದು ಅನಾವಶ್ಯಕ. ಏತಕ್ಕೆಂದರೆ ಶಾಂತ ವಾತಾವರಣದಲ್ಲಿ ವಿಷಯಗಳನ್ನು ಚರ್ಚಿಸಿ ಸ್ವರಾಜ್ಯವನ್ನು ಸಂಪಾದಿಸಲೋಸುಗ ನಾವೆಲ್ಲಾ ಇಲ್ಲಿ ನೆರದಿದ್ದೇವೆ. ಗ್ರೇಟ್‌ಬ್ರಿಟನ್ ದೇಶವು ಹಿಂದೂಸ್ಥಾನಕ್ಕೆ ಚರ್ಚೆಯಮೂಲಕ ಸ್ವರಾಜ್ಯವನ್ನು ಕೊಟ್ಟರೆ ಎಂಥಾ ಕೀರ್ತಿಕಾರಿಯಾದೀತು. ಆದರೆ ಕಾಂಗ್ರೆಸ್ಸಿಗೆ ಈಕಲ್ಪಿಪ್ರಾಯವಿಲ್ಲ. ಕಾಂಗ್ರೆಸ್ ಅನುಸರಿಸುವ ಮಾರ್ಗಗಳನ್ನು ನಾವು ಹೇಳಿದರೆ ಅದು ಚನ್ನಾಗಿರುವುದಿಲ್ಲ. ಹಿಂದೂಸ್ಥಾನದಲ್ಲೆಲ್ಲಾ ಕಾಯದೇ ಭಂಗದ ಚಳವಳಿಯೂ ಅಶಾಂತತೆಯೂ, ಕ್ರಾಂತಿಯೂ ಹಬ್ಬಿದರೆ ಎಂಥಾ ಪರಿಣಾಮವಾದೀತೆಂಬದನ್ನು ಕೆಲವು ವ್ಯಾಖ್ಯಾನಕಾರರೇ ಹೇಳಿದ್ದಾರೆ. ನಾನೇನೋ ಚರಿತ್ರೆಯನ್ನು ಪೂರ್ಣ ಓದಿದವನಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ ಓದಿದ ಹಲ ಕೆಲವು ವಿಷಯಗಳು ಜ್ಞಾಪಕದಲ್ಲಿವೆ. ಯಾವ ದೇಶವೇ ಆಗಲಿ ಸ್ವಾತಂತ್ರ್ಯವನ್ನು ರಕ್ತ ಪ್ರವಾಹ ಮಾಡದೆ ಹೊಂದಿಲ್ಲವೆಂಬುದು ನನಗೆ ಚರಿತ್ರೆಯಿಂದ ತಿಳಿದ ಬಂದಿದೆ ಭೀಷಣ ಚಳವಳಿಯೂ, ಭೀಷಣ ಪರಿಣಾಮಗಳೂ, ಇಷ್ಟಿದೆ, ಸ್ವಾತಂತ್ರ್ಯ ದೇವತೆಯ ದರ್ಶನವಾಗಿರುವ ವಿಷಯವು ನನಗೆ ಗೊತ್ತಿಲ್ಲ.

ಹಿಂಸಾಮಯ ಕ್ರಾಂತಿ.

ಸ್ವಾತಂತ್ರ್ಯವನ್ನು ದೊರಕಿಸುತ್ತೇನೆಂದು ತಮ್ಮ ಕುರಿತು ತತ್ವಗಳಿಂದ ಭಯಂಕರವಾದ ಆಯುಧಗಳ ಉಪಯೋಗವನ್ನು ಕ್ರಾಂತಿಕಾರರು ಮಾಡತ್ತ ಬಂದಿರುವರು. ಚರಿತ್ರಕಾರರು ಅವರ ಕೃತ್ಯಗಳನ್ನು ನಿಷೇಧಿಸಿಲ್ಲ. ಅವರ ವಿಷಯದಲ್ಲಿ ನನಗೆ ಸಹಾನುಭೂತಿ ಇಲ್ಲ. ಭಗತಸಿಂಗನ ವಿಷಯದಲ್ಲಿ ಕಲ್ಕತ್ತ ಕಾಲೇಜ್ ಕೌನ್ಸಿಲ್‌ನವರು ಮಾಡಿದ ತರಾನಿನ ವಿಷಯವನ್ನು ಮಿ॥ ಗಜ್ನಾವಿಯವರು ಹೇಳಿದ್ದು ನನಗೆ ನೋವುಂಟುಮಾಡಿದೆ. ಈ ವಿಷಯವು ಕಾಂಗ್ರೆಸ್ಸಿನ ಗಮನಕ್ಕೆ ಬಂದೋಗೆಯೇ ಅವರ ತತ್ವ ಚರ್ಯೆಗಳನ್ನು ನಡೆಸಿ, ಕಲ್ಕತ್ತಾ ಕಾಲೇಜ್‌ಕೌನ್ಸಿಲ್‌ನವರು, ಹೀಗೆ ಮಾಡಿದ್ದಕ್ಕೆ ವಿಷಾದವನ್ನು ವ್ಯಕ್ತಪಡಿಸುವಂತೆ ಮಾಡಿದರು. ಇದನ್ನು ಗಜ್ನಾವಿಯವರು ಹೇಳಬೇಕಾಗಿಲ್ಲ. ಕಾಂಗ್ರೆಸ್ ಸದಸ್ಯರು ಪ್ರತ್ಯಕ್ಷ ರೂಪದಲ್ಲಾಗಲೀ, ಅಪ್ರತ್ಯಕ್ಷ ರೂಪದಲ್ಲಾಗಲೀ ಹಿಂಸಾಕೃತ್ಯಗಳನ್ನು ಅನುಮೋದಿಸುವುದಾದರೆ, ಅಂಥಹವನ್ನು ಸರಿಯಾದ ದಾರಿಗೆ ತರುವುದರಲ್ಲಿ ನಾನು ಹಿಂದು ಮುಂದು ನೋಡುವುದಿಲ್ಲ. ಕಲ್ಕತ್ತಾ, ಕಾಲೇಜ್‌ಕೌನ್ಸಿಲ್‌ನ ಶಾಲೆಗಳಲ್ಲಿ ಗಜ್ನಾವಿಯವರು ಹೇಳಿದ ಪದ್ಯಗಳನ್ನು, ಕಲಿಸುವುದು ನಿಜವಾಗಿದ್ದಲ್ಲಿ, ನಾನು ಕ್ಷಮಾಪಣೆ ಬೇಡುವೆನು ಸ್ವಾತಂತ್ರ್ಯಕ್ಕೋಸ್ಕರ, ಜನರು ಯುದ್ಧಮಾಡಿ, ತಮ್ಮ ಪ್ರಾಣಗಳನ್ನರ್ಪಿಸುವ ಕಾಲದಲ್ಲಿ, ಇಂಥಾ ಘಟನೆಗಳು ಹಿಂದೆ ಎಷ್ಟೋ ಆಗಿಹೋಗಿವೆ.

ಕಾಂಗ್ರೆಸ್ಸಿನವರು, ಚರಿತ್ರೆಗೇ ಹೊಸವಾದ 'ಕಾಯದೇ ಭಂಗ'ವೆಂಬ ಹೊಸ ಮಾರ್ಗವನ್ನು ಕಂಡು ಹಿಡಿದಿರುವರು. ಸರ್ಕಾರದವರು ಅಂಥಾ ಚಳವಳಿಯನ್ನು ಸಹಿಸಲಾರರೆಂದು ನೀವು ಹೇಳುವಿರಿ. ಪ್ರಪಂಚದ ಯಾವ ಸರ್ಕಾರದವರು ಇಂಥಾ ಕೃತ್ಯಗಳನ್ನು ಸಹಿಸಲಾರರೆಂದು ಹೇಳಬಹುದು. ಆದರೆ ಎಂಥಾ ಸರ್ಕಾರವೇ ಆಗಲೀ ಕೊನೆಯಲ್ಲಿ ಇದಕ್ಕೆ ಕರಣು ಹೊಡೆಯ ಬೇಕಾಗುತ್ತದೆ. ಇದಕ್ಕೆ ಉದಾಹರಣಾರ್ಥವಾಗಿ, ಬ್ರಿಟಿಶ ಸರ್ಕಾರದವರೇ ಸಾಕು. ಅಲ್ಲದೆ ಎಂಟು ವರ್ಷ ಅಣಗಿಸಲು ಪ್ರಯತ್ನಿಸಿ ಕೊನೆಗೆ ಕರಣು ಹೊಂದಿದ ಟರ್ಕಿ ಸರ್ಕಾರದ ಉದಾಹರಣೆಯೂ ಸಾಕು.

ಪ್ರಧಾನ ಮಂತ್ರಿಗಳೇ ಇನ್ನು ಕಾಯದೇ ಭಂಗದನ್ನು ತಡೆಯಲು ಸಾಧ್ಯವಿಲ್ಲಾ. ನಮ್ಮ ನಿಮ್ಮ ಮಾರ್ಗಗಳು ಬೇರೆ ಬೇರೆ ಯಾಗಿರುತ್ತವೆ.

ಸ್ವಾತಂತ್ರ್ಯದ ಆಶೆ.

ನನ್ನ ದೇಶದ ಲಕ್ಷಗಟ್ಟಲೆ ಪುರುಷರು, ಸ್ತ್ರಿಯರು ಮಕ್ಕಳನ್ನು ಯುದ್ಧ ಬೆಂಕಿಯಲ್ಲಿ ತೊಡಗಿಸುವುದಕ್ಕೆ ನೊಂದಲು, ಶಾಂತರೀತಿಯಿಂದ ಒಪ್ಪಂದವಾಗಲು, ನನ್ನ ಸರ್ವ ಶಕ್ತಿಯನ್ನೂ ನಿಯೋಗಿಸುವೆನು. ಇಷ್ಟು ಜನರನ್ನು ಯುದ್ಧದಲ್ಲಿ ಪ್ರೇರೇಪಿಸುವಶಕ್ತಿಯವನು, ನನಗೆ ಸಂತೋಷದಾಯಕವಲ್ಲವೆಂದು ನೀವು ಅರಿಯಿರಿ. ಆದರೆ ಅಂಥಾಕಾಲವು ಬಂದರೆ, ಸಂತೋಷದಿಂದತಯಾರಾಗುವೆನು. ಆಗ ದೇಶಕ್ಕೇನೇ ನಾವು ಸರಿಯಾದ ಮಾರ್ಗದಲ್ಲಿ ವರ್ತಿಸಿದೆವೆಂದು ಪ್ರದರ್ಶವಾಗುವುದು, ಬ್ರಿಟಿಶ ಪ್ರಜೆಗಳಾದ ನಿಮಗೆ ದುಃಖ ಕೊಡಲಿಕ್ಕಿಂದು ಈ ಚಳವಳವನ್ನು ಹೊಡುವುದಿಲ್ಲ. ಆದರೆ ನಮ್ಮಲ್ಲಿ ಸಹಿಸಶಕ್ತಿಯಿದೆ ಯೆಂದು ತೋರಿಸಲಿಕ್ಕೆ. ಇದು ಒಬ್ಬರ ಪ್ರಾಣಗಳನ್ನು ತೆಗೆಯುವ ಯುದ್ಧವಲ್ಲ. ಅವರ ಪ್ರಾಣಗಳನ್ನು ಸಂತೋಷದಿಂದ ಅರ್ಪಿಸುವಯುದ್ಧ. ನಿಮ್ಮ ಜನಗಳಿಗೂ ಕೂಡ ತೊಂದರೆಯುಂಟಾಗುವುದೆಂದು ನನಗೆ ತಿಳಿದಿದೆ. ನಾವು ಕಷ್ಟಗಳನ್ನನುಭವಿಸಿ, ನಿಮ್ಮ ಮನಸ್ಸಿಗೆ ತಟ್ಟದಾಗಲೇ, ನಮ್ಮ ನಿಮ್ಮ ಕಾಯಭಾರಗಳಿಗೆ ಸಕ್ಷಮಯನ್ನೊದಗುವುದು ನಾನು ಇಲ್ಲಿಗೆ ಬಂದದ್ದಾದರೂ ಕೂಡ, ಲಾರ್ಡ್ ಇರ್ವಿನ್‌ಸಾಹೇಬರ ಸಹಾನುಭೂತಿಯಿಂದ, ಅವರು ತಮ್ಮ ಅರ್ಜಿವೆನ್ನುಗಳನ್ನೆಲ್ಲಾ ಉಪಯೋಗಿಸಿ, ದಬ್ಬಾಳಿಕೆಯಿಂದ ಉಪಯೋಗಿಸಿಲ್ಲವೆಂದೂ, ಹಿಂದೂಪೇರವ ಗಂತಸರು, ಮೆಂಗಸರು, ಮಕ್ಕಳು ಸ್ವಾತಂತ್ರ್ಯದ ಆಶೆಯಿಂದ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಿರುವರೆಂದೂ, ಅವರಿಗೆತಿಳಿದು, ನಮ್ಮನ್ನು ಈ ಕಾಯಭಾರಕ್ಕಹೆಚ್ಚಿದರು.

ಶಾಂತಿ ಸಂಧಾನ

ಅಲ್ಪಸ್ವಲ್ಪ ನಂಬಿಕೆ ಇರುವ ಈಕಾಲದಲ್ಲಿಯೇ ಕಾಂಗ್ರೆಸಿನ ಉದ್ದೇಶ ಬೇನೆಂಬುದನ್ನರಿಯಿರಿ ನನ್ನ ಪ್ರಾಣವು ನಿಮ್ಮ ಕೈಯ್ಯಲ್ಲಿದೆ. ಆಲ್ ಇಂಡಿಯಾಕಾಂಗ್ರೆಸ್ ವರ್ಕಿಂಗ್ ಕಮಿಟೀ ಸದಸ್ಯರ ಪ್ರಾಣಗಳಲ್ಲೂ ನಿಮ್ಮ ಕೈಯ್ಯಲ್ಲಿವೆ. ಮೂಕಕಾದ ಲಕ್ಷಗಟ್ಟಲೆ ಬಡವರ ಪ್ರಾಣಗಳೂ ನಿಮ್ಮ ಆಧಾರವೆಂಬುದನ್ನು ಮರೆಯಬೇಡಿರಿ. ನನ್ನಶಕ್ತಿಯಲ್ಲಿರುವದಾದರೆ, ಅವನ್ನುಕಸಬು ಸರ್ವ ಪ್ರಯತ್ನ ಮಾಡುವೆನು. ಅಂಥಾಉದ್ದೇಶದಲ್ಲಿ ಎಷ್ಟುಸ್ವಾರ್ಥತ್ಯಾಗವಾದರೂ ಅಲ್ಪವೆಂತಲೇ ನಮ್ಮ ಭಾವನೆ ನನ್ನಲ್ಲಿ ಶಾಂತಿಸಂಧಾನ ಮಾಡಲು ಬೇಕಾದಷ್ಟು ಸಹಾನುಭೂತಿಯನ್ನು ನೀವು ಕಾಣುವಿರಿ. ಸ್ವಾತಂತ್ರ್ಯಕ್ಕೆ ನೀವು ಯಾವಹೆಸರನ್ನೇ ಕೊಡಿರಿ ನನಗೇನೂ ಅಡ್ಡಿಯಿಲ್ಲ. ಆದರೆ ಸ್ವಾತಂತ್ರ್ಯ ಸುಖವುಮಾತ್ರ ಬೇಕಿಯಾಗಬಾರದು ಇಷ್ಟುವಾರಗಳು ವ್ಯರ್ಥಕಲಾಪಗಳಲ್ಲಿ ಕಳೆದದ್ದು ದುಃಖದಾಯಕವಾಗಿದೆ.

ಸಂಪೂರ್ಣ ಸ್ವಾತಂತ್ರ್ಯ.

ನಿಮ್ಮ ದೇಶದ ಪ್ರಮುಖರು ಒಬ್ಬರು ಮೊನ್ನೆಯ ದಿವಸ ನನ್ನಲ್ಲಿ ಚರ್ಚಿಸಿದರು. ಅವರಿಗೆ ಸ್ವಾತಂತ್ರ್ಯದ ಅರ್ಥವೇ ತಿಳಿದಿದ್ದಿಲ್ಲ. ಬಡವರ್ತಿಯಿಂದ ಬ್ರಿಟಿಶ ಚಕ್ರಾಧಿಪತ್ಯದ ಭಾಗದಾರನಾಗಿಲು ಒಪ್ಪಿಗೆಯಿಲ್ಲವೆಂದು ಹೇಳಿದೆನು ಇಂಗ್ಲಿಷ ಪ್ರಜೆಗಳಿಗಿರುವ ಸಾಮಾನ್ಯ ಹಕ್ಕುಗಳೆಲ್ಲಾ ನನಗೆ ಇರಬೇಕೆಂದು ನಾನು ಅಪೇಕ್ಷಿಸುವೆನು. ಇಂಥಾ ಸಂಬಂಧವು ಎರಡು ದೇಶಗಳಿಗೂ ಹಿತಕರವಾಗಿರಬೇಕು

ಹಿಂದೂಮೇಲಿನ ಪ್ರತಿನಿಧಿ.

ಮೇಲೆ ಹೇಳಿದ ಘಟನೆಯು ನಡೆದು 10 ದಿವಸಗಳಾಗಿವೆ, ಇನ್ನೊಬ್ಬ ಇಂಗ್ಲಿಷ ಪ್ರಮುಖರು ನನಗೆ ಒಂದು ಚೀಟಿಯನ್ನು ಬರೆದಿರುವರು, ಅವರು ದೊಡ್ಡ ಗೌರವಸ್ಥರಾಗಿದ್ದಾರೆ. ಅವರು ಹೀಗೆ ಬರೆದರು.

ಮನುಷ್ಯ ಜನಾಂಗದ ಶಾಂತಿಯೂ ಸುಖವೂ ನಿನ್ನ ಸ್ನೇಹದನ್ನು ಅವಲಂಬಿಸಿರುವುದೆಂದು ನಾನು ಪೂರ್ಣ ನಂಬಿರುವೆನು ಹಿಂದಿಯರಲ್ಲೆಲ್ಲ ನಿನ್ನ ಒಬ್ಬನನ್ನು ಮಾತ್ರ ಯಾವಾಗಲೂ ವಾದಿಯಾದ ಇಂಗ್ಲೀಷನವನು ಚನ್ನಾಗಿ ತಿಳಿಯಬಲ್ಲನು ಮತ್ತು ಸ್ತುತಿಸಬಲ್ಲನು.

ಆತನು ನನ್ನನ್ನು ಹೊಗಳಬೇಕೆಂದು ಹೀಗೆ ಬರೆದಿಲ್ಲವೆಂತಲೇ ನನ್ನ ಭಾವನೆ ಇದೆ ನನ್ನ ವಿಷಯದಲ್ಲಿ ಕೆಲವು ಇಂಗ್ಲೀಷರಿಗೆ ತುಚ್ಛ ಭಾವನೆಗಳಿರಬಹುದು. ಕೆಲವರಿಗೆ ನನ್ನ ವಿಷಯದಲ್ಲಿ ಗೌರವವೂ ಇದೆ. ಏತಕ್ಕೆಂದರೆ ಒಂದು ದೊಡ್ಡ ರಾಜಕೀಯ ಸಂಸ್ಥೆಯ ಪರವಾಗಿ ನಾನು ಇಲ್ಲಿಗೆ ಬಂದಿರುವೆನು.

ಕಾಂಗ್ರೆಸ್ ನೀತಿ.

ನಮ್ಮ ನೀತಿಯ ಪ್ರಕಾರ, ಸ್ನೇಹಕ್ಕೂ ಸಂಧಾನಕ್ಕೂ ಎಷ್ಟೋ ಅವಕಾಶವಿದೆ. ಕಾಂಗ್ರೆಸದವರು ನನ್ನ ತತ್ವವನ್ನು ಅವರ ನೀತಿಯನ್ನಾಗಿಟ್ಟಿರುವುದರಲ್ಲಿ ಅರ್ಥವಿದೆ, ನಮ್ಮಲ್ಲಿರುವ ಇಂಗ್ಲೀಷರ ಮನಸ್ಸನ್ನು ತಿರಿಸುವುದೇ ನಮ್ಮ ಕಾರ್ಯಗಳಲ್ಲಿ ಪ್ರಾಮುಖ್ಯವಾದುದಾಗಿದೆ

ಇಂಗ್ಲೆಂಡಿಗೂ, ಹಿಂದೂಸ್ಥಾನಕ್ಕೂ ಇರುವ ಸಂಬಂಧವನ್ನು ಕಿತ್ತುಹಾಕಬೇಕೆಂದು ನಾನು ಅಪೇಕ್ಷಿಸುವುದಿಲ್ಲ ನನಗೆ ಎಲ್ಲರಲ್ಲಿಯೂ ಸ್ನೇಹವಿರಬೇಕು. ನಮ್ಮ ಸಂಬಂಧವು ಗುಲಾಮರು, ರಾಜರ ಸಂಬಂಧವನ್ನುಳ್ಳದಾಗಿರದೆ, ಸ್ವಾತಂತ್ರ್ಯರಾಜರ ಸಂಬಂಧವಾಗಿರಬೇಕು. ಅಂಥಾಸಂಬಂಧಾಮವನ್ನುಂಟುಮಾಡುವ ಆಶೆಯು ನನಗಿದೆ. ನೀವು ಅದಕ್ಕೆಯಾವಪರಿಸ್ಥಿತಿಕೊಡಿರಿ ಅದಕ್ಕೆ ನನ್ನ ಒಪ್ಪಿಗೆಯಿದೆ. ನಾನು ಶಬ್ದಗಳಿಗೆ ಗುಟ್ಟಾಡುವವನಲ್ಲ.

ರಕ್ಷಣೆಗಳು.

ಸಿಖ್ಖರ ಹಕ್ಕುಗಳು ಹಿಂದೂಸ್ಥಾನದವರಿಗೆಕೊಟ್ಟಷ್ಟೇ ನನ್ನವುಗಳೆಂದು ನಾನು ಅನೇಕಸಲ ಹೇಳಿದ್ದೇನೆ. ಅವುಗಳು ಅಕ್ಷುಣ್ಣಕರವಾಗಿವೆ. ಹಿಂದೂಸ್ಥಾನಕ್ಕೆ ಮಾತ್ರ ಅನುಕೂಲವಾಗಿ, ನಮ್ಮ ದೇಶಕ್ಕೆ ಅಪಾಯಕರವಾಗುವಂಥ ರಕ್ಷಣೆಗಳನ್ನು ನಾನು ಒಪ್ಪಿಸಲಿಲ್ಲ ಹಿಂದೂಸ್ಥಾನದವರೂ ಅಂಗ್ಲಂಡಿನವರೂ, ಕೆಲವು ವಿಶೇಷವಾದ ಅನುಕೂಲಗಳನ್ನು ಬಿಟ್ಟಿಗೊಡಬೇಕು. ನಮ್ಮ ಬೇಕಿಬೇಕಿ ಹೇಳಿಕೆಗಳಿಗೆಲ್ಲಾ ಒಂದೇ ಅರ್ಥವಿದ್ದರೆ ನಮ್ಮ ಮಿತ್ರರಾದ ಜಯಕರ, ಸಪ್ರೂ, ಶಾಸ್ತ್ರಿಯವರನ್ನೆಗೆ, ಸದಸ್ಯರುಳಿದ ಸಭೆಯಲ್ಲಿ ಸಾಕ್ಷ್ಯಗಳಲ್ಲಿಯೂ, ಚರ್ಚೆಯಲ್ಲಿಯೂ, ಮಿಕ್ರನೇಕರು ನಿಕಿ ಕಾಲ ಕಳೆದುದನ್ನೂ ತಿಳಿಯವಾಗಿದೆ. ನನ್ನಧ್ವನಿಯನ್ನು ನಾನೇ ಕೇಳಲು ಇಷ್ಟವಿಲ್ಲೆಂಬುದು ಮೇನವಿಲ್ಲ. ನಾನು ಯಾವ ಚರ್ಚೆಯಲ್ಲಿಯೂ ಭಾಗತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಏತಕ್ಕೆಂದರೆ, ಸ್ವಾತಂತ್ರ್ಯವೆಂದ ದಕ್ಕುವುದು ಬದಲ ಸುಹೃದ್ಭಾವದುದು. ಅದರ ಗುಣವೇ ಬೇರೆ.

ತೊಡಕಿನ ಸಮಸ್ಯೆ.

ನಮ್ಮ ದೇಶದಲ್ಲಿ ಚೇಳು, ಹಾವು, ಹುಲಿ ಮೊದಲಾದ ಕ್ರೂರ ಜಂತುಗಳಿವೆ. ಅಂಥಾ ಜಂತುಗಳ ಮಧ್ಯದಲ್ಲಿ ಸುಟ್ಟ ಸಾವುಹೇಗೆ ಜೀವಿಸಬೇಕೆಂಬುದು ನನಗೆ ತಿಳಿದಿದೆ ನಮ್ಮ ನಾಯುಗುಣ, ವಾತಾವರಣಗಳಿಗನುಸಾರವಾಗಿ, ನಮ್ಮಲ್ಲಿರುವ ಭೇದಗಳೆಲ್ಲಾ ನಮಗೆ, ನಾವು ಸುಖವಾಗಿರುವುದನ್ನು ಬಲ್ಲೆವು. ನನಗೆ ಯಾವುದೂ ತೊಡಕಿಸುವುದಿಲ್ಲ. ದೂರು ಏನು ಮುಂದಿಟ್ಟರೂ, ಅದನ್ನು ಪ್ರತ್ಯಕ್ಷವಾಗಿ ನಿಮರ್ಶಿಸುವೆನು

ಕಾಂಗ್ರೆಸದಲ್ಲಿ ನಂಬಿಕೆ ಇಡಿರಿ.

ಡೆಲ್ಲಿಯ ಒಪ್ಪಂದವನ್ನು ಶಾಶ್ವತವಾಗಿರುವಂತೆ ಮಾಡಲು ನನ್ನ ಆಶೆಇದೆ. ಚಳವಳವನ್ನು ಹೊಡಬೇಕೆಂಬ ಆಶೆಯು ನನಗಿಲ್ಲ. 63 ವರ್ಷದ ಕ್ಷೀಣ ಮುದುಕನಾದ ನನಗೆ ನಿಮ್ಮ ಹೃದಯದಲ್ಲಿ ಸ್ವಲ್ಪ ಸ್ಥಾನವನ್ನು ಕೊಡಿರಿ. ನೀವು ನನ್ನನ್ನು ಗೌರವಿಸುವಂತೆ ಕಂಡರೂ, ನಾನು ಯಾವುದರ ವರವಾಗಿ ಬಂದಿರುವೆನೋ ಅಂಥಾ ಕಾಂಗ್ರೆಸ್ ಸಂಸ್ಥೆಯನ್ನು ನಂಬುವಂತಿಲ್ಲ. ನನಗೂ, ಅದಕ್ಕೆ ಭೇದವನ್ನು ತರಬೇಡಿರಿ ನಾನು ಎಲೋ ಸಮುದ್ರದಲ್ಲಿ ತೊಟ್ಟು ಇದ್ದಂತೆಂಬುದನ್ನು ಭಾವಿಸಿರಿ. ನಿಮಗೆ ನನ್ನಲ್ಲಿ ವಿಶ್ವಾಸವಿದ್ದರೆ, ಕಾಂಗ್ರೆಸದಲ್ಲಿಯೂ ವಿಶ್ವಾಸವಿಡಿರಿ.

ನೀವು ಕಾಂಗ್ರೆಸ್ಸಿನವರೊಂದಿಗೆ ಸಹಕರಿಸಿ ಕೆಲಸ ಮಾಡಿದರೆ, ನೀವು ರಕ್ತಕ್ರಾಂತಿಯ ಸಮೂಲ ನಾಶವನ್ನು ನೋಡುವಿರಿ. ನೀವು ಗೊಡೆಗಳ ಮೇಲೆ ಬರೆದಿರುವ ಲೇಖಗಳಿಂದಲೇ ಭಾಬರಿಯಾಗಿ ನಿಮ್ಮ ಕ್ರೂರ ದವಿರೊಂದಿಗೆ ಕ್ರಾಂತಿಹೊಡೆದೆ ಹೋರಾಡುತ್ತಿರುವಿರಿ.

ಸೂಚನೆ— ಪಾತ್ರೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂಬಂಶವನ್ನು ಎಲ್ಲರೂ, ತಿಳಿಯಬೇಕು. ಸಂಪಾದಕ ಕ. ಕೇ.

ಪ್ರಧಾನ ಮಂತ್ರಿಗಳ ಪ್ರಕಟನೆ.

ಮಾ ಮಾಕ್ಡೊನಾಲ್ಡರವರು ಮಾತಿನಲ್ಲಿ ಘಟ್ಟಿಗರು ಅವರ ವಾಕ್ಚಾತುರ್ಯವನ್ನು ಚನ್ನಾಗಿ ಅಭ್ಯಾಸ ಮಾಡಿದ್ದಾರೆ ರೌಂಡ ಟೇಬಲ್ ಪರಿಷತ್ತಿನಲ್ಲಿ, ಇವರು ಹಿಂದೂಸ್ಥಾನದ ಭವಿಷ್ಯದ ಬಗ್ಗೆ, ಪ್ರಭುತ್ವದವರ ಅಭಿಪ್ರಾಯಗಳನ್ನು ವ್ಯಕ್ತಮಾಡಿದರು. ಜನವರಿ 19ನೇ ತಾರೀಖಿನ ಹೇಳಿಕೆಯ ಪ್ರಕಾರ ಸಂಯುಕ್ತ ಪ್ರಭುತ್ವವನ್ನು ಸ್ಥಾಪಿಸುವುದು ಅವರ ಅಂತಿಮ ಧ್ಯೇಯವೆಂತಲೂ, ಕೇಂದ್ರ ಸರ್ಕಾರವು ಜವಾಬ್ದಾರಿಯನ್ನುಳ್ಳದಾಗಿರಬೇಕೆಂತಲೂ, ವಿದೇಶ ವ್ಯವಹಾರ, ಹಣ, ಸೈನ್ಯದ ಜವಾಬ್ದಾರಿ, ಬ್ರಿಟಿಶರ ಆಡಳಿತವಲ್ಲಿರಬೇಕೆಂತಲೂ, ರಾಷ್ಟ್ರೀಯ ಸ್ವಪರಿಪಾಲನವನ್ನು ತೀಕ್ಷ್ಣವಾಗಿ ಜಾರಿಗೆ ತರುವರೆಂತಲೂ, ನಗ್ಗೆರೆ ಬಾಲಿ ಬಾಯಿ ಮಾತುಗಳನ್ನು ದೊಡ್ಡ ಶೈಲಿಯಲ್ಲಿ ಹೇಳಿದರು.

ವಿತಾಪಾರಿಗಳಾದ ಜಯಕರ್ ಸಪ್ರೂಯವರಿಗೆ ಪ್ರಧಾನ ಮಂತ್ರಿಗಳ ಪ್ರಕಟನೆಯು ಸಂತೋಷವನ್ನುಂಟುಮಾಡಿದೆ. ಯಥಾರ್ಥವಾಗಿ, ನೋಡಿದರೆ ಈ ಪ್ರಕಟನೆಯಲ್ಲಿ ಏನೂ ಹುರುಳಿಲ್ಲ. ವಿಂಟರ್ನಿಸ್ ರವರು ಹೇಳಿದಂತೆ ಪರಿಸ್ಥಿತಿಗಳನ್ನು ಬದಲಾವಣೆಮಾಡುವ ಯಾವ ಸೂಚನೆಗಳೂ ಇಲ್ಲ. ಚರ್ಚಿಲ್ಲರು ಆಕ್ಷೇಪಣೆ ಮಾಡುವ ವಿಷಯಗಳ್ಯಾವುವೂ ಅವರಲ್ಲಿ ಇಲ್ಲವೆಂತ ಅವರುಹೇಳಿದರು

ಎಲ್ಲರಿಗೂ ಸಮಾಧಾನವಾಗುವಂತೆ, ಜಾಡಮಾಲಿಯುಳ್ಳ ಪ್ರಕಟನ ಪತ್ರಿಕೆಯನ್ನು ತಯಾರಾಡಿದುದಕ್ಕೆ ಎಲ್ಲರೂ ಅವರನ್ನು ವಂದಿಸುವರು; ಚರ್ಚಿಲ್ಲರಿಗೆ ಹಿಂದೂದೇಶಕ್ಕೆ ಯಾವ ಸುಧಾರಣೆಯನ್ನು ಕೊಡಲೂ ಇಷ್ಟವಿಲ್ಲ. ಭಾರತೀಯರ ಸ್ವಾತಂತ್ರ್ಯ ಧ್ಯೇಯಗಳು ಅವರಿಗೆ ಕಿವಿಯಲ್ಲಿ ಬಿಸಿ ಎಣ್ಣೆ ಹೊಯ್ದಂತಾಗುತ್ತದೆ. ಸಂಕಟನೆಯಿಂದ ಬ್ರಿಟಿಶರಿಗೆ ಹಿಂದೂಸ್ಥಾನದ ಸ್ವಾತಂತ್ರ್ಯೋದ್ಯಮದ ವಿಷಯದಲ್ಲಿ ಎಲ್ಲಿಯ ವರೆಗೆ ಸಹಾನುಭೂತಿ ಇದೆಯೆಂಬುದು ವ್ಯಕ್ತವಾಗುತ್ತದೆ. ಪ್ರಧಾನ ಮಂತ್ರಿಗಳು ಮಹಾತ್ಮ ಗಾಂಧಿಯವರ ಬೇಡಿಕೆಗಳನ್ನು ಒಳ್ಳೇ ರುಚಿಮಾತುಗಳಿಂದಲೇ ಇಲ್ಲವೆಂದರು. ಮೇಕ್ಟಿನ ರವರಿಗೆ ಉತ್ತರವನ್ನು ಕೊಡುತ್ತಾ, ಹಿಂದೂಸ್ಥಾನವು ಸಂಪೂರ್ಣ ಸ್ವಾತಂತ್ರ್ಯವನ್ನು ಕೋರುವುದಿಲ್ಲವೆಂದು ಪ್ರಧಾನ ಮಂತ್ರಿಗಳು ಆಮನ್ನಸ ಭೆಯಲ್ಲಿ ಹೇಳಿದರು.

ಒಟ್ಟಿನಲ್ಲಿ, ಇಂಗ್ಲೀಷರಿಗೆ ಹಿಂದೂಸ್ಥಾನದ ರಾಜಕೀಯ ಸುಧಾರಣೆಯು ಬೇಕಿಲ್ಲ. ಸಾವುಗುಲಾಮರಾಗಿರಬೇಕೆಂತಲೇ ಅವರ ಆಶೆ ಇದ್ದಂತೆ ತಿಳಿಯ ಬರುತ್ತದೆ.

ಈ ಸಂಧಾನ ಕಾಲದಲ್ಲಿ ಅವರು ಅನುಸರಿಸುತ್ತಿರುವ ಕ್ರಮಗಳು, ತಮ್ಮ ಭವಿಷ್ಯ ರಾಜನೀತಿಯನ್ನು ಜೋಗಿಸುತ್ತವೆ ಬಂಗಾಳದಲ್ಲಿ ಅಸಾಧಾರಣ ಕಾನೂನನ್ನು ಮಾಡಿ ಸಾಧಾರಣ ಜನರ, ಪ್ರಾಣ ಮಾನಗಳಿಗೆ, ಕುಂದುಬರುವಂತೆ ಮಾಡಿದ್ದಾರೆ. ಸಂಯುಕ್ತ ಪ್ರಾಂತ್ಯದಲ್ಲಿ ಬಡಕೈತರ ಮೇಲೆ ದಬ್ಬಾಳಿಕೆಯು ಪ್ರಾರಂಭವಾಗಿತೆ

ಇದನ್ನೆಲ್ಲಾ ನೋಡಿದರೆ, ಸ್ವಾತಂತ್ರ್ಯದೇವತೆಯು ಬಹಳ ದೂರದಲ್ಲಿರುವಂತೆ ಭಾಸವಾಗುತ್ತಲಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೊನೆಯವರಿಗೂ ಹೋರಾಡಲು, ಧೈರ್ಯ, ಸ್ಥೈರ್ಯ ಕ್ಷಮಾ ಗುಣಗಳನ್ನು ವೀರರಿಗೆ ಕೊಡಬೇಕೆಂದು ಪ್ರಾರ್ಥಿಸುವೆವು

ಸ್ವೀಕಾರ ವಿಮರ್ಶೆ.

ಬಳ್ಳಾರಿ ಪಟ್ಟಣದಲ್ಲಿ ಶ್ರೀ ಕೃಷ್ಣರಾಜ ಗ್ರಂಥಮಾಲೆಯ 'ಸ್ವಾರ್ಥ ತ್ಯಾಗವು ಭಾವ ತರಂಗಮಾಲೆ' ಎಂಬ ಎರಡು ಪುಸ್ತಗಳು ನಮ್ಮ ಕೈ ಸೇರಿವೆ. ಪ್ರಥಮ ಪುಷ್ಪವು ಗದ್ಯವಾಗಿಯೂ ದ್ವಿತೀಯ ಪುಷ್ಪವು ಪದ್ಯ ರೂಪದಲ್ಲಿಯೂ, ಇವೆ. ಶೈಲಿಯು ಗಂಭೀರವಾಗಿ ಮುದ್ರಣವು ಸ್ವಚ್ಛವಾಗಿದೆ ಬಳ್ಳಾರಿಯಲ್ಲಿ ಕನ್ನಡ ಪತ್ರಿಕೆಗಳ ಪ್ರಕಾಶನವು ವಿಶೇಷವಾಗಿದೆ ಕನ್ನಡ ಭಾಷಾಭಿಮಾನಿಗಳು ಇಂಥಾ ಘನ ಕಾರ್ಯಕ್ಕೆ ಕೈ ಹಾಕಿದ್ದಾರೆಂದು !

ಉದಯ:—ಬಿಜಾಪುರದ ದಿನ ಪತ್ರಿಕೆ. ವಾರ್ಷಿಕ ಚಂದಾ ೪ ರೂ ರಾಷ್ಟ್ರೀಯ ಧ್ಯೇಯಗಳನ್ನು ತೀರ ಕಡು ಬಡವರೂ, ಕೂಡ ತಿಳಿದುಕೊಳ್ಳಲು ಸುಲಭ ವಿರುವಂತೆ ಜಾಲಕರು ಇತರೇ ದಿನ ಪತ್ರಗಳಿಗಿಂತಲೂ ಕಡಿಮೆದರವಿಟ್ಟಿರುವುದು ಸ್ತುತ್ಯಾರ್ಹ. ಪತ್ರಿಕೆಯು ಕ್ರಮೇಣ ಅಭಿವೃದ್ಧಿಯಾಗಲಿ.

ಬಳ್ಳಾರಿ ತಾಲ್ಲೂಕು ರೈತರ ದುಸ್ಥಿತಿ.

ಬಡ ಸಂಸಾರೀಕರು ಊರು ಬಿಡುತ್ತಿರುವರು. ಘೋರ ಕ್ಷಾಮ.

ಬಳ್ಳಾರಿ ೧—೧೨—೩೦ ರ ದಿವಸ ಮೋಕ ಗ್ರಾಮದ ೬೦೦ ರೈತರು ಕಲೆಕ್ಟರ ಭೆಟ್ಟಿಯಾಗಿ ಮನುಷ್ಯರಿಗೆ ಆಹಾರ, ದನಗಳಿಗೆ ಮೇವು ಇಲ್ಲದಿರುವ ಪರಿಸ್ಥಿತಿಯನ್ನು ಗೋಳಿಟ್ಟು ಸರ್ಕಾರವರು ನಿವಾರಣೋಪಾಯ ಮಾಡದಿದ್ದರೆ ಊರು ಬಿಡಬೇಕಾಗಿ ಬರುವ ಪ್ರಸಂಗ ಬೀಳುವುದೆಂಬುದನ್ನು ಅರಿಕೆ ಮಾಡಿದರು. ಬಳ್ಳಾರಿ ೪-೧೨-೩೦ ನೇ ಶುಕ್ರವಾರ ಕುರುಗೋಡು ಫಿರ್ಕಾದ ಸುಮಾರು ೧೫ -೨೦ ಹಳ್ಳಿಗಳ ೩೦೦ ರೈತರು ತಮ್ಮ ಪ್ರತಿನಿಧಿಗಳಾದ ಶ್ರೀ ಪುರಿ ಬಸವನ ಗೌಡರು, ಶ್ರೀ ಮಲ್ಲೇಶಪ್ಪ ಇವರೊಂದಿಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಗೋಪಾಲ ಸ್ವಾಮಿ ಮೊದಲಿಯಾರ ರವರನ್ನು, ಕರೆಸುತ್ತ ಇಂದು ಕಲೆಕ್ಟರ ರವರ ಬಂಗಲೆಗೆ ಹೋಗಿ ತಮ್ಮ ರೈತರ ಭಯಂಕರ ಪರಿಸ್ಥಿತಿಯನ್ನು, ಕಲೆಕ್ಟರ ಮನತಟಗುವಂತೆ ಹೇಳಿದರು. ಅವರು ಕೊಟ್ಟ ಅಚಾರ್ಯ ಇದೇ!

ಕಲೆಕ್ಟರ್ ಸಾಹೇಬರವರಲ್ಲಿ ಮೊರೆ.

ಸ್ವಾಮಿ,

ಕುರುಗೋಡು, ಬಾವನ ಹೆಟ್ಟಿ, ಸಿದ್ದಮ್ಮನಹಳ್ಳಿ, ಯರ್ರಂಗಳಗಿ, ಗೆಣಿಕೆಹಾಳು, ಮುಷ್ಟಗಟ್ಟಿ, ವೀರಾಪುರಂ, ಕಲಕೇರಿ, ಚಿಟಿಗನಪಾಲು, ಕಲ್ಲುಬಂಡೆ ಮತ್ತು ಕುರುಗೋಡು ಫಿರ್ಕಾಕ್ಕೆ ಪತ್ತಿರ ವಿರುವ ಹಳ್ಳಿಯವರಾದ ನಾವು, ಈ ರೀತಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ

1 ಬಿತ್ತಲಿಕ್ಕೆ ಸಾಕಾದಷ್ಟು ನನಗೆ ಮುಂಗಾರಿ ಮಳೆ ಆಯಿತು ಬಿತ್ತಿದ ಮೇಲೆ ಮೂರೂವರೆ ತಿಂಗಳವರೆವಿಗೆ ಏನೂ ಮಳೆಯಿಲ್ಲದೆ ಬೋಳ, ಸಜ್ಜೆ ಮತ್ತತರ ಧಾನ್ಯಗಳು ಒಣಗಿ ಹೋದವು. ನೆಲಗಡಲೆ, ಮುಂಗಾರಿ ಹತ್ತಿ, ಚನ್ನಾಗಿದ್ದಂತೆ ಕಂಡರೂ ಹೇಳಕೊಳ್ಳುವಷ್ಟು ಬೆಳೆಯನ್ನು ಕೊಡಲಿಲ್ಲ.

2 ಹಿಂಗಾರಿ ಬೆಳೆಗೂ ಕೂಡ ತಕ್ಕಮಟ್ಟಿಗೆ ಮಳೆಯಾಗಿ, ಬಿತ್ತುವದಕ್ಕೆ ಪ್ರಾರಂಭವಾಯಿತು ಬಿತ್ತಿ ಜೋಳ, ನವಣೆ, ಹಿಂಗಾರಿ ಹತ್ತಿಯು ಬಿತ್ತಲ್ಪಟ್ಟಿತು. ನೆಲದಲ್ಲಿ ಸಾಕಾದಷ್ಟು ಹಸಿಯಿಲ್ಲದೆ, ಕೆಲವು ಹಳ್ಳಿಗಳಲ್ಲಿ, ಬೀಜಗಳು ಹುಟ್ಟಲೇಯಿಲ್ಲ ಮತ್ತೆ ಕೆಲವು ಹಳ್ಳಿಗಳಲ್ಲಿ 1 ರಿಂದ 6 ಅಂಗುಲಗಳವರೆಗೂ ಬೆಳೆದು ಮಳೆಯಿಲ್ಲದೆ ಒಣಗಬೇಕಾಯಿತು. ಆದುದರಿಂದ ಈ ಬೆಳೆಯೂ ನಮ್ಮ ಕೈಸೇರದಂತಾಯಿತು

3 ಕೆಲವು ಹಳ್ಳಿಗಳಲ್ಲಿ ಆಹಾರಕ್ಕೂ ಹುಲ್ಲಿಗೂ ಅಭಾವವಾಗಿ, ಪೂರ್ತಿ ಕುಟುಂಬಗಳು, ತಮ್ಮ ದನಗಳ ಸಮೇತ ಊರು ಬಿಟ್ಟು ಹೋಗಿರುವರು. ಅನೇಕರು ಬಿಡುವುದರಲ್ಲಿರುವರು. ಪರಿಸ್ಥಿತಿಯು ಭಯಂಕರವೂ. ಹೃದಯದ್ರಾವಕವೂ ಆಗಿದೆ,ಹಳ್ಳಿಗರ ದುಃಖವು ಅವರ್ಣನೀಯವಾಗಿದೆ.

4 ಈ ಅಸಹ್ಯ ಸಂಕಟವನ್ನು ಹೋಗಲಾಡಿಸಲು ಸರ್ಕಾರದವರಾದ ತಮ್ಮನ್ನು ತಕ್ಕ ಉಪಾಯಾಂತ ಕ್ರಮಗಳನ್ನಾಚರಿಸಿರೆಂದು ದೈನ್ಯದಿಂದ ಬೇಡಿಕೊಳ್ಳುತ್ತೇವೆ ಕ್ಷಾಮ ನಿವಾರಣಾ ಕಾರ್ಯಗಳನ್ನು ಕೂಡಲೇ ಪ್ರಾರಂಭಿಸಲು ನಾವು ಕೋರುವೆವಲ್ಲದೆ ಈ ಸಂದರ್ಭದಲ್ಲಿ, ಕುರುಗೋಡಿನಿಂದ ಯನ್ನುಗನೂರಿಗೆ ರಸ್ತೆಯನ್ನು ಮಾಡಿಸಿ ತಮ್ಮೊಲಕ, ಸುತ್ತಮುತ್ತಲಿರುವಕ್ಷಾಮ ಪೀಡಿತರಾದ ಹಳ್ಳಿಗರಿಗೆ (ಗಂಡಸರು, ಹೆಂಗಸರು, ಮಕ್ಕಳೂ ಸಹ) ಉದ್ಯೋಗಗಳನ್ನು ಒದಗಿಸಲು ತಮ್ಮನ್ನು ಬೇಡುತ್ತೇವೆ

5 ದನಗಳಿಗೆ ಹುಲ್ಲಿಲ್ಲದಿರುವುದರಿಂದ ಹುಲ್ಲನ್ನು ಕೊಳ್ಳಲು ಸರ್ಕಾರದವರು ಸಾಲಗಳನ್ನು ಕೊಡಬೇಕೆಂದು ಬೇಡುತ್ತೇವೆ.

6 ಇಂಥಾ ಪರಿಸ್ಥಿತಿಗಳಲ್ಲಿ, ಕಂದಾಯದ ರೆಮಿಷನ್ ಕೊಡಿಸಲು ಸರ್ಕಾರವವರಾದ ತಮ್ಮನ್ನು ಪ್ರಾರ್ಥಿಸುತ್ತೇವೆ.

7 ಪರಿಸ್ಥಿತಿಯು ಭಯಂಕರವಿರುವದರಿಂದ ಸರಿಯೊಡನೆ ಸಂಕಟ ನಿವಾರಣೋಪಾಯಗಳನ್ನು ಕೂಡಲೇ ಜಾರಿಯಲ್ಲಿ ತಂದು ಅನ್ನಾಹಾರಗಳಿಲ್ಲದ ರೈತರ ಗೋಳನ್ನು ಬೇಗದಲ್ಲೇ ನಿರ್ಮೂಲ ಮಾಡಲು ಕೋರುತ್ತೇವೆ.

ತಮ್ಮ ವಿಧೇಯರಾದ ರೈತರು,

೧) ಜೀಫ್ ಸ್ಟ್ರಿಟರ್ ಗವರ್ನಮೆಂಟ್ ಆಫ ಸುಪ್ರಾಸ,
೨) ಡೆಪ್ಯುಟಿ ಕಲೆಕ್ಟರ್ ಬಳ್ಳಾರಿ.
೩) ಕಂದಸೀಲ್ದಾರ್ ಬಳ್ಳಾರಿ ತಾಲೂಕ
೪) ಶ್ರೀ ರಂಗನಾಥ ಮೊದಲಿಯಾರ್. M. L. C.
೫) ಶ್ರೀ ಗೋಪಾಲಸ್ವಾಮಿ ಮೊದಲಿಯಾರ್ M. L. C.
ಜಿಲ್ಲಾ ಬೋರ್ಡು ಅಧ್ಯಕ್ಷರು.

ಇವರೆಲ್ಲರಿಗೂ ಅರ್ಜಿಗಳು ಹೋಗಿವೆ

ಬಳ್ಳಾರಿ ಜಿಲ್ಲೆ.

ಬಳ್ಳಾರಿ.

ಆಂಧ್ರ ನಾಟಕ ಪಿತಾಮಹರಾದ ಶ್ರೀ ಕೃಷ್ಣಮಾಚಾರ್ಲು ಯವರ ಸ್ಮಾರಕ ದಿನೋತ್ಸವವು ಮುನಿಸಿಪಲ್ ಹೈಸ್ಕೂಲ್ ವಲ್ಲಿ, ಶ್ರೀ. ಟಿ ಶಿವಶಂಕರಪಿಳ್ಳೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಅನಂತಪುರದ 'ನಾಧನ' ಪತ್ರಿಕೆಯ ಸಂಪಾದಕರಾದ ಶ್ರೀಯುತ. ರಾಮಾಚಾರ್ಲುಯವರು ಕೃಷ್ಣಮಾಚಾರ್ಲುಯವರ ಗುಣಕಥನಮಾಡಿದರು

30 11 31 ರ ದಿನ ಮುನಿಸಿಪಲ್ ಮೀಟಿಂಗ್ ಮಾ ಬಾಳಾಜಿರಾಯರ, ಅಧ್ಯಕ್ಷತೆಯಲ್ಲಿನೆರೆದು, ಈ ಕೆಳಗಿನ ಠರಾವು ಅವರಿಂದಲೇ ತರಲ್ಪಟ್ಟು, ಸರ್ವಾನುಮತವಾಗಿ ಪಾಸಾಯಿತು

ತಾವು ಅಧ್ಯಕ್ಷರಾಗಿದ್ದಾಗ, ಪುರಸಭೆಗೆ ಅಮೂಲ್ಯ ಉಪಕಾರಗಳನ್ನು ಮಾಡಿದ, ಶ್ರೀ ಎನ್. ನಾರಾಯಣ ರಾಯರನ್ನು ಅಭಿನಂದಿಸಿ, ತನ್ನ ಗೌರವವನ್ನು ಜ್ಞಾಪಕದಲ್ಲಿಡುವುದು.

ಹಿಂದಿನ ಸದಸ್ಯರನ್ನಭಿನಂದಿಸುವ ಆಂಧ್ರ ರಾಯಲಂಗಾ ಜಾಯಿತು ಆಪೀಲ್ ಕಮಿಟಿ ಎಂಬುದೊಂದು ನಾಪಿತವಾಗಿ ಮಾ ಬಿ. ತಿಮ್ಮಪ್ಪನವರು ಅಧ್ಯಕ್ಷರಾಗಿಯೂ, ಮಾ ಡಿ ಎಸ್ ಪೆರುಮಾಂತಾಚಾರ್, ಡಾ ಸೀತಾರಾಮಶಾಸ್ತ್ರಿ ಸದಸ್ಯರಾಗಿಯೂ ನಿಯಮಿಸಲ್ಪಟ್ಟರು ಎಲೆಕ್ಟ್ರಿಕ್‌ಸ್ಟಾಂಡಿಂಗ್ ಕಮಿಟಿಗೆ 9 ಜನರು, ವಾಟರ್ ವರ್ಕ್ಸ್ ಕಮಿಟಿಗೆ 9 ಜನರೂ, ಅಧ್ಯಕ್ಷ, ಉಪಾಧ್ಯಕ್ಷರನ್ನೊಳಗೊಂಡ 10 ಸದಸ್ಯರು ಪಬ್ಲಿಕ್ ಹೆಲ್ತ್ ಕಮಿಟಿಗು ಏರ್ಪಟಾದರು ಶ್ರೀಗಳಾದ ಬಾಬು ನಾಯುಡು ಇ ಡಿ ಮಾರ್ಟಿನ್, ಅಬ್ದುಲ್‌ಹೈ ಇವರು ಈ ಸಭೆಗೆ ಹಾಜರಿರಲಿಲ್ಲ.

ಡಾಕ್ಟರ್ ಹರ್ಡೇಕರ ರವರ ಭಾಷಣ

ಹಿಂದೂಸ್ಥಾನೀ ಸೇವಾದಳಕ್ಕೆ ಜೇಪಾಳದಂತಿರುವ ಡಾ ಹರ್ಡೇಕರರವರು, ಮದ್ರಾಸಿನಿಂದ 3-12-31 ರ ದಿವಸ ಇಳಿದರು. ಆದಿವಸವೇ ವಾಣೀವಿಲಾಸ ನಾಟಕಶಾಲೆಯಲ್ಲಿ ಸಾಯಂಕಾಲ ಅವರ ಭಾಷಣಕ್ಕೆ ಬಳ್ಳಾರಿಯ ಸ್ವಯಂಸೇವಕರು ಏರ್ಪಡಿಸಿದ್ದರು. ಬಳ್ಳಾರಿ ಪಟ್ಟಣದಲ್ಲಿ ದೇಶಭಕ್ತರ ಭಾಷಣಗಳನ್ನು ಟಿಕೆಟ್ ಮೂಲಕ ಕೇಳಿದ್ದು ಇದೇ ಪ್ರಥಮನೆಂತ ಹೇಳಬಹುದು. 4-ಆಣೆ ಟಿಕೆಟ್‌ಗಳಾದರೂ, ಸುಮಾರು 70- ರೂ ಮೇಲೆ ಕೂಡಿತು. ವಿದ್ಯಾವಂತರೆಲ್ಲಾ ನೆರೆದಿದ್ದರು ಶ್ರೀ ಬಾಳಾಜಿರಾಯರು ಅಧ್ಯಕ್ಷರಾಗಿದ್ದರು.

ಡಾಕ್ಟರ್‌ರವರು ಸುಮಾರು ಒಂದುವರೆಘಂಟೆ ಹೊತ್ತು, ಗಂಭೀರಶೈಲಿಯಲ್ಲಿ ಹಿಂದೂಸ್ಥಾನೀ ಸೇವಾದಳ, ರಾಜಕೀಯ ಪರಿಸ್ಥಿತಿಗಳನ್ನು ಕುರಿತು ಭಾಷಣಮಾಡಿದರು.

"ಹಿಂದೂಸ್ಥಾನೀಸೇವಾದಳ ಇಷ್ಟುದಿವಸ ಕಾಂಗ್ರೆಸ್ಸಿನ ಸಂಬಂಧವಿಲ್ಲದೆ ಪ್ರತ್ಯೇಕ ಅಂಗವಾಗಿದ್ದಿತು ಈಗ ಮಹಾತ್ಮ ಗಾಂಧಿಯವರ ಅನುಜ್ಞೆಯಂತೆ ಇದು ಕಾಂಗ್ರೆಸ್ಸಿನ ಒಂದು ಶಾಖೆಯಾಗಿರುವುದು ನಾನೂ, ಪಂಡಿತ ಜವಾಹರಲಾಲನೆಹರೂ ಯವರೂ, ಇದರಮೇಲಾಡಳತವನ್ನು ನೋಡಿಕೊಳ್ಳಬೇಕಾಗಿದೆ

18 ವರ್ಷಕ್ಕೆ ಮೇಲ್ಪಟ್ಟು 45 ವರ್ಷದೊಳಗಿರುವ ಯುವಕ, ಯುವತಿಯರು ಸ್ವಯಂಸೇವಕ ಸೇವಕಿಯರಾಗಬಲ್ಲರು. ಇನ್ನುಮುಂದೆ ಕಾಂಗ್ರೆಸ್ಸಿನ ಪ್ರಶಸ್ತಿ ಪತ್ರವನ್ನು ಪಡೆದವರೇ ನಿಜವಾದ ಸ್ವಯಂಸೇವಕರಾಗುವರು ಹಿಂದೂಸ್ಥಾನೀ ಸೇವಾದಳದ ನಡಿಯಿಂದ ಶಿಕ್ಷಣ ಹೊಂದಿದವರಿಗೆ, ಪ್ರಶಸ್ತಿ ಪತ್ರಗಳು ಕೊಡಲ್ಪಡುವುವು. ಶಿಕ್ಷಣ ಶಿಬಿರಗಳು ಎಲ್ಲಾ ಪ್ರಾಂತಗಳಲ್ಲಿ ಏರ್ಪಾಟಾಗಲಿಕ್ಕಿವೆ ಕಾಂಗ್ರೆಸ್ ಕರಾವಾದ ನಂತರ, ೨೧ ಪ್ರಾಂತಗಳ ಪೈಕಿ ೨೦ ಪ್ರಾಂತಗಳಲ್ಲಿ ಶಿಬಿರಗಳು ಪ್ರಾರಂಭವಾಗಿವೆ. ಕರ್ನಾಟಕದಲ್ಲಿ ಹಿಂದೂಸ್ಥಾನೀ ಸೇವಾದಳದ ಮುಖ್ಯಕಛೇರಿಯನ್ನು ನಾವು ಉಳಿಸಿಕೊಂಡಿರುವುದರಿಂದ ನನ್ನ ಜನಾಬ್ದಾರಿಯು ಬಹಳವಿದೆ. ಏತಕ್ಕೆಂದರೆ, ಹಿಂದೂಸ್ಥಾನದ ಎಲ್ಲಾ ಪ್ರಾಂತಗಳಿಗೂ ನಾವು ತರಬೇತಾದ ಶಿಕ್ಷಕರನ್ನು ಕಳುಹಿಸಬೇಕಾಗಿದೆ. ಕರ್ನಾಟಕದ ಯುವಕರೆಲ್ಲಾ ಶಿಕ್ಷಕರಾಗಿ ಕರ್ನಾಟಕದ ಗೌರವವನ್ನು ಕಾಪಾಡಬೇಕು. ನಾವು ಒಂದು ವರ್ಷದೊಳಗಾಗಿ ಹತ್ತು ಲಕ್ಷ ಸೈನಿಕರನ್ನು ತಯಾರ್ಮಾಡಬೇಕು.

ರಾಜಕೀಯ ಪರಿಸ್ಥಿತಿ ಎನೂ ತೃಪ್ತಿಕರವಾಗಿಲ್ಲ ಸರ್ಕಾರದವರು ಒಳ್ಳೆಯ ಮಾತುಗಳಿಂದಲೇ ಸ್ವರಾಜ್ಯವನ್ನು ಹಿಂದೆ ತಳ್ಳುತ್ತಿರುವರು. ಎರಡನೇ ಪರಿಷತ್ತಾಯಿತು, ಮೂರನೇ ಗುಂಡಮೇಜನ್ನು ಕಲೆಸುವರಂತೆ? ಬಂಗಾಳದ ಚಿಟ್ಟಾಗಾಂಗದಲ್ಲಿ, ಮತ್ತು ಸಂಯುಕ್ತ ಪ್ರಾಂತ ಆಂಧ್ರ ರೈತರ ದುಸ್ಥಿತಿಯಿಂದ, ಹಿಂದೀಯರ ಹೃದಯವು ತಲ್ಲಣಿಸಿಹೋಗಿದೆ ಮಹಾತ್ಮರು ಬಂದೊಡನೆಯೇ ಚಳವಳವು ಪ್ರಾರಂಭ ವಾಗಬಹುದಾಗಿದೆ. ಈ ಸಲದ ದಬ್ಬಾಳಿಕೆಯು ಭಯಂಕರನಿರುವುದು ನಮ್ಮವರೇ ನಮ್ಮನ್ನು ಕೊರಳುಕೊಯ್ಯುವರು. ಯಾರೂ ಹೆದರದೆ, ಕೊನೆಯವರಿವಿಗೂ, ಯುದ್ಧಮಾಡಲು ತಯಾರಿರಬೇಕು

ಅಧ್ಯಕ್ಷರಾದ ಶ್ರೀ ಬಾಳಾಜಿರಾಯರು ಮಾತಾಡುತ್ತಾ, ಸ್ವರಾಜ್ಯವನ್ನು ಹೊಂದುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಟ್ಟರು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯಂ ರವರು, ಅಧ್ಯಕ್ಷರನ್ನೂ, ಡಾಕ್ಟರನ್ನು ಮಂದಿಕೆಸುತ್ತಾ, ಮಹಾತ್ಮಗಾಂಧಿಯವರ ತತ್ವ ಪ್ರಕಾರ ಭಿನ್ನಾಭಿಪ್ರಾಯಗಳನ್ನು ಸಹನ ಮಾಡಬೇಕೆಂದರು ಸಭೆಯು ರಾತ್ರಿ 8ಕ್ಕೆ ಮುಗಿಯಿತು.

ವಾರ್ಡ್ಲಾ ಹೈಸ್ಕೂಲ್ ವಾರ್ಷಿಕ ಆಟಪಾಟಗಳು, ಗ್ರಿಗ್ ಮೆಮೋರಿಯಲ್ ಪಂದ್ಯಗಳು 5-12-31 ನೇ ಸಾಯಂಕಾಲ, ಬಾಲಿಕಾ ಪಾಠಶಾಲೆಗಳ ಇನ್‌ಸ್ಪೆಕ್ಟ್ರಸ್‌ರಾದ ಶ್ರೀಮತಿ ಸ್ವರ್ಣಾಂಬಾಳಾರವರ ಅಧ್ಯಕ್ಷತೆಯಲ್ಲಿ ನೆರವೇರಿದವು ಬಹುಮಾನಗಳು ಹಂಚಲ್ಪಟ್ಟವು ಗ್ರಿಗ್ ಮೆಮೊರಿಯಲ್ ಪದಕವು ಮುನಿಸಿಪಲ್ ಹೈಸ್ಕೂಲ್ ವಿದ್ಯಾರ್ಥಿ, ಬಿ. ಹಯವದನಾಚಾರ್ರಿಂದ ಗೆಲ್ಲಲ್ಪಟ್ಟಿತು

ಇಂಡಿಯಾ ಸರ್ಕಾರದವರ ಪ್ರಕಟಣೆ.

No. 1857 - H. (G) 17-10-31

ಹೆಡೆಜ್ ಯಾತ್ರಿಗಳು ತಮ್ಮ ಗಂಟುಗಳಲ್ಲಿ ಸಾಮಾನುಗಳನ್ನಿಟ್ಟುಕೊಂಡು, ತಾವುಹೋಗುವ ಯಾತ್ರಾಸ್ಥಳಕ್ಕೆ ಸಾಗಿಸುವುದಾಗಿಯೂ ಇದು ಕಾಯಿದೇ ವಿರುದ್ಧವಿಂತಲೂ, ಕಸ್ಟಂ ಅಧಿಕಾರಿಗಳು ಹುಡುಕಬೇಕಾದರೆ ಕಳ್ಳತನ ಮಾಡಬಾರದೆಂತಲೂ, ಎಚ್ಚರಿಸಿರುವ ಪ್ರಕಟಣೆಯು ಕಲೆಕ್ಟರ್ ರವರಿಂದ ನಮಗೆ ಸೇರಿದೆ. ಇನ್ನುಮೇಲೆ ಸದರಿ ಯಾತ್ರೀಕರು ಎಚ್ಚರದಿಂದಿರಬೇಕು.

ಬಳ್ಳಾರಿ. ಕಲೆಕ್ಟರ್‌ರ ಪರ್ಯಟನೆ

ಕಲೆಕ್ಟರ್ ಸಾಹೇಬರವರು, ಬಳ್ಳಾರಿ ತಾಲ್ಲೂಕ ತಹಸೀಲ್ದಾರರೊಂದಿಗೂ, ಜಿಲ್ಲಾ ಬೋರ್ಡ ಅಧ್ಯಕ್ಷರು ಮತ್ತು ಜಿಲ್ಲಾ ಬೋರ್ಡ ಎಂಜಿನೀರರೊಂದಿಗೂ 6—12—31 ಭಾನುವಾರ ಕುರುಗೋಡು ಪ್ರಾಂತ್ಯಕ್ಕೆಹೋಗಿ ತಾವೇ ಮುದ್ದು ಜಮೀನ್ ಪರಿಸ್ಥಿತಿಗಳನ್ನು ಪರೀಕ್ಷಿಸಿದರು. ಕುರುಗೋಡು ಗ್ರಾಮದಲ್ಲಿ ಸುಮಾರು 500 ರೈತರು ಕೂಡಿದ್ದರು. ಈ ಪರ್ಯಟನದ ಪರಿಣಾಮವು ಫಲಕಾರಿಯಾದೀತೆಂದು ಭಾವಿಸುತ್ತೇವೆ.

ಹೊಸಪೇಟೆ

[ಸ್ವಂತ ಸುದ್ದಿಗಾರರಿಂದ]

30-11-31 ನೇ ದಿನದ ನಾಚನಾಲಯದಲ್ಲಿ ಒಂದು ಸಭೆಯುಸೇರಿ, ಮತಪಾರರಲ್ಲಿ ಸ್ನೇಹಸೌಹಾರ್ದಗಳನ್ನು ಬೆಳೆಸಲು, 30 ಜನರ ಕಾರ್ಯ ನಿರ್ವಾಹಕ ಮಂಡಲಿಯು ಸ್ಥಾಪಿತವಾಗಿ, ಮಾ ತಾಂಡೂರೊದಲಿಯಾರ್ ಅಧ್ಯಕ್ಷರಾಗಿಯೂ, ಮಾ ಗಳಾದ ಕೃಷ್ಣರಾವ್ ತಟ್ಟು, ಬಾಲಸುಬ್ಬಶೆಟ್ಟಿ, ಜಾಲಿ ವಂಪಣ್ಣನವರು ಉಪಾಧ್ಯಕ್ಷರಾಗಿಯೂ, ಡಾ. ನಾಗನಗೌಡರು ಕಾರ್ಯದರ್ಶಿಗಳಾಗಿಯೂ ನಿರ್ಣಾಟಾಯಿತು. ಸದಸ್ಯರ ವಾರ್ಷಿಕ ಚಂದಾ 0-4-0 ಎಂದು ನಿಯಮತವಾಯಿತು.

ಮಾ ಬಳ್ಳಾರಿ ಅಹಮ್ಮದ್ ಸಾಹೇಬರು ವಾಚನಾಲಯದ ಹಕ್ಕನ್ನು ಛಿತ್ತರಿಸಿ ಅದರಹಿಂದೆ ಮನೆಕಟ್ಟಿಕೊಳ್ಳುತ್ತಿದ್ದುದರಿಂದ, ಅವರಮೇಲೆ ಜಿಲ್ಲಾ ಮುನ್ಸೀಫ ಕೋರ್ಟನಲ್ಲಿ ದಾವೆಯುಸಲ್ಲಿಸಿದೆ

ಹೊಸಪೇಟೆಯ ಪಂಚಮರ ರಾತ್ರಿಶಾಲೆ.

(ಒಬ್ಬ ಲೇಖಕರು)

ಈ ಪಾಠಶಾಲೆಯ ಉತ್ಸಾಹಿಗಳಾದ, ಮತ್ತು ವಿದ್ಯಾಪೇಕ್ಷಿಗಳಾದವರಿಂದ ಜನ್ನಾಗಿ ನಡೆಯುತ್ತಲಿದೆ. 25 ಜನರು ಇಂಗ್ಲಿಷ್, ತೆಲುಗು ಕಲಿಯುತ್ತಲಿದ್ದಾರು ಬುದ್ಧಿಯಲ್ಲಿ ಇವರಿಗೂ, ಇತರರಿಗೂ, ವ್ಯತ್ಯಾಸವಿಲ್ಲದಿದ್ದರೂ, ಶುದ್ಧತೆಯಲ್ಲಿ ಇವರು ಹಿಂದೆಇದ್ದಾರೆ ಗ್ರಾಮದ ಮಹಾಜನರು ಇವರ ಒಟ್ಟಿಗೆಯನ್ನು ಬಗೆಯುವುದಿಲ್ಲ ಇವರಲ್ಲಿ ಮಡಿವಾಳಗೇರ್ಪಟ್ಟಿಲ್ಲಾ. ಇದಕ್ಕೆ ಪ್ರಯತ್ನ ಪಟ್ಟು ನಿರ್ಧಕವಾಯಿತು

ಶಾಲೆಯಲ್ಲಿ ಲೆಕ್ಕ, ಆರೋಗ್ಯ, ಭೂಗೋಳ, ಸಾಮಾನ್ಯ ವ್ಯವಹಾರ ಜ್ಞಾನ, ನೀತಿಬೋಧೆ ವಗೈರೆ ಹೇಳಿಕೊಡುತ್ತಾರೆ. ರಾತ್ರಿ ಶಾಲೆಗಳಲ್ಲಿ ಇದೇ ಜನ್ನಾಗಿ ನಡೆಯುವುದೆಂದು, ವಿದ್ಯಾಧಿಕಾರಿಗಳ ತಾತ್ಪರ್ಯ ವಿದೆ. ಶ್ರೀ. ಸರ್ವಾಣ್ಣಾಚಾರ್ಯರು, ಸಾರ್ವಜನಿಕರ ಸಹಾಯದಿಂದ ಇಷ್ಟೆಲ್ಲಾ ನಡೆಸುತ್ತಾರೆ. ಎಲ್ಲರೂ ಸಹಾಯಮಾಡಿ ಅಭಿವೃದ್ಧಿಗೆ ತರಬು ಯತ್ನಿಸಬೇಕು.

ಕೊಟ್ಟೂರು

(ಸ್ವಂತ ಸುದ್ದಿಗಾರರಿಂದ)

29-12-31 ನೇ ಭಾನುವಾರ ಧ್ವಜವಂದನೆಯು ಪ್ರಾತಃಕಾಲ ಸಕಾಲಕ್ಕೆ ನೆರವೇರಿತು. ಸಾಯಂಕಾಲ 6 ಘಂಟೆಗೆ ಸಭೆಯುಸೆಡೆದು, ಹಿಜಲಿ, ಚಿಟ್ಟಾಗಾಂಗ ಕೃತ್ಯಗಳು ನಿಷೇಧ ಸಾಯಿತು ಸಭೆಗೆ ಬಹಳಜನ ಬಂದಿದ್ದರು. ನಿಷೇಧ ಸೂಚನೆಗಳು ಸರ್ಕಾರಕ್ಕೆ ಕಳುಹಿಸಲ್ಪಟ್ಟವು.

ಮಹಾತ್ಮಗಾಂಧಿ

ಗಾಂಧೀಜಿ ಯವರು ಶನಿವಾರ (5-12-31) ಲಂಡನ್ ಪಟ್ಟಣವನ್ನು ಬೆಳಗ್ಗೆ 9 ಘಂಟೆಗೆ ಬಿಟ್ಟರು ಪ್ಯಾರಿಸ್ ಪಟ್ಟಣದಲ್ಲಿ ಒಂದುಭಾಷಣಕ್ಕೆ ಏರ್ಪಾಡು ಮಾಡಿದ್ದಾರೆ ಅವರ ಸ್ಥಳನಿಯಾಮಕವಿಲ್ಲ. ಗಾಂಧೀಜಿ ಯವರು, 11 ನೇ ತಾರೀಖಿನ ವರೆಗೂ ಇಟಲೀ ದೇಶದಲ್ಲಿದ್ದು, 12 ನೇ ತಾ॥ ದಿನ ಇಂಡಿಯಾಕ್ಕೆ ಜಹಜು ಹತ್ತುವರು. ಮೂರನೇ ತಾರೀಖು ರಾತ್ರಿ ಸುಮಾರು 40 ಜನ ಪ್ರೆಸ್ ಪ್ರತಿನಿಧಿಗಳು, ಕಾಯಿದೇ ಭಂಗದ ಚಳವಳಿಯನ್ನು ನೀವು ಹೂಡುವಿರೋ, ಎಂದು ಕೇಳಿದರೆ ನಾನು ಕಾರ್ಯ ಕಾರೀಮಂಡಲದಲ್ಲಿ ಅದನ್ನು ನಿರ್ಣಯಿಸುವೆನು ಬಂಗಾಳದಲ್ಲಿ ಈಚೆಗೆ ಜಾರಿಯಲ್ಲಿ ತಂದಿರುವ ಕಾನೂನು, ಮತ್ತು ಸರ್ಕಾರದವರ ದಬ್ಬಾಳಿಕೆಯ ಕ್ರಮಗಳೂ, ಅಶಾಭಂಗವಾಗಿವೆ, ಎಂದು ಹೇಳಿದರು

ವರ್ತಮಾನಗಳು

ಹುಬ್ಬಳ್ಳಿಯ ಸ್ವದೇಶೀಸಂಸ್ಥೆ, ಪ್ರದರ್ಶನವು ಪಂಡಿತ ಜವಾಹರಲಾಲರಿಂದ ಈ ತಿಂಗಳ ೧೫-ನೇ ತಾರೀಖು ತೆರೆಯಲ್ಪಡುವುದು. ಅವರ ಹಸ್ತದಿಂದ ಪ್ರಶಸ್ತಿ ಪತ್ರಗಳನ್ನು ಪಡೆಯಲು ಕರ್ನಾಟದ ಸ್ವಯಂಸೇವಕರೆಲ್ಲಾ ಅಲ್ಲಿ ಸೇರುವರಿದ್ದಾರೆ

ಶ್ರೀ ಬಾಳಾಜಿರಾಯರಿಗೆ

ಅಭಿನಂದನವಾದ

ಮಾನ ಪತ್ರಗಳು ಮತ್ತು ಅವರ ಜವಾಬು.

(ಒಬ್ಬ ರೈತ ಕೇಳುವಂತೆ.)

ಮಾನ ಪತ್ರಗಳಲ್ಲಿ ಅನೇಕ ಸಂಗತಿಗಳು ಅಡಗಿವೆ ರಸ್ತೆಗಳು ಕೆಟ್ಟಿರುವುದು, ಸರ್ಕಾರದವರು ಬಳ್ಳಾರಿ ಪಟ್ಟಣಕ್ಕೆ ಕಾಲೇಜು ಕೊಡದಿರುವುದು ಡ್ರೈನೇಜ್ ಸ್ಕೀಮಿನ ಅವಶ್ಯಕತೆ., ಮಹಮ್ಮದೀಯರಿಗೊಂದು ಹೈಸ್ಕೂಲ್ ಬೇಕಾಗಿರುವುದು., ಪೈತಿ ಮನೆಗೂ, ಕೂಳಾಯಿ ಒದಗಿಸುವುದು, ವಾಚನಾಲಯವನ್ನು ಸ್ಥಾಪಿಸುವುದು, ಆರೋಗ್ಯಮಂದಿರವಿರುವುದು, ವಗೈರೆ ವಿಷಯಗಳು ಪ್ರತಿಪಾದಿತ ವಾಗಿದ್ದವು. ಮಾನ ಪತ್ರಗಳಲ್ಲಿ ಈ ಯಾವತ್ತೂ ವಿಷಯಗಳೂ, ಅವಣಾಸವರದಿದ್ದರೂ ಕೆಲವಾದರೂ ಇರಬೇಕಾದ್ದು ಸ್ವಭಾವ.

ಈ ಕೊರತೆಗಳನ್ನು ಹೋಗಲಾಡಿಸಲು, ದ್ರವ್ಯ ಸಹಾಯವು, ಜನರ ಸಹಾಯ ಬೇಕಿರುವುದೂ, ಅವಶ್ಯಕವೆಂದು ಅವರು ಜವಾಬು ಕೊಟ್ಟದ್ದು ಸತ್ಯವಾಗಿದೆ. ಅವರು ಹೇಳಿದಂತೆ ಒಂದು ಲಕ್ಷ ರೂಪಾಯಿಗಿಂತಲೂ, ಹೆಚ್ಚಿನ ಬಾಕಿಗಳು ನಿಂತಿರುವ ಪಕ್ಷದಲ್ಲಿ, ಮಾನಪತ್ರಗಳಲ್ಲಿ, ಕೊರತೆಗಳನ್ನು ಪೂರೈಸಬೇಕೆಂದು ಕೇಳುವುದು ವ್ಯರ್ಥವಾಗಬಹುದಾಗಿದೆ. ತಮ್ಮ ಕರ್ತವ್ಯಗಳನ್ನು ಜನರು ಸರಿಯಾಗಿ ನೆರವೇರಿಸುತ್ತಿಲ್ಲವೆಂಬುದು, ಈ ಬಾಕಿಯಿಂದೇ ವ್ಯಕ್ತವಾಗುವುದು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ, ಹಣದ ಅಡಚಣೆ ಇರುವಾಗ್ಯೆ ಹೆಚ್ಚಿನ ಅನುಕೂಲಗಳನ್ನು ಮಾಡಿರೆಂದು ಕೇಳುವುದು ನಿರರ್ಥಕವಲ್ಲವೇ ?

ಮುನಿಸಿಪಾಲಿಟಿ ಅಧೀನದಲ್ಲಿರುವ ರಸ್ತೆಗಳನ್ನು ಜಾಗ್ರತೆ ಒಳ್ಳೆಯ ಸ್ಥಿತಿಗೆ ತರುತ್ತೇನೆಂದು ರಾಯರು ಅಪ್ಪಣೆ ಕೊಡಿಸಿದ್ದು ಸಂತೋಷ. ಸಾವು ಅವರ ಕಾಲದಲ್ಲಾದರೂ, ರಸ್ತೆಗಳ ಸುಖವನ್ನು ಶೀಘ್ರದಲ್ಲಿ ಅನುಭವಿಸೋಣವೆಂದು ಆಶಿಸುತ್ತೇವೆ.

ಶ್ರೀ ಬಾಳಾಜಿರಾಯರು ಕಾಲೇಜು ಬರುವಂತೆ ಮಾಡುತ್ತೇನೆಂದು ಧೈರ್ಯವಾಗಿ ಹೇಳಿದ್ದಕ್ಕೆ ಅವರು ಆಂಧ್ರ ವಿದ್ಯಾಲಯ ಸೆನೇಟ್ ಮೆಂಬರಾಗಿರುವುದೇ ಕಾರಣವೆಂದು ಊಹಿಸುತ್ತೇವೆ ಅವರಿಗೆ ಈ ವಿಷಯದಲ್ಲಿ ನಂಬಿಕೆ ಇರಬೇಕು ಕೋಮುವಾರು ಸ್ಪರ್ಧಾಸಗಳನ್ನು ದೂರಮಾಡಿ, ವೈಭಾ ಮಾತುಗಳನ್ನು ಬಿಟ್ಟು ನಾವು ಅವರಿಗೆ ಸಹಾಯ ಮಾಡಬೇಕಾದುದು ಅಗತ್ಯ ಕರ್ತವ್ಯವಾಗಿದೆ

ಡ್ರೈನೇಜ್ ಸ್ಕೀಮ್ ಅಸಾಧ್ಯವೆಂತ ಒಂದೇ ಮಾತಿನಲ್ಲಿ ಅವರು ಹೇಳಿದ್ದು ದುಃಖದಾಯಕವಾಗಿದೆ ತಮಗಿರುವ ಸಹಾಯಗಳಿಂದಲೂ, ಸ್ವಾಶಕ್ತ್ಯವಿಂದಲೂ, ಈ ಕೆಲಸವನ್ನು ಬೇಗಾದರೂ ಮಾಡಿ ಪೂರೈಸಬೇಕೆಂದು ಕೂಡುತ್ತೇವೆ. ಇಲ್ಲವಾದರೆ ಬಳ್ಳಾರಿಯ ಆರೋಗ್ಯವು ಕೆಟ್ಟು, ಮುನಿಸಿಪಾಲಿಟಿಯು ಈ ವರಿಗೆ ಹೊಂದಿದ ಆರೋಗ್ಯ ಬಹುಮಾನಗಳು ನಿರರ್ಥಕವೆಂದು ಭಾವಿಸಬೇಕಾಗುತ್ತದೆ.

ಮಹಮ್ಮದೀಯ ಉಪಾಧ್ಯಾಯರಿಗೂ, ಬಾಲಕರಿಗೂ, ಶುಕ್ರವಾರ ನಮಾಜಿಗಾಗಿ ಎರಡು ಘಂಟೆ ರಜಾ ಇರಬೇಕೆಂಬ ವಿಷಯವನ್ನು ಅವರು ಅನುಸೋದಿಸಿದರು ಅವರೆ ಈ ಅನುಕೂಲವು ಈಗ 6 ತಿಂಗಳಿಂದ ಲೂ ಜಾರಿಯಲ್ಲಿದೆಯೆಂದು ತಿಳಿದು ಬರುತ್ತದೆ.

ಜನರ ಸಹಾಯಭೂತಿ ಇದ್ದಲ್ಲಿ ಶ್ರೀ ಬಾಳಾಜಿರಾಯರು, ಯಾವ ವಿಧವಲ್ಲಾದರೂ, ಪಟ್ಟಣದ ಪುರೋಭಿವೃದ್ಧಿಗೆ ಕೊರಾದೆ ಬಿಡುವವರಲ್ಲ. ವಾಚನಾಲಯದ ವಿಷಯದಲ್ಲಿ ಅವರು ತಮ್ಮ ಯಾವಶಕ್ತಿಯನ್ನು ತೋರಿಸುವರೆಂದು ಕೋರಲ್ಪಟ್ಟಿದೆ. ಹೀಗಾದರೆ ಸಾಲ್ಕಾದು ತಿಂಗಳಲ್ಲಿಯೇ ನಾವು ವಾಚನಾಲಯವನ್ನು ಕಾಣಬಹುದು

ನಮ್ಮ ಪಟ್ಟಣವನ್ನು ಒಳ್ಳೆಯ ಸ್ಥಿತಿಗೆ ತರಲು ಶ್ರೀ ಬಾಳಾಜಿ ರಾಯರಿಗೆ ತಕ್ಕ ಧೈರ್ಯವನ್ನೂ ಶಕ್ತಿಯನ್ನೂ ಭಗವಂತನು ಅನುಗ್ರಹಿಸಲೆಂದು ಬೇಡುತ್ತೇವೆ.

ಮಾರಥಾನ್.

(ವಿಂ. ಜಿ. ಇ.)

ಪೂರ್ವಕಾಲದಲ್ಲಿ ಗ್ರೀಸ್ ದೇಶದ ಸಾಮಾಜಿಕ ಸ್ಥಿತಿ ಹೇಗಿತ್ತೆಂದರೆ ಮಧ್ಯದಸುತ್ತಮುತ್ತಲ ಸ್ಥಳೀಯರಲ್ಲಿ ಬಹುಪಾಲು ಜನಾಂಗಗಳು ಉನ್ನತಸ್ಥಿತಿಯಲ್ಲಿದ್ದವು ಈ ಒಂದನ್ನೆಗೆ ವಿಷ್ಣುಮಂಡಲಕ್ಕೆ ಸೇರಿದವರಲ್ಲಿ ಪರ್ಷಿಯಾ ದೇಶಕ್ಕೆ ಸೇರಿದವಾರಸೀಕರೇ ಬಹಳ ಪ್ರಬಲರು ಇವರು ತಮ್ಮ ಸುತ್ತಮುತ್ತಲಿನವರನ್ನು ಸೋಲಿಸಿ ತಮ್ಮ ರಾಜ್ಯವನ್ನು ವಿಸ್ತಾರ ಮಾಡಿಕೊಂಡರು. ಇವರು ಅಧಿಕಾರದೊಡನೆ ಬರುವ ದೆಮ್ಮೆಯಿಂದಲೂ, ಹಣದಿಂದುಂಟಾಗುವ ಮದದಿಂದಲೂ, ಕೀರ್ತಿಯಿಂದ ಬರುವ ಕ್ರೂರತನದಿಂದಲೂ, ಮಾಜ್ಯವಾಳುತ್ತಿದ್ದರು.

ಈ ಸಮಯದಲ್ಲಿಯೇ ಯೂರೋಪಿನಲ್ಲಿ ಗ್ರೀಸ್ ದೇಶವು ಉನ್ನತಸ್ಥಿತಿಗೆ ಬರುತ್ತಲಿತ್ತು. ಇನ್ನೊಬ್ಬರ ಆಸರೆಯಲ್ಲಿದುವೆಂದರೆ ಅವರಿಗೆ ಪ್ರಾಣ ಹೋದುದಕ್ಕಿಂತ ಅತಿಶಯ. ಸ್ವಾತಂತ್ರ್ಯವೇ ಅವರ ಜೀವನಕಳೆ. ಅವರು ತಾವು ಪಾರಸೀಕರ ಕೈಕೆಳಗೆ ಬೀಳದೆಯಿರಲು ಎನೇನುಪಾಯಗಳು ಬೇಕೋ ಅವುಗಳೆಲ್ಲಾ ಮಾಡಿಕೊಳ್ಳುವುದರಲ್ಲಿದ್ದರು. ಸ್ವಲ್ಪಕಾಲದಲ್ಲಿಯೇ ಗ್ರೀಸ್ ದೇಶಕ್ಕೆ ತೊಂದರೆ ಬಂದೊದಗಿತು ಡರಯಸ್ ಎಂಬ ಪರ್ಷಿಯಾ ದೇಶದ ಮೊರಯ, ಗ್ರೀಸ್ ದೇಶವನ್ನು ಸ್ವಾಧೀನ ಮಾಡಿಕೊಳ್ಳಲು ದಂಡೆತ್ತಿ ಬಂದನು. ತಾನು ಯಾವಪೇರನಮೇಲೆ ದಂಡೆತ್ತಿ ಹೋದನೊ, ಮುಂಚಿತವಾಗಿಯೇ ತನ್ನ ರಾಯಭಾರಿಯೊಬ್ಬನನ್ನು ಕಳುಹಿಸುವ ಪದ್ಧತಿಯು ಅವನಲ್ಲಿದ್ದಿತು ಜನರು ಡರಯಸ್ಸನಿಗೆ ಸರಮ್ಮ ಕೇಳಿದೊಡನೆಯೇ ಪೆರರಿ, ಕಪ್ಪಕಾಣಿಕೆಗಳನ್ನೊಪ್ಪಿಸುತ್ತಿದ್ದರು. ಒಂದುಮೇಲೆ ಅವರು ಹಾಗೆಯೆವಶವಾಗದಿದ್ದರೆ, ತಾನೇ ಸ್ವತಂತ್ರದೆತ್ತಿ ಕೊಂಡು ಅದೇ ಶದೊಳಕ್ಕನುಗ್ಗಿ, ಅವನ್ನು ವಶ ಪಡಿಸಿಕೊಳ್ಳುತ್ತಿದ್ದನು.

ಹೀಗೆ ರಾಯಭಾರವನ್ನು ಒಪ್ಪಿಕೊಳ್ಳದಿದ್ದವರು ಎರಡು ದೇಶದಸ್ಪರ್ಟೆಗಳು. ಅಥೆನ್ಸ್ ಮತ್ತು ಸ್ಪಾರ್ಟ್ಸ ದೇಶದವರು, ಸ್ಪಾರ್ಟನ್ನರಿಗೆ ಯುದ್ಧವೆಂದರೆ ಲಕ್ಷ್ಯವೇಯಿಲ್ಲ. ಆದೇಶದಲ್ಲಿ ಮುಕ್ಕಾಳುಹುಟ್ಟಿದ ಒಡನೆಯೇ ಸಿಪಾಯಿಗಳಾಗಲು ಎಷ್ಟುಬೇಕೋ ಅಷ್ಟುತರ ಬೀರುಮಾಡುತ್ತಿದ್ದರು, ಅವರಿಗೆ ಓದು ಬರವಣಿಗೆಗಿಂತಲೂ ವ್ಯಾಯಾಮ ಮತ್ತು ಶರೀರಪೋಷಣೆ ಇವೇ ಮುಖ್ಯ. ತರುಣರನ್ನು ಕಟ್ಟಾಳುಗಳಾಗುವಂತೆ ಮಾಡುವ ಪ್ರಯತ್ನವೇ ಅವರಲ್ಲಿ ಹೆಚ್ಚಾಗಿದ್ದಿತು ಮಗುಹುಟ್ಟಿದ ತಕ್ಷಣವೇ ಪಟ್ಟಣದ ಮುಖ್ಯಸ್ಥರೆಲ್ಲರೂಬಂದು ನೋಡುತ್ತಿದ್ದರು ಚನ್ನಾಗಿದೆಯೆಂದು ನಿರಾಗಬಹುದೆಂದು ತೋರಿಬಂದರೆ ಅದನ್ನು ಯಿಟ್ಟುಕೊಳ್ಳುತಿದ್ದರು; ಇಲ್ಲವಾದರೆ ಅದನ್ನು ಬೆಟ್ಟದತಪ್ಪಲಲ್ಲಿ ಸಾಯನಿರಗಳ ಸಾಲುಮಾಡುತ್ತಿದ್ದರು ಇಂಥಹ ಜನರು ಡರಯಸ್ಸನ ರಾಯಭಾರಕ್ಕೆ ಹೆದರುವರೆ! ಡರಯಸ್ಸನಿಗೆ ತೋಸಬುಂತ ; ಅವನುದೊಡ್ಡ ಸೈನ್ಯವನ್ನು ಕಳುಹಿಸಿದನು ಆಸೈನ್ಯವು ಮ್ಯಾರಥಾನ್ ಎಂಬ ಊರನ್ನು ಸೇರಿತ.

ಮ್ಯಾರಥಾನ್ ಎಂಬ ಊರಿಗೆ ಸಮೀಪದಲ್ಲಿದೆ. ಆಗ ಮೊಟ್ಟ ಮೊದಲು ಪಾರಸೀಕರ ಕೊಡೆತನವನ್ನು ಅಥೆನ್ಸಿನ ಸೇನೆಯೇ ತಡೆಯಬೇಕಾಗಿದ್ದಿಂದು. ಡರಯಸ್ಸನ ಸೈನ್ಯವನ್ನು ಸೋಲಿಸುವದಂತಿರಲಿ, ಅದನ್ನು ಅಡ್ಡಿಮಾಡುವುದೂ ಸಹ ಬಹಳಕಷ್ಟತಂದು ಅಥೆನ್ಸಿನ ಜನರಿಗೆ ತಿಳಿದಿದ್ದಿತು ಆವಾಗ್ಯೂ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಒಪ್ಪದೆ, ಸ್ವತಃಯೊಬ್ಬರೂ ತನ್ನ ತನ್ನ ಜೀವವಿರುವವರೆಗೂ ಕಾದಾಡಲು ನಿರ್ಧರಿಸಿ ಸ್ಪಾರ್ಟಜನರಿಗೆ ಸಹಾಯಕ್ಕೆ ಬರುವಂತೆ ಹೇಳಕಳುಹಿಸಿದರು. ಈಗಿನಂತೆ ತಂತೀಸಮಾಚಾರ ವಿದ್ದಲ್ಲಿ. ಬಹಳ ಸುಲಭ. ಆಗಲೋ ವರ್ತಮಾನವನ್ನು ಕಳುಹಿಸಬೇಕಾದರೆ ಯಾವಾದರೂ ನಡಿಗೆ ಯತ್ನವೋ ಅಥವಾ ಕುದುರೆಯ ಮೇಲೆಯೋ ಹೋಗಬೇಕಾಗಿತ್ತು. ಒಳ್ಳೆಯರಸ್ತೆಗಳಿಲ್ಲದಿದ್ದುದರಿಂದ ಎರಡೂ ಸುಲಭವಾದ ಕೆಲಸಗಳಾಗಿರಲಿಲ್ಲ. ಸ್ವಾತ್ರಂತ್ರ್ಯಕ್ಕೆ ಅಥೆನ್ಸಿಗೂ ಸುಮಾರುನೂರ್ಕಿವತ್ತು ಮೈಲಿ. ಈ ವರ್ತಮಾನವನ್ನು ತಿಳಿಸಲು ಫಿಡಿಪ್ಪಿಡಿಸ್ ಎಂಬಾತನನ್ನು ದೂತನ್ನಾಗಿ ನೇಮಿಸಿದರು.

ದೂತನಾದ ಈತನು, ತನ್ನ ಕ್ಷಾಣಗಳಿಗಿಂತಲೂ ಅಧಿಕವಾದ ತನ್ನ ದೇಶಕ್ಕೂ ತನ್ನ ಜನರಿಗೂ ತೊಂದರೆ ಬಂದಿರುವುದನ್ನು ನೋಡಿ, ಬಹಳ ಸಾಹಸದಿಂದ ನಲವತ್ತೈದು ಘಂಟೆಗಳೊಳಗಾಗಿ ಸ್ವಾತ್ರಂತ್ರ್ಯವನ್ನು ಮುಟ್ಟಿದನು. ಆದಾಗ್ಯೂ ಸ್ವಾತ್ರಂತ್ರ್ಯಜನರು ಸಮಯಕ್ಕೆ ಬರಲಾಗಲಿಲ್ಲ ಅಥೆನ್ಸಿನ ಜನರೇ ಸರ್ಷಿಯಾ ದೆನರನ್ನು ಎದುರಿಸಬೇಕಾಗಿಬಂದಿತು.

ಅಥೆನ್ಸಿನ ಸೇನೆಯಲ್ಲಿ ಹತ್ತು ಸೇನಾಧಿಪತಿಗಳಿದ್ದರು ಅವರಲ್ಲಿ ಏಳರು ತಮ ಪಟ್ಟಣವನ್ನು ಬಿಟ್ಟು ಹೊರಟು ಪಾರಸೀಕರ ಸೈನ್ಯದಮೇಲೆ ಬೀಳಲು ಒಪ್ಪಲಿಲ್ಲ. ಅವರೆ ಅವರಲ್ಲೆಲ್ಲಾ ವೀರಾಗ್ರೇಸರನಾದ ಮಿಲ್ಟೈಡೀಸ್ ಎಂಬಾತನು ತಮ್ಮ ಪಟ್ಟಣವನ್ನುಬಿಟ್ಟು ಶತ್ರುಗಳನೆಲೆ ಬಿದ್ದು ಓಡಿಹೋಗುವುದೇಉತ್ತಮವೆಂದು ಅವರನ್ನೆಲ್ಲಾ ಒಪ್ಪಿಸಿ, ಸೈನ್ಯವನ್ನು ತೆಗೆದುಕೊಂಡು ಪರ್ಷಿಯಾದವರನ್ನು ಓಡಿಸಲು ಹೊರಟನ

ಮ್ಯಾರಥಾನ್ ಬಯಲಿಲ್ಲಿ ಒಂದು ಎತ್ತರವಾದ ಗುಡ್ಡ. ಅದರಮೇಲೆ ಅಥೆನಿ ನವರ ಸೇನೆಯುಬಂದು ನಿಂತಿತು ಮಿಲ್ಟೈಡೀಸನು ಪರ್ಷಿಯಾದವರ ಮೇಲೆ ಬೀಳುವಂತೆ ತನ್ನ ಸೈನ್ಯಕ್ಕೆ ಅಪ್ಪಣೆಮಾಡಿದನು. ಅದುವರೆಗೂ ಅಂತಹ ರಭಸಕ್ಕೆ ಸಿಕ್ಕದೆಯಿದ್ದ ಪರ್ಷಿಯಾ ಸೈನ್ಯಾಕರು ಘಾಬರಿಪಟ್ಟು ಓಡಲಾರಂಭಿಸಿದರು. ಅವರು ಓಡಿದಹಾಗೆಲ್ಲಾ ಗ್ರೀಕರಿಗೆ ಬಲವು ಇಮ್ಮಡಿಯಾಯಿತು ಕೊನೆಗೆ ಮ್ಯಾರಥಾನ್ ಕದನದಲ್ಲಿ ಗ್ರೀಕರಿಗೇ ಜಯವಾಯಿತು.

ಕರ್ನಾಟಕದ ಸಮ್ಮೇಳನಗಳು.

ಕಾರವಾರ. ೧೯೩೦,

ಬರಲಿರುವ ಕ್ರೈಸ್ತರ ಹಬ್ಬದ ಬಿಡುವಿನಲ್ಲಿ (ಡಿಸೆಂಬರ್ ಕೊನೆಯ ನಾಲ್ಕು ದಿವ್ಸ) ಉತ್ತರ ಕನ್ನಡದವರು ೧೭ ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನವನ್ನೂ, ಕವಿಗಳ ಗೋಷ್ಠಿಯನ್ನೂ, ಕರ್ಣಾಟಕದ ಏಕೀಕರಣ ಪರಿಷತ್ತನ್ನೂ, ಬೆಳ್ಳಿಯ ಹಿರಿಯರಾದ ಕಾರವಾರದಲ್ಲಿ ನೆರವೇರಿಸುವರು ಸಾಹಿತ್ಯ ಸಮ್ಮೇಳನಕ್ಕೆ ಮ. ಕಾಶ್ಯ ಶಿವರಾಮ ರಾಯರು (ಹೊನ್ನಾವರದಲ್ಲಿ ವಕೀಲರಾಗಿರುವರು)ಸ್ವಾಗತಾಧ್ಯಕ್ಷರೂ, ಶ್ರೀಮಾನ್ ವಸಜಿ. ಮಂಗೇಶರಾಯರು, ಅಧ್ಯಕ್ಷರಾಗಿರುವರು.

ಈ ಜಿಲ್ಲೆಯವರ ಹೊರಗಿನವರೂ, ತಿರುಗಳನ್ನು ಸಲ್ಲಿಸಿದರೆ ಸಮೇಳನಗಳಲ್ಲಿ ಪ್ರತಿನಿಧಿಗಳಾಗಿರಬಲ್ಲರು. ಸಮೇಳನಗಳಲ್ಲಿ ಬರಲಿರುವ ಗೊಷ್ಠಿಗಳಿಗೆ ವಿಷಯದಾಗಿ ಪ್ರಬಂಧಗಳನ್ನು ವ್ಯಕ್ತಪಡಿಸುವ ಅಧಿಕಾರವು ಪ್ರತಿನಿಧಿಗಳಾಗಿದವರಿಗೆ ಇರುವುದು

ಪ್ರತಿನಿಧಿಗಳಾಗಿ ಬಳ್ಳಿಗೆ ಬರುವವರಿಗೆಲ್ಲರಿಗೂ (ಡಿಸೆಂಬರ್ ೧೫-ನೆಯ ತಾರೀಖಿನೊಳಗಾಗಿ ಕಾರ್ಯದರ್ಶಿಯವರಿಗೆ ಬರೆದ ಕೊಂಡರೆಯೆಂದಾತ್ರ) ನಾಲ್ಕು ದಿವಸದ ಇರಲು ಇಂಬಿನ ಊಟ-ತಿಂಡಿಗಳೂ, ದೊರಕುವ ಏರ್ಪಾಡುಮಾಡಲಾಗಿದೆ ಈ ಅನುಕೂಲತೆಗಳೆಲ್ಲವೂ ಬೇಕೆಂದು ಬಯಸುವ ಪ್ರತಿನಿಧಿಗಳಿಗೆ ನಾಲ್ಕು ದಿವಸಗಳಿಗಾಗಿ ೩ ರೂಕೊಡಬೇಕಾಗುವುದು. ಬರಲಿರುವ ಪ್ರತಿನಿಧಿಗಳು ತಮಗೆಬೇಕಾಗಬಹುದಾದ ಅನುಕೂಲತೆಗಳ ವಿಷಯವಾಗಿ ವಿಸ್ತಾರವಾಗಿ, ಬೇಗನೆ ಬರೆಯಬೇಕಾಗಿ ಪ್ರಾರ್ಥನೆ

ಶೇಷಾಂಗ ಮಂಗೇಶ ರಾಯರು,

ಕಾರ್ಯಕಾರಿ ಸಮಿತಿಯ ಅಧ್ಯಕ್ಷರು

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೨೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟರಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯಪೂರ್ವಾಹ್ನಕಾಲ 7 30 ರಿಂದ 9 ರ ವರಿಗೂ, ಸಾಯಂಕಾಲ 6 30 ರಿಂದ 7 30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು ಸುಮಾರು ೨೫ ಕೋಟಿಜನಗಳಿಗೆ ಚನ್ನಾಗಿ ಪರಿಚಯ ವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದ ದು, ದೇಶಾಭಿಮಾನಿಗಳ ಅಗತ್ಯಕರ್ತವ್ಯ ವಾಗಿದೆ. ಭಾರತ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯ ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲಪೇಕ್ಷೆಯುಳ್ಳವರು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮ ಗಾಂಧಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ		೪—೦—೦
,,	ಒಂದನೆಯ ಭಾಗ	೦—೧೨—೦
,,	ಎರಡನೆಯ ಭಾಗ	೧—೨—೦
,,	ಮೂರನೆಯ ಭಾಗ	೦—೯—೦
,,	ನಾಲ್ಕನೆಯ ಭಾಗ	೧—೮—೦
,,	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರ ಬರೆದ " ಅನಾಸಕ್ತಿ ಯೋಗ "		೦—೧೨—೦
(ಇತ್ತೀಚೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ)		
ಮಹಾತ್ಮ ಗಾಂಧಿ "	ಒಕ್ಕ ಪುಸ್ತಕ	೦— — ೦
ಎಲ್ಲಾ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor.		1—0—0
ಹಿಂದೀ ಬಾಲ ಬೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೬—೦
,,	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೫—೦
ದೂಸರೀ		೦—೬—೦
ಮಜೇದಾರ ಕಹಾನಿಯೂ		೦—೩—೦
ಅನುವಾದಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ

ಕರ್ನಾಟಕ ಕೇಸರಿ ಕಾರ್ಯಾಲಯ, ಬೆಳಗಾಂ

ಪ್ರೇಮ ಚಿಕಿತ್ಸಾಲಯ.

ಕಿನ್ಸ್ ಮಾರ್ಕೆಟ್ ರೋಡು ಬೆಳ್ಳಾರಿ.

[ಸಬ್ ಏಜೆಂಟರು:—ಝಾಂಡ್ ಫಾರ್ಮಕ್ಯೂಟಿಕಲ್ ವರ್ಕ್ಸ್ ಬೊಂಬಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನವ ಮೃಷ್ಟಿ ವಿದ್ಯುಚ್ಛಕ್ತಿ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧ ಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

ವಿ. ಎಂ, ಗಿರಿ ಅಂಡ್ ಸನ್ಸ್.

ತೇರುಬೀದಿ ಬೆಳ್ಳಾರಿ.

ವಿಜಂಟರು:- **ಲೋಧ್ರಾ**

(ಗರ್ಭಾಶಯ ರೋಗನಿವಾರಣಿ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳೂ, ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾದ ಜಿಲ್ಲರೆವಸ್ತುಗಳೂ, ಸ್ಟೇಷನರಿ ಪದಾರ್ಥಗಳೂ, ಸಿಲಧ ಬೆಲೆಗೆ ದೊರೆಯುತ್ತವೆ.

ಪಿ. ಎ. ಪಿ, ಯವರಿಂದ ತಯಾರಾದ ಅತ್ಯುತ್ತಮ ಪೆನ್ಸಿಲ ಪೆಟ್ಟಿಗಳು ಸಮೃದ್ಧಿಯಾಗಿ ದೊರೆಯುತ್ತವೆ.

TO LET

FOR SALE

1 Bosten hand Press:—

Prints 5" × 8" matter neatly, in good working order.

Price moderate & reasonable.

2 New cyclostyle Machines—

Used only Twice or thrice. Perfectly new.

Price considerably cheap. Apply shop:—

KARNATAKA KESARI. OFFICE

Bellary.

ಪ್ರೇಷ್ಯವಾದ ಮಿಷನ್ ದಾರದ ಪುಂಡೆಗಳು.

ಈ ದಾರದ ಪುಂಡೆಗಳು ಘಟ್ಟಿಯಾಗಿಯೂ, ನಯವಾಗಿಯೂ, ಇರುವುದರಿಂದ ಸುಲಭವಾಗಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳುಪು, ಕಪ್ಪು, ಕಾವಿ, ಮತ್ತು ಇತರ ರಂಗುಗಳಲ್ಲಿ ಅನೇಕ ಸೈಜಿನ ದಾರದ ಪ್ಯಾಕುಗಳು ಕಡಿಮೆ ಧಾರಣೆಗೆ ದೊರೆಯುತ್ತವೆ.

ದರ ಬರೆದು ತರಿಸಿಕೊಳ್ಳಿರಿ.

K. V. & Sons, Car Street Bellary.

ಕೆ. ವೀರಭದ್ರಪ್ಪ, ಅಂಡ್ ಸನ್ಸ್, ತೇರು ಬೀದಿ ಬಳ್ಳಾರಿ.

THE GRADUATES' TRADING ASSOCIATION,

General merchants, Gramaphone Dealers & News Agents,

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್, ಗ್ರಾಮೊಫೋನ್ ಡೀಲರ್ಸ್, ಅಂಡ್ ನ್ಯೂಸ್ ಏಜಂಟ್ಸ್

ತೇರು ಬೀದಿ ಬಳ್ಳಾರಿ.

ದಿ ಎಂಪೈರ್ ಆಫ್ ಇಂಡಿಯಾ. ಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್

ಈ ಕಂಪನಿಯ ಸ ಪ್ರ ಲಕ್ಷಣಗಳು.

೧. ಅತಿ ಕಡಿಮೆ ಪ್ರೀಮಿಯಂಗಳ ಸರಳ ಸಂಸ್ಥೆ.

೨. ಪ್ರೀಮಿಯಂದಾರರ ಗಣಕ್ಕೆ ಕಂಪನಿ ಭದ್ರತೆಯೊಳ್ಳದ್ದು.

೩. ಕಂಪನಿಯ ಬಂಡವಾಳವೆಲ್ಲ ಇಂಡಿಯನ್ ಪ್ರಜೆಗಳ ಒಕ್ಕೂಟದ ಮಂಜೂರಾದ ಸಂಸ್ಥೆಗಳಲ್ಲಿ ಹಣ ಹಾಕಿರುವುದು.

೪. ಪ್ರೀಮಿಯಂ ಹಣ ಕಡಮೆ ಬೆಲೆಗೆ ಕಂಪನಿಗೆ ಕಡ್ಡಾಯ ಕಡಮೆ.

೫. ಪೊಲಿಸಿಗಳಲ್ಲಿ ತೊಡಕಾದ ಕರತಗಳಾವುದೂ ಇಲ್ಲದೆ ಸರಳವಾಗಿರುವುದು

೬. ಲೋಕ ದ ಪೊಲಿಸಿಗಳನ್ನು ಹೆಚ್ಚು ಕಡಿಮೆ ಇಲ್ಲದೆ ಖಾಯಿತಕೆ ತರುವುದು.

೭. ಕಂಪನಿಯ ಲಾಭದಲ್ಲಿ ಸೇಕಡಾ ೯೦% ಪೊಲಿಸಿದಾರರಿಗೆ ಹಂಚಲಿಕ್ಕಿರುವುದು

೮. ಪೊಲಿಸಿಯು ಬೆಂಕಿ ಕಂಡು ಬಂದಾಗ ಕಂಪನಿಯಿಂದ ಕೊಡೋಣಕಾಗುವ ಪ್ರತಿಫಲವು ಬಹಳ ಉದಾರತರವಾ ಗಿರುವುದು.

೯. ಪೊಲಿಸಿಯ ಪ್ರತಿಫಲವನ್ನು ಸದಯದ ಸಂದರ್ಭ ಬಂದಾಗ ಅಲ್ಪ ಚಲಿಸಲ್ಪಡದೆ ಕೂಡಲೆ ಸಂದಾಯ ಸಿಕ್ಕುವುದು.

ಏಜಂಟ್:— ಎಂ. ವೆಂಕೋಬ ರಾವ್. ಬಿ. ಎ.
ಸತ್ಯನಾರಾಯಣಪೇಟೆ
ಬಳ್ಳಾರಿ.

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE.
& Commercial Agency.
Bangalore Road, Bellary.

Agents & dealers in:-
Wood-stock. Corona and other typewriters of all makes, best ribbons carbons, and Swadeshi fountain pens etc.

HOW TO LEARN TOUCH TYPE-WRITING IN 20 days short hand a speciality.
(Seperate accommodation for lady students.)

Job works & repairs undertaken on moderate charges.

ಅರ್ಜಿಗಳನ್ನು ಕಳುಹಿಸಿದವರಿಗೆ ಉಚಿತ ಸೂಚನೆಗಾಗಿ.

Prospectus sent free on application.

ARYA VAIDYALAYA BELLARY

Pandit C.S. Shastry's Patent Medicines

MONEY RETURNED IF NOT CURED

1 FEVER KILLER.

Any fever completly cured in 4 days — 8 oz Bottle Rs 2—0—0

2 NAVAJEEVAN PAK.

King of Tonic foods (sweet) — 1 lb Rs 1—8—0

3 PRAMEHA BHANJINI

Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್. ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. ಗಣನಿಲ್ಲದಿದ್ದರೆ ಹಣ ಪರತ

" ಜ್ವರ ಸಂಹಾರಿ. "

ಸಾಮಾನ್ಯ ಎಲ್ಲಾ ಜ್ವರಗಳು ಸಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ. 2—0—0

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ ರೂ. 1—8—0

ಪ್ರಮೇಹ ಭಂಜಿನಿ

ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದ ತ್ತದೆ. — ರೂ. 6—0—0

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಸಪ್ತಧಾತು, ಪ್ರಮೇಹ, ಬಂಜೆತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹೆಚ್ಚಾದರೂ ಕಷ್ಟಸಾಧ್ಯವಾಗಿದ್ದ ಪಾದರೂ ಶ್ರದ್ಧೆ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ಪಾಸಿಸಾಡಿಲ್ಲ ಹುತ್ತದೆ. ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO AT SRI VIDYARANYA PRESS BELLARY.

REGISTERED NO. M 2736.

ಕರ್ನಾಟಕ ಕೇಸರಿ

ಸುಕೃತಿಯ ಕೃನ್ಮತ್ತರೆಯೋ ! ಸುದ್ಧಿತ್ವಸ್ವಂಗ ಸೇರಿತು !
ಒಸ್ಯೆಯ್ಯ ಭೂಶೇಷ ! ಮಸ್ಸ ಸೂರೆಂತ ಪಾಂಡಾ ॥ ಗಿತ. ೩. ೧೧ ತೋ-೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

ವಾರ್ಷಿಕ ಚಂದಾ		ಸಂಪಾದಕ	ಆರು ತಿಂಗಳಚಂದಾ.	
ಸ್ಥಳದವರಿಗೆ	೩—೮—೦	ಟೀಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.	ಸ್ಥಳದವರಿಗೆ	೧—೮—೦
ಪರಸ್ಥಳದವರಿಗೆ	೩ —೦— ೨	(ಮಿ ಸತ್ರಿಕೆ ೦ ೧ ೧)	ಪರಸ್ಥಳದವರಿಗೆ	....೧—೨೩—೦

ವರ್ಷ ೧ ಬಳ್ಳಾರಿ ನಗರ —ಡಿಸೆಂಬರ್ ೧೪ ನೇ ಸೋಮವಾರ ೧೯೨೧ ಸಂಚಿಕೆ ೯

ಯೂರೋಪ್ ಖಂಡದಲ್ಲಿ ಮಹಾತ್ಮಗಾಂಧಿ ಯವರು

ಕಾಂಗ್ರೆಸ್ ಕಾರ್ಯಕಾರಿ ಮಂಡಲವು ಈ ತಿಂಗಳು ೩೦-ಕ್ಕೆ ಅಹಮದಾಬಾದಿನಲ್ಲಿ ಕೂಡುವುದು.

ಮಹಾತ್ಮಗಾಂಧಿ ಯವರು ಪ್ಯಾರಿಸ್‌ದೇಶದ ರಾಜಧಾನಿಯಾದ ಪ್ಯಾರಿಸ್ ಪಟ್ಟಣವನ್ನು ೧೧ ನೇ ತಾರೀಖು ಸಾಯಂಕಾಲ 4 ಘಂಟೆಗೆ ತಲಪಿದರು. ಅಲ್ಲಿನ ಹಿಂದೀಯರೂ, ಪೋಲೀಸರೂ ಮಹಾತ್ಮರನ್ನು ಸ್ವಾಗತಿಸಿದರು ಲೆಕ್ಕಸಿಲ್ಲದಷ್ಟು ಜನ ಅವರ ಛಾಯಾಚಿತ್ರಗಳನ್ನು ತೆಗೆದರು ಅವರು ಸೇಂಟ್ ಲಾಝರೆ ಎಂಬ ಸ್ಥಳದಲ್ಲಿ ವಾಸವಾಗಿದ್ದರು. ಹೊಟೆಲಟರ್ಮಿನಸ್ ಎಂಬ ಸ್ಥಳದಲ್ಲಿ ಭಾರತೀಯರು ಮಾನಪತ್ರಗಳನ್ನು ಕೊಡುತ್ತಾ ಮಹಾತ್ಮರನ್ನು ಸ್ತೋತ್ರಮಾಡಿದರು ನಂತರ ಶಿನೆಮಾ ಕಂಪೆನಿಯವರು, ಅವರ ಚಲನಚಿತ್ರಗಳನ್ನು ತೆಗೆದರು. ಪ್ಯಾರಿಸಿನ ಸುಪ್ರಸಿದ್ಧ ಲೇಖಕರಾದ ರೊಮೆಂಸ್ ರೊಲಾಂಡರ ತಂಗಿಯಾದ, ಮಾಡಮೆ ಗಿಫೆ ಎಂಬವರ ಅತಿಥಿಗಳಾಗಿ ಮಹಾತ್ಮರು ಅದಿನವನ್ನು ಕಳೆದರು.

ಒಂದು ಮೇಜಿನಮೇಲೆ ಬುದ್ಧದೇವರಂತೆಕೂತು ಸುಮಾರು ಎರಡ ಸಾವಿರ ಯುವಕರ ಸಭೆಯಲ್ಲಿ, ತಮ್ಮ ತತ್ವಗಳ ಪ್ರತಿಪಾದನೆಯನ್ನು ಮಾಡಿದರು ಸತ್ಯ, ಅಹಿಂಸಾ, ತತ್ವಗಳನ್ನನುಸರಿಸಿರುವ ಹಿಂದೂಸ್ಥಾನದ ಸ್ವಾತಂತ್ರ್ಯ ಚಳವಳಿಯನ್ನು, ದೀರ್ಘವಾಗಿ ಪರಿಶೀಲನೆ ಮಾಡಲು, ಪ್ಯಾರಿಸ್ ದೇಶೀಯರಿಗೆ ಹೇಳಿದರು.

ಪ್ರಧಾನಮಂತ್ರಿಗಳ ಪ್ರಕಟನೆಯು ಅತ್ಯಪ್ತಿಕರವಾಗಿರುವುದೆಂತಲೂ, ಪರಸ್ಪರ ಚರ್ಚೆಯಿಂದ ಲಾಭವಾಗುವಂತಿಲ್ಲನೆಂದೂ, ಸಂಪೂರ್ಣ ಸ್ವಾತಂತ್ರ್ಯವು ಹಿಂದೂದೇಶಕ್ಕೆ ಯಾವಾಗ ಬರುವುದೆಂಬುದನ್ನು ದೇವರೊಬ್ಬನೇ ಬಲ್ಲನೆಂತಲೂ ಹೇಳಿದರು

ನಾಂಟ್ರಿಯೋ ಪಟ್ಟಣದಲ್ಲಿ, ರೊಮೆಂಸ್‌ರೋಲಂಡರ ಗೃಹವನ್ನು ಮಹಾತ್ಮಗಾಂಧಿಯವರ ಸ್ವಾಗತಕ್ಕೆ ತಯಾರಾಡಿಸಿದ್ದರು. ಮಹಾತ್ಮರು ಪ್ಯಾರಿಸ ಪಟ್ಟಣವನ್ನು ಪ್ರಾತಃಕಾಲ 8 ಘಂಟೆಗೆ ಬಿಟ್ಟರು. ನಾಂಟ್ರಿಯಾ ಪಟ್ಟಣಕ್ಕೆ ಮಿಸ್ ಸ್ಲೇಡರವರೊಂದಿಗೂ, ತಮ್ಮ ಕಾರ್ಯದರ್ಶಿಗಳೊಂದಿಗೂ ಬಂದರು ಪ್ರೆಸ್ ಜನರಿಗೆ ಉತ್ತರಕೊಡುತ್ತಾ, ಹಿಂದೀಯರು ಹಿಂಸಾತತ್ವವನ್ನೆಂದಿಗೂ, ಅವಲಂಬಿಸುವದಿಲ್ಲವೆಂದೂ, ಹಿಂಸೆಯನ್ನು, ನಿಲ್ಲಿಸಲು ತಮ್ಮ ಪ್ರಾಣವನ್ನಾದರೂ, ಅರ್ಪಿಸುವರೆಂದೂ, ಪಾದಿಸಿದರು. ಪ್ರಧಾನ ಮಂತ್ರಿಗಳ ಪ್ರಕಟನೆಯ ವಿಷಯದಲ್ಲಿ, ತನ್ನ ಅಂತಿಮ ಅಭಿಪ್ರಾಯವನ್ನು ಕಾಂಗ್ರೆಸ್‌ದ ಅಧಿವೇಶನಗಳನ್ನು ತಿಳಿದುಕೊಂಡು, ಹೇಳುವೆನೆಂದೂ, ಉತ್ತರಕೊಟ್ಟರು ಈ ಊರನ್ನು ಶುಕ್ರವಾರ ಬಿಡುವರು.

ಲಾಸನೆ ನಗರದಲ್ಲಿ ಭಾಷಣ

"ಯೂರೋಪಖಂಡವು, ಯಂತ್ರಯುಗವಾಗಿ ಪರಿಣಮಿಸಿ, ಇತರೆ ಅನೇಕ ದೇಶಗಳಂತೆ. ನೈತಿಕ ಸುತ್ತು ಆರ್ಥಿಕ ಅಧೋಗತಿಯನ್ನು ಹೊಂದುವದೆಂಬುದಿದೆ" ಎಂಬ ವಿಷಯವನ್ನು ವಿಸ್ತಾರವಾಗಿ ನಡೆಸುತ್ತಾ ತಮ್ಮ ಶಾಂತಿಧ್ಯೇಯಗಳನ್ನು 15 ನಿಮಿಷಗಳ ಭಾಷಣದಿಂದ 'ಪೀಪಲ್ಸ್‌ಹಾಲ್‌ನ' ತುಂಬಿದ ಸಭೆಯಲ್ಲಿ ವ್ಯಕ್ತಮಾಡಿದರು ಲಾಸನೆ ಪಟ್ಟಣದ ಈ ವ್ಯಾಖ್ಯಾನದಲ್ಲಿ, ಭಾರತೀಯರ ಚಳುವಳಿಯನ್ನು ಗ್ರಹಿಸಬೇಕೆಂತಲೂ, ಅದರಲ್ಲೇನಾದರೂ ಸತ್ಯ, ಅಹಿಂಸಾ ಧರ್ಮವಿದ್ದರೆ, ಇಡೀ ಈರೋಪ್ ಖಂಡದಲ್ಲಿಯೇ, ಐಕ್ಯಾಭಿಪ್ರಾಯವನ್ನು ಹುಟ್ಟಿಸ ಬೇಕೆಂತಲೂ ಹೇಳಿದರು ಬುಧವಾರ ಪಾರಶಾಲೆಗಳ ಮಕ್ಕಳನ್ನು ಭೇಟ್ಟಿಮಾಡಿ, ಗುರುವಾರದ ದಿವಸ ಜಿನೀವಾ ಪಟ್ಟಣದಲ್ಲಿ, ವ್ಯಾಖ್ಯಾನ ಮಾಡುವರು.

ಗುಂಡುಮೇಜಿನಿಂದ ಹುಟ್ಟುವ ಕಮಿಟಿಗಳು.

ದ್ವಿತೀಯ ಪರಿಷತ್ತಿನ ಪರಿಣಾಮ ಹೊಸವಾಗಿ ಹುಟ್ಟುವ ಕಮಿಟಿಗಳಿಗೆ ಸದಸ್ಯರೂ, ಅಧ್ಯಕ್ಷರೂ, ಯಾರಿರಬೇಕೆಂಬ ವಿಷಯದಲ್ಲಿ ಪ್ರಧಾನಮಂತ್ರಿಗಳು ವಿವಿಧ ಪಾರ್ಟಿಗಳವರೊಡನೆ ಸಂಧಾನ ನಡಿಸಿರುವರು ಲಾರ್ಡ್ ಬೆಟ್ಲೆಂಡ್, ಸರ್ ಲೆಸ್ಲಿವಿಲ್ಸನ್ ರವರು ಅಧ್ಯಕ್ಷರಾಗಿ ಆರಿಸಲ್ಪಡಬಹುದೆಂಬ ವದಂತಿ ಇದೆ. ಮಂತ್ರಿಗಣದ ಮ್ಯಾಕ್ಡೊನಾಲ್ಡರು, ಹಿಂದೂಸ್ಥಾನಕ್ಕೆ ಬರುವ ಸಂಗತಿಯು ನಿರಾಧಾರ ವಾಗಿದೆಯೆಂದು ತಿಳಿಯಬಹುದು ದೆ ಡಾಗಿ ಸಪ್ರು, ಒಬ್ಬರಿಗೆ ಪ್ರಧಾನಮಂತ್ರಿಗಳನ್ನು ಚೆಕರ್ಸದಲ್ಲಿ ಕೆಂಪು ಮಾಡಾಯಿದರು. ಬುಧವಾರ ಶಾಸ್ತ್ರಿಗಳು ಅವರನ್ನು ನೋಡುವವರಿದ್ದಾರೆ.

ಬ್ರಿಟಿಶ ಮಂತ್ರಿಮಂಡಲ ದವರ ಆಶಯ.

ಬಂಗಾಳದ ವಿಶೇಷ ಕಾನೂನು.

ಬಂಗಾಳ ದೇಶದಲ್ಲಿನ ವಿಶೇಷ ಕಾನೂನಿನಮೇಲೆ ದೇಶದಲ್ಲೆಲ್ಲಾ ಪ್ರಕೋಪದಿಂದ ನಿರುದ್ಧ ಚಳವಳಿ ಇರುವುದು, ಮಂತ್ರಿ ವರ್ಗದವರ ಮನಸ್ಸಿಗೆ ಪ್ರಾಪ್ತಿಸಿದೆ ಬಂಗಾಳ ಪ್ರಾಂತೀಕರುತ್ತು ಇಂಡಿಯಾ ಸ್ವಾರ್ಥದವರ ಒತ್ತಾಯದಿಂದ ಸಸ್ಟೆಲ್ಲಾ ನಡೆಯಿ. ತೆಂಬುದು ಪ್ರಶಸ್ತವಾಗಿ ಗೊತ್ತಾಗಹತ್ತಿದೆ

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲ.

ಸರ್ದಾರ್ ಪಟೇಲರು ಮಹಾತ್ಮರೊಡನೆ ತಂತೀ ಸಮಾಚಾರದಿಂದ ವರ್ತಮಾನಗಳನ್ನು ತಿಳಿದುಕೊಂಡು ಅಹಮದಾಬಾದಿನಲ್ಲಿಯೇ ಕಾರ್ಯಕಾರಿ ಮಂಡದ ಅಧಿವೇಶನಕ್ಕೆ ಏರ್ಪಾಟು ಮಾಡಿದ್ದಾರೆ. ಮಹಾತ್ಮಗಾಂಧಿಯವರು ೨೫ ನೇ ತಾರೀಖು ಬೊಂಬಾಯಿ ಪಟ್ಟಣವನ್ನು ತಲಪಿ ಅದೇ ರಾತ್ರಿಯೇ ಅಹಮದಾಬಾದಿಗೆ ತೆರಳುವರಿದ್ದಾರೆ. ಅಲ್ಲಿ ಮಹಾತ್ಮರನ್ನು ದಕ್ಷಿಣಾಫ್ರಿಕದಸತ್ಯಾಗ್ರಹ ಸಂಗ್ರಾಮದಿಂದಲೂ, ಎಡೆಬಿಡದಿರುವ ಪ್ರೀತಿ ಬೊತೆಗಾರರಾದ ಇಮಾಂಸಾಹೇಬರು, ಖಾಯಿಲೆಯಿಂದ ಬಹಳ ಅಶಾಯಸ್ಥಿತಿಯಲ್ಲಿದ್ದಾರೆ.

ಇಮಾಂಸಾಹೇಬರು, ದಕ್ಷಿಣ ಆಫ್ರಿಕದ ತಿನುಂತ ವರ್ತಕರಾಗಿದ್ದು, ಸತ್ಯಾಗ್ರಹದಲ್ಲಿ ಸರ್ವಸ್ವವನ್ನೂ ತ್ಯಾಗಮಾಡಿ ಮಹಾತ್ಮರೊಡನೆ ಸೇರಿ, ಅಗಿನಿಂದಲೂ ಆಶ್ರಮದಲ್ಲಿಯೇ ಇದ್ದಾರೆ. ಹೋದವರ್ಷ, ದಾರ್ಶನಾ ಉಪ್ಪಿನ ಸತ್ಯಾಗ್ರಹದಲ್ಲಿ ಅವರಿಗೆ 12 ತಿಂಗಳ ಶಿಕ್ಷೆಯಾಗಿದ್ದಿತು ಜೆಲಿನಿಂದ ಬಿಡುಗಡೆ ಯಾದಂದಿನಿಂದಲೂ, ಅವರ ಪ್ರಕೃತಿಯು ಕೆಟ್ಟಿದೆ

ಬಹಿಷ್ಕಾರ ಚಳವಳಿ

ಬಂಗಾಳ ಪ್ರಾಂತೀಕ ಪರಿಷತ್ತಿನವರು ಪ್ರಿಟಿಶರ ವ್ಯಾಪಾರ ಸಂಬಂಧವಿದೆಯೆಂದು ಕೆಲವರಿಗೆ ಬಹಿಷ್ಕಾರ ಸಲು ಮಾಡಿದ ಠರಾವನ್ನು ಕುರಿತು, ಮಹಾತ್ಮಾ ತಿಲಕರವರು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಮಾಡಿದರು. ಸರ್. ಹೋರರವರು ಉತ್ತರ ಹೇಳುತ್ತಾ ಹಿಂದೂಸ್ಥಾನದಲ್ಲಿ ಯಾವ ಹೊಸ ಪರಿಸ್ಥಿತಿ ಉಂಟಾದರೂ, ಸರ್ಕಾರದವರು, ತಕ್ಕ ಕ್ರಮಗಳನ್ನು ಜರುಗಿಸಲಿಕ್ಕೆ ಸಂಪೂರ್ಣ ಸಿದ್ಧರಿರುವರೆಂದು ಹೇಳಿದರು.

ಉತ್ತಮ ಜಮೀನು ಬಗ್ಗೆ

ಕಿರ್ಲೋಸ್ಕರ

ನೇಗಿಲನ್ನು ಉಪಯೋಗಿಸಿರಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನ ಮಾಡುತ್ತದೆ.

ನೇಗಿಲುಗಳ ಸಿಫಾರಸ್ ಪತ್ರವೆಂದರೆ, ಒಕ್ಕಲಿಗರ ಸಂತೋಷ ವೆಂಬುವದನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ನಮೂನೆಯ ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್

ಕಿರ್ಲೋಸ್ಕರವಾಡಿ

ಜಿ. ಸಾತಾರಾ

ರಜಿಸ್ಟರ್

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ,

ವನಸ್ಪತಿ ಯುಕ್ತ

ನರ್ವ್ಹಸ್ಟ್ರೆಂಥಿಂಗ್ ಪಿಲ್ಲ

ಅರ್ಥಾತ

ಬಲವಂತ ಗುಟಿಕಾ.

ಈ ಗುಳಿಗೆಗಳಿಂದ ರಕ್ತ ಶುದ್ಧಿ, ಧಾತು ಪುಷ್ಟಿಯಾಗುವದು, ಕಾಮೋತ್ತೇಜಕ ವಾಗಿ ನಪುಂಸಕತ್ವವು ನಾಶವಾಗುವದಲ್ಲದೆ ಖರೀ ರತಿಸುಖವನ್ನು ಅನುಭವಿಸಲಿಕ್ಕೆ ಬರುತ್ತದೆ. ಹಾಗೂ ಉಷ್ಣದ ರೋಗಗಳಿಲ್ಲ ಗುಣವಾಗುತ್ತವೆ ಮತ್ತು ಅನ್ನಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ ಶೌಚ ಸಾಫ ಆಗುವದು ಇದೆ. ಅಲ್ಲದೆ ವಾತ, ಪಿತ್ತ, ಕಫ, ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯೂ ಹೋಗುವವು ಪೂರ್ಣ ಗುಣಕ್ಕೆ ೬ ಡಬ್ಬಿ ತಕೊಳ್ಳಿರಿ ಒಂದು ಡಬ್ಬಿ ಕಿಮ್ಮತ್ತು ೧೦ ಆಣೆ ೩ ಡಬ್ಬಿ ಕಿಮ್ಮತ್ತು ೧—೧೨—೦ ಒಂದುಡಜನು ಕಿಮ್ಮತ್ತು ೬ ರೂ ಇದಲ್ಲದೆ ೨ ದು ಡಬ್ಬಿ ಕಮೀಶನ ಸಿಗುವದು ಪೆಟಾಲ ಪ್ಯಾಕಿಂಗ ಖರ್ಚು ಬೇರ ಬೀಳುವದು ಏಜಂಟರ ನಿಯಮನು ತರಿಸಿಕೊಳ್ಳಿರಿ ಬಾತಿ ರೋಗದ ಬಗ್ಗೆ ವಿಶೇಷ ಮಿಲಾಪ ಡಬ್ಬಿ ಸಂಗಡ ಇದ್ದ ಅನುಪಾನ ಪತ್ರದಲ್ಲಿ ಇರುತ್ತದೆ ಅಶಕ್ತತಿ ಮತ್ತು ಉಷ್ಣತೆಯ ರೋಗದ ಮೇಲೆ ಸ್ತ್ರೀಯರಿಗೆ ಮತ್ತು ಹುಡುಗರಿಗೆ ಸಹ ಈ ಗುಳಿಗೆಗಳ ಬಹಳ ಉಪಯೋಗ ಬರುತ್ತವೆ

ಎಸ್. ಬಿ. ಕದಮ್ ಮತ್ತು ಸನ್,

ಮು, ಪೋಸ್ಟ—ನಿಪ್ಪಾಣಿ [ಜಿ. ಬೆಳಗಾಂವ.]

ಸೋಲ ಏಜಂಟ - ಶ್ರೀ ಹನುಮಾನ ಏಜನ್ಸಿ ಕಾಂಟಿಯ ಮರಾಠಾ.

TO LET

ಸಂಯುಕ್ತಪ್ರಾಂತ್ಯದ ಕರನಿರಾಕರಣೆ.

ಲಕ್ನೋದಲ್ಲಿ ಈ ತಿಂಗಳು 6-ನೇ ತಾರೀಖು ದಿವಸ, ಸಂಯುಕ್ತ ಪ್ರಾಂತೀಯ ರೈತರ ಮನ್ಸ್ಥಿತಿಯ ಪರಿಶೀಲನೆಮಾಡಲು ಏರ್ಪಟ್ಟ ಅಗ್ರೇರಿಯನ್ ಸಬ್‌ಕಮಿಟೀ ಎಂಬುದು ಕೂಡಿತು. ಸದಸ್ಯರೆಲ್ಲಾ ಅಂದರೆ ಎಂಟುಜನರೂ ಹಾಜರಿದ್ದರು ಪಂಡಿತ ಜವಾಹರಲಾಲ್ ನೆಹರು, ಶಿಡ್ವಾನಿ, ಗೋವಿಂದ ಬಲ್ಲಭಪಂತ ಶ್ರೀಪ್ರಕಾಶ ಮೋಹನಲಾಲ ಸೇಕ್ಸೆನಾ, ರಾಫಿ ಅಹ್ಮದ್ ಕಿಡ್ವಾಯಿ, ನೆಂಕಟೇಶ ತಿವಾರಿ, ಮತ್ತು S. D. ಪಾಲ್ವಾಲ್ ಈ ಮಹನೀಯರೆಲ್ಲಾ ಸಭ್ಯಾನು ಮತದಿಂದ ನಿಷ್ಕರ್ಷಿಸಿ, ರಾಯಬರೆಲೀ, ಎಟಿವಾ, ಕಾನಪುರ, ಮತ್ತು ಉನಾವ ಜಿಲ್ಲೆಗಳಲ್ಲಿ ಕೂಡಲೇ ಕರನಿರಾಕರಣೆ ಚಳವಳಿಯನ್ನು ಪ್ರಾರಂಭಿಸಲು, ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೆ ಅನುಜ್ಞೆ ಕೊಟ್ಟರು. ಪಂಡಿತ ಜವಾಹರಲಾಲ್ ಯವರು ರಾಯಬರೇಲಿ ಪ್ರದೇಶದ ಸ್ಥಿತಿ, ಗತಿಗಳನ್ನು ಪರಿಶೀಲಿಸಲು, ಹೊರಟರು. ಶಿಡ್ವಾನಿ ಶ್ರೀ ಪ್ರಕಾಶ, ಮತ್ತು ಕಿಡ್ವಾಯಿ ಇವರು ಬಾರಾಬಂಕಿ ಎಂಬಸ್ಥಳಕ್ಕೆ ಹೋಗಿದ್ದಾರೆ.

ಯು. ಪಿ, ಕಾಂಗ್ರೆಸ್ ಅಧ್ಯಕ್ಷರ ಪ್ರಕಟನೆ.

ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಶಿಡ್ವಾನಿ ಯವರು ಹೀಗೆ ಹೇಳಿದ್ದಾರೆ.

(ಹಿಂದೂಸ್ಥಾನದಲ್ಲಿ ಧಾನ್ಯಾದಿಗಳ ಬೆಲೆಯು ಅಗಾಧವಾಗಿ ಇಳಿದು, ಅಗಲೇ ಕಾಗ್ಗಿ ಹೋಗಿದ್ದ ರೈತರಿಗೆ ಸಂಕಟಗಳನ್ನು ಹೆಚ್ಚುಮಾಡಿತು ಈ 35 ವರ್ಷಗಳೊಳಗಾಗಿ, ಕರವು ಹೆಚ್ಚಿದ್ದು, ವ್ಯವಸಾಯ ವಸ್ತುಗಳ ಬೆಲೆಗೆ ಸರಿಹೋಲುವುದು. ಕಳೆದವರ್ಷ ಶೇಕಡ 55 ರಷ್ಟು ಧಾನ್ಯಗಳ ಬೆಲೆಯು ತಗ್ಗಿಹೋಯಿತು ಕಾಂಗ್ರೆಸ್‌ನವರು ಕಾಯಿದೇಭಂಗದಲ್ಲಿ ತೊಡಗಿದ್ದರಿಂದ. ನರಳುತ್ತಿರುವ ರೈತರಿಗೆ ಏನೂ ಪರಿಹಾರಗಳನ್ನು ಮಾಡಲಿಲ್ಲ ರೈತನು ತನ್ನ ಸಂಕಟ ಕಥಗಳನ್ನು ಸರ್ಕಾರಕ್ಕೆ ಹೇಳಿಕೊಂಡರೂ, ಸರ್ಕಾರದವರು ಲಕ್ಷ್ಯ ಮಾಡಲಿಲ್ಲ, ಅವರೆ ಕಂದಾಯಗಳನ್ನು ವಸೂಲಿ ಮಾಡುವದ ಲ್ಲಿ ತನ್ನ ಸಾಮರ್ಥ್ಯ ಶಕ್ತಿಯನ್ನೆಲ್ಲಾ ವಿನಿಯೋಗಿಸಿದರು ಅನೇಕ ರೈತರು ದಬ್ಬಾಳಿಕೆಯನ್ನು ತಾಳಲಾರದೆ, ತಮ್ಮ ಕೈಯಲ್ಲಿರುವದನ್ನೆಲ್ಲಾ ಮಾರಿ ಕಂದಾಯ ಕೊಟ್ಟರು.

ಸರ್ಕಾರದವರು ಒಪ್ಪಂದಕ್ಕೆ ಕಳ್ಳು ಹಾಕಿದರು.

ಜಮೀನ್ದಾರರಲ್ಲೂ, ರೈತರಲ್ಲೂ ಒಪ್ಪಂದವನ್ನು ತರಲು ಕಾಂಗ್ರೆಸ್ ವಿಶ್ವಪ್ರಯತ್ನಗಳನ್ನು ಮಾಡಿತು ಅನೇಕ ಜಮೀನ್ದಾರರು ಒಪ್ಪಿಗೆ ಕೊಟ್ಟಿದ್ದರು ಇದು ಸರ್ಕಾರಕ್ಕೆ ಸಹನವಾಗಲಿಲ್ಲ. ಕಾಂಗ್ರೆಸ್ಸಿನವರಲ್ಲಿ ಜಮೀನ್ದಾರರು ಒಪ್ಪಂದವನ್ನು ಮಾಡಿಕೊಳ್ಳಬಾರದೆಂದು, ಸಂಧಾನಮಾಡಿ, ಜಮೀನ್ದಾರರನ್ನು ತನ್ಮಿಡೆಗೆಳೆದುಕೊಂಡರು. ಈ ಸಂದರ್ಭದಲ್ಲಿ ಡೆಲ್ಲಿಯಲ್ಲಿ ಗಾಂಧೀ ಇರ್ವಿನ್ ಒಪ್ಪಂದವಾಗಿ, ಚಳವಳಿಯು ನಿಂತಿತು.

ಗವರ್ನರ ಕೊಡನೆ ಪ್ರಮುಖರ ಸಂಭಾಷಣೆ

ಡೆಲ್ಲಿ ಒಪ್ಪಂದವಾದೊಡನೆಯೇ, ಪ್ರಾಂತೀಕ ಸರಕಾರದವರೊಂದಿಗೆ ಕಾಂಗ್ರೆಸದವರು, ಬೇಕಾದಷ್ಟು ಸತ್ಯ ವ್ಯವಹಾರವನ್ನು ನಡೆಸಿದರು ಪಂಡಿತ ಗೋವಿಂದವಲ್ಲಭ ಪಂತರವರ, ಸರಕಾರದವರೊಂದಿಗೆ ವ್ಯವಹರಿಸಿ, ರೈತರ ಪರವಾಗಿ ವಾದಿಸಲು ಕಾಂಗ್ರೆಸದವರಿಂದ ನಿಯಮಿಸಲ್ಪಟ್ಟರು

ಕಾಂಗ್ರೆಸ್ಸಿನವರ ವ್ಯವಹಾರವೆಲ್ಲವೂ ರೈತರ ಮನ್ಸ್ಥಿತಿಯನ್ನೇ ಅವಲಂಬಿಸಿತ್ತು. ಚೀಫ್ ಸೆಕ್ರಟರಿಯವರೊಂದಿಗೂ, ಇತರ ಅಧಿಕಾರಿಗಳೊಂದಿಗೂ, ಪಂಡಿತ ಜವಾಹರಲಾಲರು, ಪಂಡಿತ ಗೋವಿಂದ ವಲ್ಲಭ ಪಂತರೂ, ಎಷ್ಟೋಮಾತು, ಕಥೆಗಳನ್ನು ನಡೆಸಿದರು. ಪಂಡಿತ ಜವಾಹರ ಲಾಲರು ಎಡೆ ಸಂದರ್ಭಗಳಲ್ಲಿ, ಗವರ್ನರ ಕೊಡನೆ ಮಾತನಾಡಲೇಕ್ಷಿಸಿದರೂ, ಅದು ಏರ್ಪಾಟಾಗಲಿಲ್ಲ.

ಮಹಾತ್ಮಗಾಂಧಿಯವರ ಯತ್ನಗಳು

ಮಹಾತ್ಮ ಗಾಂಧಿಯವರೂ ಕೂಡ ಶ್ರದ್ಧೆವಹಿಸಿ ಗವರ್ನರ ಕೊಡನೆ ಮಾತಾಡಿದ್ದಲ್ಲದೆ, ಇಂಡಿಯಾ ಸರ್ಕಾರದ ಕಾರ್ಯದರ್ಶಿಗಳಾದ ಎಮರ್ಸನ್ ರವರೊಡನೆ ಈ ವಿಷಯದಲ್ಲಿ ಪತ್ರ ವ್ಯವಹಾರ, ನಡೆಸಿದರು. ಅವರು ಕೊನೆಯ ವರಿಗೂ, ಪ್ರಯತ್ನಗಳನ್ನು ನಡೆಸಿ, ಲಂಡನ್ನಿಗೆ ಹೋಗಬೇಕಾದ್ದರಿಂದ, ನಾವು ಈ ಕಾರ್ಯವನ್ನು ವಹಿಸಿ, ನಮ್ಮ ಸರ್ವಶಕ್ತಿಗಳನ್ನು ವಿನಿಯೋಗಿಸಿದರೂ, ಸರ್ಕಾರದವರ ಮನಸ್ಸು ಕರಗಲಿಲ್ಲ. ರೈತರಿಗೆ ಏನಾದರೂ, ಕಿಂಚಿತ ಸೌಖ್ಯವಾದರೂ, ಲಭಿಸಿದಲ್ಲಿ, ನಾವು ಈಗಲಾದರೂ ಕಂದಾಯ ಕೊಡಬೇಕೆಂಬ ಬುದ್ಧಿವಾದವನ್ನು ಕೊಡುತ್ತೇವೆ ಎಲ್ಲವೂ ಸರ್ಕಾರದವರನ್ನವಲಂಬಿಸಿದೆ.)

ಸ್ವದೇಶೀವಸ್ತು ಪ್ರದರ್ಶನಗಳು.

ಹುಬ್ಬಳ್ಳಿ ಯಲ್ಲಿಯೂ, ಮದ್ರಾಸಿನಲ್ಲಿಯೂ, ಸ್ವದೇಶೀ ಪ್ರದರ್ಶನಗಳು ಕೂಡುತ್ತವೆ ಹುಬ್ಬಳ್ಳಿಯ ಪ್ರದರ್ಶನವು ಈ ತಿಂಗಳ 17 ನೇ ತಾರೀಖಿನ ದಿವಸ ಪಂಡಿತ ಜವಾಹರಲಾಲರಿಂದ ತೆರೆಯಲ್ಪಡುವುದು. ಈ ಸಮಾರಂಭಕ್ಕೆ ಲಕ್ಷಗಟ್ಟಲೆ ಜನರು ಸೇರಬಹುದಾಗಿದೆ

ಸ್ವದೇಶೀ ವಸ್ತುಗಳ ಉಪಯೋಗವು ಸ್ವಾವಲಂಬನೆಯ ತತ್ವವನ್ನನುಸರಿಸಿ, ದೇಶದ ಬಡತನವನ್ನು ನೀಗುವ ಮುಖ್ಯದ ಸಾಧನೆಗಳಲ್ಲೊಂದಾಗಿದೆ. ನಾವು ಕೋಟಿಗಟ್ಟಲೆ ರೂಪಾಯಿಗಳ ವಸ್ತುಗಳನ್ನು ಪರದೇಶಗಳಿಂದ ತರಿಸುತ್ತೇವೆ. ಪ್ರತಿವರ್ಷವೂ, ಹಿಂದೂಸ್ಥಾನದಿಂದ 150 ಕೋಟಿ ರೂಪಾಯಿ ಮೌಲ್ಯ, ಪರದೇಶಕ್ಕೆ ಹೊಗುವುದೆಂದರೆ, ನಾವು ಎಂಥಾ ನೀಚಪರಾಧೀನಸ್ಥಿತಿಯಲ್ಲಿದೇವೆಂಬುದು ಸ್ಪಷ್ಟವಾಗಿ ಹೊಳೆಯುತ್ತದೆ. ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡ, ಪೂರ್ವದ ಉದ್ಯೋಗಗಳನ್ನು ಮರೆತು, ರಾಜಕೀಯ ತಂತ್ರದ ಬಲವಾದ ಶೃಂಖಲೆಯಿಂದ, ತಪ್ಪಿಸಿಕೊಳ್ಳಲಾಗದೆ, ನಮಗೆ ಈ ದೆಶೆಯು ಪ್ರಾಪ್ತವಾಯಿತು.

ಮಹಾತ್ಮಗಾಂಧಿಯವರು ರಾಜಕೀಯ ರಣಾಂಗಣಕ್ಕಿಳಿದು, ಹಿಂದೂಸ್ಥಾನದ ಜೀವನದಲ್ಲಿ ಸ್ವದೇಶಿಯ ಕಳೆಯನ್ನು ತುಂಬಿ, ದೇಶದಾರಿದ್ರ್ಯವನ್ನು ನಿವಾರಿಸಲು, ಮಹೋಪಕಾರವನ್ನು ಮಾಡಿದರು. ಕಳೆದ ಒಂದು ವರ್ಷದಲ್ಲಿಯೂ, ದೇಶದಎಲ್ಲಾ ಭಾಗಗಳಲ್ಲಿಯೂ ಜಾಗ್ರತಿಯುಂಟಾಗಿ, ಸ್ವದೇಶಿಯ ತತ್ವವು ಶೀಘ್ರದಲ್ಲಿ ಪ್ರಚಾರವಾದ್ದನ್ನೇ ಅಲ್ಲದೆ. ಶೀಕಡ ಬಹು ಭಾಗದವಸ್ತುಗಳು, ನಮ್ಮ ದೇಶದಲ್ಲಿಯೇ ಸಲಭ ಬೆಲೆಯಲ್ಲಿ ತಯಾರಾಗುತ್ತವೆ. ಜಪಾನೀಸರು ಕಳೆದ ಐವತ್ತು ವರ್ಷಗಳೊಳಗಾಗಿ, ಪ್ರಪಂಚದ ಮುಖ್ಯ ಮಾರ್ಕೆಟ್ಟುಗಳಲ್ಲೆಲ್ಲಾ ಪೋಟಿಗೆ ನಿಂತಿತು.

ಮಹಾಜನರು ಸ್ವದೇಶೀ ವಸ್ತು ಪ್ರದರ್ಶನಗಳಿಗೆ ಹೋಗಿ, ನಮ್ಮ ದೇಶದಲ್ಲಿ ತಯಾರಾಗುವ ವಸ್ತುಗಳನ್ನು ಅವಲೋಕಿಸಿ, ಅವುಗಳನ್ನೇ ಉಪಯೋಗಿಸಬೇಕೆಂಬ ಬದ್ಧ ಕಂಕಣವನ್ನು ತೊಟ್ಟು, ತಮ್ಮ ಸ್ವಾವಲಂಬನೆಯ ಗೌರವವನ್ನು ಕಾಪಾಡುವರಾಗಿ ನಂಬಿದ್ದೇವೆ

ಹೋದವರ್ಷ ಶಿಕ್ಷೆಹೊಂದಿದ ಸತ್ಯಾಗ್ರಹಿಗಳು.

ಪಂಡಿತ ಜವಾಹಿರಲಾಲರ ಪ್ರಕಟನೆ

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಕಾರ್ಯದರ್ಶಿಗಳು [ಪಂ| ಜವಾಹಿರಲಾಲರು] ವಿವಿಧ ಪ್ರಾಂತಗಳ ಕಾಂಗ್ರೆಸ್ ಕಮಿಟಿಗಳಿಂದ ಶಿಕ್ಷೆ ಹೊಂದಿದ ಸತ್ಯಾಗ್ರಹಿಗಳ ವಿಷಯವಾಗಿ. ವಿಶಿದವಾದ ವರದಿಗಳನ್ನು ತರಿಸಿಕೊಂಡು, ಒಂದು ಪಟ್ಟಿಯನ್ನು ತಯಾರಮಾಡಿದ್ದಾರೆ. ವಾಯುವ್ಯ ಪ್ರಾಂತ್ಯಗಳ ವರದಿಯು ಬಂದಿಲ್ಲದಿದ್ದರೂ, ಅಸಂಬಿಯ ಸಾಲ್ಕುಸಾವಿರಕ್ಕೆ ಕಡಮೆ ಇರಲಿಕ್ಕಿಲ್ಲವೆಂದು ಊಹಿಸಿದ್ದಾರೆ, ಪಟ್ಟಿಯ ಸಂಖ್ಯೆಯು 90 ಸಾವಿರಕ್ಕೆ ಮೇಲಿದ್ದರೂ, ಇವು ಕಡಮೆ ಅಂದಾಜುಗಳಾದ್ದರಿಂದ, ನಿಜವಾಗಿ ಶಿಕ್ಷೆ ಹೊಂದಿದವರ ಸಂಖ್ಯೆಯು ಲಕ್ಷಕ್ಕೆ ಮೇಲ್ಪಟ್ಟಿರಬಹುದೆಂದು ಪಂಡಿತರ ಅಭಿಪ್ರಾಯವಿದೆ.

ಶಿಕ್ಷೆ ಹೊಂದಿದವರು

1	ಅಜ್ಮೀರ	160,
2	ಆಂಧ್ರ	2878,
3	ಅಸ್ಸಾಂ	1459,
4	ಬೀಹಾರ	14,251,
5	ಬಂಗಾಳ	15,000,
6	ಬೀರಾರ	1750,
7	ಬೊಂಬಾಯಿ ಪಟ್ಟಣ	4700,
8	ಶ ಪಿ ಹಿಂದೂಸ್ಥಾನಿ	2225,
9	ಶ. ಪಿ ಮರಾಠಿ	997,
10	ಡೆಲ್ಲಿ	4,500
11	ಗುಜರಾತ	3,519
12	ಕರ್ನಾಟಕ.	1,900
13	ಕೇರಳ	450
14	ಮಹಾರಾಷ್ಟ್ರ	4000
15	ಪಂಜಾಬ್	12000
16	ಸಿಂಧ	774
17	ತಮಿಳು ಪ್ರಾಂತ	2391
18	ಸಂಯುಕ್ತ ಪ್ರಾಂತ	12,561
19	ಉತ್ಕಲ	1000
20	ಮಯುವ್ಯ ಪ್ರಾಂತ	4000
		91,131

ಹ. ಜವಾಹಿರಲಾಲರ

ಕರ್ನಾಟಕ ಪ್ರವಾಸ

ಪಂಡಿತರು ಬೊಂಬಾಯಿ ಪಟ್ಟಣವನ್ನು 16-ನೇ ತಾ| ಸಾಯಂಕಾಲ ಬಿಟ್ಟು ಪುಣೆಯ ಮಾರ್ಗವಾಗಿ ಬೆಳಗಾಂವ್ಯನ್ನು 17 ನೇ ತಾ| ಪ್ರಾತಃಕಾಲ 10 ಘಂಟೆಗೆ ತಲುಪುವರು. ಅಲ್ಲಿ ಮೂರು ಘಂಟೆಗಳ ಕಾಲವಿದ್ದು ಮೋಟಾರದ ಮೇಲೆ ಹುಬ್ಬಳ್ಳಿಯನ್ನು ಮಧ್ಯಾನ್ಹ 3—30 ಘಂಟೆಗೆ ಸೇರುವರು. 17 ನೇ ತಾ. ಹ ಬ್ಬಳ್ಳಿಯಲ್ಲಿ ಮೆರವಣಿಗೆಯೂ, ಸಾರ್ವಜನಿಕ ಸಭೆಯೂ ನಡೆಯುವುದು, 18 ನೇ ತಾ ಪ್ರಾತಃಕಾಲ 8 ಘಂಟೆಗೆ ಹುಬ್ಬಳ್ಳಿಯನ್ನು ಬಿಟ್ಟು, ಧಾರ್ವಾಡಕ್ಕೆ ಹೋಗಿ ಅಲ್ಲಿಯ ಕೆಲಸಗಳನ್ನು ಮುಗಿಸಿಕೊಂಡು ಪುನಃ 11 ಘಂಟೆಗೆ ಮರಸು ಬರುವರು. ಅದಿನವೆಲ್ಲಾ ಹುಬ್ಬಳ್ಳಿಯಲ್ಲಿ ಕಾಲ ಕಳೆಯುವರು. 19 ನೇ ಪ್ರಾತಃಕಾಲ 7—30 ಗೆ ಹ ಬ್ಬಳ್ಳಿಯಿಂದ ಮೋಟಾರದಲ್ಲಿ ಕೊರಟು ಗದಗಿನ 11 ಘಂಟೆಯ ವರಿಗೂ ಇರುವರು. ನಂತರ ಬಾಗಲಕೋಟೆಯನ್ನು ಮಧ್ಯಾನ್ಹ ತಲಪಿ ಆ ದಿವಸ ಅಲ್ಲಿಯೇ ಇರುವರು 20 ನೇ ತಾ| ದಿನ ಬೀಜಾಪುರವನ್ನು ಪ್ರಾತಃಕಾಲ ತಲಪಿ ಮಧ್ಯಾನ್ಹದ ವರೆಗೂ ಅಲ್ಲಿಯೇ ಇದ್ದು ಹುಟಗಿಯ ಮಾರ್ಗವಾಗಿ ಬೊಂಬಾಯನ್ನು ಸೇರುವರು.

ಸ್ವೀಕಾರ ವಿಮರ್ಶೆ

ಯಜಮಾನ ಅಂಡೆರ್ಸನ್. ಬೆಂಗಳೂರ ಶಿಟಿ ಯವರ, 1932 ನೇ ವರ್ಷದ ಮ ದ್ರಾಸ ಕ್ಯಾಲೆಂಡರ್ ತಲಪಿದೆ. ಇವರು ದೇಶಭಕ್ತರ ಚಿತ್ರಗಳನ್ನು ಅಂದವಾಗಿ ಪ್ರಕಟಿಸಿರುವರು, ಅಲ್ಲದೆ ಪಡಿಯಚ್ಚುಗಳನ್ನು ತಯಾರಿಸುವರು. ಇವರ ಕಂಪನಿಯು ಶ್ರೇಯೋಭಿವೃದ್ಧಿಯನ್ನು ಹೊಂದಲಿ

ಸೂಚನೆ – ಚಂದಾದಾರರ ಅಭಿಪ್ರಾಯಗಳಿಗೆ ನಾವು ಒಪ್ಪಾದಾರಲ್ಲನೆಂಬಂತನ್ನು ಎಲ್ಲರೂ, ತಿಳಿಯಬೇಕು. **ಸಂಪಾದಕ ಕ. ಕೇ.**

ಚಂದಾದಾರರಿಗೆ ವಿನಂತಿ

ನಾವು ಎರಡು ತಿಂಗಳಿಂದಲೂ, ತಮಗೆ ಪತ್ರಿಕೆಗಳನ್ನು ಕಳುಹಿಸುತ್ತಾ ಬಂದಿರುತ್ತೇವೆ. ಚಂದಾ ಹಣವನ್ನು ತಾವು ಕಳುಹಿಸಿಲ್ಲ. ವಿ. ಪಿ. ಮೂಲಕ ಕಳುಹಿಸುವುದು, ನಿಮಗೆದುಬಾರಿಯಾಗಿಹೋಹ್ನು, ಖರ್ಚುಗಳನ್ನು ವಜ್ರಾ ನೀವು ಕೊಡಬೇಕಾಗುತ್ತದೆ. ತಾವುದಯವಿಟ್ಟು, ಮನಿಆರ್ಡರದಮೇಲೆ ವಾರ್ಷಿಕ ಚಂದಾಹಣ 3—0—0 ಕಳುಹಿಸಿರಿ. ಇಲ್ಲವಾದರೆ 10 ನೇ ಸಂಚಿಕೆಯನ್ನು ವಿ. ಪಿ. ಮೂಲ್ಯ ಕಳುಹಿಸುತ್ತೇನೆ. ವಾಪಸುಮಾಡಿ ನಮಗೆ ಸಹಾಯವನ್ನು ಮಾಡದೆ. ವಿ. ಪಿ. ಯನ್ನು ಸ್ವೀಕರಿಸಿ, ಬಳ್ಳಾರಿ ಜಿಲ್ಲೆಯ ಒಂದೇ ಒಂದಾಗಿ ಈ ಪತ್ರವನ್ನು ಅನುಗ್ರಹಿಸುವರೆಂದು ನಂಬಿರುತ್ತೇನೆ.

ವ್ಯವಸ್ಥಾಪಕ.—ಕರ್ನಾಟಕ ಕೇಸರಿ.



ಬಂಗಾಳದಲ್ಲಿ ರಾಕ್ಷಸ ಅವತಾರ.

ಬಂಗಾಳದಲ್ಲಿ ರಕ್ತ ಕ್ರಾಂತಿಯನ್ನು ನಿರ್ಮೂಲ ಮಾಡಬೇಕೆಂದು ಹಿಂದೂಸ್ಥಾನ ಪ್ರಭುತ್ವದ ಪರವಾಗಿ ಶ್ರೀಯುತ ಒಂದು ಅಸಾಧಾರಣವಾದ ಕಾನೂನನ್ನು ಮಾಡಿ, ಸಾಕ್ಷಿ ಬಿಟ್ಟಗಾಂಗ ಪ್ರಜೆಯಲ್ಲಿ ಅದನ್ನು ಅಮಲಿಗೆ ತಂದಿರುವರು ಇದರಲ್ಲಿರುವ ನಿರ್ಬಂಧ ಅಧಿಕಾರಗಳಿಂದ, ಬಂಗಾಳ ಪ್ರಭುತ್ವದವರು ತನ್ನ ಮನಬಂದಂತೆ ವರ್ತಿಸಲು ಅವಕಾಶವಿದೆ ಹೆಚ್ಚ ಮಾಡಲು ಯತ್ನಿಸುವ ವ್ಯಕ್ತಿಯನ್ನು ಸಾರಿ ಬಗ್ಗಿ ಗುರಿಮಾಡಬಹುದು ತಾಗೆ ಅನುಮಾನ ಕಂಡಬಂದಾಗಲ್ಲಿನ್ನೂ ವಿಚಾರಣೆಯಿಲ್ಲದೆ, ಬಂಧಿಸಬಹುದು ಅನೇಕ ತತ್ವಜ್ಞರು ಇದು ಮಾರ್ಷಲ್ ಲಾ ಎಂಬುದಕ್ಕೆ ಹೋಲುವುದೆಂದು ಹೇಳುತ್ತಾರೆ. ಇದರಿಂದಾಗಿ ಬಂಗಾಳದಲ್ಲೆಲ್ಲಾ ಕಳವಳವುಂಟಾಗಿ ಭಯಂಕರ ಪರಿಸ್ಥಿತಿಯುಂಟಾಗಿದೆ. ಬಂಗಾಳದಲ್ಲಿ ರಾಕ್ಷಸ ಅವತಾರವಾಗಿದೆಯೆಂದರೆ ಅತಿಶಯೋಕ್ತಿ ಆಗುವುದಿಲ್ಲ

ರಾಜಕೀಯ ರಂಗದಲ್ಲಿ ಹಿಂಸಾ ಸಾಧನಗಳಿಂದ ಸ್ವರಾಜ್ಯವನ್ನು ಸಂಪಾದಿಸುವೆವೆಂದು ಹೇಳಿಕೊಳ್ಳುವ ಕ್ರಾಂತಿಕಾರಿ ಪಕ್ಷದವರಿದ್ದಾರೆ. ಭಗವದ್ಗೀತೆಗೆ ಅಪಾರ್ಥವನ್ನು ಮಾಡಿ ಗೀತೆಯು, ಹಿಂಸೆಯನ್ನೂ, ಯುದ್ಧದ ಅಗತ್ಯವನ್ನೂ ಬೋಧಿಸುವುದೆಂದು ಇವರು ನಂಬುವರು. ಇದಕ್ಕೆ ಪಾಶ್ಚಾತ್ಯ ದೇಶಗಳಲ್ಲಿ ನಡೆದ ಕ್ರಾಂತಿಗಳ ಇತಿಹಾಸವನ್ನು ಪರಿಶೀಲಿಸಿದೆ ಪದ್ಧತಿಗಳನ್ನೇ ಇಲ್ಲಿ ಕೂಡ ಪ್ರಯೋಗ ಮಾಡಲು ಕೆಲವು ಯುವಕರು ಯತ್ನಿಸಿ, ಇಂಥಾ ಶಾಂತವಾತಾವರಣವನ್ನು ಕೆಡಿಸಿರುವುದೇ ಸತ್ಕಾರದವರ ದುರ್ಬಾಧಿಕೆಗೆ ಕಾರಣವಾಗಿದೆ ಕ್ರಾಂತಿಕಾರರು, ಬಾಂಬು, ಪಿಸ್ತೂಲುಗಳಲ್ಲಿ ವಿಶ್ವಾಸವಿಟ್ಟು, ಪ್ರಭುತ್ವದ ಉದ್ಯೋಗಿಗಳನ್ನು ಹತ್ಯಮಾಡಿ ಭಯೋತ್ಪಾದನೆಯ ಮೂಲಕ ಸ್ವರಾಜ್ಯವನ್ನು ತರುತ್ತೇವೆಂದು ಯತ್ನಿಸುತ್ತಿರುವರು.

ಮೂರ್ಖರು, ಅವಿವೇಕಿಗಳೂ, ಅವರ ಕೆಲವರ ದುಷ್ಕೃತ್ಯಗಳನ್ನು ಸಹಿಸಲು ಇಡೀ ದೇಶದಲ್ಲಿ, ಭಯಂಕರ ಕಾನೂನನ್ನು ಮಾಡಿ, ಕೆಲವು ಸಂದರ್ಭದಲ್ಲಿ ನಿರ್ದೋಷಿಗಳನ್ನೂ ದಂಡಿಸಿಗೆ ಗುರಿಮಾಡುವದಕ್ಕೆ ಅವಕಾಶ ಮಾಡಿದ್ದು ನಮಗೆ ಅವಿವೇಕವೆಂತ ಭಾವವಾಗುತ್ತದೆ ಸ್ವರಾಜ್ಯಪ್ರೇಮವೆಂಬುದೇ ಅಲ್ಲದೆಯಾಗಿ ಕಾಂತಿಕಾರರ ತಮ್ಮ ಸೂರ್ಯ ಪದ್ಧತಿಗಳನ್ನು ಉಪಯೋಗಿಸುವರು ಬ್ರಿಟಿಶ ಮಂತ್ರಿ ವರ್ಗದವರು, ಹಿಂದೂಸ್ಥಾನದಲ್ಲಿ ಸ್ವರಾಜ್ಯಸಂಸ್ಥಾಪನೆ ಮಾಡಲು ಶ್ರಮಿಸಿ ಪ್ರಯತ್ನಗಳನ್ನು ಮಾಡಿದರೆ ಕ್ರಾಂತಿಕಾರಿ, ಪಕ್ಷದ ಅವಶ್ಯವಾಗಿ ವುದರಲ್ಲಿ ಸಂದೇಹವೇ ಯಿಲ್ಲ

ಹಿಂಸಾ ತತ್ವವನ್ನು ಕಾಂಗ್ರೆಸದವರು ಪ್ರತಿಭಟಿಸುವರು ಗೀತೆಯಲ್ಲಿ ಹಿಂಸಾ ತತ್ವದ ಬೋಧೆ ಇಲ್ಲ ಅನಾಸಕ್ತಿಯಿಂದ ಕರ್ತವ್ಯಕರ್ಮ ಪ್ರೇರಿತನಾಗಿ, ರಾಗದ್ವೇಷಾದಿಗಳನ್ನು ಬಿಟ್ಟು ನಿಶ್ಚಪ್ರೇಮಿಯಾಗಿ, ತನ್ನ ಸಕಲ ಕರ್ಮಗಳನ್ನೂ ಭಗವದರ್ಪಣಮಾಡುವುದನ್ನು ಗೀತೆಯು ಬೋಧಿಸುವುದು ಹಿಂಸಾ ಹಿಂಸೆಗಳ ವಿಚಾರಿಯು ಅದರಲ್ಲಿ ಬಂದಿಲ್ಲ. ಮಾನವನ ನೈತಿಕಸ್ಥಿತಿಯನ್ನು ಮಾನವಗೊಳಿಸುವ ಪವಿತ್ರ ಗ್ರಂಥವಿದು

ಪಾಶ್ಚಾತ್ಯ ದೇಶಗಳವರು ತಮ್ಮ ವಾತಾವರಣಕ್ಕನುಸರಿಸಿ, ಸಂಸ್ಕೃತಿಗಳಿಗನುಸಾರವಾಗಿ ಹಿಂಸೆಯನ್ನು ಪ್ರಯೋಗಿಸಿರುವರು ಸಾಧ್ಯವಾದರೂ, ನಾವು ಅದನ್ನು ಅನುಕರಿಸಬಾರದು. ಮಹಾತ್ಮ ಗಾಂಧಿಯವರು ನಮಗೆ ಬೋಧಿಸಿಕೊಟ್ಟ ಅಹಿಂಸಾ ಮಾರ್ಗವೇ ನಾವು ಸ್ವಾತಂತ್ರ್ಯವನ್ನು ಸಂಪಾದಿಸಿ ಯತ್ನಿಸಬೇಕು.

ಮಹಾತ್ಮರ ಯೂರೋಪಿನ ಪ್ರವಾಸ.

(ಜೆನೀವಾ—ಡಿಸೆಂಬರ್ 10)

ಅಂತರ್ರಾಷ್ಟ್ರೀಯ ಸ್ಥಿರ ಸಂಘದ, ಶಾಂತಿ ಮತ್ತು ಸ್ವಾತಂತ್ರ್ಯ ಲೀಗೆಯ ನೇತೃತ್ವದಲ್ಲಿ, ಮಹಾತ್ಮ ಗಾಂಧಿಯವರು ವಿಕ್ಟೋರಿಯಾ ಹಾಲ್ ಎಂಬ ಭವನದಲ್ಲಿ ಅನೇಕ ಜನಗಳನ್ನು ಸುಮಾರು 2000 ಜನರ ಸಭೆಯಲ್ಲಿ ಅಹಿಂಸಾ ತತ್ವದ ಮೇಲೆ ಭಾಷಣ ಮಾಡಿದರು, ಅವರು ಯಥಾ ಪ್ರಕಾರ ಮೌನಿಸಿಮೇಲೆ ಕೂತರು

ಈ ಸಂದರ್ಭದಲ್ಲಿ ಹಿಂದೂಸ್ಥಾನದ ಅನುಯಾಯಿಗಳು ಉದಾಹರಣೆಯಾಗಿಟ್ಟು ಲಂಡನ್ ದವರು ವರ್ತಿಸಬೇಕೆಂದು ಸಿಡ್ನಿ ಲಾಂಡ್ ದೊರವರು ಅಂಗಿಕರಿಸಿದರು ಇತರ ಸೇರಿಗಳವರಿಗೆ ಅಂಗಿಕರಿಸಿದ ವಿಷಯದಲ್ಲಿ ಕಾರ್ಯಾರಂಭಿಯಿಂತ ಮೇಲೆ

ಪೋಲೀಸಿನವರು ವಿಶೇಷ ಎಚ್ಚರಿಕೆತೆಗೆದುಕೊಂಡಿದ್ದರು, ಬೀದಿಗಳೆಗೂ ಸುತ್ತುಮುತ್ತಲೂ ಹೆಗ್ಗಣಗಳಂತೆ ಬಂದಿಸಿದ್ದರು ಎಲ್ಲಿಯೂ ಶಾಂತರೀತಿಯಲ್ಲಿ ಕೊನೆಗಂಡಿತು

ಜಿಲ್ಲಿನೆವೆ—ಡಿಸೆಂಬರ್ 11.

ಜೆಲನ್ ಕಾಲೇಜಿನ ವಿದ್ಯಾರ್ಥಿಗಳು ಮಹಾತ್ಮ ಗಾಂಧಿಯವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಗಾಡ್‌ಸೇವಾದಿಕಿಂಗ್ ಎಂಬ ಪಾಡನ್ನು ಹಾಡುತ್ತಾ ಅವರನ್ನು ಸ್ವಾಗತಿಸಿದರು ಅವರ ತತ್ವ ಪ್ರತಿಪಾದನೆಯನ್ನು ಶ್ರದ್ಧೆಯಿಂದ ಕೇಳಿದರು ಲೀಪಿಸಿ ಎಂಬ ಹಳ್ಳಿಗೆ ಮಹಾತ್ಮ ಗಾಂಧಿಯವರು ಬುಧವಾರದಿವಸ ಹೋಗಿ ತಮ್ಮ ಶಿಷ್ಯಳಾದ ಮೀರಾಬಾಯಿಯ ಸ್ನೇಹಿತಳೊಬ್ಬಳು ನೋಲುವುದನ್ನು ಅತ್ಯಂತ ಆಸಕ್ತಿಯಿಂದ ಕಂಡರು ಜಾಪೆ ಹೇಳಿಯ ವುದನ್ನೂ, ಮತ್ತಿತರ ಕೆಲಸಗಳನ್ನೂ ನೋಡಿ, ಕಾವೂ ಸ್ವಲ್ಪಹೊತ್ತು ನೂತರು

ಮಹಾತ್ಮರು ಮಧ್ಯಾಹ್ನ ರೋಮ್ ಪಟ್ಟಣವನ್ನು ಕುರಿತು ಹೊರಟರು. ಮಿಲಾನ್ ಪಟ್ಟಣಕ್ಕೆ ಗಾಡಿಯು ಬಂದಾಗ ಅಲ್ಲಿಯ ಸ್ಟೇಷನ್‌ಮಾಸ್ಟರ್ ರವರು, ಮಹಾತ್ಮರಿಗೆ ಸೊಪಲನೇ ತರಗತಿಯ ಗಾಡಿಯಲ್ಲಿ ಕೂಡಲು ಒತ್ತಾಯಮಾಡಿ ತಾವೇ ಅದರ ಖರ್ಚು ವಹಿಸಿದರು

ಬಳ್ಳಾರಿಯುಕರ್ನಾಟಕವಲ್ಲಿರುವ ಲಕ್ಷಣವು ಇದೇನೋ?

(ಬಳ್ಳಾರಿಯವ)

ಬಳ್ಳಾರಿ ಜಿಲ್ಲೆಯ ಕರ್ನಾಟಕಕ್ಕೆ ಸೇರಿದ್ದೆಂದು ವಿಶೇಷೀಕರಣ ಜಳವಳಯಾಗಿದ್ದು, ಕರ್ನಾಟಕ ವಿಭಾಗವನ್ನು ಶ್ರೀ ಕೇಳ್ಕರ್ ರವರು ಮಾಡಿರುವುದು, ವಿದ್ಯಾಂಸರಾದ ಕನ್ನಡಿಗರನೇಕರಿಗೆ ಸಂತಸ ವಿಷಯವಾಗಿದೆ. ಈ ಚಳವಳಿಗೆ ಸಹಾಯ ಮಾಡಿದ, ಮಹನೀಯರನೇಕರನ್ನು ನಾವು ಎಂದಿಗೂ ಮರೆಯವಂತಿಲ್ಲ.

ಬಳ್ಳಾರಿ ಜಿಲ್ಲೆಯು ವಿದ್ಯಾ ವಿಷಯ ದೇಶ್ರಾಜಕೀಯ ಅಭಿವೃದ್ಧಿಯ ದೃಷ್ಟಿ, ಇಂದಿಲೂ ಬಹಳ ಹಿಂದೆ ಇದೆ ಹಿಂಗಿದ್ದರೂ ಇಲ್ಲಿಯ ಕನ್ನಡಿಗರು, ವಿಶ್ವ ಕರ್ನಾಟಕದ ಅಭಿಮಾನವನ್ನಿಟ್ಟುಕೊಂಡು ಧಾರ್ವಾಡ, ಬೆಳಗಾಂ ಪ್ರಾಂತಗಳ ಸಾರ್ವಜನಿಕ ಕಾರ್ಯಗಳಿಗೆ ಸಹಾಯ ಮಾಡಿರುವರು ಕಾಂಗ್ರೆಸ್ ಸಭೆಯು ಕರ್ನಾಟಕ ಪ್ರಾಂತವಲ್ಲಿ ಕೂಡುವುದೆಂಬ ವಿಶೇಷ ವಾತ್ಸಲ್ಯದಿಂದ ಬಳ್ಳಾರಿ ಜಿಲ್ಲೆಯವರು ಬೆಳಗಾಂ ಕಾಂಗ್ರೆಸ್ಸಿಗೆ ಹತ್ತು ಸಾವಿರ ರೂಪಾಯಿಗಳ ಧನ ಸಹಾಯ ಮಾಡಿದರು. ಬಳ್ಳಾರಿ ಜಿಲ್ಲೆಯವರು ಧಾರ್ವಾಡ ಮುಖಂಡರ ಮುಖಾಂತರ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಭಿಮಾನಿಗಳನ್ನು ಅಕ್ಷರಶಃ ಪಾಲಿಸುತ್ತ ಬಂದಿರುತ್ತಾರೆ

ಕರ್ನಾಟಕ ಮುಖಂಡರ ಮೇಲೆ ಬಳ್ಳಾರಿಯವರಿಗಿರುವ ಗೌರವ ಶ್ರದ್ಧೆಗಳಿಂದ ಧಾರ್ವಾಡ್ದೆಂಬುದು ಭಾಷವಾಗುವಂತಿದೆ ಏಕೆಂದರೆ, ಮಹಾತ್ಮ ಗಾಂಧಿಯವರು ಕರ್ನಾಟಕ ಪ್ರಾಂತದ ಪ್ರವಾಸಕ್ಕೊಸ್ಕರ ಬಂದಾಗ ಬಳ್ಳಾರಿಯಂಥಾ ದೊಡ್ಡ ಪಟ್ಟಣವನ್ನು ಕಾರ್ಯಕ್ರಮದಲ್ಲಿ ಬಿಟ್ಟು ಬಿಟ್ಟರೆ ಅವರ ಹಿಂದೂಸ್ಥಾನ ಮುಖಂಡರಾಗಲೀ ಕರ್ನಾಟಕ ಪ್ರಾಂತದ ಮುಖಂಡರಾಗಲೀ ಧಾರ್ವಾಡ, ಬೆಳಗಾಂ, ಬಿಜಾಪುರ, ಬೆಳ್ಳಿಗಲ್ಲಿ ಸಂಚರಿಸುವಾಗಲೀ, ಬಳ್ಳಾರಿ ಜಿಲ್ಲೆಗಡೆ ಬಂದಿರುವುದೂ ಬಂದಿಲ್ಲ ಶ್ರೀ ಬಸವಲಿಂಗಪ್ಪ ಬಜಾಜರು ಹೇಳಿರುವರು ಇವರು ಗದಗಿನ ಹತ್ತಿರ ಬರೆಗೂ ಬಂದ ಬಂದಂತೆ ಬರುವಂತೆ ವ್ಯವಸ್ಥಾಪಕ ಮಾಡಿದರು ಮಾಡಲಿಲ್ಲ

ಇಲ್ಲಿಯ ಮುಖಂಡರ ಬೇಡಿಕೆಗಳು ಒಂದು ಮೂಲೆಗೆ ಒತ್ತಲ್ಪಟ್ಟವು

ಪಂಡಿತ ಜವಹರಲಾಲನೆಹರೂ ಯವರು ಕರ್ನಾಟಕ ಮುಖಂಡರ ಮೇಲೆ ! ರಿಸಿ ಇರುವರು ಮಹಾಸ್ಥಾಪಕ ಮುಖಂಡರು ಬೆಳಗಾಂ, ಧಾರ್ವಾಡ, ಹುಬ್ಬಳ್ಳಿ, ಗದಗ, ಬಾಗಲ್ಕೋಟೆ, ಬಿಜಾಪುರ ಸ್ಥಳಗಳಲ್ಲಿ ಪಂಡಿತರ ನಿಮಂತ್ರಣಕ್ಕೆ ಏರ್ಪಡಿಸಿ, ಬಳ್ಳಾರಿಯನ್ನು ಈ ಸಲವೂ ಬಿಟ್ಟಿರುವರು. ಇದರಿಂದ ಬಳ್ಳಾರಿಜಿಲ್ಲೆಯವರಿಗೆ ಕರ್ನಾಟಕ ಮುಖಂಡರ ಮೇಲೂ, ಈ ಕಾರ್ಯಕ್ರಮದ ವ್ಯವಸ್ಥಾಪಕರ ಮೇಲೂ, ಉದ್ವೇಗವುಂಟಾಗಿ ಮನ ಬಂದಂತೆ ಆಡಿಕೊಳ್ಳಲು ಕಾರಣವಾಗಿದೆ. ಪಂಡಿತರುಅಪಿಲ ಹಿಂದೂಸ್ಥಾನದ ಯುವಕ ಹೃದಯವನ್ನು ಗೆದ್ದು, ತಮ್ಮ ಅದ್ಭುತಸ್ವಾರ್ಥತ್ಯಾಗದಿಂದ ಪೂಜನೀಯ ವ್ಯಕ್ತಿಯಾಗಿದ್ದು ಇವರು ನಮ್ಮ ಹತ್ತಿರ ಬಂದು, ನಾವು ಇವರ ಗೌರವವನ್ನು ನಮ್ಮ ಜನ್ಮಭೂಮಿಯಲ್ಲಿ ಮಾಡಲಿಕ್ಕಾಗಲಿಲ್ಲವೆಂದರೆ ಯಾರಿಗೆ ತಾನೆ ಅವಿತ ದಃಖವಾಗಲಿಕ್ಕಿಲ್ಲ.

ಕರ್ನಾಟಕ ಮುಖಂಡರಿಗೆ ಬಳ್ಳಾರಿಯು ಕರ್ನಾಟಕದಲ್ಲಿ ಸೇರಬಾರದೆಂಬ ಮಹತ್ವಕಾಂಕ್ಷೆ ಇದ್ದಂತೆ ನಮಗೆ ತೋರುತ್ತದೆ ಇದು ನಿಜವಾಗಿರುವ ಪಕ್ಷದಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ತೆಲುಗರಿನ ಅನೇಕ ಪ್ರಮುಖರು ಈ ವಿಷಯದಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತ ಪಡಿಸುವ ಸಲುವಾಗಿ ತಮ್ಮ ಹುಟ್ಟೂರಿನ ಪ್ರಯಾಣವನ್ನು ಸಿಲ್ಲಿಸಿರುವರು. ಇಂಥಾ ಒಂದೆರಡು ಘಟನೆಗಳಿಗೆ ಇನ್ನೂ ಮುಂದೆ ಕರ್ನಾಟಕ ಮುಖಂಡರು ಅವಕಾಶ ಕೊಡುವುದಾದರೆ, ಬಳ್ಳಾರಿ ಜಿಲ್ಲೆಯು ಕೈ ಬಿಟ್ಟು ಹೋಗುವುದೆಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿಡಬೇಕ

ಬಳ್ಳಾರಿ ಜಿಲ್ಲೆ.

ಬಳ್ಳಾರಿ.

ನಾರ್ಥಲಾ ಕಾಲೇಜ್ ಪ್ರಿನ್ಸಿಪಾಲರಾಗಿ, ದಕ್ಷಿಣ ಹಿಂದೂಸ್ಥಾನದಲ್ಲಿ ಸುಪ್ರಸಿದ್ಧ ತತ್ವಜ್ಞರೆನ್ನಿಸಿದ ಶ್ರೀ. ಜೆ. ಪಿ. ಕೋಪಿಲಿಂಗಂಯವರ 71 ನೇ ವರ್ಷದ ವರ್ಧಂತಿಯ 9-12-31 ರ ದಿವಸ, ಪುರಸಭಾಧ್ಯಕ್ಷರಾದ ಮಾ| ಬಳಂಬೀರಾಯರ ನೇತೃತ್ವದಲ್ಲಿ ನಡೆಯಿತು.

ಧಾರ್ವಾಡದಿಂದ ಸ್ವದೇಶೀ ಚಳವಳಿಗಾಗಿ ಬಂದಿದ್ದ, ಶ್ರೀ ಗೋವರ್ಧನ ರಾಯರ "ಸ್ವಧರ್ಮ ಮತ್ತು ಸ್ವದೇಶೀ" ಗಳ ವಿಷಯದಲ್ಲಿ, 11-12-31 ರ ದಿವಸ ಭಾವೋತ್ಪಾದಕವಾದ ಭಾಷಣವನ್ನು ಕೊಟ್ಟರು

ಅಡಿಷನಲ್ ಮ್ಯಾಜಿಸ್ಟ್ರೇಟ್ ಪಿ ರಾಮಗೊಪಾಲ ನಾ. ಪಿ ಎಸ್. ರವರ ಅಧ್ಯಕ್ಷತೆಯಲ್ಲಿ, ಮುನಿಸಿಪಲ್ ಹೈಸ್ಕೂಲಿನ ಹುಡುಗರು, ತಮ್ಮ ಹೊಸ ಮೈದಾನದಲ್ಲಿ ಆಟಪಾಟಗಳಿಗೆ ಏರ್ಪಡಿಸಿದ್ದರು. ಅವರ ಪತ್ರಿಯ ರುಗೆದ್ದ ಬಾಲಕರಿಗೆ, ಬಹುಮಾನಗಳನ್ನು ಹಂಚಿದರು

ಬಳ್ಳಾರಿ ವರ್ತಕರ ಸಂಘದ ಚೆನ್ನಾಣೆಯಾಗಿ ಶ್ರೀ ನಗರೂರು ನಾರಾಯಣ ರಾಯರು ಅಧ್ಯಕ್ಷರಾಗಿಯೂ, ಶ್ರೀ. ವಿ. ನಾರಾಯಣ ಶೆಟ್ಟರು ಕಾರ್ಯದರ್ಶಿಗಳಾಗಿಯೂ, ಚುನಾಯಿಸಲ್ಪಟ್ಟರು.

ಸಿರುಗುಪ್ಪ

ಮ್ಯಾಸ್ ಮೇಲ್ ಸುದ್ದಿಗಾರರು ತಮ್ಮ ಪತ್ರಿಕೆಗೆ, ಸಿರುಗುಪ್ಪಾ ತಾಲ್ಲೂ ತೆಗೆದುಮಾಕ ಬಹುದೆಂದು ವರ್ತಮಾನವನ್ನು ಕಳುಹಿಸಿದ್ದರು ಇದರಿಂದ ಸಿರುಗುಪ್ಪಾ ತಾಲ್ಲೂಕಿನ ಜನರಲ್ಲಿ ಪೂರಾ ಕಳವಳ ಪುಟುಗಿತ್ತು ಈವರ್ತಮಾನಕ್ಕೆ ಆಧಾರವಿಲ್ಲದೆ, ತಿದಿ ಕೊಂಡಿದ್ದಾರೆ ನನಗೆ ತಿಳಿದು ಬಂದಿದ್ದರಲ್ಲಿ, ಈ ವರ್ತಮಾನವು ಸುಳ್ಳೆಂದು ನಂಬಿಕೆ ಯಾಗಿದೆ

ಹೊಸಪೇಟೆ

(ನಮ್ಮ ಸುದ್ದಿಗಾರರಿಂದ)

ಧಾರ್ವಾಡ ವನಿತಾ ಸೇವಾಸಮಾಜದ ಶ್ರೀಮತಿ ಭಾಗೀರಥೀಬಾಯಿ ಯವರು ಅಖಿಲಕರ್ನಾಟಕ ಸ್ವದೇಶೀ ಸಭೆಯ ಕೆಲಸಗಾರರಾದ ಶ್ರೀ ಗೋವರ್ಧನರಾಯರೂ, ಇಲ್ಲಿ 12 31 ರ ದಿವಸ, ಸ್ತ್ರೀಯರ ವಿದ್ಯಾಭ್ಯಾಸ, ಕರ್ತವ್ಯಗಳು, ಸ್ವದೇಶಿಯ ಮಹತ್ವ, ಸ್ವಧರ್ಮದ ಬಗ್ಗೆ ಉಪನ್ಯಾಸಿಸಿದರು ಶ್ರೀ ಪಿ. ಕಷ್ಣರಾಯರು ಆಗ್ರಾಸನವನ್ನು ವಹಿಸಿ ಸಮಯೋಚಿತ ಬುದ್ಧಿವಾದಗಳನ್ನು ಹೇಳಿದರು.

ಕೊಟ್ಟೂರು.

(ನಮ್ಮ ಸುದ್ದಿಗಾರರಿಂದ)

ಹರಿಕಥಾ ಕಾಲೇಜಿನ ಶ್ರೀಯುತರಿಯವರಿಗೂ, ಕಾಂಗ್ರೆಸವರಿಗೂ, ಈ ಊರಿನ ಸ್ವದೇಶಿ ವಿಷಯದಲ್ಲಿ ತಪ್ಪು ತಿಳುವಳಿಕೆ ಯುಂಟಾಗಿ, ಈ ಭಾಗದ ಕೆಲಪತ್ರಿಕೆಗಳಲ್ಲಿ ಪತ್ರಸ್ಯವಹಾರ ಕಾರಣದಿಂದ ಸರಿಯಷ್ಟೆ ಈಗ ಹರಿಕಥೆಯನ್ನು ಮಾಡಿ ಕಾಂಗ್ರೆಸವರನ್ನು ಸಂತೃಪ್ತಿ ಗೊಳಿಸಿಹೋಗಬೇಕೆಂದು ಒರು ನಿಶ್ಚಯಿಸಿರುವರೆಂದೆ ಈ ಊರಿನ ಇಬ್ಬರು ಸ್ವಯಂಸೇವಕರು ಮಾಬ್ಬಳ್ಳಿಗೆ ಶಿಕ್ಷಣವನ್ನು ಪಡೆಯಲು ಹೋಗುತ್ತಾರೆ.

ಹೊಸಹಳ್ಳಿ

ಶ್ರೀ ಕೆ. ಸುಬ್ಬಯ್ಯನವರು ತಮ್ಮ ಊರಲ್ಲಿಯೂ ವಿಚಾರಿಸಿ, 25-9-31 ರಿಂದ ಈ ತಹಲ್ಲವರಿಗೂ, ಕಾಲರಾದಿಂದ ಸತ್ತಿರುವವರ ಹೆಸರು ಜಾತಿ, ಗಳ ಪಟ್ಟಿಯನ್ನು ಕಳುಹಿಸಿ, ಅಧಿಕಾರಿಗಳು ಯಾವಾಗಲೋ ಒಂದು ಸಲಬಂದು ವಿಚಾರಿಸುವುದರಿಂದ, ಅವರಿಗೆ ನಿಜವಾದ ಸಂಗತಿಗಳು ತಿಳಿದುಬರುವುದಿಲ್ಲೆಂದೂ, ತಾವು ಊರಲ್ಲಿದ್ದು ಪರಿಸ್ಥಿತಿ ಸುಧಾರಿಸುವ ಪ್ರಯತ್ನಗಳಿಗಾಗಿ, ತಮಗೆ ಸತ್ಯವಾದ ಸಂಗತಿಗಳು ತಿಳಿಯಬೇಕೆಂದೂ, ಇದನ್ನೆಲ್ಲಾ ನಿಜ ತಿಳಿಸಬೇಕಾತಲೂ ಬರೆದಿದ್ದಾರೆ ಅವರ ಪಟ್ಟಿಯ ಪ್ರಕಾರ ಸತ್ತವರು 39 ಜನರಾಗುತ್ತಾರೆ. ಈ ಬಗ್ಗೆನುಂಟು ಅಧಿಕಾರಿಗಳೊಡನೆ ಪತ್ರವ್ಯವಹಾರ ಮಾಡುವೆವು

ಸಂಪಾದಕ.—ಕರ್ನಾಟಕ ಕೇಸರಿ

ಕಾನಾಮಡುಗು

ಈ ಊರಿನಲ್ಲಿ ಕೆಲವು ದಿನಗಳ ಕೆಳಗೆ ನಡೆದ ವಿದ್ಯಾಪರಿಷತ್ತಿನಲ್ಲಿ ದೀರ್ಘವಾದ ಲೇಖನವು ಬಂದಿದೆ ಸ್ಥಳಸಂಕೋಚದಿಂದ ಪ್ರಕಟಿಸ ಲಾಗಲಿಲ್ಲ. ಎಲ್ಲಾ ವಿದ್ಯಾರ್ಥಿಗಳಾಗಿ ಅಲ್ಲಿಗೆ ಜಿಲ್ಲೆಯ ವಿದ್ಯಾಧಿಕಾರಿಗಳು

ಕಾರಣಾಂತರದಿಂದ ಹೋಗಲಿಲ್ಲವೆಂದೂ. ಇದರಿಂದ ಸೇರಿದ ಜನಗಳಿಗೆ ಬಹಳ ನಿರುತ್ಸಾಹ ವಾಯಿತೆಂತಲೂ ತಿಳಿಯಬಂದಿದೆ. ಈ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ ಗೋಪಾಲಸ್ವಾಮಿ ಮೊದಲಿಯಾರ್ ಮತ್ತು ಶ್ರೀ ರಂಗನಾಥಂ ಯವರು ಹೋಗಿದ್ದರು, ಯಶಸ್ವಿಯಾಗಿ ನಡೆಯಿತು.

ವರ್ತಮಾನಗಳು

ಪರದೇಶ

ಆರ್ಥಿಕ ವಿಷಯದ ಮೇಲೆ ಭಿನ್ನಾಭಿಪ್ರಾಯಗಳು ಬಂದು ಬರ್ಮಾ ಸರ್ಕಾರವು ರಾಜೀನಾಮೆ ಯನ್ನು ಕೊಟ್ಟಿತು

ಕಾರ್ಲಿಸ್ಬಾದ ರಾಜಧಾನಿಯಾದ ಟಿಪೆಲಾನ್ ಪಟ್ಟಣದಲ್ಲಿ, ಪಾರ್ಲಿಮೆಂಟ್ ಕಟ್ಟಡಗಳಿಗೆ ಬೆಂಕಿಬಿದ್ದು ಬಹಳ ನಷ್ಟಕ್ಕೆ ಕಾರಣವಾದ್ದನ್ನುಂಟುಮಾಡಿದೆ. ಎಷ್ಟು ಕಷ್ಟ ಪಟ್ಟರೂ ಬೆಂಕಿಯನ್ನಾರಿಸುವುದು ಸಾಧ್ಯಕ್ಕೆ ಬಂದಿಲ್ಲ

ಬಂಗಾಳ ಪ್ರಾಂತೀಕ ಸಭೆಯವರು, ಬ್ರಿಟಿಷರ ಸ್ತ್ರೀಗಳ ಬಹಿಷ್ಕಾರದ ಠರಾವನ್ನಂಗೀಕರಿಸಿ, ಜಯಿಗಳನ್ನು ತೆಗೆದುಕೊಂಡರೆ, ಗಾಂಧೀ ಇರ್ವಿನ್ ಒಪ್ಪಂದ ಭಂಗವಾಗುವುದು ಅಗತ್ಯವು ತಕ್ಕ ಕ್ರಮಗಳನ್ನು ಜಾರಿಯಲ್ಲಿ ತರುತ್ತೇನೆಂಬುದಾಗಿ ಪಾರ್ಲಿಮೆಂಟ್ ಸಭೆಯಲ್ಲಿ ಸರ್ ಜಾಮಯಲ್ ಹೋರ ರವರು ಹೇಳಿದರು

ಒಂಕಾಶ್ಮೀರದ ವ್ಯಾಪಾರೀಕರು ತಾವು ಕಳೆದುಕೊಂಡ ವ್ಯಾಪಾರದ ಪುನರುದ್ಧಾರಕ್ಕಾಗಿ ಪೂರಾ ಪ್ರಯತ್ನಿಸುತ್ತಿರುವರು

ಕೈದರಾಬಾದಿನ ಯುವರಾಜರು ಫ್ರಾನ್ಸ್ ದೇಶದ ನೀಸ ಪಟ್ಟಣದಲ್ಲಿರುವರು ಅವರು ತಮ್ಮ ಪತ್ನಿ ಸಮೇತವಾಗಿ ಇಷ್ಟರಲ್ಲೇ ಬರಬಹುದ.

ಹಿಂದೂಸ್ಥಾನ

ಬರ್ಮಾ ದೇಶದಲ್ಲಿ ದಂಗೆಗಳೂ, ಡಕಾಯ್ತಿಗಳೂ ಇನ್ನೂ ನಿಂತೆಂತಲ್ಲ ಪ್ರೋಂ ಜಿಲ್ಲೆಯಲ್ಲಾ ಅಪಾಕರವಾದ ಪರಿಸ್ಥಿತಿಯಲ್ಲಿರುವುದೆಂದು, ಸ್ಯಾಟ್ಸ್‌ಮೆಂಟ್ ಪ್ರಕಟಿಸಿದೆ.

ಕಲ್ಕತ್ತಾಪಟ್ಟಣದಲ್ಲಿ ಲೆಕ್ಕವಿಲ್ಲದಷ್ಟು ಮನೆಯ ಝಪ್ತಿಗಳೂ, ಕೈಸೆರೆಯೂ ನಡೆಯುತ್ತಿರುವುದು 11 ನೇ ತಾರೀಖಿನದಿನ, 6 ಜನ ಯುವಕ ಬಂಗಾಳಿಗಳನ್ನು (ಕಾಲೇಜ ವಿದ್ಯಾರ್ಥಿಗಳು) ಸೆರೆ ಹಿಡಿದಿರುವರು

ಲಾಹೋರಿನಲ್ಲಿ ನಂದಲಾಲ್ ಎಂಬ ಯುವಕನು ಪರದೇಶೀ ಬಟ್ಟೆಯ ವ್ಯಾಪಾರಿಯನ್ನು ಸಿಸ್ತಿಲಿನಿಂದ ಹಾಯಿಸಿದಬಗ್ಗೆ ಆಪಾದನೆಯಾಗಿ 8 ವರ್ಷ ಶಿಕ್ಷೆಯಾಗಿ ಈಗ ಹೈಕೋರ್ಟಿನವರು ಒಂದುವರ್ಷಮಾತ್ರ ಕಡಮೆ ಮಾಡಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿ ಕರನಿರಾಕರಣೆಯ ಚಳವಳಿಯು ಒಳ್ಳೇ ಜೋರಿನಿಂದ ನಡೆದಿದೆ. ಕರನಿರಾಕರಣೆಗೆ ಪರವಾನಗಿಯನ್ನು ಕೊಡಬೇಕೆಂದು, ಇನ್ನೂ ಇತರೇ ಜಿಲ್ಲೆಯವರೂ ಕೇಳುತ್ತಿರುವರು ಸರ್ಕಾರವವರೂ ತಕ್ಕ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಕಾಂಗ್ರೆಸ್ ಮುಖಂಡರವರೆಲ್ಲರ 144 ನೇ ಪ್ರಯೋಗ ಮಾಡಿದ್ದಾರೆ.

ಬೊಂಬಾಯಿ ಪಟ್ಟಣದಲ್ಲಿ ಹೋದವರ್ಷ ಬಾಬುಗಣ ಎಂಬ ಯುವಕನು, ಪರದೇಶೀ ಬಟ್ಟೆಯ ಮೋಟಾರ ಲಾರಿಗೆ ಅಡ್ಡಬಿದ್ದು ಭೀಷಣ ಚಳವಳಿಯ ಕಾಲದಲ್ಲಿ ನಿರ್ಯಾಣವನ್ನು ಹೊಂದಿದನು. ಆಯುವಕನ ಪುಣ್ಯದಿನವನ್ನು ಬೊಂಬಾಯಿ ಕಾಂಗ್ರೆಸದವರು ಶ್ರೀ ಸರೋಜಿನಿ ಅಧ್ಯಕ್ಷತೆಯಲ್ಲಿ ಸೆರಬೇರಿಸಿದರು.

ಕಲ್ಕತ್ತಾ ಪಟ್ಟಣದಲ್ಲಿ ಸರ್ಕಾರದವರನ್ನು ಸಹಕರಿಸುವ "ರಾಯಲಿಸ್ಟ್ ಪಾರ್ಟಿ" ಎಂಬದೊಂದು ಸ್ಥಾಪಿತವಾಗಿ, ಅದರ ಅಧ್ಯಕ್ಷರು ಡಿಸೆಂಬರ್ 10 ನೇ ತಾರೀಖಿನದಿನ ಸಭೆಯಲ್ಲಿ ಕಾಂಗ್ರೆಸ್ಸಿನವರನ್ನು ಸದೆಬಡಿಯಬೇಕ ಎಂತ ಹೇಳಿದರು.

ಸರ್ಕಾರ ಇದ್ದಕಿದ್ದಹಾಗೆ ದಾಸ್ಯಾಗಾರದ್ದಾರಕ್ಕೆ 110 ಜನ ಸಿಖ್ ಸ್ವಯಂಸೇವಕರೊಂದಿಗೆ ಹೊರಟಿರುವರು, ಕಲಿಗೆ 144 ನೇ ಕಲಂದ ಪ್ರಯೋಗ ವಾಯಿತು ಅವರು ಅದನ್ನು ಧಿಕ್ಕರಿಸಲು, ಎಲ್ಲರೂ ಕೈಸೆರೆ ಯಾದರು.

ಶ್ರೇಷ್ಠವಾದ ಟಿಗೆಗಳು ೧ ಲಕ್ಷ ರೂ. ಬಹುಮಾನ.

ಬಹಳ ಶ್ರಮತವಾಗಿಯೂ, ಸುಲಭವಾಗಿಯೂ, ಸಾಣ್ಯವಾಗಿಯೂ ನೂಲನ್ನು ತೆಗೆಯಲುಸಾಧಿಸುವಂತಹ ಸರ್ವೋತ್ಕೃಷ್ಟವಾದ ರಾಟೆಯನ್ನು ತಯಾರಿಸಿದವರಿಗೆ 1 ಲಕ್ಷರೂ ಗಳು ಬಹುಮಾನಿಸಲ್ಪಡುವುವಾಗಿ ಅಖಿಲಭಾರತ ತಂತ ಕಾರಕ ಸಂಘದವರು ಪ್ರಕಟಿಸಿದ್ದರು ಈ ಪ್ರಕಟನೆಯ ಮೇರೆಗೆ ತಯಾರಿಸಲ್ಪಟ್ಟು, ಕಳುಹಿಸಲ್ಪಟ್ಟಿರುವ ರಾಟೆಗಳು ಪ್ರಕಟನೆಯಲ್ಲಿ ಕಂಡ ನಿಯಮಗಳಿಗನುಸಾರವಾಗಿಲ್ಲದಿರುವುದರಿಂದ, ಹೊಸದಾಗಿ ತಯಾರಿಸಿ ಕಳುಹಿಸಲು ಇನ್ನೂ 6 ತಿಂಗಳ ಅವಧಿಯು ಸಂಘದವರಿಂದ ಕೊಡಲ್ಪಟ್ಟಿರುತ್ತದೆ ಈ ಅವಧಿಯೊಳಗೆ ಬರತಕ್ಕ ರಾಟೆಗಳಲ್ಲಿ ಉತ್ಕೃಷ್ಟವೂ ನಿಯಮಬದ್ಧವೂ ಆಗಿರುವುದಕ್ಕೆ ಬಹುಮಾನ ಕೊಡಲ್ಪಡುವುದು.

ಕರ್ನಾಟಕ

ಪಂಡಿತ ಜವಾಹಿರಲಾಲರು ಗದಗಿಗೆ ಬಂದಾಗ ಗದಗ ಬೆಟಗೇರಿ ಮುನಿಸಿಪಾಲಿಟಿಯವರು ಅವರಿಗೆ ಮಾನ ಪತ್ರಗಳನ್ನು ಕೊಟ್ಟರು

ಶಿವಮೊಗ್ಗಾ ಜಿಲ್ಲೆಯ ಶಿರಾಳಕೊಪ್ಪ ರೈತರ ಸಂಕಟಗಳನ್ನು ನಿವಾರಿಸಲು, ಸರ್ಕಾರವವರು ಈ ವರೆಗೂ ಏನೂ ಸಹಾಯಗಳನ್ನು ಮಾಡಿಲ್ಲ. ಸುಮ್ಮನೆ ಒಂದು ಪ್ರಕಟನೆಯನ್ನು ಮಾತ್ರ ಹೊರಡಿಸಿರುವರು

ತಮಕೂರಿನಲ್ಲಿ ಸ್ವಯಂಸೇವಕರನ್ನು ಸೆರೆ ಮಾಡುತ್ತಿದ್ದರೂ, ಸೇಂದಿ ಅಂಗಡಿಗಳ ಪಿಕೆಟಿಂಗ್ ಜೋರಿನಿಂದ ನಡೆದಿದೆ.

ಬಳ್ಳಾರಿ ಸೆಂಟ್ರಲ್ ಜೈಲದಲ್ಲಿ ಬಂಧಿಸಲ್ಪಟ್ಟಿರುವಂತಿರುವ ಯುವಕರು, ಗರೂಪ್ರಸಾದ, ಮಹಾವೀರ ಸಿಂಗ್, ಬಿ. ಕೆ. ದತ್ತ ರೆಂಬುವರು, ಸತ್ಯಾಗ್ರಹ ಆಹಾರವನ್ನು ತೊರೆದ ದಿನದ, ಒಂದುವಾರದಿಂದಲೂ ಉಪವಾಸ ವ್ರತವನ್ನಾಚರಿಸುತ್ತಿರುವಂತೆ ವರ್ತಮಾನವು ಬಂದಿದೆ.

ಹೊಸದವರ್ಷ ಈ ಜಿಲ್ಲೆಯೊಳಗೆ ಕೆಲಸ ಮಾಡುತ್ತಿದ್ದ ಸ್ವಾಮಿ ವೆಂಕಟಾಚಾರ್ಯರಿಗೆ 108 ನೇ ಕಲಂ ಪ್ರಕಾರ 1 ವರ್ಷ ಶಿಕ್ಷೆಯಾಗಿದೆ. ಬಿ ಕ್ಲಾಸ್ ಕೊಟ್ಟಿದ್ದಾರೆ.

ಬಳ್ಳಾರಿಯು ಕರ್ನಾಟಕದಲ್ಲಿರುವ ಲಕ್ಷಣ ಇದೇನೋ?

(೪-ನೇ ಪುಟದ ಲೇಖನ)

[ಪಂಡಿತ ಜವಾಹಿರ ಲಾಲರ ಕರ್ನಾಟಕ ಪರ್ಯಟನ ಕಾರ್ಯಕ್ರಮದಲ್ಲಿ ಬಳ್ಳಾರಿಯನ್ನು ಬಿಟ್ಟುದ್ದಕ್ಕೆ ಬಳ್ಳಾರಿ ಯವರಿಗೆ ಎಷ್ಟು ಆಗ್ರಹ ವಾಗಿದೆಯೆಂಬುದು ಈ ಲೇಖನದಿಂದ ಸ್ಪಷ್ಟವಾಗುವಂತಿದೆ. ಈ ಲೇಖನವನ್ನು ಪ್ರಕಟಿಸುವ ಪ್ರಸಂಗ ನಮಗೆ ಒದಗಿದ್ದಕ್ಕಾಗಿ ಬಹಳ ವಿಷಾದವಾಗಿದೆ. ಕರ್ನಾಟಕ ಮುಖಂಡರು, ಏತೇ ಕಾರಣ ದೃಷ್ಟಿಯಿಂದ, ಇಂಥಾ ಘಟನೆಗಳಿಗೆ ಅವಕಾಶ ಕೊಡ ಬಾರದೆಂದು ನಮ್ಮ ಸೂಚನೆ ಇದೆ.]

ಸಂಪಾದಕ

ಬಳ್ಳಾರಿಯಲ್ಲಿ ಕನ್ನಡಿಗರ ಪರಿಸ್ಥಿತಿ.

ಬಿ. ಹೆಚ್ ಎಂ. ಚಂದ್ರಶೇಖರ ಶಾಸ್ತ್ರಿ ಬಿ. ಎ. ಬಿ, ಎಲ್.

ಕರ್ನಾಟಕ ಕೇಸರಿಯ 7—12—31 ರ ಸಂಚಿಕೆಯಲ್ಲಿ ಶ್ರೀ ಕೃಷ್ಣರಾಜ ಗ್ರಂಥಮಾಲೆಯ ತೆಲುಗು ಪುಸ್ತಕಗಳನ್ನು ನಿರ್ಮಿಸ ಬೇಕಾದರೆ, ಕನ್ನಡಿಗರು ಇಂಥಾ ಘನ ಕಾರ್ಯಗಳನ್ನು ಮಾಡಬೇಕೆಂದು ಕೇಸರಿಯ ಪ್ರೋತ್ಸಾಹಿಸಿದುದಕ್ಕೆ ನಾನು ಸಂತೋಷಿಸುವೆನು.

ಬಳ್ಳಾರಿಯ ಕನ್ನಡ ಪಟ್ಟಣವಾಗಿ ಸೇರಿದ 80 ಜನರು ಕನ್ನಡ ಮಾತಾಡುವರು ವರ್ತಕರು ತೆಲುಗು ಲಿಪಿಗಳನ್ನುಪಯೋಗಿಸಿದರು, ಭಾಷೆಯು ಕನ್ನಡವೇ! ಈ ಊರಿನ ಜೈಲುಗಳ, ಮತ್ತು ಫಿಸ್ಟುಕರ ಭಾಷೆಯಾದರೂ ಕನ್ನಡವೇ! ಕೋರ್ಟುಕಛೇರಿಗಳ ಸಾಕ್ಷ್ಯವೂ ಕನ್ನಡವೇ! ಬಳ್ಳಾರಿಯಲ್ಲಿ ನೀರಶ್ಯಪರಿಗೊಂದು ಮಧ್ಯಮಿಕ ಶಾಲೆಯಿಲ್ಲವೆ. ಕನ್ನಡ, ಹಿ, ನ್ಯಾಮ, ಗಳನ್ನು ಕಲಿಯಲೂಕೂಡ ಮಾರ್ಗವಿಲ್ಲದಿದೆ. ಇಲ್ಲಿಗೆ ಕಾರ್ಯಗಳು ಹೇಗೆ ಆಗಬೇಕು? ಮುನಿಸಿಪಾಲಿಟಿಯವರು ತಿಂಗಳು ಎಲಿಮೆಂಟರಿ ಶಾಲೆಗಳನ್ನು ನಡೆಸಿದರೂ, ಕನ್ನಡಕ್ಕೆ ವಿಶೇಷ ಪ್ರಾಶಸ್ತ್ಯವಿರುವ ಒಂದುಶಾಲೆಯಾದರೂ ಇಲ್ಲ. ಕರ್ನಾಟಕ್ಕೆ ಕೇಂದ್ರಸ್ಥಾನವಾದ ಬಳ್ಳಾರಿಯಲ್ಲಿ ಇಂಥಾ ಪರಿಸ್ಥಿತಿ ಇರುವುದು ಎಂತ ಹೇಳಲು ನಾಚಿಕೆ ಯಾಗುತ್ತದೆ.

ತಾಲ್ಲೂಕುಗಳಿಂದ ಬರುವ ವಿದ್ಯಾರ್ಥಿಗಳು ತೆಲುಗು ಭಾಷೆಗೆ ಅಪರಿಚಿತರಾದರೂ, ಮುನಿಸಿಪಲ್ ಹೈಸ್ಕೂಲಿನಲ್ಲಿ ಬಲೋರ್ಬಂಧವಾಗಿ, ಚರಿತ್ರೆ, ಭೂಗೋಳ, ಸೈನ್ಸ ಕಲಿಸುತ್ತಿರುವರು. ಹೀಗಾದರೆ, ಕನ್ನಡ ಭಾಷೆಯ ಅಭಿವೃದ್ಧಿಯು ಹೇಗೆ ಬೆಳೆಯಬಹುದು? 1926 ನೇ ವರ್ಷದಲ್ಲಿ ನಡೆದ ಸಾಹಿತ್ಯ ಪರಿಷತ್ತಿನಲ್ಲಿಯೂ, ಏಕೀಕರಣ ಪರಿಷತ್ತಿನಲ್ಲಿಯೂ, ಸಿದ್ಧಿ ವಿದ್ಯಾಲಯಸಮ್ಮೇಳನದಲ್ಲಿಯೂ, ಬಳ್ಳಾರಿಯಲ್ಲಿ ಕನ್ನಡದ ಪ್ರಾಥಮಿಕ ಶಾಲೆಗಳನ್ನು ವಿಸ್ತರಿಸಲು ತೀರ್ಮಾನಗಳನ್ನು ಮಾಡಿ ಮುನಿಸಿಪಾಲಿಟಿಗೆ ಕಳುಹಿಸಿದರು. ಸಾವಿರಾರು ಜನರು ಸಹಿಮಾಡಿ ಮಹಜರು ಕೂಡ ಕಳಿಸಿದರು ಈ ಬೇಡಿಕೆಗಳೆಲ್ಲವೂ, ಅರಣ್ಯ ರೋದನ ವಾದುವು.

ಈ ವಿಷಯವಾಗಿ 'ಕರ್ನಾಟಕ ಕೇಸರಿ' ಯು ತನ್ನ ಭಯಂಕರ ಗರ್ಜನೆಯಿಂದ, ಮುನಿಸಿಪಾಲಿಟಿಯ ತನ್ನ ಕರ್ತವ್ಯವನ್ನು ನೆರವೇರಿಸಲು, ಪ್ರೇರಿಸಿಸಬೇಕೆಂದು ಪ್ರಾರ್ಥಿಸುತ್ತೇನೆ.

ದತ್ತಮಂಡಲ

(ಕೇಡೆಸ್ ಜಿಲ್ಲೆಗಳು)

(ಬರೆದವರು—ಶ್ರೀ ಎಂ. ಗೋವಿಂದರಾವ್)

ಕಾಂಗ್ರೆಸ್ಸಿನ ಕೃಪೆಯಿಂದ ಕರ್ನಾಟಕಕ್ಕೆ ಒಂದು ಸ್ವತಂತ್ರ ಪ್ರಾಂತ ಸಿಕ್ಕಂದಿನಿಂದಲೂ ಕನ್ನಡಿಗರಲ್ಲಿ ಸ್ವಾಭಿಮಾನದ ಜ್ಯೋತಿಯು ಒಡಮೂಡಿದ್ದರಿಂದ ಕರ್ನಾಟಕದ ಸರ್ವಾಂಗಗಳಲ್ಲಿಯೂ ತಮ್ಮ ಸ್ವಾಮಿತ್ವವನ್ನು ತಿಳಿಸಲು ಸೇವೆಗಾಗಿ ಅಲ್ಲಲ್ಲಿ ಗುಂಪು ಮಠ ತಂಡಗಳೆಂಬ ಅನೇಕ ಸಂಘಗಳು ಉದಯವಾದವು. ಹಿರಿ ಕಿರಿಯ ರೆಲ್ಲ ಅನ್ಯೋನ್ಯ ಸಹಕಾರದಿಂದ ಕನ್ನಡ ತಾಯಿಯ ಏಳ್ಗೆಗಾಗಿ ಹೆಣಗಾಡಿದರು. ಆದರೆ ಈ ಸ್ಫೂರ್ತಿಯನ್ನು ತಮ್ಮಲ್ಲಿಯೂ, ತುಂಬಿಕೊಂಟು ಅದರಿಂದುಬ್ಬಿ ಲತ್ಕ ವಿಸ್ಮೃತಿಯಲ್ಲಿರುವ ಬಳ್ಳಾರಿ ಅನಂತಪುರ ಜಿಲ್ಲೆಗಳ ಕನ್ನಡಿಗರನ್ನೆಚ್ಚರಿಸಲು ಇದೆಷ್ಟು ಜನ ಕನ್ನಡ ತರುಣರು ಕಟಿ ಬದ್ಧರಾಗಿ ನಿಂತಿದುವರೆಂಬುದೇ ಸೋಡತಕ್ಕಂಥ ಸಂಗತಿ. ಕಳೆದ ಕಾಳಗದಲ್ಲಿ ಶ್ರೀ ಟೀಕೂರು ಸುಬ್ರಹ್ಮಣ್ಯಂ ರವರ ಎಡಬಲಕ್ಕಲ್ಲಿ ನಿಂತು ಕಾದಾಡಿದ ಸತ್ಯಾಗ್ರಹಿಗಳಿರುವ ಮಾಡಿದ ಕರ್ನಾಟಕದ ಸೇವೆಯನ್ನು ಯಾರೂ ಮರೆಯದಂತಿದೆ ರಾಜಕೀಯ ಕ್ಷೇತ್ರದಲ್ಲಿ ಮಾಡಿ ಕಂಡು ಬಂದ ಈ ಹುರುಪು ದೇಶೋನ್ನತಿಯ ಸರ್ವಾಂಗಗಳನ್ನು ಆವರಿಸಬೇಕು. ಅವರಲ್ಲಿ ಹುರುಪು ಕಳೆದೋರಲು ಕಾರಣವಾದ ವಿಚಾರಗಳು ಸರ್ವಸ್ಪರ್ಶಿಯಾಗಿ ವಿಶಾಲವಾಗಿ ವಿಕಾಸವಾಗಬೇಕು ಆ ಗೂಢವಾದ ಸ್ಫೂರ್ತಿಯ ಸ್ವರೂಪವು ವ್ಯರ್ಥವಾಗಿ ನೆಲೆಸಿಂತು ಕನ್ನಡ ನಾಡಿನ ಪ್ರಗತಿಗೆ ಪ್ರವರ್ತಕವಾದ ಸ್ಫುಟ ವಿಚಾರಗಳನ್ನು ಹೊರಹೊಮ್ಮಿಸಲಿ.

ಅವರು ಹೆರವರ ಹಗೆತನಕ್ಕೆ ತಮ್ಮ ಎದೆಯಲ್ಲಿ ಎಳ್ಳಷ್ಟು ಎಡೆಕೊಡದೆ ಕನ್ನಡಿಗರನ್ನು ಸ್ವಕರ್ತವ್ಯೋನ್ಮುಖರನ್ನಾಗಿ ಮಾಡುವ ಹಂಬಲವನ್ನು ಹೊರಬೇಕು ನಮಗೆ ಆಂಧ್ರರ ಆಶ್ರಯ ಅವಶ್ಯಕ ಅವಶ್ಯಗಳೂ ಬೇಕು. ನಮ್ಮ ರಾಷ್ಟ್ರಗಳ ಮತಿ ಸ್ಫೂರ್ತಿಗಳೂ ಬೇಕು ನಮ್ಮಾಕರನ್ನೂ ಮುಕ್ತುವುದೂ ಬೇಡ, ಆಂಧ್ರ ಬಂಧುಗಳ ಸ್ನೇಹ ಭಯೋಗವೂ ಬೇಡ ಕನ್ನಡಿಗರು ತಮ್ಮ ಜನರನ್ನು ಸ್ವಾಧೀನವಾಡಿಕೊಂಡರೆ ಎಷ್ಟೋ ಲೇಸು.

ಈ ದೃಷ್ಟಿಯಿಂದ ನೋಡಿದರೆ ಈ ಎರಡು ಜಿಲ್ಲೆಗಳಲ್ಲಿರುವ ಕನ್ನಡ ತರುಣರೂ, ಕರ್ನಾಟಕಾಭಿಮಾನಿಗಳೂ ತಮ್ಮ ಸರ ಹಿತಚಿಂತನೆಯ ಬಗ್ಗೆ ಅತ್ಯಂತ ತತ್ಪರರಾಗಿರ ಬೇಕಾಗಿದೆ. ಕರ್ನಾಟಕದ ಸಾಹಿತ್ಯ, ಸಂಪತ್ತಿಗಳ ಅಭಿವೃದ್ಧಿಯನ್ನೂ ವಿಚಾರವನ್ನೂ ಬೆಳೆಸಲು ಸಹಾಯಕಾಗುವ ಸಂಸ್ಥೆಗಳು ಬಳ್ಳಾರಿ ಅನಂತಪುರ ಜಿಲ್ಲೆಗಳ ಕನ್ನಡ ಭಾಗಗಳಲ್ಲಿ ಅಲ್ಲಲ್ಲಿ ಆರಂಭಿಸಬೇಕು ಪ್ರಾಂತಿಯ ದುರಭಿಮಾನದ ಸೆಳವಿಗೆ ಬಿದ್ದು ಕನ್ನಡಿಗರು ತೀರ ಕಡಿಮೆ ಯಿದ್ದು ಆಂಧ್ರರೇ ಹೆಚ್ಚಿರುವ ಸ್ಥಳಗಳಲ್ಲಿ ಹುರುಳ್ಳಿದ, ರಸಕಸಿಯನ್ನು ಬೆಳೆಸಬಾರದು ತನ್ನದು ಬಿಡ, ಅನ್ಯರದು, ಬೇಡ. ಎಂಬ ಮಾತಿನಂತೆಯೇ ಕೃತಿಯನ್ನಿಡಬೇಕು. ಸ್ವಸಂರಕ್ಷಣೆಯ ಉದ್ದೇಶದಿಂದ ಇಂಥಾ ಉದಾತ್ತ, ವಿಚಾರಗಳನ್ನಿಟ್ಟು ಕೆಲಸ ಮಾಡಿದರೆ ಇಲ್ಲಿಯ ತಮಿಳರು ಬೇಗನೆ ಜಯತಾಳಲಾಗುವರು ಅಲ್ಲಲ್ಲಿ ಕನ್ನಡ ಪಾಠಶಾಲೆಯಗಳೂ ಬೆಳೆದವರಿಗೆ ಕನ್ನಡ ಅಕ್ಷರಗಳನ್ನು ಕಲಿಸುವ ರಾತ್ರಿಶಾಲೆಗಳೂ ಹೊರಟರೆ ಅನುಕೂಲ.

ಬಳ್ಳಾರಿ ತಾಲ್ಲೂಕ ಮೋಕ ರೈತರು

(ಬರೆದವ ಮೋಕೆಯ ರೈತ)

ಕೆಲವರ್ಷಗಳಿಂದ ಯಿಲ್ಲಿ ತಕ್ಕಮ್ಮ ಮಳೆಯು ಬೀಳದೆ ಯಿರುವದರಿಂದ ರೈತರಜಾಳು ಬಹುಕಷ್ಟವಾಗಿರುವುದು ಅದರಲ್ಲಿ ಈ ವರ್ಷವಂತೂ ಯಿನ್ನು ದುರ್ದಶೆಯ. ಪ್ರಾಪ್ತಿಸಿರುತ್ತದೆ ಕೆಲವರು ಬಿತ್ತಿದರು, ಕೆಲವರು ಬಿತ್ತಲೇಯಿಲ್ಲ ಬಿತ್ತಿದವರಿಗಿಂತಲೂ ಬಿತ್ತದವರ ಪಾಲೇ ಲೇಸೆಂದೆನಿಸುತ್ತದೆ ಏಕಂದರೆ ಬಿತ್ತದವರಿಗೆ ಕೆಲವುಕಾಲ ತಿನ್ನಲಿಕ್ಕೆ ಬೀಜಗಳಾದರೂ ಉಳಿದಂತಾಯಿತು ಸ್ಯೆರುಗಳು ಕೆಟ್ಟುಹೋದದ್ದರಿಂದ ಬಿತ್ತಿದವರ ಬೀಜಗಳನ್ನು ಕೂಡ ಕಳೆದು ಕೂಂಡಂತಾಯಿತು. ಇನ್ನು ಮೂಕ ದನಗಳ ಸ್ಥಿತಿಯ ಹೇಳತೀರದು, ಕಳೆದ ವರ್ಷದ ಮೇವು ಹೆಚ್ಚಾಗಿರದಿದ್ದರಿಂದ ಯಾವಾಗಲೋ ಮುಗಿದುಹೋಯಿತು. ಈವರುಷ ಅಲ್ಪಸ್ವಲ್ಪ ಬಿದ್ದ ಹೆಸಗೆ ಅಲ್ಲಲ್ಲಿ ಮೊಳಕೆಯೊರಿದ ಹಸಿಯಹುಲ್ಲು ಮುಗಿದು ಹೋಯಿತು, ಹೀಗಾಗಿ ಪಶುಗಳದುಸ್ಥಿತಿಯು ಬಹಳ ಘೋರವಾಗಿರುವುದು. ಈಕಾರಣ ಸ್ವಲ್ಪ ಸರ್ಕಾರದವರ ಸಹಾಯದಿಂದ ಮೇವಿನ ತಕಾವಿಯನ್ನು ಪಡೆದು ದನಗಳನ್ನಾದರೂ ಬದುಕಿಸಕೊಳ್ಳಬೇಕೆಂದು ಮೋಕೆಯ ಗ್ರಾಮದರೈತರು ಸುಮಾರು ೩೦೦ ಮಂದಿ ತಮ್ಮ ಪಂಚಾಯಿತಿ ಪ್ರಸಿಡೆಂಟರಾದ ಮಾಲಿ ಚಂದ್ರಮೌಳಿ ರಾಯರನ್ನು ಮುಂದಿಟ್ಟುಕೊಂಡು ಕಲೆಕ್ಟರ್ ದೊರೆಗಳನ್ನು ಕಂಡು ತಮ್ಮ ವಿಹತ್ತನ್ನು ಶ್ರೀ ಚಂದ್ರಮೌಳಿರಾಯರ ಮುಖದಿಂದ ಬಿನ್ನವಿಸಿಕೂಂಡರು. ಆಗಾಲದಲ್ಲಿ ಅಲ್ಲಿದ್ದ ಡಿಪ್ಟಿ ಕಲೆಕ್ಟರವರು, ಮತ್ತು ತಹಶೀಲ್‌ದಾರರು ತಾವು ಮೋಕೆ ಪ್ರಾಂತ ಸೇರಿ ತಸಿಲೀಗಾಗಿದ್ದಾಗ ಅಲ್ಲಿ ಕ್ಷಾಡೆ ಯಥಾಸ್ಥಿತಿಯನ್ನು ವರ್ಣಿಸಿ ಹೇಳಿ ರೈತರಿಗನುಕಂಪದರು. ಸಹಜ ದಯಾಶೀಲರೂ, ದೀನಪ್ರಜೆಗಳ ಪಾಲಿನ ತಂದೆಯೂ ಆದ ಕಲೆಕ್ಟರ್ ದೊರೆಗಳು ಮೇವಿನ ತಕಾವಿಯನ್ನು ಕೊಡಿಸ ತ್ತೇನೆಂತಲೂ, ಬಡಜನಗಳಬಗ್ಗೆ ಜಿಲ್ಲಾ ಜೋಡಿನ ಪ್ರಸಿಡೆಂಟರವರ ಸಂಗಡ ಮಾತನಾಡಿ ಒಂದ ರೂಪನ್ನು ಟಿಸ್ಕುವರ್ಕಿಗಾಗಿ ಪ್ರಾರಂಭ ಮಾಡುವಂತೆ ಮಾಡ ತ್ತೇನೆಂತಲು ಅಭಯ ವನ್ನಿತ್ತರು. ಆಗರೈತರು ಸಂತೋಷದಿಂದತಮ್ಮಗೆ ಸನ್ಮಾನದಲ್ಲಿ ನೆರವಾದ ಉಪಕ್ಷೇಗಿಗಳನ್ನು, ಅನುಗ್ರಹಿಸಿದ ಕಲೆಕ್ಟರವರನ್ನು ಕೊಂಡಾಡುತ್ತ ಹೊರಟು ಹೋದರು.

ಯುನೈಟೆಡ್ ಕರ್ನಾಟಕ ಇನ್ಸುರನ್ಸ ಕಂ. ಲಿ;

ಧಾರವಾಡ.

ಕರ್ನಾಟಕದಿಂದ ಪ್ರತಿ ವರ್ಷ ಹೊರಗೆ ಹೋಗುವ ರಾಸಿಗಟ್ಟಿ ವಿಮಾಧನವನ್ನುಳಿಸಿ ನಮ್ಮ ಪ್ರಾಂತದ ಪ್ರಗತಿಗಾಗಿ ವಿನಿಯೋಗಿಸಬೇಕೆಂಬ ಸದುದ್ದೇಶದಿಂದ ಈ ವಿಮಾ ಕಂಪನಿಯನ್ನು ಹೊರಡಿಸಲಾಯಿತು. ಕಂಪನಿಯು ಸ್ಥಾಪನೆಯಾಗಿ ಕೇವಲ ೧೫ ತಿಂಗಳಾದರೂ ಆ ಮಾನದಿಂದ ಕಾರ್ಯವೇನೋ ಅದು ತಮಾಗಿದೆ. ಕನ್ನಡಿಗರ ಬೇಬಲದಿಂದ ಬೆಳೆಯುತ್ತ ಈ ಕಂಪನಿಯು ಈ ಗಾಗಲೆ ಕರ್ನಾಟಕದ ಅಭಿಮಾನದ ಸಂಸ್ಥೆಯಾಗಿದೆ. ಕನ್ನಡ ನಾಡಿನ ಪ್ರತಿಯೊಂದು ಜಿಲ್ಲೆಯ ಪ್ರಮುಖರನ್ನೂ ಈ ಕಂಪನಿಯ ಆಡಳಿತೆಯ ಮಂಡಲದಲ್ಲಿ ಪ್ರತಿನಿಧಿಯಾಗಿ ಸೇರಿಸಿಕೊಳ್ಳುವ ಏರ್ಪಾಡಾಗಿದೆ ವಿಮಾ ಕಂತುಗಳು ಸುಲಭವಾಗಿರುವುದರಿಂದಲೂ ಸರ್ವ ಸೌಕರ್ಯವುಳ್ಳ, ಕರಾರುಗಳಿರುವುದರಿಂದಲೂ ಈ ಕಂಪನಿಗೆ ಎಲ್ಲ ಒಳರಿಂದಲೂ ಸಹಾಯವು ಸಿಕ್ಕುವುದರಲ್ಲಿ ಸಂದೇಹವಿಲ್ಲ.

ಸ್ವದೇಶೀಯರು ಚಳವಳಿಯ ಜೀವನದ ಎಲ್ಲ ಅಂಗಗಳನ್ನೂ ಆವರಿಸುವದು ಹೌದಾದರೆ ಒನ್ನು ನಾಡಿನ ನಿರ್ಮಾಣದ ಅಡಿಗಲ್ಲಿನಂತಿದ ವಿಮಾಸಂಘಗಳ ವಿಕಾಸದ ವಿಚಾರವನ್ನು ಮಾಡಬೇಕಲ್ಲವೆ? ಪ್ರತಿವರ್ಷ ಕನಿಷ್ಟ ೨೦-೩೦ ಲಕ್ಷ ರೂಪಾಯಿಗಳ ವಿಮಾ ಧನವು ಹೊರನಾಡಿಗೆ ಹೋಗುತ್ತದೆಂಬ ಮಾತನ್ನು ಕೇಳಿ ಯಾವ ಕನ್ನಡಿಗನ ಮನ ನೋಯಲಿಲ್ಲವೆ? ಅಂದಬಳಿಕ ವಿಮಾಸಂಘವೆಂದರೆ ನಮಗೆ ಸಂಬಂಧಪಟ್ಟ ಇಂಗಿತಿಯ ಬ್ಲೇಂದ ಉದಾಸೀನರಾಗಿ ಇರಬೇಕಾದುದು ಎಷ್ಟು ಅಪರಾಧವಾಗುತ್ತದೆ ನೋಡಿರಿ.

ಆದ್ದರಿಂದ ಈ ದುಷ್ಟ ಕನ್ನಡ ಕಂಪನಿಯ ಪಾಲುಗಳನ್ನು ಪಡೆಯಿರಿ ಇದರಲ್ಲಿ ವಿಮೆಯಿಳಿಸಿದರು ನಿಮ್ಮವರುತ್ತು ನಿಮ್ಮನ್ನವಲಂಬಿಸಿದವರ ಬಾಳ್ವೆಯ ಭದ್ರತೆಯಾಗುವದಲ್ಲದೆ ನಿಮ್ಮ ನಾಡಿನ ನೆಮ್ಮದಿಯೂ ಕೈಗೂಡುವುದು. **ಉತ್ಸಾಹಿಗಳೂ ಉದ್ಯಮಿಗಳೂ ಆದ ಉತ್ತಮ ವಿಜಂಟರು ಎಲ್ಲ ಜಿಲ್ಲೆ ತಾಲೂಕುಗಳಿಂದಲೂ ಬೇಕು.**

ಕಾರ್ಯದರ್ಶಿ

ಹುಯಿಲಗೋಳ ಕೃಷ್ಣರಾವ್

B. A. L L. B

ದಕ್ಷಿಣ ಇಂಡಿಯಾದಲ್ಲಿ ಪ್ರವಾಹದ ಅನಾಹುತ.

ತಾಮ್ರಪರ್ಣಿ ನದಿಯು ವಿಶೇಷವಾಗಿ ಉಬ್ಬಿ ತಿನ್ನವೆಲ್ಲಿ ಪಟ್ಟಣವು ಅರ್ಧಭಾಗ ನೀರಿನಲ್ಲಿ ಮುಳುಗಿದೆ. ಎಲ್ಲಾ ಕಛೇರಿಗಳೂ. ನೀರಿನಲ್ಲಿ ಮುಳುಗಿವೆ. ಸಾವಿರಾರು ಜನರು ಮನೆಮಾರ್ಗದೆ ತಿರುಗುತ್ತಿರುವರು ಕಡಲೂರು ಪಟ್ಟಣಕ್ಕೂ ಇದೇ ಗತಿಯು ಅಗಿದೆ, ರೈಲ್ವೇಸ್ಟೇಷನ್ನು ಕೂಡ ನೀರಿನಿಂದ ತುಂಬಿದೆ, ಎಷ್ಟು ಲಕ್ಷರೂಪಾಯಿಗಳ ನಷ್ಟವಾಗಿದೆಯೋ ಊಹಿಸಲ ಸಾಧ್ಯವಾಗಿದೆ.

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೨೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟರಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯಪೂರ್ವಾಹ್ನಕಾಲ 7-30 ಯಿಂದ 9 ರ ವರಗೂ, ಸಾಯಂಕಾಲ 6-30 ಯಿಂದ 7-30 ರ ವರಗೂ, ಹಿಂದೀ ಶಿಕ್ಷಣವು ಕೊಡಲ್ಪಡುವದು ಸುಮಾರು ೨೫ ಕೋಟಿಜನಗಳಿಗೆ ಚನ್ನಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದುದು ದೇಶಾಭಿಮಾನಿಗಳ ಅಗತ್ಯಕರ್ತವ್ಯವಾಗಿದೆ ಭಾರತ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯು ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲೆನೋಂದಾಯಿಸಿಕೊಳ್ಳವುದು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮ ಗಾಂಧಿಯವರ ಆತ್ಮಕಥೆ	ಅಥವಾ ಸತ್ಯ ಶೋಧನೆ	
,,	ಒಂದನೆಯ ಭಾಗ	೨—೧೨—೦
,,	ಎರಡನೆಯ ಭಾಗ	೦—೧೨—೦
	ಮೂರನೆಯ ಭಾಗ	೦—೯—೦
,,	ನಾಲ್ಕನೆಯ ಭಾಗ	೧—೮—೦
,,	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರು ಬರೆದ " ಅನಾಸಕ್ತಿ ಯೋಗ "		೦—೧೨—೦

(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ)

ಮಹಾತ್ಮ ಗಾಂಧಿ "	ಚಿತ್ರ ಪುಸ್ತಕ	೦—೧—೦
ರಾಷ್ಟ್ರೀಯ ಗೀತ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor		1—0—0
ಹಿಂದೀ ಬಾಲ ಬೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
,,	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೫—೦
ದೂಸರೀ		೦—೬—೦
ಮಬೇದಾರ ಕಹಾನಿಯಾ		೦—೫—೦
ಅನುವಾದಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ

ಕರ್ನಾಟಕ ಕೇಸರಿ ಕಾರ್ಯಾಲಯ ಬೆಳ್ಳಾರಿ.

ಪ್ರೇಮ ಚಿಕಿತ್ಸಾಲಯ.

ಕಿಷ್ಟಮಾಚಾರ್ಲು ರೋಡು ಬೆಳ್ಳಾರಿ.

[ಸಬ್ ಏಜೆಂಟರು:—ಮೈಸಾಂಡ ಫಾರ್ಮಸ್ಯೂಟಿಕಲ್ ವರ್ಕ್ಸ್ ಬೊಂಬಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನವ ಶ್ರೀ ನಿತ್ಯ ಶ್ರೀ ಶಕ್ತಿ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

ವಿ. ಎಂ. ಗಿರಿ ಅಂಡ್ ಸನ್ಸ್.

ತೇದಬೀದಿ ಬೆಳ್ಳಾರಿ.

ಏಜಂಟರು:- ಲೋಧ್ರಾ (ಗರ್ಭಾಶಯ ರೋಗನಿವಾರಣಿ)

ಆಯುರ್ವೇದೀಯ ಮತ್ತು ಇಂಗ್ಲಿಸ್ ಔಷಧಗಳೂ ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾಗುವ ಚಿಲ್ಲರೆವಸ್ತುಗಳೂ, ಸ್ವೀಟ ಪದಾರ್ಥಗಳೂ, ಸಾಲಭ ಬೆಲೆಗೆ ದೊರೆಯುತ್ತವೆ.

ಪಿ. ಎ. ಪಿ. ಯವರಿಂದ ತಯಾರಾದ ಅತ್ಯುತ್ತಮ ಹತ್ತಿನ ಹಲಬುತ್ತುಗಳು ನಮ್ಮಲ್ಲಿ ಅಗ್ಗದರಲ್ಲಿ ದೊರೆಯುತ್ತವೆ.

ರಘು ಮಂಜಾಲಿ ಮೆಡಿಕಲ್ ಹಾಲ್.

ಬ್ರಾಹ್ಮಣರ ಬೀದಿ ಬೆಳ್ಳಾರಿ.

ನಮ್ಮಲ್ಲಿ ಗ್ಯಾರಂಟೀ ಅಗಿ ಗುಣತೋರಬಲ್ಲುದಾದ ಸಿದ್ಧೌಷಧಗಳು ಅತಿ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ಕ್ರಯ
ಹಸುರು ಶಕ್ತಿ. ೨ ಂ ಮಾತ್ರೆ	ರೂ. ೨—೦—೦
ಜಲ್ದಿ ದೋಷಕ್ಕೆ ತೊಲೆ ಹಬ್ಬಿಗೆ	೧—೦—೦
ಅಮೂಲ್ಯ ಧಾರ (ಸಕಲ ರೋಗಗಳನ್ನು ಗುಣಪಡಿಸುತ್ತೆ.	೦—೮—೦
ವಿಷಮ ಸನ್ನಿಪಾತ ಜ್ವರಗಳಿಗೆ ಮಾತ್ರೆ 50 ಸೀಸ.	೨—೦—೦

FOR SALE

1 Boston hand Press :—

Prints 5" × 8" matter neatly, in good working order.

Price moderate & reasonable

2 New cyclostyle Machine:—

Used only twice or thrice. Perfectly new.

Price considerably cheap. Apply sharp:—

KARNATAKA KESARI. OFFICE

Bellary.

ಶ್ರೇಷ್ಠವಾದ ಮಿರ್ಷ ದಾರದ ಪುಂಡೆಗಳು.



ಈ ದಾರದ ಪುಂಡೆಗಳು ಫಟ್ಟಿಯಾಗಿಯೂ, ನಯವಾಗಿಯೂ, ಇರುವದರಿಂದ ಸೂಸ್ಸನ್ನಲ್ಲಿ ಹೊಲಿಯುವದಕ್ಕೂ, ಕೈಲಿ ಹೊಲಿಯುವದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ ಬಿಳಿ, ಕೆಂಪು, ಕಪ್ಪು, ಕಾಕಿ, ಮತ್ತು ಇತರ ರಂಗುಗಳು ಅನೇಕ ಸೈಜಿನ ದಾರದ ಪ್ಯಾಕುಗಳು, ಕಡಿಮೆ ಧಾರಣೆಗೆ ಮಾರಿಯುತ್ತವೆ

ದರ ಬರೆದು ತರಿಸಿಕೊಳ್ಳಿರಿ

K. V. & Sons,
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್,
ತೇರು ಬೀದಿ ಬಳ್ಳಾರಿ

THE GRADUATES' TRADING ASSOCIATION,

General merchants, Gramaphone Dealers & News Agents,

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್, ಗ್ರಾಮೊಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜೆಂಟ್ಸ್

ತೇರು ಬೀದಿ ಬಳ್ಳಾರಿ.

ದಿ ಎಂಪೈರ್ ಆಫ್ ಇಂಡಿಯಾ. ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಈ ಕಂಪನಿಯ ಮುಖ್ಯ ಲಕ್ಷಣಗಳು ಬೊಂಬಾಯಿ

೧. ಅತಿ ಕಡಿಮೆ ಪ್ರೀಮಿಯಂದ ಸಮಯಸ್ಕರ್ಪಡುವ ಸಂಸ್ಥೆಯು.

೨. ಪೊಲಿಸಿದಾರನ ಹೆಣ್ಣಿ ತುಂಬಾ ಭದ್ರವಾಯಿಸಿಕೊಳ್ಳುವುದು.

೩. ಕಂಪನಿಯ ಒಂದನೆ ವಾರ್ಷಿಕ ಇಂಡಿಯಾ ಪ್ರೀಮ್ಸ್ ಆಕ್ಟಿನಿಂದ ಮಂಜೂರಾದ ಸಂಸ್ಥೆಗಳಲ್ಲಿ ಬಡ್ಡಿ ಇಟ್ಟಿರುವದು.

೪. ಪ್ರೀಮಿಯಮ್ ದರ ಮೇಲೆ ಕಂಪನಿಗೆ ಹಕ್ಕಿಂತ ಕಡಿಮೆ.

೫. ಪೊಲಿಸಿಗಳನ್ನು ತೊಡಗಿದ ಶರತ್ತುಗಳಾದುದೂ ಇಲ್ಲದೆ ಸರಳವಾಗಿರುವುದು

೬. ರದ್ದಾದ ಪೊಲಿಸಿಗಳನ್ನು ಹೆಚ್ಚು ಕೆಲಸ ಇಲ್ಲದೆ ಊರ್ಜಿತಕ್ಕೆ ತರಬಹುದು.

೭. ಕಂಪನಿಯ ಬಾಧಕದಲ್ಲಿ ಸಂಕಷ್ಟ ಬಂದು ಪೊಲಿಸಿದಾರನಿಗೆ ಹಾಯಿಸಿಕ್ಕಿದ್ದಿದ್ದರೆ ಮಾತ್ರ.

೮. ಪೊಲಿಸಿಯ ಬೇಡಿಕೆಯಂತೆ ಕಂಡು ಬಂದಾಗ ಕಂಪನಿಯಿಂದ ಕೊಡಬೇಕಾಗಿದ್ದ ಪ್ರತಿಫಲ ಬಡ್ಡಿ ಉಪಾಯಂದೆಯಾ ಇರುವುದು

೯. ಪೊಲಿಸಿ ಪ್ರತಿಫಲವನ್ನು ಸುಲಭದ ಸಂಖ್ಯೆ ಬಂದಾಗ ಒಟ್ಟಿ ಕಲ್ಲಿದೆ ಕೊಡಲಿ ಸಲ್ಲಿಸಿಕ್ಕುವುದು.

ವಿಳಾಸ. - ಎಂ. ವೆಂಕೋಬರಾವ್. ಬಿ. ಎ.
ಸತ್ಯನಾರಾಯಣಪೇಟೆ
ಬಳ್ಳಾರಿ.

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE,
& Commercial Agency.
Bangalore Road. Bellary.

Agents & dealers in:-
Wood stock, Corona and other typewriters of all makes, best ribbons carbons, and Swadeshi fountain pens etc.

HOW TO LEARN TOUCH TYPE WRITING IN 20 days
short hand a speciality.
(Seperate accommodation for lady students)
Job works & repairs undertaken on moderate charges.
ಆರ್ಜಿಗಳನ್ನು ಕಳುಹಿಸಿದ ಕೂಡಲೆ ಸೂಚನೆಗಳು ಕಳುಹಿಸಲಾಗುತ್ತವೆ.
Prospectus sent free on application.

ARYA VAIDYALAYA BELLARY

Pandit C. S. Shastry's Patent Medicines — MONEY RETURNED IF NOT CURED

1 FEVER KILLER.
Any fever completly cured in 4 days — 8 oz Bottle Rs 2—0—0

2 NAVAJEEVAN PAK.
King of Tonic foods (sweet) — 1 lb Rs 1—8—0

3 PRAMEHA BHANJINI
Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್ ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. — ಗುಣವು ವಿವರಣೆ ಪಾಸಲು

" ಜ್ವರ ಸಂಹಾರಿ. "

ಸಾಮಾನ್ಯ ಎಲ್ಲಾ ಜ್ವರಗಳು ನಾಲ್ಕು ದಿನಗಳಲ್ಲಿ ಸಂಪೂರ್ಣ ಗುಣ — 8, ಔನ್ಸಿನ ಬಾಟ್ಲಿ ರೂ 2—0 0

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ ರೂ 1—8 0

ಪ್ರಮೇಹ ಭಂಜಿನಿ

ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ. — ರೂ 6—0—0

ಈ ಔಷಧಾಲಯದಲ್ಲಿ ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಗಾರ ಮುಂ ಕಾಯಿಲೆ ಮಾಡಿ ಮಾಡಿಗಳು ಎಷ್ಟು ಹಳೆಯದಾದರೂ ಕಷ್ಟಸಾಧ್ಯವಾಗಿದ್ದವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ ತಂತ್ರಗಳಿಂದ ಪಾಸಿಮಾಡಲ್ಪಟ್ಟು ಕೆತ್ತಮೆ ಒಮ್ಮೆ ಬಂದು ಪರೀಕ್ಷಿಸಿದ ಹಾಗಾಗಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್

PRINTED & PUBLISHED BY T. B. KESHAVA RAO
AT SRI VIDYARANYA PRESS BELLARY.

REGISTERED NO M- 2736

ಕರ್ನಾಟಕ ಕೇಸರಿ

ಮುಕ್ತಿಸೂರ್ ಕೃಷ್ಣ ಶ್ವರನೋ ! ಸುಬ್ರಹ್ಮಣ್ಯಸ್ವಂಗ ವಚೇತಃ ॥
ನಿರ್ಮೇರಸ್ವ ಭೂತೇಷು । ಯಸ್ಯ ಪ್ರಾಮೇತಿ ಶಾಂತಿಃ ॥ ಗೀತೆ. ಅ. ೧೧ ಶ್ಲೋ-೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಚಂದಾ
ಸ್ಥಳದವರಿಗೆ .... ೨—೮—೦
ಪರಸ್ಥಳದವರಿಗೆ ... ೩—೦—೦

ಸಂಪಾದಕ
ಟೇಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.
(ನಿಧಿ ಪತ್ರಿಕೆ ೮-೧-೦)

ಆರು ತಿಂಗಳಚಂದಾ.
ಸ್ಥಳದವರಿಗೆ .... ೧—೨—೦
ಪರಸ್ಥಳದವರಿಗೆ .... ೧—೧೫—೦

ವರ್ಷ ೧ ಬಳ್ಳಾರಿ ನಗರ—ಡಿಸೆಂಬರ್ ತಿಂಗಳ ೧೯ ನೇ ಸೋಮವಾರ ೧೯೩೧ ಸಂಚಿಕೆ ೧೩

ಮಹಾತ್ಮ ಗಾಂಧಿಯವರು.

ಬೊಂಬಾಯಿಯಲ್ಲಿ ಸ್ವಾಗತದ ಉತ್ಸಾಹ.

ರೋಂ ಡಿಸೆಂಬರ್ ೧೨

ಮಹಾತ್ಮ ಗಾಂಧಿಯವರು ಇಟಲೀ ದೇಶದ ರಾಜಧಾನಿಯಾದ ರೋಂ ಪಟ್ಟಣಕ್ಕೆ ಈ ದಿವಸ ಪ್ರಾತಃಕಾಲ ೫—30 ಘಂಟೆಗೆ ಬಂದರು. ಸ್ಟೇಶನದಲ್ಲಿ ದೊಡ್ಡ ಜನ ಸಂದಣಿಯು ಅವರಿಗೆ ಜಯಕಾರ ಧ್ವನಿಯಿಂದ ಸ್ವಾಗತಮಾಡಿತ್ತು. ಅವರು ಇಟಲೀ ದೇಶದ ವಿಮಾನ ಶಾಸ್ತ್ರಾಧ್ಯಕ್ಷ ಜನರಲ್ ಮಾಂಟ್ರಾ ರವರ ಭವನದಲ್ಲಿ ಇಳಿಯುವರು ಅವರಕಾಲವು ಅತ್ಯಲ್ಪವಿರುವುದರಿಂದಲೂ, ಭಾನುವಾರ ಪೋಪ ವರು ದರ್ಶನವನ್ನು ಕೊಡದಿರುವುದರಿಂದಲೂ, ಮಹಾತ್ಮರು ಪೋಪರವರನ್ನು ನೋಡಲಿಕ್ಕಾಗಲಿಲ್ಲ.

ಅವರು ವ್ಯಾಟಿಕನ್ ಎಂಬ ಸ್ಥಳದಲ್ಲಿರುವ ಸರ್ವಜನ್ಯ ಪ್ರದರ್ಶನ ಶಾಲೆಯನ್ನೂ, ಮಾಂಟೆಸಾರಿ ಕ್ರಮದ ಪ್ರಕಾರವಾಗಿ ನಡೆಯುತ್ತಲಿರುವ ಶಾಲೆ ಸ್ಕೂಲನ್ನೂ ಪರೀಕ್ಷಿಸಿದರು. ನಂತರ ಇಟಲೀ ದೇಶದ ಪ್ರಜಾಪ್ರಭುತ್ವದ ಅಧ್ಯಕ್ಷನಾದ ಮುಸೊಲಿನಿಯವರನ್ನು ಕಂಡು ಸಂಭಾಷಿಸಿದರು.

ರೋಂ ಡಿಸೆಂಬರ್ ೧೪

ನಿನ್ನೆಯ ದಿವಸ ವ ಸೋಲಿನಿಯವರು, ಮ. ಗಾಂಧಿಯವರಿಗೆ ಹಿಂದೂಸ್ಥಾನದ ವಿಷಯವಾಗಿ, ಅನೇಕ ಪ್ರಶ್ನೆಗಳನ್ನು ಹಾಕಿದರು, ಸಂಭಾಷಣೆಯು ಸುಮಾರು 10 ನಿಮಿಷಗಳ ವರೆಗೆ ನಡೆಯಿತು

ಹಿಂದೂದೇಶಕ್ಕೆ ಪ್ರಯಾಣ.

ರೋಂ ಡಿಸೆಂಬರ್ ೧೪

ಈ ದಿವಸ ಮಧ್ಯಾನ್ಹ 12—40 ಘಂಟೆಗೆ ಮ. ಗಾಂಧಿಯವರು S. S. ಪಿಸ್ಸಾ ಎಂಬ ಹಡಗನ್ನು ಬ್ರಿಂಡಿಸಿಯಲ್ಲಿ ಹತ್ತಿದರು. ಇಟಲೀ ದೇಶದ ಧೊರೆಯ ಚಿಕ್ಕ ಮಗಳಾದ ಪ್ರಿನಿಸೆಸ್‌ಮೇರಿ ಎಂಬಾಕೆಯು ಮಹಾತ್ಮರನ್ನು ಸಂದರ್ಶಿಸಿ ಅರ್ಧ ಘಂಟೆಯ ವರೆಗೂ ಸಂಭಾಷಿಸಿದಳು. ಅಲ್ಲದೆ, ಸಾಯಂಕಾಲ ಪ್ರಾರ್ಥನೆಯಲ್ಲಿ ಭಾಗ ತೆಗೆದುಕೊಂಡಳು.

ವರ್ತಮಾನ ಪತ್ರದ ಸಂಪಾದಕರಿಗೆ ತಾವು ಹಿಂದೂಸ್ಥಾನಕ್ಕೆ ಹೋದೊಡನೆಯೇ ಚಳವಳವನ್ನು ರುಮಾಡುವುದಾಗಿ ಹೇಳಿದರು

ಬೊಂಬಾಯಿಯಲ್ಲಿ ಸ್ವಾಗತ.

ಬೊಂಬಾಯಿ ಪ್ರಾಂತೀಕ ಕಾಂಗ್ರೆಸ್ ಸಭೆಯ ವರು, ಮಹಾತ್ಮರು ಬೊಂಬಾಯಿ ಪಟ್ಟಣದಲ್ಲಿ 28 ನೇ ತಾರೀಖು ಇಳಿದಾಗ, ಅತಿವಿಶೇಷವಾದ ಸ್ವಾಗತವನ್ನು ಕೊಡಲು ತಯಾರಿಮಾಡುತ್ತಿರುವರು. ಅವರು ತಮ್ಮ ಕಾರ್ಯಕ್ರಮವನ್ನು ಸರ್ದಾರ ವಲ್ಲಭಭಾಯಿಯವರ ಒಪ್ಪಿಗೆ ಗೋಸ್ಕರ ಕಳುಹಿಸಿದುವರು.

ಅವರ ಕಾರ್ಯಕ್ರಮದ ಪ್ರಕಾರವಾಗಿ, ಬಲ್ಲಾರ್ಡ್ ಪಿಯರ್, ಎಲ್ಫಿನ್‌ಸ್ಟನ್ ಹಾಲ್, ಟೌನ್‌ಹಾಲ್, ಮುಸ್ತ್ರಿ ಅರ್ಯಾದ ಮೈದಾನ ಈನಾಲ್ಕು ಸ್ಥಳಗಳಲ್ಲಿ, ಸ್ವಾಗತವಾಗಬೇಕು. ಎಣಿಕೆ ಯಿಲ್ಲದಷ್ಟುಜನ ಸ್ವಯಂಸೇವಕರು, (ಸ್ತ್ರೀಯರೂ ಸಹ) ಅವರು ಇಳಿದನಂತರ, ಬಲ್ಲಾರ್ಡ್‌ಪಿಯರ್‌ದಲ್ಲಿ, ಗೌರವಯುಕ್ತ ವಂದನೆ ಮಾಡಬೇಕು. ಅಖಿಲಭಾರತ ರಾಷ್ಟ್ರೀಯಸಭೆಯ ಕಾರ್ಯಕಾರೀಮಂಡಲದ ಸದಸ್ಯರೆಲ್ಲಾ, ಸ್ಪೆಶಲ್ ಸ್ಟೀಮರ್‌ದಲ್ಲಿಹೋಗಿ, ಮಹಾತ್ಮರನ್ನು ಸ್ವಾಗತಿಸಬೇಕು. ಬಂದರಿಂದ ಗಾಂಧೀಜೀಯವರ ವಾಸಸ್ಥಾನವಾದ, ಮಣಿಭವನದ ವರೆಗೂ, ರಸ್ತೆಗಳು ಶೃಂಗರಿಸಲ್ಪಡಬೇಕು. "ಮಣಿ ಭವನ" ದಲ್ಲಿ ಒಂದ ತರುವಾಯ, ಹಿಂದುಳಿದ ವರ್ಗದವರು, ದೇಶಭಿಮಾನಿಗಳಾದ ಕ್ರೈಸ್ತರೂ ಮತ್ತು ಮುಸಲ್ಮಾನರೂ, ತಮ್ಮ ಪ್ರತಿನಿಧಿಗಳೊಂದಿಗೆ, ಅವರನ್ನು ಸಂದರ್ಶಿಸಬೇಕು.

ಪ್ರಾತಃಕಾಲ 9 ಘಂಟೆಗೆ ಕಾಫೋರೇಶನ್ ಹಾಲದಲ್ಲಿ ಮಾನ ಪತ್ರವಾಗಬೇಕು. ನಂತರ ಪಟ್ಟಣದ ಶರೀಫರು, ಪುರಭವನದಲ್ಲಿ ಸ್ವಾಗತವೀಯಬೇಕು. ಸಾಯಂಕಾಲ ಅಜಾದ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ಅವರ ಭಾಷಣವಾಗಬೇಕು ಮತ್ತು ಹಿಂದೂಸ್ಥಾನದ ಪ್ರಾಂತೀಕ ಸಭೆಗಳ ಪ್ರತಿನಿಧಿಗಳೆಲ್ಲಾ, ಬಂದರದಲ್ಲಿ ಅವರಿಗೆ ಸ್ವಾಗತವನ್ನು ಕೊಡಲು ಏರ್ಪಾಡಾಗಬೇಕು

ಅವರ ಪ್ರಿಯಮಿತ್ರರಾದ ಇಮಾಂಸಾಹೇಬರು ನಿಧನವಾದ್ದರಿಂದ, ಬಂದಕೂಡಲೇ ಅವರು ಅಹಮ್ಮದಾಬಾದಿಗೆ ಹೋಗುವುದಿಲ್ಲ. ವರ್ಕಿಂಗ್ ಕಮಿಟೀ ಮೀಟಿಂಗ್ ಬೊಂಬಾಯಿಯಲ್ಲೇ ಇಟ್ಟುಕೊಳ್ಳ ಬಹುದಾಗಿದೆ.

ಶ್ರೀ ರಾಜಗೋಪಾಲಾಚಾರ್ಯರ ವಿಜ್ಞಾಪನೆ.

ಮಹಾತ್ಮ ಗಾಂಧಿಯವರು 28-12-31 ರ ದಿವಸ, ಬೊಂಬಾಯಿ ಪಟ್ಟಣದಲ್ಲಿ ಸುಖವಾಗಿಳಿದ ಸುದ್ದಿಯು ದೇಶದಲ್ಲಿ ಹಬ್ಬಿದೊಡನೆಯೇ, ಜಾತಿ, ಮತ, ಪಕ್ಷ ಪಂಗಡಗಳ ಲಕ್ಷ್ಯವಿಲ್ಲದೆ, ಆದಿನ ಸಾಯಂಕಾಲ ಸಾರ್ವಜನಿಕ ಸಭೆಯಲ್ಲಿ, ಅವರನ್ನು ಸುಖವಾಗಿ ಸ್ವದೇಶಕ್ಕೆ ತಲುಪಿಸಿದ್ದಕ್ಕೋಸ್ಕರ, ದೇವರ ಪ್ರಾರ್ಥನೆಗಳಾಗಬೇಕು. ಮತ್ತು ಆದಿವಸ, ಎಲ್ಲಾ ಮನೆಗಳ ಮೇಲೂ ರಾಷ್ಟ್ರೀಯ ಬಾವುಟದ ಆರೋಹಣ ವಾಗಬೇಕು.

[ಶ್ರೀಮಾನ್ ರಾಜಗೋಪಾಲಾಚಾರ್ಯರು, ತಮಿಳುನಾಡಿನಲ್ಲಿ ಮಾತ್ರ ಈ ವಿಜ್ಞಾಪನೆ ಮಾಡಿದ್ದರೂ, ಇದು ಎಲ್ಲಾ ದೇಶಕ್ಕೂ ಅನ್ವಯಿಸುತ್ತೆಂಬುದನ್ನು ಗಮನಿಸಬೇಕಾಗಿದೆ.ಸಂ.]

ಕಾಂಗ್ರೆಸ್-ಕಾರ್ಯಕಾರೀಮಂಡಲಿಯು ಬೊಂಬಾಯಿಯಲ್ಲಿ ಕೂಡುವುದು.

ಮಹಾತ್ಮ ಗಾಂಧಿಯವರ ಬೊಂಬಾಯಿಯ ವಾಸಸ್ಥಾನವಾದ "ಮಣಿಭವನ" ದಲ್ಲಿ, ಅವರ ಬೊಂಬಾಯಿಯಲ್ಲಿಳಿದ ಮಾರನೆಯ ದಿವಸ ಅಂದರೆ, 29-12-31 ನೇ ಮಂಗಳವಾರ, ಕಾರ್ಯಕಾರೀ ಮಂಡಲಿಯು ಕೂಡುವುದು.

ಹಂಡಿತ ಮಾಳವೀಯರ ಭಾಷಣ

ಪ್ಯಾರಿಸ್. ಡಿಸೆಂಬರ್ 14.

ಪಂಡಿತರು ನಿನ್ನೆಯ ಸಾಯಂಕಾಲ ಇಲ್ಲಿಗೆ ಬಂದರು. ಈದಿನ ಮಧ್ಯಾನ್ಹ ಹಿಂದೂ ಸಂಘದವರೂ, ಸಾಳಿ ವಿಶ್ವವಿದ್ಯಾಲಯದ ಅಧಿಕಾರಿಗಳೂ ಅವರನ್ನು ಸತ್ಕರಿಸುವರು. ಅವರು ಈ ಊರಲ್ಲಿ ಮೂರು ದಿವಸಗಳಿದ್ದು, ಬರ್ಲಿನ್, ರೋಂ ಪಟ್ಟಣಗಳಿಗೆ ಹೋಗುವರು.

"ಸ್ವಾತಂತ್ರ್ಯಕ್ಕೋಸ್ಕರ ಪೂರ್ಣ ಹೊಡೆದಾಡಲು ಹಿಂದೂಸ್ಥಾನವು ತಯಾರಿದೆ. ಇಂಗ್ಲೀಷಿನವರು ಮತ್ತು ನಮ್ಮ ಅಭಿಪ್ರಾಯಗಳಿಗೆ ಭೇದಾಭಿಪ್ರಾಯಗಳಿದ್ದರೆ ಸ್ವಾಯತ್ತ, ಸೈನ್ಯದ ಅಧಿಕಾರವನ್ನು ಅವರಿಗೆ ಕೊಡುವವರೆಗೂ, ಯಾವುದೂ ಇತ್ಯರ್ಥವಾಗುವುದಿಲ್ಲ" ಎಂದು ಹೇಳಿದರು.

ಉತ್ತಮ ಜಮೀನು ಬಗ್ಗೆ

ಕಿರ್ಲೋಸ್ಕರ ನೇಗಿಲನ್ನು ಉಪಯೋಗಿಸಿರಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನೆ ಮಾಡುತ್ತದೆ.

ನೇಗಿಲುಗಳ ಶಿಫಾರಸ್ ಪತ್ರವೆಂದರೆ, ಒಕ್ಕಲಿಗರ ಸಂತೋಷ ವೆಂಬುವದನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ಸವಲತ್ತೆಯ ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್

ಕಿರ್ಲೋಸ್ಕರವಾಡಿ

ಜಿ. ಸಾತಾರಾ.

ರಿಜಿಸ್ಟರ್ಡ್

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ವನಸ್ಪತಿ ಯುಕ್ತ

ನರ್ವಸ್ಟ್ರೆಂಥಿಂಗ್ ಪಿಲ್ಸ

ಅರ್ಥಾತ

ಬಲವಂತ ಗುಟಿಕಾ.

ಈ ಗುಳಿಗೆಗಳಿಂದ ರಕ್ತ ಮತ್ತು ಧಾತು ಪುಷ್ಟಿಯಾಗುವದು, ಕಾಮೋತ್ತೇಜಕ ವಾಗಿ ನಪುಂಸಕತ್ವವು ನಿವಾರಣೆಯಾಗುತ್ತದೆ ಮತ್ತು ರತಿಸುಖವನ್ನು ಅನುಭವಿಸಲಿಕ್ಕೆ ಬರುತ್ತದೆ ಹಾಗೂ ಉಷ್ಣದ ರೋಗಗಳೆಲ್ಲ ಗುಣವಾಗುತ್ತವೆ. ಮತ್ತು ಉಷ್ಣದ ಚಳಿವಾಗಿ ಹಸಿವು ಜಾಸ್ತಿಗೆ ಆಗುತ್ತದೆ ಬೌಜ ಸಾಫ ಆಗುವದು ಇದು ಅಕ್ಕಿದೆ ವಾತ, ಪಿತ್ತ, ಕಫ, ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯೂ ಕೂಡಿಗುವವು. ಪೂರ್ಣ ಗುಣಕ್ಕೆ ೩ ಡಬ್ಬಿ ತಕೊಳ್ಳಿರಿ. ಒಂದು ಡಬ್ಬಿ ಕಿಮ್ಮತ್ತು ೧೦ ಆಣೆ ೩ ಡಬ್ಬಿ ಕಿಮ್ಮತ್ತು ೧—೧೪—೦ ಒಂದು ಡಬ್ಬಿಯ ಕಿಮ್ಮತ್ತು ೬ ರೂ. ಇದಲ್ಲದೆ ಒಂದು ಡಬ್ಬಿ ಕಿಮ್ಮತ್ತಿನ ಸಿಗುವದು. ಟಪಾಲು ಖರ್ಚಿಗಾಗಿ ಮಿಷ್ಟ ಹೆಚ್ಚು ಬೀಳುವದು ಮಿಂಟರ ನಿಯಮ ತಿಳಿಸಿಕೊಳ್ಳಿರಿ. ಬಾಕಿ ರೋಗದ ಬಗ್ಗೆ ವಿಶೇಷ ಮಲಾಸ ಡಬ್ಬಿ ಸಂಗಡ ಇದ್ದ ಅನುಮಾನ ಪತ್ರದಲ್ಲಿ ಇರುತ್ತದೆ. ಅಶಕ್ತತೆ ಮತ್ತು ಉಷ್ಣತೆಯ ರೋಗದ ಹೇಳಿಕೆ ಸ್ತ್ರೀಯರಿಗೆ ಮತ್ತು ಹುಡುಗರಿಗೆ ಸಹ ಈ ಗುಳಿಗೆಗಳು ಬಹಳ ಉಪಯೋಗ ಮಿಡುತ್ತವೆ.

ಎಸ್. ಬಿ. ಕದಮ್ ಮತ್ತು ಸನ್,

ಮು, ಪೋಸ್ಟ—ನಿಪ್ಪಾಣಿ [ಜಿ. ಬೆಳಗಾಂವ.]

ಗ್ರಾಹಕ ಮಿಂಟರ - ಶ್ರೀ ಹನುಮಾನ ಮಿಷ್ಟ್ರಿ ಮುಂಬಯಿ ಕರೆಕ.

TO LET

ಮುಖ್ಯ ವಾರ್ತೆಗಳು.

ತಿಪ್ಪೇರ (ಬಂಗಾಳ) ಕಲೆಕ್ಟರ್ ರವರ ಹತ್ಯೆ.

ತಿಪ್ಪೇರ ಕಲೆಕ್ಟರ್‌ರವರಾದ, ಸುಶ್ರೀ ಶಿ. ಜೆ. ಬಿ. ಸ್ಟೀವನ್ಸ್, ಐ ಶಿ ಎಸ್ ಎಂಬುವರು, 13-12-31 ನೇ ದಿವಸ ಮಧ್ಯಾನ್ಹ ಕೊಲೆ ಯಾದರು. ಸ್ಟೆಬನ್ಸೀ ಸರ್ಕಾರ್ಮೆಂಟ್ ಪ್ರೈಮರಿ ಸ್ಕೂಲಿನ ಸ್ತ್ರೀ ವಿದ್ಯಾರ್ಥಿಗಳಾದ 8 ನೇ ಕ್ಲಾಸಿನ ಮಿಸ್ ಶಾಂತಿಘೋಷ್, ಸುಸ್. ಸುನೀತಿಚೌಧರಿ ಯವರು, ಅವರ ಹತ್ಯೆ ಮಾಡಿದರೆಂದು ಕೋಮಿಲಾದಿಂದ ಅಸೋಸಿಯೇಟೆಡ್ ಸುದ್ದಿಗಾರರು ತಿಳಿಸುತ್ತಾರೆ ಮಿಸ್. ಶಾಂತಿಘೋಷ್ ಎಂಬಾಕೆಯು, ಕೋಮಿಲಾ ಕಾಲೇಜ್‌ದಲ್ಲಿ ಹಿಂದೆ ಪ್ರೊಫೆಸರ್ ಆಗಿ ಇದ್ದ, ದೇವೇಂದ್ರಘೋಷರ ಮಗಳಾಗಿದ್ದಾಳೆ. ತಾವಾರೆಂಬುದನ್ನು ಗುಪ್ತಪಟ್ಟು ಕೋಮಿಲಾದಲ್ಲಿ ಈಚ ಸಂದ್ಯವನ್ನೇರ್ಪಡಿಸಬೇಕೆಂದು, ಕಲೆಕ್ಟರ್ ಭೇಟ್ಟಿಯಾಗಿ ಅರ್ಜಿಕೊಟ್ಟರು. ಸ್ಟೀವನ್ಸ್‌ರವರು, ನಿಮ್ಮ ಹೆಡ್ಮಾಸ್ಟರಲ್ಲಿ ಈ ಏರ್ಪಾಟು ಮಾಡಿಕೊಳ್ಳಿರೆಂದು, ಅರ್ಜಿಯನ್ನು ವಾಪಸು ಕೊಡುತ್ತಿರಬೇಕಾದರೆ, ಕಲೆಕ್ಟರ್ ರವರ ಎದೆಗೆ ಗುರಿಯಿಟ್ಟು, ಗುಂಡಿನಿಂದ ಹೊಡೆದನಂತೆ ಅವರು ಕೂಡಲೇ ಸತ್ತುಹೋದರು ರಸ್ತೆಯಲ್ಲಿ ಎಂಬುವನು ಅಡ್ಡಬರಲು ಅವನ ಎಡ ಕೋಳಿಗೆ ಪೆಟ್ಟುತಗಲಿತು ಸಬ್ ಡಿವಿಸನಲ ಆಫೀಸರ ರಾಯಸಾಹೇಬ ನೇಪಾಳ ಸೇನ ರೆಂಬುವರು, ಹತ್ಯಕ್ಕೆ, ಆ ಇಬ್ಬರ ಹುಡಿಗಿಯರನ್ನೂ ಸೆರೆಮಾಡಿದರು. ಈ ಬಗ್ಗೆ ಅನೇಕ ಮನೆಗಳನ್ನು ಶೋಧಮಾಡಿದರ. ವಕೀಲ ಕಾನೀಪತ್ತವರನ್ನೂ, ಚಟ್ಟಾಗಾಂಗ ಆರ್ಮರೀ ಕೇಸ್‌ನಲ್ಲಿ ಪ್ರತಿವಾದಿ, ಶ್ರೀಮತೀ ಇಂದುಮತೀ ಬಾಯಿಯವರನ್ನೂ, ದಸ್ತಗಿರಿ ಮಾಡಿರುತ್ತಾರೆ 14-12-31 ನೇ ದಿನ ಸ್ಟೀವನ್ಸ್‌ರವರ ಸಂಸ್ಕಾರಗಳಾಗುವುವು. ಕೋಮಿಲಾದಲ್ಲಿಯೂ, ಚಟ್ಟಾಗಾಂಗದಲ್ಲಿಯೂ, ದುಃಖಪ್ರದರ್ಶನದ ಅನೇಕ ಸಭೆಗಳಾದುವು. ಬ್ರಹ್ಮಾಂದಪುರದಲ್ಲಿ ವರ್ತಮಾನವು ತಿಳಿದೊಡನೆಯೇ ಕೋರ್ಟುಗಳನ್ನು ಮುಚ್ಚಿದರು.

ಸರ್ದಾರ್ ವಲ್ಲಭಭಾಯಿ ಪಟೇಲರ ಖಂಡನೆ:-

ಬೊಂಬಾಯಿ- ಡಿಸೆಂಬರ್ ೧೫

ಸರ್ದಾರ್ ವಲ್ಲಭಭಾಯಿ ಪಟೇಲರವರು ಈ ದಿವಸ, ಮಾಧವಭಾಗದ ಸ್ತ್ರೀ ಸಭೆಯಲ್ಲಿ, ಬಂಗಾಳದಲ್ಲಿ ನಡೆದ ಕೊಲೆಯವಿಷಯದ ಬಗ್ಗೆ ಈ ರೀತಿ ಭಾಷಣ ಮಾಡಿದರು "ಇದು ಘೋರ ಅಪರಾಧವಾಗಿ, ಹಿಂದೂಸ್ಥಾನದ ನಾರೀಮಣಿಯರ ಒಳ್ಳೆಯ ಹೆಸರಿಗೆ ಕಳಂಕವನ್ನು ತರತಕ್ಕದ್ದಾಗಿದೆ ಅವರ ಒಳ್ಳೆಯ ಹೆಸರಿಗೆ ಕಪ್ಪು ಚುಕ್ಕೆಯಂತಾಗುವುದು. ಕಾಂಗ್ರೆಸ್ ಇಂಥಾ ಹೇಡಿಕೃತ್ಯಗಳನ್ನು ಎಂದಿಗೂ, ಪ್ರೋತ್ಸಾಹಿಸುವುದಿಲ್ಲ. ಈ ಕೃತ್ಯವು ಹಿಂದೂಸ್ಥಾನದ ಹಾಲೀನ ಹೆಣ್ಣತಿಗಳಿಗೂ, ಇತಿಹಾಸಕ್ಕೂ, ವಿರುದ್ಧವಾಗಿದೆ, ಮರಣಕ್ಕೂ, ನಾಶಕ್ಕೂ, ಕಾರಣವಾದ, ಆಯುಧಗಳನ್ನು ಹಿಡಿಯುವುದು ಸ್ತ್ರೀಯರಿಗೆ ಯೋಗ್ಯವಲ್ಲದಿದ್ದು. ಅವರು ಸೃಷ್ಟಿಗೂ ರಕ್ಷಣೆಗೂ ಕರ್ತರಾಗಲಿ ನಾಶಕ್ಕಲ್ಲ"

ಆಜಾದ್ ಮೈದಾನದ ಸಭೆಯಲ್ಲೂ, ಈ ಕೃತ್ಯವನ್ನು ಸರ್ದಾರರು ಖಂಡಿಸಿದರು.

ಸಂಯುಕ್ತ ಪ್ರಾಂತದಲ್ಲಿ ಚಳವಳಿ.

ಕಂದಾಯ ಕೊಡಬಾರದೆಂಬ ಕಾಂಗ್ರೆಸ್ ಚಳವಳಿಯನ್ನು ಪ್ರತಿಬಂಧಿಸಲು, ಸರ್ಕಾರದವರು, ಕಾಂಗ್ರೆಸ್ ನಾಯಕರಿಗೆಲ್ಲಾ 144 ನೇ ಕಲಂ ಪ್ರಯೋಗಮಾಡಿ ಭಾಷಣ ಬಂದಿ ಮಾಡಿದ್ದಾರೆ. ಪಂಡಿತ ಜವಾಹಿರಲಾಲರು, ಹುಬ್ಬಳ್ಳಿಪ್ರಾಂತ್ಯ ಸರ್ಕೀಟು ಬಂದಿರುವದ್ದರಿಂದ ಅವರಿಗೆ ಪ್ರಯೋಗವಾಗಿಲ್ಲವಾಗಿ ತಿಳಿದ ಬಂದಿದೆ. ಡಿಸಂಬರ್ 15 ನೇ ತಾರೀಖಿನ ದಿವಸ, ಪೋಲೀಸಿನವರು, ಆನಂದಭವನವನ್ನೂ, ಸ್ವರಾಜ್ಯಭವನವನ್ನೂ ಶೋಧಿಸಿದರು ಪಂಡಿತ ಜವಾಹಿರಲಾಲರ ಆಫೀಸ್‌ರೂಂನ್ನು ಪೂರ್ತಾಶೋಧಿಸಿದರು, ರಿಕಾರ್ಡುಗಳು ಮುಖ್ಯವಾಗಿ ಏನೂ ದೊರಕಿಲ್ಲವೆಂದು ತಿಳಿದು ಬಂದಿದೆ.

ಯು. ಪಿ. ಕೌನ್ಸಿಲದಲ್ಲಿ, ಶ್ರೀ. ಶಿ. ವೈ. ಚಿಂತಾಮಣಿಯವರು, ಆರ್ಡಿನನ್ಸದ ವಿರುದ್ಧ ಪ್ರತಿಭಟಿಸಿದರು ಸಾರ್ವಜನಿಕ ಅಭಿಪ್ರಾಯಕ್ಕೆ ವಿರುದ್ಧ ವಿಲ್ಲದರೀತಿಯಲ್ಲಿ ತೀರ ಸಾಮಾನ್ಯವಾಗಿ, ಆರ್ಡಿನನ್ಸದ ಉಪಯೋಗ ಮಾಡುವರೆಂದು ಸರ್ಕಾರದ ಪರ ಫೈನಾನ್ಸ ಮೆಂಬರ ರವರೂ, ಹೋಂ ಮೆಂಬರ್‌ರೂ ಭರವಸೆ ಕೊಟ್ಟರು.

ದುಂಡುಮೇಜಿನ ಕಮೀಟಿಗಳು.

ಮುಂದಿನ ವರ್ಷ ಪ್ರಧಾನ ಮಂತ್ರಿಗಳಾದ ಸುಶ್ರೀ ಮ್ಯಾಕ್ಡೊನಾಲ್ಡರವರು ಕಮೀಟೀ ಅಧ್ಯಕ್ಷ ಪದವಿಯನ್ನು ವಹಿಸಿ, ಒಂದು ತಿಂಗಳ ವರಿಗೂ, ಹಿಂದೂಸ್ಥಾನದಲ್ಲಿರುವರೆಂಬ ವರ್ತಮಾನವನ್ನು " ದೇಲೀ ಹೇರಾಲ್ಡ್ " ಪತ್ರಿಕೆಯ ಪ್ರಕಟಿಸಿರುವುದು.

ಲಾರ್ಡ್ ಸ್ಯಾಂಕಿಯವರು ಅಧ್ಯಕ್ಷರಾದರೆ ಕಣಸವೇಟೆವಾ ಜನರು ಒಪ್ಪುವುದಿಲ್ಲವಾಗಿ ಅವರೇ ಆ ಕೆಲಸವನ್ನು ನಿರ್ವಹಿಸಬೇಕೆಂದು ಬಹಳ ಒತ್ತಾಯವಾಗುತ್ತಲಿದೆ. ಲಾರ್ಡ್ ಸ್ಟ್ರಲ್ ರವರೂ, ಒಬ್ಬಿಸ್ ಅಟ್ಟಿನವರೂ, ಅಧ್ಯಕ್ಷರಾಗಬಹುದೆಂಬ ವಾರ್ತೆಗಳಿವೆ.

ಬಂಗಾಳದಲ್ಲಿ ಈಚೆಗೆ ಸಂಭವಿಸಿದ ಕೊಲೆಯಿಂದ ಜನರ ಮನಸು ತಲ್ಲಣಿಸಿ ಹೋಗಿದೆ. ಅಲ್ಲದೆ ಮಹಾತ್ಮಗಾಂಧಿಯವರು ಢೋಂ ಪಟ್ಟಣದಲ್ಲಿ ಬಹಿಷ್ಕಾರದ ವಿಷಯದ ಬಗ್ಗೆ ಮಾಡಿದ ಭಾಷಣಗಳೂ, ಮುಖ್ಯ ವಿಷಯಗಳನ್ನು ನಿಷ್ಪಕ್ಷಪಾತವಾಗಿ ಚರ್ಚಿಸಲಿಕ್ಕೆ ಸಾಧ್ಯವಾಗಲಿಕ್ಕಿಲ್ಲವೆಂಬಂಶವನ್ನು ಬ್ರಿಟಿಶ ಪತ್ರಿಕೆಗಳು ಹೇಳುತ್ತಲಿವೆ.

ಪ್ರಜೆಯೇ ದೇವರು

(ಬಿ. ಹನುಮೇ ಗೌಡ ಹಾಸನ.)

ಪ್ರಜೆಗಳನುಮತಿಯಿಂದ ಆಳುವುದು ಧರ್ಮ,
ಪ್ರಜೆಗಳೇ ದೇಶದಲಿ ಆಧಾರ ಕರ್ಮ ;
ಪ್ರಜೆಗಳಿಗೆ ಹಿತವನ್ನು ಬಯಸುತಿರಬೇಕು ;
ಪ್ರಜೆಗಳನು ಮತಿಯಿಂದ ಪಡೆಯುತಿರಬೇಕು.
ಪ್ರಜೆಗಳಿಗೆ ಕಷ್ಟ ಸುಖನೀವರಿಯಬೇಕು;
ಸುಜನರಿರ ದೇಶಹಿತನೀವಾ ಬಯಸಬೇಕು.
ದೇಶದಲಿ ರೈತರಿಗೆ ಸುಖವಿರಲಿಬೇಕು;
ಕೋಶದಲಿ ಸರಕಾರ ನೆರವೀಯಬೇಕು;
ಅತಿ ಬಡವ ತಿರುಕನಿಗೆ ಅಧಿಕಾರವಿರಬೇಕು;
ಗತಿಯಲಿ ಚುನಾವಣೆಗೆ ಮತವೀಯಬೇಕು.
ತಿರಿಗೆಗಳು ಅವರ ವೇಲೆಚ್ಚುತಿವೆಯಲ್ಲ!
ಬರಿದಾಗಿ ಕೈಕಾಸು ಬಿಡುತಿರುವರಲ್ಲ!
ಹಳ್ಳಿಯೊಳು ರೈತನಿಗೆ ಮಡ್ಡು ಬಲು ಕಷ್ಟ
ಸುಳ್ಳಲ್ಲ ದುಡಿಯುವನು ಹಗಲು ಇರುಳೆಲ್ಲ!
ಪ್ರಜೆಗಳನುಮತಿಯಿಂದ ಸಭೆಗೋಗುವರೆ,
ಪ್ರಜೆಗಳಲಿ ಕಷ್ಟ ಸುಖ ನೀವರಿಯುತಿಹರಾ!
ಒಟ್ಟುಗೂಡುತೆ ನೀವು ನ್ಯಾಯವಾಡಿ ತನ್ನಿ;
ಒಟ್ಟಾಗಿ ಸೇರುತಲಿ ಹಕ್ಕು ಕರೆತನ್ನಿ.
ಪ್ರಜೆ ಅಣ್ಣಾ, ಪ್ರಜೆ ತಮ್ಮ ಪ್ರಜೆ ಅಕ್ಕ ತಂಗಿ,
ಸುಜನರೆಲ್ಲರ ಕರೆವ ಭಾರತಿಯ ತಾಯಿ.

ಬಿ. ಹ.

ಗಾಂಧಿಜಿಯವರ ಇಂಗ್ಲೆಂಡಿನ ಭಾಷಣಗಳು.

ಇಂಗ್ಲೆಂಡಿನಲ್ಲಿ ಕಾಲಿಟ್ಟಿಂದಿನಿಂದ ಈ ವರೆಗೆ ಆದ ಮಹಾತ್ಮ ಗಾಂಧಿಯವರ ಉಪನ್ಯಾಸಗಳು ಒಂದರಿಂದೊಂದು ಉಜ್ವಲವಾಗಿವೆ. ಒಂದೊಂದು ಭಾಷಣವೆಂದರೆ ಇಂಗ್ಲೆಂಡಿನೊಳಗಿನ ನಮ್ಮ ವಿರೋಧಿಗಳ ಎದೆ ಬಿರಿಸುವ ವಜ್ರಾಘಾತ; ಸತ್ಯಾನ್ವೇಷಿಗಳೂ ಸತ್ಯಪಕ್ಷಪಾತಿಗಳೂ ಆದ ಸಜ್ಜನರು ನೆಚ್ಚಿ ಮೆಚ್ಚಿ, ಕೇಳಿಕೊಂಡ ಕರ್ಣಸೀಯೂಷ; ಸ್ವಾತಂತ್ರ್ಯಾಭಿಲಾಷಿಗಳಾದ ಭಾರತೀಯರಿಗೆ ಸ್ಫೂರ್ತಿ ಶಕ್ತಿಗಳ ಆಗರ.

ಈ ಉಪನ್ಯಾಸಗಳೆಲ್ಲವನ್ನು ಪ್ರತಿಯೊಬ್ಬ ಕನ್ನಡಿಗನೂ ಓದಬೇಕು; ಓದಿ ಧ್ಯಾನಗದಿದ್ದರೆ ಓದಿಸಿ ಕೇಳಬೇಕು ಇವುಗಳನ್ನು ಓದಿ ಓದಿ, ನೆನೆನೆನೆದು ಮನದಲ್ಲಿ ಮಡಿಸಿ ಕೊಳ್ಳಬೇಕು. ಇವುಗಳನ್ನೋದಿ ಅರಗಿಸಿಕೊಂಡರೆ ಸಂದೇಹರಾಯನು ಶ್ರದ್ಧಾವಂತನಾಗುವನು; ನಿರುತ್ಸಾಹಿಯು ಉತ್ಸಾಹದ ಮೂರ್ತಿಯಾಗುವನು.

ಉಪನ್ಯಾಸಗಳು ಅಮೂಲಿಕವಾಗಿದ್ದರೂ ಅಲ್ಪ ಮೂಲ್ಯದಲ್ಲಿ ಎಲ್ಲರಿಗೂ ಕೊಳ್ಳಲು ಸಾಧ್ಯವಾಗುವಂತೆ ಪುಸ್ತಕರೂಪದಲ್ಲಿ ಅವನ್ನು ಕನ್ನಡದಲ್ಲಿ ಯಾರಾದರೂ ಬೇಗನೆ ಪ್ರಕಟಿಸಿದರೆ ಅದೊಂದು ಒಳ್ಳೆಯ ಕೆಲಸವಾಗುವುದು. ಕರ್ನಾಟಕದಲ್ಲಿ ರಾಷ್ಟ್ರೀಯ ವಿಚಾರ ಪ್ರಸಾರಕ್ಕಾಗಿ ಈ ಉಪನ್ಯಾಸಗಳು, ಮಿ. ಬ್ರೈಲ್ಸ್‌ಫರ್ಡ್‌ರ ಲೇಖನಗಳು ಮೊದಲಾದುವು ಸಣ್ಣ ಸಣ್ಣ ಪುಸ್ತಕ ರೂಪದಿಂದ ಇಷ್ಟರಲ್ಲಿಯೆ ಪ್ರಕಟವಾಗಿ ಹಳ್ಳಿಹಳ್ಳಿಗಳಲ್ಲಿಯೂ ಮನೆಮನೆಗೆ ಹೋಗಿ ಬೀಳಬೇಕಾಗಿದ್ದಿತು. ಇರಲಿ; ಒಳ್ಳೆಯಕೆಲಸ ಯಾವಾಗ ಕೈಕೊಂಡರೂ ಒಳ್ಳೆಯದೆ

(ಜಯಕರ್ನಾಟಕ)

ಮಹಾತ್ಮಜಿಯವರ ಪರಮ ಮಿತ್ರರಾದ

ಇಮಾಮ ಸಾಹೇಬರ ಮೃತ್ಯು.

ದಕ್ಷಿಣ ಆಫ್ರಿಕದ ಸತ್ಯಾಗ್ರಹದಲ್ಲಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಿ, ಮಹಾತ್ಮರ ಸಹಯೋಗಿಗಳಾಗಿ, ಆಗಿನಿಂದಲೂ, ಅವರನ್ನು ಎಡೆಬಿಡದಿದ್ದ, ಇಮಾಂಸಾಹೇಬ್ ಬಾವಾಝರ್ ಎಂಬ ವೃದ್ಧ ಮುಸಲ್ಮಾನರು, ಈ ತಿಂಗಳ 9 ನೇ ತಾ. ಪ್ರಾತಃಕಾಲ ಮರಣ ಹೊಂದಿದರು.

ಇವರು ಹಿಂದೂಗಳ ಜೊತೆಯಲ್ಲಿ ಆಶ್ರಮದಲ್ಲಿದ್ದರೂ, ಪಕ್ಕಾ ಮುಸಲ್ಮಾನರಾಗಿ, ನಮಾಜು ಕ್ರಮಗಳನ್ನು ಬಿಟ್ಟರಲಿಲ್ಲ. ಹಿಂದೂ, ಮುಸಲ್ಮಾನ್ಯಕ್ಯತೆಯ ವಿಷಯದಲ್ಲಿ ಇವರಿಗೆ ಅಶ್ಚಲವಾದ ನಂಬಿಕೆ ಇದ್ದಿತು. ಇವರು ರೋಗಶಯ್ಯೆಯಲ್ಲಿದ್ದರೂ, ದುಂಡುಮೇಜಿನ ವರ್ತಮಾನಗಳನ್ನೂ, ಮಹಾತ್ಮರ ಕಾರ್ಯಕ್ರಮಗಳನ್ನೂ ಶ್ರದ್ಧೆಯಿಂದ ಕೇಳುತ್ತಲಿದ್ದರು ಹೋದವರ್ಷ ದರ್ಶನಾ ಸತ್ಯಾಗ್ರಹದಲ್ಲಿ, ಅವರ ಪ್ರಕೃತಿಯು ಕೆಟ್ಟಿದ್ದರಿಂದ ಭಾಗ ತೆಗೆದುಕೊಳ್ಳಬಾರದೆಂದು ಸ್ನೇಹಿತರು ಆಗ್ರಹಪಡಿಸಿದರೂ ಕೇಳದೆ, 2000 ಸತ್ಯಾಗ್ರಹಿಗಳ ನಾಯಕರಾಗಿ ಕಾರಾಗೃಹವನ್ನು ಸೇರಿದರು ಅಲ್ಲಿ ಅವರ ಪ್ರಕೃತಿಯು ಇನ್ನೂ ಕೆಟ್ಟಿತು ಒಪ್ಪಂದವಾಗಿ ಬಿಡುಗಡೆಯಾದಂದಿನಿಂದ, ಕೊನೆಯವರೆಗೂ, ಅವರ ಪ್ರಕೃತಿಯು ಸುಧಾರಿಸಿರಲಿಲ್ಲ ಇವತ್ಕೋಸ್ಕರವೇ, ಮಹಾತ್ಮರು ಜಹಜೆಳೆದೊಡನೆಯೇ, ಬೊಂಬಾಯಿಗೆ ನಿಲ್ಲದೆ, ಅಹಮ್ಮದಾಬಾದಿಗೆ ಬರುತ್ತಿದ್ದರು. ಆದರೆ ಅವರಿಗೆ ಕೊನೆಯ ಸಂದರ್ಶನ ವಾಗಲಿಲ್ಲ.

ಮಹಾತ್ಮರ ದುಃಖದಲ್ಲಿ ನಾವೆಲ್ಲರೂ ಭಾಗಿಗಳು. ದೇವರ. ಇಂಥಾ ದೇಶ ಪ್ರೇಮಿಗಳ ಆತ್ಮಕ್ಕೆ ಶಾಂತಿಯನ್ನೀಯಲಿ.

ಇ ಸೂಚನೆ— ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂಬಂಶವನ್ನು ಎಲ್ಲರೂ, ತಿಳಿಯಬೇಕು. ಸಂಪಾದಕ ಕ. ಕೇ.

ಚಂದಾದಾರರಲ್ಲಿ ವಿನಂತಿ.

ನಾವು ಎರಡು ತಿಂಗಳಿಂದಲೂ, ತಮಗೆ ಪತ್ರಿಕೆಗಳನ್ನು ಕಳುಹಿಸುತ್ತಾ ಬಂದಿರುತ್ತೇವೆ. ಚಂದಾ ಹಣವನ್ನು ತಾವು ಕಳುಹಿಸಿಲ್ಲ. ವಿ. ಪಿ. ಮೇಲೆ ಕಳುಹಿಸುವುದು ನಿಮಗೆ ದುಬಾರಿಯಾಗಿ ಪೋಸ್ಟು ಖರ್ಚುಗಳನ್ನು ವೃಥಾ ನೀವು ಕೊಡಬೇಕಾಗುತ್ತದೆ. ತಾವು ದಯವಿಟ್ಟು, ಮನಿ ಆರ್ಡರದ ಮೇಲೆ ವಾರ್ಷಿಕ ಚಂದಾ ಹಣ 3—0—0 ಕಳುಹಿಸಿ, ಬಳ್ಳಾರಿ ಜಿಲ್ಲೆಯ ಒಂದೇ ಒಂದಾದ ಈ ಪತ್ರಿಕೆಯನ್ನು ಆನುಗ್ರಹಿಸುವಂತೆ ಸಂಬಿಡುತ್ತೇನೆ.

ವ್ಯವಸ್ಥಾಪಕ— ಕರ್ನಾಟಕ ಕೇಸರಿ.



ಸರ್. ಎಂ. ವಿಶ್ವೇಶ್ವರಯ್ಯನವರ ಭಾಷಣ.

(ಖಾದಿಯ ಮಹತ್ವ.)

ಮದ್ರಾಸ್ ಪಟ್ಟಣದ ರಾಯಪೇಟೆ ಕಾಂಗ್ರೆಸ್ ಹೌಸ್‌ನಲ್ಲಿ 16 ನೇ ತಾ. ಸಾಯಂಕಾಲ 6 ಘಂಟೆಗೆ ಅಖಿಲ ಹಿಂದೂಸ್ಥಾನದ ಸ್ವದೇಶೀ ವಸ್ತು ಪ್ರದರ್ಶನವು ಮೈಸೂರು ಸಂಸ್ಥಾನದ ದಾಜೀ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರಿಂದ ತೆರೆಯಲ್ಪಟ್ಟಿತ. ಈ ಸಂದರ್ಭದಲ್ಲಿ ಅವರು ಅತಿ ಮಹತ್ವವಾದ ಭಾಷಣವನ್ನು ಕೊಟ್ಟರು. ಅರ್ಥ ಶಾಸ್ತ್ರಜ್ಞರೂ ಸ್ವಾವಲಂಬನೆಯಲ್ಲಿ ಪ್ರಸಿದ್ಧರಾಗಿರುವವರೊಬ್ಬ ಎಂಜಿನೀಯರ್ ರವರೂ ಆದ ಈ ವೃದ್ಧ ವಿದ್ವನ್ಮಣಿಗಳ ಭಾಷಣದ ಪ್ರತಿಯೊಂದು ಭಾಗವೂ, ಸಂಗ್ರಾಹಿಸಿಟ್ಟುಕೊಳ್ಳತಕ್ಕದ್ದಾಗಿದೆ ಖಾದಿಯ ವಿಷಯದಲ್ಲಿ ಅವರಿಗೆ ನಂಬಿಕೆ ಇದ್ದಿಲ್ಲ. ಈಗ ಅವರು ಹೇಳುವುದನ್ನು ಕೇಳೋಣ:—

"ಯಂತ್ರವು ಅತ್ಯಲ್ಪಕಾಲದಲ್ಲಿ ಅತಿ ಸುಲಭವಾದ ಬಟ್ಟೆಯನ್ನು ಹಿಗಿಸುತ್ತಿರುವ ಈ ಕಾಲದಲ್ಲಿ ಕೈ ನೂಲಿನ ಕೈ ಮಗ್ಗದ ಖಾದಿಯನ್ನು ತಯಾರಿಸುವುದು ವೃಥಾ ಪ್ರಯತ್ನವೆಂತಲೂ, ಆಧೀ ಕಾಲವಷ್ಟೇ ರಾಜಕರವಾದ ರೀತಿಯಲ್ಲಿ ಇತರ ಉದ್ಯಮಗಳಿಗೆ ಉಪಯೋಗಿಸಬಹುದೆಂತಲೂ, ಆಲೋಚಿಸುತ್ತಿದ್ದ ಒಬ್ಬರಲ್ಲಿ ನಾನೊಬ್ಬನಾಗಿದ್ದೆನು ದೇಶದ ಸದ್ಯದ ಸ್ಥಿತಿಯಲ್ಲಿ ಉದ್ಯೋಗಗಳಿಲ್ಲದೆ ಲಕ್ಷಗಟ್ಟಲೆ ಜನರಾಗಿರುವ ತಹತಹಿಸುತ್ತಿರುವ ಈ ಸಮಯದಲ್ಲಿ ಹಿಂದೂಸ್ಥಾನದ ಪ್ರಾಮುಖ್ಯ ಪುರುಷರಿಗೂ, ನಮ್ಮ ದೊಡ್ಡ ದೇಶಭಕ್ತರಾದ ಮಹಾತ್ಮ ಗಾಂಧಿಯವರ ನೇತೃತ್ವದ ಅಧೀನದಲ್ಲಿ ಕಾಂಗ್ರೆಸದವರು ಖಾದಿ ಪ್ರಚಾರದ ಮೂಲಕ, ಕಾರ್ಯತಃ ಬಡವರಿಗೆ ಸಹಾಯವನ್ನೀಯುವ, ಉತ್ತಮ ಕಾರ್ಯವನ್ನು ಯಾವ ಬುದ್ಧಿವಂತನಾಗಲೀ, ಸರಿಯಾದುದಲ್ಲವೆಂದು ಹೇಳಲಾರನು."

ಖಾದಿಯ ಮಹತ್ವವು ವೈದ್ಯ ಮಹಾಶಯರಿಗೆ ಈಗ ಚೆನ್ನಾಗಿ ತಿಳಿಯಿತು ಮಹಾತ್ಮ ಗಾಂಧಿಯವರು 12 ವರ್ಷಗಳ ಕೆಳಗೆ ಖಾದಿ ಪ್ರಚಾರದ ಬೀಜವನ್ನು ಬಿತ್ತಬೇಕಾದರೆ, ಸರ್ವ ನಾರಾಯಣನು ಅದರ ಫಲವನ್ನುಣ್ಣಲೆಂಬ ಮಹತ್ವ ಧ್ಯೇಯವನ್ನಿಟ್ಟುಕೊಂಡಿದ್ದನು ಬಡತನವು ಅಗಿನಿಂದಲೂ, ಕೃಷಿ ಕೃಷಿಯಾಗಿ ವರ್ಷ ವರ್ಷವೂ ಹೆಚ್ಚುತ್ತಾ ಬಂದಿದೆ. ಹೆಚ್ಚುತ್ತಿರುವ ದಾರಿದ್ರ್ಯಕ್ಕೆ ಖಾದಿಯ ಹೊರತು ಬೇರೊಂದು ಔಷಧವು 12 ವರ್ಷಗಳ ಕೆಳಗೆ ಇದ್ದಿಲ್ಲ. ಈಗಲೂ ಇಲ್ಲ. ಕಳೆದಂತ್ಯದ ದಾರಿದ್ರ್ಯ ಘಾತದ ಅವಾಂತರವು ಅಗ ಪ್ರಸಾರವಿತ್ತು. ಆದರೆ ಈ ಕೆಲ ವರ್ಷಗಳಿಂದಲೂ, ಚೆನ್ನಾಗಿ ಓದಿ ಕಲಿತು ಪದವೀಧರರಾದವರಿಗೆ ಸರ್ಕಾರದ ಉದ್ಯೋಗಗಳು ಸಹಜವಾಗಿ ದೊರೆಯದೆ, ಅವರು ಹಡುತ್ತಿರುವ ಸಂಕಟಗಳು, ಯಾವಾಗಲೂ, ಪಟ್ಟಣಗಳ ಸಂಚಾರ ಮಾಡುವ ಸರ್. ಎಂ. ವಿಶ್ವೇಶ್ವರಯ್ಯನವರಂಥ ಅರ್ಥ ಶಾಸ್ತ್ರಜ್ಞರ ಅವಲೋಕನಕ್ಕೆ ಬಂದಿವೆ

ಖಾದಿಯ ಪ್ರಚಾರವು ಆಗಬೇಕಾದಷ್ಟು ಆಗಿಲ್ಲ ಅದುದರಿಂದಲೇ ಬಡವರು ಸಂತಸಪಡಬೇಕಾಗಿ ಬಂದಿದೆ. ಪಟ್ಟಣದ ಶ್ರೀಮಂತರೂ ಓದು ಕಲಿತ ಅಧುನಿಕಯುವಕರಿಗೂ ಇನ್ನೂ ಸ್ವದೇಶಿ ಬಟ್ಟೆಗಳ ಮೋಹವು ಹೋಗಿಲ್ಲ. ಬಟ್ಟೆ ದುಡ್ಡು, ಜವಳಿ ವ್ಯಾಪಾರಿಗಳಿಗೆ ಸಾಕಾದಷ್ಟು ದೇಶಾಭಿಮಾನವು ಹುಟ್ಟಿಲ್ಲ

ಖಾದಿ ಉತ್ಪಾದಕರೂ, ಪ್ರಚಾರಕರೂ ಹಿಂದೂಸ್ಥಾನದಲ್ಲಿ ಒಂದು ಕೋಟಿ ಜನಗಳು, ಕಂಕಣ ಬದ್ಧರಾದರೆ ಹಿಂದೂಸ್ಥಾನಕ್ಕೆಲ್ಲಾ ಸುಲಭದರಲ್ಲಿ ಬಟ್ಟೆಯನ್ನೂ ದಗಿಸಬಹುದು. ಏಳು ಲಕ್ಷ ಹಳ್ಳಿಗಳಲ್ಲಿರುವ ದಾರಿದ್ರ್ಯವೂ ಕ್ರಮೇಣ ಮಾಯವಾಗುವುದು.

ದೇಶ ಸೇವಾಸಕ್ತಿಯುಳ್ಳ ಪ್ರತಿಯೊಬ್ಬ ಹಿಂದೀಯನೂ ಖಾದಿಯನ್ನು ಧರಿಸಿ, ತನ್ಮೂಲಕ, ಭಾರತಮಾತೆಯ ಸೇವೆಯನ್ನು ಮಾಡಬೇಕೆಂದು ಪ್ರಾರ್ಥಿಸಲಾಗಿದೆ

ಮ. ಗಾಂಧಿಯವರು ಲಂಡನ್ನಿಗೆ ತಾರು ಕೊಟ್ಟರು.

ಚಳವಳವನ್ನು ಕೂಡಲೆ ಪ್ರಾರಂಭಿಸುವುದಿಲ್ಲ

ಮಹಾತ್ಮರು ಲಂಡನ್ ಪಟ್ಟಣಕ್ಕೆ ಪಡಗಿನಿಂದ ತಂತಿ ಇಲ್ಲದ ಸಮಾಚಾರವನ್ನು ಈ ರೀತಿ ಕೊಟ್ಟರು.

ಇಲೀ ದೇಶದಲ್ಲಿ ಯಾವ ಸುದ್ದಿಗಾರರಿಗೂ ನಾನು ಸಂದೇಶವನ್ನು ಕೊಟ್ಟಿಲ್ಲ. ಗಿರಾಣೋಳ ದಿ. ಇಟಲಿಯಾದವಲ್ಲಿನ ಪ್ರಕಟನೆಯು ಇದ್ದೆ ಸುಳ್ಳು.

ನನ್ನ ಕೊನೆಯ ಭಾಷಣದಂದಿನ ಸ್ಥಿತ್ಯಂತರಾಂತ ಪ್ರಿತದ ವಿಷ್ಟನ್ನ ಪಟ್ಟಣದ್ದು ಹಿಂದೂಸ್ಥಾನದವರು ನನ್ನ ಪ್ರಕಟಿಸಿಯ ವಿಷಯವನ್ನು ಕೇಳಿದೆ ಯಾವ ನಿರ್ಣಯಕ್ಕೂ ಬರಬಾರದೆಂದು ಅಗ ತಿಳಿಸಿದ್ದೆನು.

ನಾನು ಕೂಡಲೇ ಯಾವ ಕ್ರಮವನ್ನೂ ತೆಗೆದುಕೊಳ್ಳುವಲ್ಲಿ ಅದರ ಅಧಿಕಾರಿಗಳನ್ನು ಬೇಕಾದಷ್ಟು, ಕೇಳಿಕೊಳ್ಳುವೆನು. ನಮ್ಮೆಷ್ಟ ದಾರ್ಶ ಚಳವಳವು ಪ್ರಾರಂಭವಾದರೂ ಆಗಬಹುದು.

ಈ ಪ್ರಕಟನೆಯನ್ನು ಅದನ್ನು ಹೆಚ್ಚಾಗಿ ಪ್ರಸಾರ ಮಾಡಿರಿ.

ಬೊಂಬಾಯಿಗೆ ಹೋಗಿ ಕಾರ್ಯಕಾರಿ ಮಂಡಲದವರಲ್ಲಿ ಆಲೋಚನೆ ನಡೆಸದೆ ನಾನು ಯಾವ ಕಾರ್ಯಕ್ಕೂ ಬರುವಂತಿಲ್ಲ ಎಂಬುದಾಗಿ ಪೂರ್ವದಿವಂದರದಲ್ಲಿ ಹೇಳಿದರು.

ದೆಹಲಿ ಲಂಬ್ಲಿ ಮಾಜಿ ಅಧ್ಯಕ್ಷರಾದ ಶ್ರೀ ವಿಠಲ ಭಾಯಿ ಪಟೇಲರವರು, ಮ ಗಾಂಧಿಯವರ ಬೊಂತೆಯಲ್ಲಿ ಈ ತಿಂಗಳು 28 ನೇ ತಾ ಬೊಂಬಾಯಿಲ್ಲಿ ಇಳಿಯುವರು ಆ ದಿನ ಸಾಯಂಕಾಲ ಅಲ್ಲಾದ ಸೈದಾನದಲ್ಲಿ ಅವರ ಭಾಷಣಕ್ಕೂ ಏರ್ಪಾಡು ಮಾಡುವರಿರುವರು. ಬೊಂಬಾಯಿನ ದೇಶ ಸೇವಕಿಯರು ಸ್ವೆಚ್ಛಾ ಸ್ವೀಕಾರ ಲಾಂಛನಗಳಲ್ಲಿ ಮ ಗಾಂಧಿಯವರಿರುವ ದೊಡ್ಡ ಹಡಗಿಗೆ ಹೋಗಿ ಸ್ವಾಗತವನ್ನೀಯುವರು.

ಪಂಡಿತ ಜವಾಹಿರಲಾಲರ ಕರ್ನಾಟಕ ಪರ್ಯಟನ

ಪಂಡಿತ ಜವಾಹಿರ್‌ಲಾಲ್ ನೆಹರೂಯವರು ಬೆಳಗಾಂ ಧಾರ್ವಾಡ, ಹುಬ್ಬಳ್ಳಿ, ಗದಗ, ಬಾಗಲ್ಕೋಟೆ ಬಿಜಾಪುರ ಮುಂತಾದ ಪಟ್ಟಣಗಳನ್ನು ಸಂದರ್ಶಿಸಿ, ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲೆ ಸ್ಫೂರ್ತಿದಾಯಕವಾದ ಭಾಷಣಗಳನ್ನಿತ್ತು ಜನ ಜಾಗೃತಿಯನ್ನು ಮಾಡಿದರು.

ಹುಬ್ಬಳ್ಳಿಯಲ್ಲಿ ಪಂಡಿತರ ಸಂದರ್ಶನಾಪೇಕ್ಷೆಗಾಗಿ ಬಂದ ಜನ ಸಂದಣಿಯೂ ಉತ್ಸಾಹವೂ, ಅಪರಿಮಿತವಾಗಿ, ಕೆಲವು ಸಂದರ್ಭಗಳಲ್ಲಿ ಸ್ವಯಂ ಸೇವಕರ ಶಕ್ತಿ, ಅಟೋಪಗಳಿಗೆ ಮೀರಿ ಹೋಗುತ್ತಿದ್ದಿತ್ತು. ಹುಬ್ಬಳ್ಳಿಯವರು ಇನ್ನೂ ಜನಗಳ ಸಂದಣಿಯನ್ನು ಹಿಂದೆ ಯಾವಾಗಲೂ ನೋಡಿರಲಿಲ್ಲವೆಂದರು. ಅವರು ಹೋದೆಡೆಗಳಲ್ಲೆಲ್ಲಾ ಜನರ ಉತ್ಸಾಹ, ಸ್ಫೂರ್ತಿಗಳು ಇಮ್ಮಡಿಯಾಗಿ ಜನರು ಹೇಗೆ ಪರವಶರಾಗುತ್ತಿದ್ದರು ಅಂತು ಎಲ್ಲಾ ಸ್ಥಳಗಳಲ್ಲಿಯೂ, ಯಾವ ದೊಂದಲೆಯೂ ಇಲ್ಲದೆ ಶಾಂತ ರೀತಿಯಲ್ಲಿ ಕೊನೆಗಂಡಿತು

18—12—31 ರ ಸಾಯಂಕಾಲ ಸ್ವಯಂಸೇವಕರಿಗೆ ಪ್ರಮಾಣ ಪತ್ರಗಳನ್ನು ಕೊಡಬೇಕಾದ ಸಮಾರಂಭದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿ, ಗಾಂಧಿ ಟೋಪಿಗಳ ಸಮುದ್ರದೊಳಾಡುವಿಯಲ್ಲಿ, ಜನರ ಸಂದಣಿಯು ಕೂಡಿದ್ದಿತ್ತು ಸಂಡಿತರು ಸ್ವತಿಯೊಬ್ಬ ಸ್ವಯಂಸೇವಕನಿಗೂ ಹಸ್ತಾಕ್ಷರ ಕೊಟ್ಟು, ಉತ್ಸಾಹ ಪೂರಿತವಾದ ನಗೆಯ ಬಿಡೊಡೆಸಿ, ಪ್ರಮಾಣ ಪತ್ರಗಳನ್ನು ಕೊಟ್ಟರು. ಅಲ್ಲದೆ ಉಳ್ಳೊಂದ ರೂಪವಾದ ಭಾಷಣ, ಕೊಟ್ಟರು.

ಲೆಕ್ಕವಿಲ್ಲದಷ್ಟು ವ್ಯಕ್ತಿಗಳೂ, ಸಂಘಗಳೂ, ಪಂಡಿತರಿಗೆ ಮಾನ ಪತ್ರಗಳನ್ನೂ, ದೈವ್ಯವನ್ನೂ, ಸಮರ್ಪಿಸಿ ತಮ್ಮ ಕೃತಜ್ಞತೆಯನ್ನೂ, ಸಂತೋಷವನ್ನೂ ಕೋರ್ಪಡಿಸಿದರು.

ಪಂಡಿತರ ಭಾಷಣಗಳು, ಎಲ್ಲಾ ಕಡೆಯಲ್ಲಿಯೂ ಸ್ಫೂರ್ತಿದಾಯಕವಾಗಿ, ಎಂಥಾ ನಿರ್ಣಯಸಿಗಾದರೂ ನಿರ್ಧರೀತ್ಪೇಬಲವಾಗುವಂತಿದ್ದವು. ತಮ್ಮ ಪ್ರಾಂತದ (ಅಲಹಾಬಾದ್) ಲ್ಲಿ ದಿನೇ ದಿನೇ ದೈತರ ಮೇಲೆ ಸಡೆಯುತ್ತಿರುವ ದಬ್ಬಾಳಿಕೆಯು ಅವರ ರಕ್ತವನ್ನು ಕಾಸಿ, ಅವರನ್ನು ನೈರಾಶ್ಯಪಡಿಸುತ್ತಿದ್ದಿತು ಗದಗಿನ ಭಾಷಣದಲ್ಲಿ—ಅವರು ದೈತರ ಮೇಲೆ ಗುಂಡು ಹಾರಿದ, ವಿಷಯವನ್ನು ಹೇಳುತ್ತಾ, ತಮ್ಮ ದೇಶತ್ಯಾಗ ಹೊಂದಿ ಸ್ವಾರ್ಥ ತ್ಯಾಗದ ಪರಾಕಾಷ್ಟ ದೆಶೆಯನ್ನು ವ್ಯಕ್ತಪಡಿಸುತ್ತೇನೆಂದು ಗದ್ಗದ ಸ್ವರದಿಂದ ಹೇಳಿದರು ಎಲ್ಲರ ಕಣ್ಣುಗಳಲ್ಲಿ ನೀರು ಬಂದಿತು

ಭಾಷಣಗಳಿಗೆ ಸಾರಾಂಶ.

ನನಗೆ ಇತರ ಅನೇಕ ಪಟ್ಟಣಗಳಿಂದ ನಿಮಂತ್ರಣಗಳು ಬಂದಿವೆ. ಎಲ್ಲಾ ಸ್ಥಳಗಳಿಗೆ ಹೋಗುವುದು ಕಾಂಗ್ರೆಸ್ ಮಂತ್ರಿಯಾದ ನನಗೆ ಯೋಗ್ಯವಾದರೂ, ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ, ಸಾಧ್ಯವಿಲ್ಲದುದ್ದಾಗಿ ದುಃಖಿಗೆ ಬೇಕಾಗಿದೆ.

ವ್ಯಕ್ತಿಗಳನ್ನು ಕೊಲ್ಲುವುದು ಅವಿವೇಕ. ಕ್ರಾಂತಿಕಾರಿ ಮಾರ್ಗಗಳಿಂದ, ಸರ್ಕಾರದ ಕೈಬಲವಾಗುವುದು, ನಿರಂಕುಶ ಯಂತ್ರದಲ್ಲಿ ಒಂದು ಹೊಳೆಯನ್ನು ತಿದ್ದುವಾಗಲು ಯತ್ನಿಸಿದರೆ ಬೇರೊಂದು ಬಲವಾದ ಮೊಳೆಯು ಅವರ ಸ್ಥಳದಲ್ಲಿ ಬರುವುದು ಅದರಿಂದ ಕೆಲವು ವ್ಯಕ್ತಿಗಳ ಏಕಾಧಿಪತ್ಯಗಳಿಗೋಸ್ಕರ, ದೇಶದಲ್ಲೇ ಘೋರ ಕಾನೂನನ್ನು ಮಾಡಿರುವುದು ಖಂಡನೀಯವಾಗಿದೆ.

ಸಂಯುಕ್ತ ಪ್ರಾಂತದಲ್ಲಿ ಪ್ರಭುತ್ವದವರು, ಅಸಾಧಾರಣ ಕಾನೂನು ಗಳಿಂದ, ಚಳವಳಿಯನ್ನು ಬಗ್ಗು ಬಡಿಯುತ್ತಲಿರುವರು. ಇನ್ನು ಕೆಲವು ದಿವಸಗಳಿಗಾಗಿ ನಾನು, ಕಾರಾಗೃಹವಾಸಿ ಯಾಗುವದಾದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಜನರು, ತ್ಯಾಗದಿಂದಲೂ, ಧೈರ್ಯದಿಂದಲೂ, ಸಿದ್ಧರಿರಬೇಕು.

ಕನ್ನಡಿಗರಲ್ಲಿ ವಿಜ್ಞಾಪನೆ.

ಕರ್ನಾಟಕ ಕೇಸರಿಯಲ್ಲಿ, ಬಳ್ಳಾರಿ ಕರ್ನಾಟಕದಲ್ಲಿರುವ ಲಕ್ಷಣವು ಇದೇನೋ? ಎಂದು ಚನ್ನಾಗಿ ಪ್ರಶ್ನಿಸಿರುವರು ಈಸ್ರಕ್ಕೆಗೆ ಸರಿಯಾದ ಉತ್ತರವನ್ನು ಕರ್ನಾಟಕ ಮಂಡಿಂದರು ಕೊಟ್ಟಿದ್ದಾರೆ ಅವರು ಇಲ್ಲಿಗೆ ಪದೇ ಪದೇ ಬಂದಿಲ್ಲ ಹಿಂದೂಸ್ಥಾನ ಮುಖಂಡರು ತವ ಕಡೆಗೆ ಬಂದರೂ, ಬಳ್ಳಾರಿಯ ಅವರ ಭೆಟ್ಟಿಗೆ ಅವಕಾಶವಾದ್ದೆಂದು, ಕಾರ್ಯಕ್ರಮದಲ್ಲಿ ಸೇರಿಸಿಯೂ ಇಲ್ಲ. ಅವರು ನಮ್ಮನ್ನು ಈ ರೀತಿಯಲ್ಲಿ ಮಾನಭಂಗ ಪಡಿಸುತ್ತಿರುವುದಕ್ಕೆ ಕಾರಣಗಳೆವೆ

(1) ನಮ್ಮಲ್ಲಿ ಭಾಷಾಭಿವೃದ್ಧಿಯು ಕಂದು ಬಂದಿಲ್ಲ. ಕನ್ನಡ ಭಾಷಾಭಿವೃದ್ಧಿಯ ದೃಷ್ಟಿಯಿಂದ, ನಾವು ಯಾವ ಪ್ರಯತ್ನಗಳನ್ನೂ ಮಾಡುತ್ತಿರುವುದಿಲ್ಲ.

(2) ನಮ್ಮ ಸ್ನೇಹಿತರಾದ ಶ್ರೀ ಚಂದ್ರಶೇಖರಶಾಸ್ತ್ರಿಗಳು ಹೇಳಿದ ಪ್ರಕಾರ ಈ ಜಿಲ್ಲೆಯಲ್ಲಿ ೫೦ ಮಂದಿ ಕನ್ನಡ ಮಾತಾಡುವವರಿದ್ದರೂ, ಮಕ್ಕಳು ಶಾಲೆಗಳಲ್ಲಿ ಕನ್ನಡ ಭಾಷೆಗೆ ಸಾಕಾದಷ್ಟು ಪ್ರೋತ್ಸಾಹವನ್ನು ಕೊಡುತ್ತಿರುವುದಿಲ್ಲ ಚಿಕ್ಕ ಬಾಲರನ್ನೇಕರಿಗೆ ಮಾತೃಭಾಷೆಯಾದ ಕನ್ನಡದಲ್ಲಿ ವಿದ್ಯಾಭ್ಯಾಸ ಕೊಡುವುದು ಅಗತ್ಯವೆಂಬುದನ್ನು ವಿದ್ಯಾವಂತರಿಗೆಯು ಬರಿಯುವಂತಿಲ್ಲ ಭಾಷೆಯನ್ನರಿಯರು, ಲಿಯುವುದಿಲ್ಲ, ಆಂಧ್ರ ಪುಸ್ತಕಗಳನ್ನು ಓದಬೇಕಾಗಿದೆ

(3) ನೊಣೆ ಯವಿಸಿ ನಮ್ಮ ಹುಡುಗರು, ಕೆಲವು ಆಂಧ್ರಪದ್ಯಗಳ ಅರ್ಥವನ್ನು ಕೇಳಿದರೆ ನನಗೆ ತಿಳಿಯದೆ, ಇದೇಕೇಳಿ ತಪ್ಪಿಸಿಕೊಳ್ಳಬೇಕಾಯಿತ ಉಪಾಧ್ಯಾಯರಿಗಾದರೂ, ಬೋಧನಾ ಕ್ರಮದಲ್ಲಿ ಈ ಕಷ್ಟಗಳು ಬರಬಹುದಾಗಿವೆ. ತಮ್ಮ ಮಾತೃ ಭಾಷೆಯು ಕನ್ನಡವಾಗಿ, ತೆಲುಗನ್ನು ಉಸಿದೇಶ ಮಾಡಬೇಕಾಗಿರುವ ಉಪಾಧ್ಯಾಯರ ಸಂಖ್ಯೆಯು ಇಲ್ಲಿ ಬಹಳವಿದೆ

(4) " ಪ್ರೈಮರಿಗಳನ್ನು ಸರಿಯಾಗಿ ನೋಡಿಕೊಂಡರೆ, ಪೊಂಡುಗಳು ತಮ್ಮಷ್ಟಕ್ಕೆ ತಾನೇ ಎತ್ತರಕಿದೆ ಮೆಲ್ಲುತ್ತವೆ " ಎಂಬ ಇಂಗ್ಲೀಷ ಗಾದೆಗನು ಸಾರವಾಗಿ, ಎಲಿಮೆಂಟರಿ ಶಾಲೆಗಳಲ್ಲಿ ಆಂಧ್ರ ಪುಸ್ತಕಗಳ ನಿರ್ಮೂಲನವಾದ ತೆಂದರೆ, ಹೈಸ್ಕೂಲದಲ್ಲಿ, ಆಂಧ್ರ ಭಾಷಾ ವ್ಯಾಸಂಗಕ್ಕವಕಾಶವಿರುವುದಿಲ್ಲ ಯಾವಾಗ ಶಾಲೆಗಳಲ್ಲಿ ಆಜ್ಞೆಗನ್ನಡದ ಪಾಠವನ್ನು ಸಾರಿ, ಬಾಲರು ಕಲಿಯುವರೋ, ಆವಾಗ ಮುಂದಿನ ಹಟ್ಟಣಗರಲ್ಲಿ ಕರ್ನಾಟಕ ಮಾತೆಯ ನಿಜವಾದ ಅಭಿಮಾನವು ಬೆಳೆಯುವುದೆ.

ನಮ್ಮ ಪುರಪಾಲಕ ಸಂಘದವರ, " ರಿಟ್ರೆಂಚ್ ಮೆಂಟ್ " " ನೋಫಂಡ್ " ಎಂಬ ಹುಲಿಗಳಿಗೆ ಹೆದರದೆ, ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಜಾರಿಗೆ ತರಬೇಕು.

(5) ಮೇಲ್ಮಾಣಿಸಿದ ಉದ್ದೇಶಗಳ ಸಾಧನೆಗೆ ಯತ್ನಿಸಿ, ಅವುಗಳನ್ನು ಕಾರ್ಯಕ್ರಮಕ್ಕೆ ತಂದರೆ, ನಾವು ಕರ್ನಾಟಕ ಮುಖಂಡರ ವಿಶ್ವಾಸಕ್ಕೆ ಪಾತ್ರರಾಗುವೆವು ಅವಿಲ ಹಿಂದೂದೇಶ ಮುಖಂಡರ ಕಾರ್ಯಕ್ರಮದಲ್ಲಿ, ಬಳ್ಳಾರಿಗೂ ಕೂಡ ಸ್ಥಾನವು ದೊರೆತು, ಈಗ ರವ ತ್ರಿಕಂಕು ಸ್ವಗ-ವಸ್ಥಾನವ ಹಾಯಸಾಗುವುದು

ನಮ್ಮ ಶ್ರೀ ಶಾಸ್ತ್ರಿಗಳಾದರೂ, ಅರಣ್ಯ ರೋದನದ ದೃಷ್ಟಿಬಿಟ್ಟು 1932 ರಿಂದಲಾದರೂ, ಪ್ರಾಥಮಿಕ ಶಾಲೆಗಳಲ್ಲಿ ಕನ್ನಡದ ಪುಸ್ತಕಗಳ ಪ್ರತೀಕ ವಾಗುವಂತೆ ಮಾಡಲು, ಉದ್ಯುಕ್ತರಾಗಬೇಕೆಂದು ನನ್ನ ಕೋರಿಕೆ.

ತಾ|| 15-12-31 ಆರ್. ವಿ ಶ್ರೀನಿವಾಸಮೂರ್ತಿ
ಬಳ್ಳಾರಿ ಬಿ. ಎಸ್. ಸಿ. ಬಿ. ಎಲ್.
ವಕೀಲ

ಕರ್ನಾಟಕ

ಬಳ್ಳಾರಿ.

22 12-31 ಸಾಯಂಕಾಲ ಮುನಿಸಿಪಲ ಮೀಟಿಂಗ್ ಇದೆ ಬಂಗಾಳದಲ್ಲಿ ಈಚೆಗೆ ನಡೆದ ಹತ್ಯದಾಸ್ಯ ಅವರ ಖಂಡನೆಯನ್ನು ಸಾರ್ವಾನುಮತದಿಂದ ವ್ಯಕ್ತಪಡಿಸುವುದು, ಯೋಗ್ಯವೆಂದು ಈ ಸಮಯದಲ್ಲಿ ನಾವು ಸೂಚಿಸುತ್ತೇವೆ.

ಈ ಊರಿನ ಸೆಂಟ್ರಲ್ ಜೈಲಿನಲ್ಲಿರುವ ಬಂಗಾಳದ ಕ್ರಾಂತಿಕಾರೀ ಸಂದೀಪ ಕೈದಿಗಳಿಂದ ಡಾಕ್ಟರ್ ಗಯಾನ್ವಾಸಾದ ಮಹಾನಿರ್ಬಂಧ, ಬಿಡಿಸಿ ಪತ್ರ ಇವರು, ಈಗ ಆಹಾರವನ್ನು ತೆಗೆದುಕೊಳ್ಳುತ್ತಾ, ಸುಖವಾಗಿ ಇರುತ್ತ, ತಿಳಿದುಬಂದಿದೆ

ಇಂಡಿಯನ ಸರ್ಕಾರದ ವಿದ್ಯಾಇಲಾಖೆ

No. 2099 (G) 24-11-31

(ಬಳ್ಳಾರಿ ಕಲೆಕ್ಟರ್‌ರವರ ಕಡೆಯಿಂದ ಎಂದು ಪ್ರಕಟಿಸಿದ ಸಾರಾಂಶ)

ಕೆಡೆಟ್ ಯಾತ್ರಾಗಳಿಗೆ ಅನುಕೂಲ ಮಾಡಿಸುವ ದರಸಲುವಾಗಿ ಟ್ರೆನರ್ ಮಾರಿಸನ್ ಕಂಪನಿಯವರು ಹಿಂದೂಸ್ಥಾನದ ಮುಖ್ಯ ಬಂದರುಗಳಿಂದ, ಕೆಲವು ಹಡಗುಗಳನ್ನು ಜೋಡಿಸುವರು 22 2 32 ರ ಸುಮಾರಿಗೆ ಕ್ಯೆ ಕರಾಚಿಯಿಂದ S S ಮೋಸ್ರ್ ಎಂಬ ಹಡಗು ಬೊಂಬಾಯಿಂದ S S ರಕ್ಷಾಸಾನಿ ಎಂಬ ಹಡಗೂ, ಹೊಡುವುದು ಕಲ್ಕತ್ತಾಬಂದರದಿಂದ S. S ವಿಜ್ಯಾನಿ ಎಂಬ ಹಡಗು 20-2-32 ಕ್ಕೆ ಹೊರಡೆಬಹುದು ರಂಜಾನ್ ದಿಂಗಳು ಪೂರೈಸಿದನೋಲೆ, ಈ ಹಡಗುಗಳು ಹೊರಡಲೇವಾಗಿದೆ ಇದರಲ್ಲಿ ಯಾವ ಸೈತ್ಯಾಗಳನ್ನು ಬೇಕಾದರೂ, ಕಂಪನಿಯವರು ಮಾಡಬಹುದು

ಬಳ್ಳಾರಿ ವರ್ತಕ ಸಂಘದ ಸಭ್ಯರಾದ ಶ್ರೀಗಳಾದ ಗೊ ಕಾಳಪ್ಪ, ಹೊಗರಿ ವೀರಪ್ಪನವರು ಹೀಗೆ ತಿಳಿಸುತ್ತಾರೆ

" ಇದೇತಿಂಗಳ 23-12-31 ನೇ ಬುಧವಾರ ಸಾಯಂಕಾಲ 4 ಘಂಟೆಗೆ, ಶಿಂದಿಗಿ ಉದ್ಯಾನವನ್ನ ನವರ ಮಾರ್ಕೆಟ ಮನೆಯ " ಗೋರಕ್ಷಣಾ ಹಾಲಿನಲ್ಲಿ " ವರ್ತಕರ ಸಭೆಯು ಕೂಡಿ, ಕರ್ನಾಟಕ ಛೇಂಬರ್ ಆಫ್ ಕಾಮರ್ಸ (ಕರ್ನಾಟಕ ವರ್ತಕರ ಸಂಘ) ದ ವಾರ್ಷಿಕ ಸಭೆಯು ಬರುವ ಜಾನೇವಾರಿ ತಿಂಗಳಲ್ಲಿ ಬಳ್ಳಾರಿಯಲ್ಲಿ ನಡೆಸಬೇಕೆಂದು ಅಹ್ವಾನಿಸಬೇಕಾಗಿದೆ ಕಾರಣ ಬಳ್ಳಾರಿ ಪಟ್ಟಣದ ವರ್ತಕರೆಲ್ಲರೂ ಬರಬೇಕೆಂದು ಪ್ರಾರ್ಥನೆ.

ತಾಲ್ಲೂಕ ರೈತರ ಸಭೆ

ಜಿಲ್ಲಾ ಪ್ರತಿನಿಧಿಗಳಾದ ಶ್ರೀ ಗೊಪಾಲಸ್ವಾಮಿ ನೊವಲಿಯಾರ್ ಅಧ್ಯಕ್ಷತೆಯಲ್ಲಿ, ಜಿಲ್ಲಾ ರೈತರ ಸಭೆಯು ನಿನ್ನೆ ಅಂದರೆ 20-12-31 ರ ದಿವಸ ಕೂಡಿತ್ತು. ಕೆಲವು ರೈತರ ಅಭಿವೃದ್ಧಿಗೆ ಆಕರವಾದ ತರಾವುಗಳನ್ನು ಪಾಸುಮಾಡಿದರು ಈ ಸಭೆಗೆ ಮ|| ತಂಗಿ ನುಲೇ ಶಪ್ಪನವರು ಸ್ವಾಗತಾಧ್ಯಕ್ಷರಾಗಿದ್ದರು.

ತರಾವುಗಳ ಸಾರಾಂಶ

ತಾಲ್ಲೂ ರೈತರ ಈ ವರ್ಷದ ಭೂ ಕಂದಾಯ ಸಾಫ ಮಾಡುವುದು, ಪ್ರತಿ ಹಳ್ಳಿಗೂ ಇ ಮೈಲಿದೂರ ಹೊಳೆಗೆ ಕ್ಷಾಮಸಾಲಾಗಿ ರೈತ ಕೆಲಸ ಪ್ರಾರಂಭಿಸುತ್ತಿದ್ದು ಭಾವಿ, ಸ್ಥಿತಿ ಕಾದಿ ಕೊಡಲು ಪ್ರಾರ್ಥಿಸುವುದು, ತುಂಗಭದ್ರಾ ಅಣೆಕಟ್ಟು ಶೀಘ್ರದಲ್ಲಿ ಪ್ರಾರಂಭಿಸುವುದು.

ಶ್ರೀ ರಂಗನಾಥಂ ಮೊದಲಿಯಾರ್‌ರ ರೈತರ ಸಾಲದಲ್ಲಿ, ರೈತರ್ಗಳ ಅಭ್ಯುದಯಕ್ಕೆ ಸಹಾಯ ಮಾಡುತ್ತಿರುವುದು ಎಲ್ಲಾ ಕಾರ್ಯಕ್ರಮಗಳ ಕನ್ನಡದಲ್ಲಿ ನಡೆವುವು.

ಕೊಟ್ಟೂರು

(ನಮ್ಮ ಸುದ್ದಿ ಗಾರರಿಂದ)

ಧಾರ್ವಾಡ ವನಿತ ಸೇವಾಸಮಾಜದ ಶ್ರೀಮತಿ ಭಾಗೀರಥೀ ಬಾಯಿಯವರೂ, ದಾ. ಪುಟ್ಟೇಪನ್ನಾರವರೂ, ಈ ಊರಿನ 3-4 ಸ್ಥಳಗಳಲ್ಲಿ, ಪ್ರತ್ಯೇಕವಾಗಿ ಸ್ತ್ರೀಯರಿಗೂ, ಬಾಲಕಿಯರಿಗೂ, ಸಾರ್ವಜನಿಕರಿಗೂ, ಧರ್ಮ, ಪಾತಿವ್ರತ್ಯ, ರಾಷ್ಟ್ರಸೇವೆಯ ವಿಷಯದಲ್ಲಿ ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು ಪ್ರಸಂಗದ ಪ್ರತಿಯೊಂದು ಜಾಗದಲ್ಲಿ ಕೆಲಸಗಳಲ್ಲಿ ಸ್ತ್ರೀಯರು, ಯಾವ ರೀತಿಯಲ್ಲಿ ಭಾಗವಹಿಸುವುದು ಹೇಗೆಂದು ಜನಸೇವೆಯನ್ನು ಮಾಡಬೇಕೆಂಬ ವಿಷಯಗಳನ್ನು ಚನ್ನಾಗಿ ಹೇಳಿದರು. ಇಂಥಾ ಪ್ರಶಂಸನೀಯವಾದ ಸ್ತ್ರೀಸುಧಾರಣಾ ಕಾರ್ಯಗಳು ಇದೇ ಮೊದಲು ನಡೆಯುವುದು ಈ ಊರಿನ ಕಾಂಗ್ರೆಸ್ಸಿನವರು, ಇವರನ್ನು ಕೈಕೊಂಡ ಕಾರ್ಯಕ್ಕೆ ದ್ರವ್ಯಸಹಾಯ ಮಾಡಿಸಿದರು

ಹರಪನಹಳ್ಳಿ.

(ನಮ್ಮ ಸುದ್ದಿ ಗಾರರಿಂದ)

ತ್ರಿಮೂರ್ತಿಯವರಿಗೆ ಕುಮಾರಿಯರು ಟಿಕೇಟ್ ಇಟ್ಟು ಎಂದು ಪದಗಳನ್ನು ಮಾಡಿದರು ಈ ಊರಿಗೆ ಇದು ಹೊಸವಸ್ತು ಎಂದು ಹೇಳಬಹುದ

ತಾ|| 10 12 31 ರ ಸಾರ್ವಜನಿಕ ಸಭೆಯು ಶ್ರೀ ಹೆಚ್ ಪಿ. ಬಣಾರಾ ಯವರ ರಾಷ್ಟ್ರೀಯಗೀತೆಗಳಿಂದ ಪ್ರಾರಂಭವಾಯಿತ್ತು, ಬಾಲಕಿಯ ಪರಿಸ್ಥಿತಿಯ ಮೇಲೆ, ಶ್ರೀ. ಸುಬ್ರಹ್ಮಣ್ಯಂ ಯವರ ಭಾಷಣ ವಾಯಿತು ಜನರು ಈ ಶ್ರದ್ಧೆಯಿಂದಲೂ, ಶ್ರದ್ಧೆಯಿಂದಲೂ, ಕೇಳಿದರು ಶ್ರೀ ವಾ ಸ| ಹನುಮಂತಾ ಚಾರ್ ರವರು, ಕೊನೆಯಲ್ಲಿ ಉಪಸ್ಥಿತರನ್ನು ವಂದಿಸಿದರು.

ಅಥೆಂತಪುರ.

ಶ್ರೀ ಗೋವರ್ಧನರಾಯ ಯ. ಸ್ವಧರ್ಮ, ಸ್ವದೇಶೀ ಇವುಗಳ ವಿಷಯದಲ್ಲಿ ಸ್ಫೂರ್ತಿದಾಯಕ ಭಾಷಣಗಳಿತ್ತು, ಜನಜಾಗೃತಿಯನ್ನು ಮಾಡಿದರು

ಶಾರದಾ.

ಇಲ್ಲಿ ಪಡೆಯುವ ಕರ್ನಾಟಕ ಸಾಹಿತ್ಯ ಪರಿಷತ್ತು ಯಶಸ್ವಿಯಾಗಿ ನಡೆಯುವ ಸೂಚನೆಗಳು ತೋರಿ ಬರುತ್ತಲಿವೆ.

ಹಿಂದೂಸ್ಥಾನ

ಅಲಹಾಬಾದ್ ಜಿಲ್ಲಾ ಕಮಿಟೀ ಅಧ್ಯಕ್ಷರಾದ ಶ್ರೀ ಟಾಂಡನ್ ರವರನ್ನು ಶೈಸೆರೆ ಮಾಡಿದರು.

ಡಾ ಅನಿಬಿಸೆಂಟ ರವರಿಗೆ ಅಸ್ವಸ್ಥತೆಯಾದ್ದು ಸರಿಯಷ್ಟೆ, ಈಚೆಗೆ ಆರೋಗ್ಯವಾಗುತ್ತಿದ್ದು, ಸ್ವರಾಜ್ಯವು ಬರುವ ವರೆಗೂ, ತಾವು ಸಾಯುವುದಿಲ್ಲವೆಂಬುವಾಗಿ ಹೇಳುತ್ತಿದ್ದಾರವರು

ಸೀತಾರಾಂಪುರ (ಬಂಗಾಳ) ದ ಹತ್ತಿರ ರೈಲ್ವೇ ಹಳಗಳ ಕೆಳಗೆ ನಾರಗಳನ್ನು ಯಾರೋ ತೆಗೆದು ಅಪಾಯಕ್ಕೆ ಗುರಿಮಾಡಿದ್ದರು. ಅದನ್ನೆ ಮೊದಲೇ ನೋಡಿಕೊಂಡು, ಅದನ್ನು ಸರಿಪಡಿಸಿದರು

ಪರದೇಶ

ಚೀನಾದೇಶದ ರಾಜಧಾನಿಯಾದ ನಾಂಕಿಂಗ್ ಪಟ್ಟಣದಲ್ಲಿ ವಿದ್ಯಾರ್ಥಿಗಳು ದಂಗೆಯೆದ್ದು, ವೃತ್ತಪತ್ರಗಳ ಪ್ರಚೇರಿಯನ್ನು ಹಾಳುಮಾಡಿರುವರು. ಸೈನ್ಯಗಳು ಅನೇಕರನ್ನು, ಅವರಮೇಲೆ ಗುಂಡುಹಾಕಿದರು. ಅಲ್ಲದೆ ಅನೇಕರನ್ನು ಸೆರೆ ಮಾಡಿದ್ದಾರೆ.

ಹಿಂದೂಸ್ಥಾನದ ಸ್ವರಾಜ್ಯ ಚಳವಳಿಯ ವಿರುದ್ಧ ಉಪನ್ಯಾಸಗಳನ್ನು ಕೊಡಲು ಅಮೆರಿಕಾಕ್ಕೆ ಹೋಗಿರುವ ಜರ್ಮನ್‌ಪ್ರೊಫೆಸರ್ ಪ್ರಾಕಾಯರು ಮೋಟಾರಿಗೆ ಥಿಕ್ಕೀ ಹೊಡೆದು ಒಹಳವಾಗಿ ಗಾಯಹೊಂದಿರುವರು

ರೂಪಾಯನ್ನು ಪೌನಿಗೆ ಬದಲಾಯಿಸುವುದೆಂದರೇನು ?

ಹೆಣಕ್ಕೂ ಭಂಗಾರಕ್ಕೂ ಇರುವ ಸಂಬಂಧ.

(ಸ್ವಾರ್ ಪ್ರತಿಯಿಂದ)

ಹೆಣವು ಒಂದು ಅಳತೆಯ ಮಾದರಿ ಇರುವುದು. ನಾವು ಒಂದು ಬಟ್ಟೆಯ ಥಾನನ್ನು ಅಳಯಲಿಕ್ಕೂ ಭೂಮಿಯ ನ್ನು ಅಳಯಲಿಕ್ಕೂ ಗಜಕಡ್ಡಿಯನ್ನು ಯಾವ ಪ್ರಕಾರವಾಗಿ ಉಪಯೋಗಿಸುತ್ತಿದ್ದೇವೆಯೋ ಆ ಪ್ರಕಾರವಾಗಿ ಉತ್ಪನ್ನವಾಗುವ ಪ್ರತಿ ಪದಾರ್ಥದ ದರವನ್ನು ಅಳಯಲಿಕ್ಕೆ ಹೆಣವನ್ನು ಉಪಯೋಗಿಸುತ್ತೇವೆ. ಅಂದರೆ ಪ್ರತಿ ವಸ್ತುವಿನ ದರವು ಇಷ್ಟು ರೂಪಾಯಿ ಎಂದಾಗಲಿ, ಸವರನ್ನೆಂದಾಗಲಿ, ಶಾಲುರುಗಳೆಂದಾಗಲಿ ಹೇಳುತ್ತೇವೆ. ಕೆಲ ಅಳತೆಗಳಲ್ಲಿ ರೂಪ ಭೇದಗಳಿರುವಂತೆ(ಗಜ ಮೀಟರು ಲಿಂಗ) ಹೆಣದಲ್ಲೂ ಕೂಡ ರೂಪಭೇದಗಳಿರುತ್ತವೆ ಆದುದರಿಂದ ನಮ್ಮ ದೇಶದಲ್ಲಿ ಹೆಣವನ್ನು ರೂಪಾಯಿ ಎಂದು ಹೇಳುವೆವು ಅದೇ ಪ್ರಕಾರ ಇಂಗ್ಲಂಡು, ಫ್ರಾನ್ಸು, ಜರ್ಮನಿ ಅಮೇರಿಕ ದೇಶಗಳಲ್ಲಿ ಪೌನು, ಫ್ರಾಂಕು, ಮಾರ್ಕು, ಡಾಲರು ಎಂದು ಕರೆಯುವರು.

ಆದುದರಿಂದ ಹೆಣವಲ್ಲಿ ಯಾವ ರೂಪ ಭೇದಗಳಿದ್ದರೂ ಅವರು ಕೆಲ್ಲವನ್ನು ಅದು ಸರಿಯಾಗಿ ನಿರ್ಣಯಿಸಿಕೊಳ್ಳಬೇಕೆಂಬುದರ ಮೇಲೆ ಅದರ ಬೆಲೆಯು ಯಾವಾಗಲೂ ಒಂದೇರೀತಿಯಾಗಿರಬೇಕು ಅದು ಹೇಗೆಂದರೆ -ಗಜಕಡ್ಡಿಯ ಅಳತೆಯ ಯಾವಾಗಲೂ 36 ಅಂಗುಲ ಇರಬೇಕಾಗಿದೆ ಗಜ ಕಡ್ಡಿಯ ಅಳತೆ ಎಷ್ಟೆಂದು ಯಾರನ್ನಾದರೂ ಕೇಳಿದರೆ 36 ಅಂಗುಲ ಉದ್ದವಿರುವುದೆಂದು ಹೇಳುವರೇ ವಿನಃ 34ಅಂಗುಲ ವಿರುತ್ತದೆಂದಾಗಲೀ 38 ಅಂಗುಲವಿರುತ್ತದೆಂದಾಗಲಿ ಯಾರೂ ಭಾವಿಸುವುದಿಲ್ಲ ಅಂದರೆ ಗಜದ ಅಳತೆಯು ಒಂದು ವೇಳೆ 36 ಅಂಗುಲವೆಂದು ಗೊತ್ತು ಮಾಡಲ್ಪಟ್ಟಿರೆ, ಅದು ಯಾವ ಕಾಲದಲ್ಲೂ ಹಾಗೆಯೇ ಇರಬೇಕಲ್ಲದೆ ಬೇಕಾದಾಗ ಬದಲಾಯಿಸಲ್ಪಡಕೂಡದು. ಹಾಗೆ ಬದಲಾಯಿಸುವುದರಿಂದ ಕೊಂಡುಕೊಳ್ಳುವವರಿಗೆ ಬಹಳ ನಷ್ಟ ಸಂಭವಿಸುವುದು. ಅದ ಹೇಗೆಂದರೆ — ಒಬ್ಬನು ಅಂಗಡಿಗೆ ಹೋಗಿ 20 ಗಜವಿರುವ ಬಟ್ಟೆಯನ್ನು 10 ದಿವಸಗಳ ಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳಿ ಧಾರಣೆ ನಿಶ್ಚಯ ಮಾಡಿದನು. ಈ ಮಧ್ಯೆ ಗಜದ ಪ್ರಮಾಣವು 34 ಅಂಗುಲವಿರುತ್ತೆಂದಿಟ್ಟುಕೊಳ್ಳೋಣ. 10 ದಿವಸಗಳ ಮೇಲೆ ಅವನ 20 ಗಜಗಳ ಬಟ್ಟೆಯನ್ನು ಮೊದಲು ನಿಶ್ಚಯ ಮಾಡಿದ ಬೆಲೆಗೆ ತೆಗೆದುಕೊಂಡರೆ 40 ಅಂಗುಲ ಕಡಿಮೆಯಾಗಿ 20 ಗಜಗಳ ಬಟ್ಟೆಯು ದೊರಕುವುದು. ಆದರಿಂದ ಆ ಮನುಷ್ಯನಿಗೆ ಗಜದ ಪರಿಮಾಣದಲ್ಲಿ ಬದಲಾವಣೆಯಾಗುವುದರಿಂದ ನಷ್ಟಪಡುವನು ಅದೇ ಪ್ರಕಾರವಾಗಿ ಗಜದ ಪರಿಮಾಣವು 38 ಅಂಗುಲಕ್ಕೆ ಹೆಚ್ಚಿದರೆ ಆ ಮನುಷ್ಯನಿಗೆ ಲಾಭವೂ, ವರ್ತಕನಿಗೆ ನಷ್ಟವೂ ಸಂಭವಿಸುವುದು. ಏಕೆಂದರೆ ಮೊದಲು ನಿರ್ಣಯಿಸಿದ ದರಕ್ಕೆ ವರ್ತಕನು 40 ಅಂಗುಲವಷ್ಟು ಬಟ್ಟೆಯನ್ನು ಹೆಚ್ಚಾಗಿ ಕೊಡಬೇಕಾಗುವುದು ಆದುದರಿಂದ ಹೆಚ್ಚಿದರೂ ತಗ್ಗಿದರೂ ಯಾರಾದರೊಬ್ಬರು ನಷ್ಟಪಡಬೇಕಾಗುವುದು. ಆದಕಾರಣ ಒಂದು ವೇಳೆ ನಿಶ್ಚಯಿಸಿದಮೇಲೆ ಗಜದ ಪ್ರಮಾಣವು ಯಾವಾಗಲೂ 36 ಅಂಗುಲವಿರುವುದೇ ಶ್ರೇಯಸ್ಕರವು ಅದೇ ಸರ್ಕಾರವಾಗಿರಲಿ ಹೆಣದಮೇಲಿಯಲ್ಲೂ ಕೂಡ ಯಾವಾಗಬೇಕಾದರೂ ಆವಾಗ ಬದಲಾವಣೆಯಾಗುವುದರಿಂದ ತೆಲವರಿಗೆ ನಷ್ಟವೂ, ಮತ್ತೆ ಕೆಲವರಿಗೆ ಲಾಭವೂ ಉಂಟಾಗುವುದು ಆದುದರಿಂದ ಹೆಣವೂ ಕೂಡ ಎಲ್ಲಾ ಕಾಲದಲ್ಲೂ ಒಂದೇ ವಿಧವಾಗಿ ಕದಲದೇ ಇರಬೇಕಾಗಿದೆ.

ಬಹುಕಾಲದಿಂದಲೂ ಲೋಹಗಳಲ್ಲಿಲ್ಲ ಬೆಳ್ಳಿ ಭಂಗಾರಗಳಿಗೆ ಬೆಲೆಯು ಹೆಚ್ಚಾಗಿ ಕೊಡಲ್ಪಡುತ್ತಿರುವುದಾಗಿದೆ. ಇದಕ್ಕೆ ಮೂರು ಕಾರಣಗಳಿರುತ್ತವೆ 1] ಇತರ ಲೋಹಗಳು ದೊರಕದಿರುವಷ್ಟು ಬೆಳ್ಳಿ ಭಂಗಾರಗಳು ದೊರಕದಿರುವುದು. 2] ಮನುಷ್ಯನು ತನಗೆ ತೃಪ್ತಿಯನ್ನುಂಟುಮಾಡುವಷ್ಟು ಬೆಳ್ಳಿ ಭಂಗಾರಗಳ ತೃಪ್ತಿ ಮಾಡಿಕೊಳ್ಳಲು ಚೈತನ್ಯವಿಲ್ಲದಿರುವುದು. 3]ಬೆಳ್ಳಿಭಂಗಾರಗಳಿಗೆ ಇತರ ಲೋಹಗಳಿಗಿಂತ ಹೆಚ್ಚಾಗಿ ಜನಾಕರ್ಷಣ ಶಕ್ತಿಯಿರುವುದು.

ಮೇಲಿನ ಮೂರು ಕಾರಣಗಳಿಂದ ಬೆಳ್ಳಿ ಭಂಗಾರಗಳಿಗೆ ಇತರ ಎಲ್ಲವಸ್ತುಗಳಿಗಿರುವ ಬೆಲೆಗಿಂತ ಹೆಚ್ಚಾಗಿ ಬೆಲೆಯು ಇರುವುದು. ಈ ಕಾರಣಗಳಿಂದಲೇ ಬೆಳ್ಳಿ ಭಂಗಾರಗಳ ದರವು ವಿಪರೀತವಾಗಿ ಹೆಚ್ಚುವುದೂ ಇಲ್ಲ ತಗ್ಗುವುದೂ ಇಲ್ಲ. ಅದುಕಾರಣ ಬೆಲೆಯು ಒಂದೇ ರೀತಿಯಾಗಿರಬೇಕೆಂಬ ಸೂತ್ರವು ಬೆಳ್ಳಿ ಭಂಗಾರಗಳಿಗಾಗಿ ಹುಟ್ಟಿರುವುದರಿಂದ ಇತರ ವಸ್ತುಗಳಲ್ಲಿ ಈ ಎರಡು ಲೋಹಗಳಿಗೆ ಬದಲಾವಣೆಯಾಗುತ್ತಿವೆ.

ಹೊಸೆಂದರೆ ಒಂದು ಅಳತೆಯ ಪ್ರಮಾಣ ಈ ಪ್ರಮಾಣದಿಂದ ಎಲ್ಲ ಧಾನ್ಯಗಳನ್ನು ಅಳೆಯುವಂತೆ ಹಣದಿಂದ ಎಲ್ಲ ವಸ್ತುಗಳ ಬೆಲೆಯನ್ನು ನಿರ್ಣಯಿಸುವ ಶಕ್ತಿಯುಳ್ಳದಾಗಿರುವುದರಿಂದಲೇ ಬೆಳ್ಳಿ ಭಂಗಾರಗಳನ್ನು ನಾಣ್ಯವನ್ನಾಗುಸಯೋಗಿಸುವ ಅವಶ್ಯಕತೆಯು ಉಂಟಾಗಿದೆ.

ಆದರೆ ಹೆಚ್ಚು ಅಮೂಲ್ಯವಸ್ತ್ರರಾದ ಕೆಲ ಪ್ರಜೆಗಳು ಎರಡು ಲೋಹಗಳನ್ನೂ ಹಣವನ್ನಾಗುಸಯೋಗಿಸಬೆಯಾವುದಾದರೊಂದು ಲೋಹವನ್ನು ಹಣವನ್ನಾಗುಸಯೋಗಿಸುವುದರಿಂದ ಹೆಚ್ಚು ಪ್ರಯೋಜನವುಂಟೆಂದು ಗ್ರಹಿಸಿರುವರಾದಪ್ರಯುಕ್ತ ಬೆಳ್ಳಿ ಭಂಗಾರಗಳಲ್ಲಿ ಒಂದು ಲೋಹವನ್ನು ನಿಟ್ಟು ಇನ್ನೊಂದು ಲೋಹವನ್ನು ಹಣವನ್ನಾಗಿ ಉಪಯೋಗಿಸುತ್ತಿವೆ ಅಚರಣೆಗೆಬಂದಿರುತ್ತದೆ ಈ ವಿಧವಾಗಿ ಪಾಶ್ಚಾತ್ಯದೇಶಗಳಲ್ಲಿ ಇಂಗ್ಲಂಡು ಮತ್ತೆ ಕೆಲ ದೇಶಗಳು ಭಂಗಾರವನ್ನು ಮುಖ್ಯ ನಾಣ್ಯವನ್ನಾಗುಸಯೋಗಿಸುತ್ತಿರುವುವು ಅದೇ ಪ್ರಕಾರವಾಗಿ ಪ್ರಾಚ್ಯದೇಶಿಯರು ಅಂದರೆ ಹಿಂದುಗಳು. ಚೀನೀಯರು ಮತ್ತು ಜಪಾನೀಯರು ಬೆಳ್ಳಿಯನ್ನೇ ಮುಖ್ಯ ನಾಣ್ಯವನ್ನಾಗುಸಯೋಗಿಸುತ್ತಿರುವರು. ಮತ್ತೆ ಕೆಲ ಫ್ರಾನ್ಸು, ಜರ್ಮನಿ ಮೊದಲಾದ ರಾಜ್ಯಗಳು ಬೆಳ್ಳಿ ಭಂಗಾರಗಳೆರಡನ್ನೂ ನಾಣ್ಯವನ್ನಾಗುಸಯೋಗಿಸುತ್ತಾರೆ.

19 ನೆಯ ಶತಮಾನದಲ್ಲಿ ಇಂಗ್ಲ ಸಾಮ್ರಾಜ್ಯವು ಚತುರ್ದಿಕ್ಕಿಗೂ ವ್ಯಾಪಿಸಿ ಪ್ರಪಂಚದಲ್ಲೆಲ್ಲ ಮುಖ್ಯ ಕರ್ತೃಗಾರವಾಗಿದ್ದು ಸರ್ವಪ್ರಾಂತಗಳಲ್ಲೂ ತನ್ನ ವರ್ತಕತತ್ವ ವಿಸ್ತರಿಸುವಂತೆ ಮಾಡಿದುದರಿಂದ ಬ್ರಿಟಿಷ್ ಪೌನು ಎಲ್ಲ ಕಡೆಯಲ್ಲೂ ಚಲಾವಣೆಯಾಗುತ್ತಿರುತ್ತದೆ. ಇತರ ದೇಶೀಯರೂ ಪೌನಿನ ಸಂಬಂಧವನ್ನು ಇಟ್ಟುಕೊಳ್ಳದಿರಲಾಗುವುದಿಲ್ಲ. ಇಂಗ್ಲ ದೇಶವು ಒಂದು ಭಂಗಾರವೇ ಬೆಲೆಯುಳ್ಳವಸ್ತುವನ್ನಾಗಿ ಗ್ರಹಿಸಿ ನಾಣ್ಯವಾಗಿ ಚಲಾವಣೆ ಯಾಗುತ್ತಿರುವುದರಮೇಲೆ ಇತರ ದೇಶಗಳು ಕೂಡ ಭಂಗಾರವನ್ನೇ ಮುಖ್ಯ ನಾಣ್ಯವನ್ನಾಗಿ ಪರಿಗಣಿಸಬೇಕಾಗಿ ಬಂದಿತು. ಹಾಗೆ ಮಾಡುವುದರಿಂದ ವಿದೇಶ ವ್ಯಾಪಾರಕ್ಕೆ ಬಹಳ ಅನುಕೂಲವೆಂದು ಕೂಡ ಗ್ರಹಿಸಿ ಪಾಶ್ಚಾತ್ಯ ದೇಶಗಳೆಲ್ಲ ಭಂಗಾರವನ್ನೇ ಮುಖ್ಯ ನಾಣ್ಯವನ್ನಾಗಿ ಭಾವಿಸಲಾರಂಭಿಸಿದವು

20 ನೇಯ ಶತಮಾನದ ಆರಂಭದಲ್ಲಿ ಪ್ರಾಚ್ಯ ದೇಶಗಳೊಳಗೆ ಮೊದಲು ಜಪಾನು ಬಂಗಾರದ ಪರಿಮಾಣವನ್ನು ಅಂಗೀಕರಿಸಿತು; ಮೂರು ವರ್ಷಗಳ ತರುವಾಯ ಚೈನಾ ರಾಜ್ಯವು ಕೂಡ ಬಂಗಾರವನ್ನೇ ಅಂಗೀಕರಿಸಿತು.

ಹಿಂದೂದೇಶ್ವವಿಷಯ.

1893 ನೆಯ ಇಸವಿಗೆ ಮೊದಲು ನಮ್ಮ ದೇಶದ ನಾಣ್ಯವು ಒಂದು ಬೆಳ್ಳಿಯ ನೇಲೆಯೇ ಆಧಾರಪಟ್ಟು ಕೊಂಡಿದ್ದಿತು, ಒಂದೆಷ್ಟು ಲೋಹಪರಿಮಾಣವಿರುವುದರಿಂದ ಉಂಟಾಗುವ ಲಾಭವನ್ನು ಹಿಂದೂದೇಶವು ಹೊಂದುತ್ತಿದ್ದರೂ, ತಾನು ಮುಖ್ಯವಾಗಿ ವರ್ತಕತನ ಮಾಡುವ ಇತರ ದೇಶಗಳಲ್ಲಿರುವ ಬಂಗಾರ ಪರಿಮಾಣವನ್ನು ಇಟ್ಟುಕೊಂಡಿರುವುದರಿಂದ, ಹಿಂದು ದೇಶದ ನಾಣ್ಯವು ವಿದೇಶ ನಾಣ್ಯಗಳಿಗೆ ಬದಲಾವಣೆಯಾಗುವಾಗಲೂ, ವಿದೇಶ ನಾಣ್ಯವು ಹಿಂದು ದೇಶ ನಾಣ್ಯಕ್ಕೆ ಬದಲಾವಣೆ ಆಗುವಾಗಲೂ ತೊಂದರೆ ತಪ್ಪಿದುದಲ್ಲ

ಅನೇಕ ಕಾರಣಗಳಿಂದ 1890 ನೆಯ ಇಸವಿಯಲ್ಲಿ ದೇಶದೇಶಗಳಲ್ಲೆಲ್ಲ ಬೆಳ್ಳಿಯ ಧಾರಣೆ ಇಳದುಹೋಗಿದ್ದಿತು. ಅವರ ಕಾರಣಗಳಲ್ಲಿ ಮುಖ್ಯಕಾರಣವು ಬಹಳ ದೇಶಗಳಲ್ಲಿ ಅದನ್ನು ನಾಣ್ಯ ಪರಿಮಾಣವನ್ನಾಗಿ ಅಂಗೀಕರಿಸದೆ ಹೋದುದರ ಮೇಲೆ ಉಂಟಾದುದು. ಇನ್ನೂ ಕೆಲ ಕಾರಣಗಳಿಂದ ಬೆಳ್ಳಿಯ ಬೆಲೆಗೆ ನಿಲುಗಡೆಯಿಲ್ಲದಂತಾಯಿತು. ಆದರಿಂದ ನಮ್ಮ ಮುಖ್ಯ ನಾಣ್ಯವಾದ ಬೆಳ್ಳಿ ರೂಪಾಯಿಯ ಬೆಳ್ಳಿ ಧಾರಣೆಯು ಇಳದುಹೋದಾಗ, ಬಿದ್ದುಹೋದ ಬೆಳ್ಳಿಯ ಧಾರಣೆಯು ಏರಿದಾಗ ಹೆಚ್ಚದೇ ಹೋಯಿತು ಅಂದರೆ ರೂಪಾಯಿ ಧಾರಣೆಗೆ ನಿಲುಗಡೆ ಇಲ್ಲವೆಂದು ಭಾವನೆಯು.

ಈ ಪರಿಸ್ಥಿತಿಯಲ್ಲಿ ನಿಲುಗಡೆ ಇಲ್ಲದ ರೂಪಾಯಿಯ ವಿಷಯವಾಗಿ ಆಲೋಚಿಸಲು 1893 ರಲ್ಲಿ ಒಂದು ಕಮಿಟಿ ಏರ್ಪಡಿಸಲ್ಪಟ್ಟಿತು. ಅದಕ್ಕೆ ಹರ್ಷೆಲ್ ಕಮಿಟಿ ಯೆಂದು ಹೆಸರು ಆ ಕಮಿಟಿಯವರು ಪರ್ಯಾಲೋಚಿಸಿ ಇಂಡಿಯಾದಲ್ಲೂ ಕೂಡ ಬಂಗಾರ ಪರಿಣಾಮವನ್ನು ಇಟ್ಟುಕೊಂಡೆ ಹೊರತು ತೊಂದರೆಯು ತಪ್ಪುವುದಿಲ್ಲವೆಂದು ತಿಳದು ಅದಕ್ಕೆ ಔಷಧವು ಬೆಳ್ಳಿಯನ್ನು ಸ್ವತಂತ್ರವಾಗಿ ರೂಪಾಯಿಗುಸಯೋಗಿಸಿ ಮುದ್ರಿಸುವದು ತಪ್ಪಿಸಲ್ಪಟ್ಟಿತು

ಹೀಗೆ ನಿಲ್ಲಿಸಲ್ಪಟ್ಟುದನ್ನು ಕುರಿತು ಸ್ವಲ್ಪ ಪರಿಸ್ಫುಟವಾಗಿ ಹೇಳುವುದು ಆವಶ್ಯಕತ್ವ. 1893 ಕ್ಕೆ ಮೊದಲು ಯಾರಾದರೂ 10 ತೋಲ ಬೆಳ್ಳಿಯನ್ನು ಸರ್ಕಾರಿ ಟಂಕಸಾಲೆಗೆ ಕೊಟ್ಟಿಳ್ಳಿ ಸರ್ಕಾರವದನು 10 ರೂಪಾಯಿಗಳನ್ನು ಕೊಡುವುದೂ, 10 ರೂಪಾಯಿಗಳನ್ನು ಕೊಟ್ಟಿಳ್ಳಿ 10 ತೋಲ ಬೆಳ್ಳಿಯನ್ನು ಕೊಡುವುದೂ ರೂಢಿಯಲ್ಲಿ ಇದ್ದಿತು ಇದನ್ನೇ ಸ್ವತಂತ್ರ ನಾಣ್ಯಗಳ ಮುದ್ರಣವೆನ್ನುವರು ಹರ್ಷಲ್ ಕಮಿಟಿಯವರ ನಿವೇದಿಕೆಯ ಪ್ರಕಾರ ಹೇಳಿದ್ದಾಗಿದೆ. ಈ ಸ್ವತಂತ್ರಮುದ್ರಣವೇ ಅಂದರೆ 1893 ನೆಯ ವರ್ಷದಿಂದ ಬೆಳ್ಳಿ ಕೊಟ್ಟಿಳ್ಳಿ ರೂಪಾಯಿಗಳ ಮುದ್ರಿಸಿ ಕೊಡುವ ಬಾಧ್ಯತೆಯನ್ನು ಪ್ರಭುತ್ವದವರು ಬಿಟ್ಟು ಕೊಟ್ಟಿರುವರು. (ಸಶೇಷ)

ಕರ್ನಾಟಕ ಛೇಂಬರ್ ಆಫ್ ಕಾಮರ್ಸ್

(ಬಿ. ಹೆಚ್. ಎಂ. ಚಂದ್ರಶೇಖರ ಶಾಸ್ತ್ರಿ)

ಕರ್ನಾಟಕ ಪ್ರಾಂತದ ವರ್ತಕರುಸುಖದುಃಖಗಳನ್ನು ವಿಚಾರಿಸಿ, ಅವರ ಹಕ್ಕುಗಳನ್ನು ಕಾಯುವುದು, ಈ ಸಂಸ್ಥೆಯ ಸ್ಥಾಪಿತವಾಗಿ 4-5 ವರ್ಷಗಳಾಗುತ್ತಾ ಬಂದು, ಅನೇಕ ಸ್ಥಳಗಳಲ್ಲಿ ಪರಿಷತ್ತುಗಳು ನಡೆದು ವರ್ತಕರಿಗೆ ಹಿತಕರವಾಗುವ ಅನೇಕ ವಿಚಾರಗಳು ಸರ್ಕಾರಕ್ಕೆ ಕಳುಹಿಸಲ್ಪಟ್ಟವು. ಈ ವರ್ಷದ, ಸಭೆಯು ಜನವರಿತಿಂಗಳಲ್ಲಿ ಬಳ್ಳಾರಿ ಪಟ್ಟಣದಲ್ಲಿ ನಡೆಯಲು ಪ್ರಯತ್ನ ಗೈಯಾಗುತ್ತಲಿವೆ.

ಈ ವರ್ಷ ಸರಕಾರವವರು ವರ್ತಕರಿಗೊಂದೇ ಅಲ್ಲದೆ, ಇಡೀ ಹಿಂದೂದೇಶಕ್ಕೇನೇ ಹಿತಕರವಾದ ಕಾರ್ಯಗಳನ್ನು ಮಾಡಿದ್ದಾರೆ. ಇಂಗ್ಲೀಷು ಪೌಂಡಿನ ಧಾರಣೆಯು ಇಳಿಯುತ್ತಾ ಇದ್ದರೂ, ಹಿಂದೂದೇಶ ಸರಕಾರವವರ ವಿರೋಧನಾಗಿ, ಇಂಗ್ಲಾಂಡಿನಲ್ಲಿರುವ ಇಂಡಿಯಾ ಮಂತ್ರಿಗಳ ಮೊಗಲಾಯಿ ನಡೆಸಿ, ರೂಪಾಯಿಯನ್ನು ಪೌಂಡಿಗೆ ಜಂಟಿಸಿ, ಹಿಂದೂದೇಶಕ್ಕೆ ಭಾತಕವಾಗುವಂತೆ ರೂಪಾಯಿಗೆ, ಒಂದ ಶಿಲಿಂಗ್ 6 ಪೆನ್ಸಿನ ಧಾರಣೆಯನ್ನು ಸ್ಥಿರಮಾಡಿರುವರು. ನಮ್ಮ ಕೋಟ್ಯಾಂತರ ಭಂಗಾರವು ಪರದೇಶಕ್ಕೆ ಹೋಗುತ್ತಿರುವುದು ವೈಸ್ರಾಯರು ನ್ಯಾಯನಿಧಾಯಕ ಸಭೆಗಳ ವಿರುದ್ಧವಾಗಿ ಹೊಸತೆರಿಗೆಗಳನ್ನು ವಿಧಿಸುತ್ತಿರುವರು. ಟಪ್ಪಾಲು ಹಾಸಲು ಮುಖ್ಯವಾಗಿ ಕಾರ್ಡು, ಕವರು ಧಾರಣೆಯನ್ನು ಹೆಚ್ಚಿಸಿರುವರು. ಇನ್ನೂ ಅನೇಕ ಕಾರ್ಯಗಳನ್ನು ಪ್ರಜೆಗಳ ಸಮ್ಮತಿಯಿಲ್ಲದೆ ಮಾಡಿದ್ದಾರೆ.

ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಸಭೆಯು ಈ ವರ್ಷ ಬಳ್ಳಾರಿಯಲ್ಲಿ ನಡೆದದ್ದೇ ಆದರೆ, ವರ್ತಕರಿಗೆಲ್ಲಾ ಇದರ ವಿಷಯವು ಸೂಚಿತಿಯಾಗುವುದು

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೫೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟರಷ್ಟೊಂದು ಪುಟಕ್ಕೆ	೭೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಷ್ಟೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ ಕಚೇರಿಯಲ್ಲಿ ಪ್ರತಿದಿನ ಪ್ರಾತಃಕಾಲ 7 30 ಯಿಂದ 9 ರ ವರಿಗೂ, ಸಾಯಂಕಾಲ 6 30 ಯಿಂದ 7 30 ರ ವರಿಗೂ, ಹಿಂದೀ ಶಿಕ್ಷಣವು ಕೂಡಲ್ಪಡುವದು ಸದರಿ ಶಾಲೆ ಕೋಟಿಜನಗಳಿಗೆ ಚೆನ್ನಾಗಿ ಪರಿಚಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದದ್ದು ದೇಶಾಭಿಮಾನಿಗಳ ಅಗತ್ಯಕರ್ತವ್ಯವಾಗಿದೆ ಭಾರತೀಯ ಸ್ವರಾಜ್ಯ ಸಂಘಟನೆಯಲ್ಲಿ ಹಿಂದಿಯೆ ರಾಷ್ಟ್ರ ಭಾಷೆಯಾಗುವುದರಲ್ಲಿ ಶಿಲಿಮಾತ್ರವೂ ಸಂಶಯವಿಲ್ಲ ಫೆಬ್ರವರಿ 1912 ರ ನೊವೆಂಬರ್ ೨ ರವರೆಗೆ ನಡೆಯುವ ಹಿಂದೀಪರೀಕ್ಷೆಗೆ ಕೂಡಲಪೇಕ್ಷೆಯುಳ್ಳವರು ಈಗಲೇ ಸೇರಬೇಕು

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮಗಾಂಧಿಯವರ ಆತ್ಮಕಥೆ	ಅಥವಾ ಸತ್ಯ ಶೋಧನೆ	
,,	ಒಂದನೆಯ ಭಾಗ	೦—೧೨—೦
,,	ಎರಡನೆಯ ಭಾಗ	೦—೧೨—೦
	ಪೂರ್ತಿಯ ಭಾಗ	೦—೯—೦
,,	ನಾಲ್ಕನೆಯ ಭಾಗ	೧—೮—೦
,,	ಐದನೆಯ ಭಾಗ	೧—೮—೦
ಮಹಾತ್ಮ ಗಾಂಧಿಯವರು ಬರೆದ " **ಅನಾಸಕ್ತಿ ಯೋಗ** "		೦—೧೨—೦

(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ)

ಮಹಾತ್ಮ ಗಾಂಧಿ "	ಚಿಕ್ಕ ಪುಸ್ತಕ	೦—೧—೦
ರಾಷ್ಟ್ರೀಯ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hinoi English Self Instructor.		1—0—0
ಹಿಂದೀ ಬಾಲ ಬೋಧಿನಿ	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
,,	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೨—೦
ದಸಿಸೀ		೦—೬—೦
ಮಜೇದಾರ ಕಹಾನಿಯಾ		೦—೫—೦
ಅನುವಾದಮಾಲ ಭಾಗ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ

ಕರ್ನಾಟಕ ಕೇಸರಿ ಕಾರ್ಯಾಲಯ, ಬೆಳ್ಳಾರಿ

ಪ್ರೇಮ ಚಿಕಿತ್ಸಾಲಯ.

ಕಿತ್ತೂರಮಾಲಾ ರೋಡು ಬೆಳ್ಳಾರಿ.

[ಸಬ್ ಏಜೆಂಟರು:—ಝಾಂಡ ಫಾರ್ಮ್ಕ್ಯೂಟಿಕಲ್ ವರ್ಕ್ - ಬೊಂಬಾಯಿ

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನವ್ಯ ವಿದ್ಯುಚ್ಛಕ್ತಿ ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಿಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ

ವಿ. ಎಂ, ಗಿರಿ ಅಂಡ್ ಸನ್ಸ್.

ತೇರುಬೀದಿ ಬೆಳ್ಳಾರಿ.

ಪ್ರೊಪ್ರೈಟರು:- ಲೋಧ್ರಾ (ಗಭಾರಶಯ ರೋಗನಿವಾರಿಣಿ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳೂ, ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾಗುವ ಚಿಲ್ಲರೆವಸ್ತುಗಳೂ, ಸ್ವೇಚ್ಛೆ ಪನರಿ ಪದಾರ್ಥಗಳೂ, ಸುಲಭ ಬೆಲೆಗೆ ದೊರೆಯುತ್ತವೆ.

ಶಿ. ಎ. ಪಿ, ಯವರಿಂದ ತಯಾರಾದ ಅತ್ಯುತ್ತಮ ಹನ್ನೆರಡು ಬಟ್ಟೆಗಳು ನಮ್ಮಲ್ಲಿ ಅಗ್ಗದರಕ್ಕೆ ದೊರೆಯುತ್ತವೆ.

ರಘು ಮಂಜಾಲಿ ಮೆಡಿಕಲ್ ಹಾಲ್.

ಬ್ರಾಹ್ಮಣರ ಬೀದಿ ಬೆಳ್ಳಾರಿ

ನಮ್ಮಲ್ಲಿ ಗ್ಯಾರಂಟೀ ಆಗಿ ಗುಣಹೊಂದುವುವಾದ ಸಿದ್ಧೌಷಧಗಳು ಅತಿ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ಕ್ರಯ
ಹಸುರು ಶಕೆ ೨೦ ಮಾತ್ರೆ	ರೂ ೨—೦—೦
ಚಲ್ವಿ ದೋಷಕ್ಕೆ ತೊಲೆ ಡಬ್ಬಿಗೆ	೧—೦—೦
ಅಮೂಲ್ಯ ಧಾರ (ಸಕಲ ರೋಗಗಳನ್ನೂ ಗುಣಪಡಿಸುತ್ತೆ.	೦—೮—೦
ವಿಷಮ ಸನ್ನಿಪಾತ ಜ್ವರಗಳಿಗೆ ಮಾತ್ರೆ 50 ಸೀಸ.	೨—೦—೦

FOR SALE

1 Boston hand Press :—

Prints 5" × 8" matter neatly, in good working order.

Price moderate & reasonable.

2 New cyclostyle Machine:—

Used only Twice or thrice Perfectly new.

Price considerably cheap. Apply sharp:—

KARNATAKA KESARI. OFFICE

Bellary.

ಶ್ರೇಷ್ಠವಾದ ಮಿರ್ಷ ದಾರದ ಪುಂಡೆಗಳು.

ಈ ದಾರದ ಪುಂಡೆಗಳು ಭಟ್ಟಿಯಾಗಿಯೂ, ನೆಯವಾಗಿಯೂ, ಇರುವುದರಿಂದ ಮಿಷನ್ನಿನಲ್ಲಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ, ಸುಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳುಪು, ಕಪ್ಪು, ಕಾಕಿ, ಮತ್ತು ಇತರ ರಂಗುಗಳಲ್ಲಿ ಅನೇಕ ಸೈಜಿನ ದಾರದ ಪ್ಯಾಕುಗಳು ಕಡಿಮೆ ಧಾರಣೆಗೆ ದೊರೆಯುತ್ತವೆ.

ದರ ಬರೆದು ತರಿಸಿಕೊಳ್ಳಿರಿ

K. V. & Sons,
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್
ತೇರು ಬೀದಿ ಬಳ್ಳಾರಿ.

ದಿ ಎಂಪೈರ್ ಆಫ್ ಇಂಡಿಯಾ. ಲ್ಯಾಫ್ ಅಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಈ ಕಂಪನಿಯ ಮುಖ್ಯ ಲಕ್ಷಣಗಳು ಮೇಲಾಯು

೧. ಅತಿ ಕಡಿಮೆ ಪ್ರೀಮಿಯಂದ ನಡೆಯುವುದು ಸಹಿಯವು.
೨. ಪೊಲಿಸಿದಾರರಿಗೆ ಹೆಚ್ಚಿನ ಭದ್ರತೆಯುಳ್ಳದ್ದು.
೩. ಕಂಪನಿಯ ಬಡವಾಳಕ್ಕೆ ಇಂಡಿಯನ್ ಪ್ರಜೆಗಳಿಂದ ಕಂಪನಿಯಾದ ಸಂಗತಿಗಳಿಗೆ ಬಾಗಿಸಿ ಕೊಟ್ಟಿದೆ.
೪. ಪ್ರೀಮಿಯಮಿನ ದರ ಬೇರೆ ಕಂಪನಿಗಳ ದರಕ್ಕಿಂತ ಕಡಿಮೆ.
೫. ಪೊಲಿಸಿಗಳಲ್ಲಿ ಹೊಡೆದಾದ ಕರತಗಳವುದೂ ಇಲ್ಲದೆ ಸರಳವಾಗಿರುವುದು
೬. ಪದ್ದದ ಪೊಲಿಸಿಗಳನ್ನು ಹೆಚ್ಚು ಕರ್ಚು ಇಲ್ಲದೆ ಊರ್ಜಿತಕ್ಕೆ ತರಬಹುದು.
೭. ಕಂಪನಿಯ ಲಾಭದಲ್ಲಿ ಸೇಕಡಾ ೧೦೦ ಪೊಲಿಸಿದಾರರಿಗೆ ಹಂಚಲಿಕ್ಕಿರುವುದು.
೮. ಪೊಲಿಸಿಯು ಬೇಡಬೇಡ ಕಂಡು ಬಂದಾಗ ಕಂಪನಿಯಿಂದ ಕೊಡೋಣವಾಗುವ ಪ್ರತಿಫಲ ಬಾಕಿ ಉಳಿದಾರವನ್ನಾಗಿರುವುದು.
೯. ಪೊಲಿಸಿಯ ಪ್ರತಿಫಲವನ್ನು ಸಮಯದ ಸಂದರ್ಭ ಬಂದಾಗ ಅಪ್ಪಣೆಯಲ್ಲಿ ಕೊಡಲಿ ಮಾಡಿಸಿಕೊಳ್ಳುವುದು.

ಏಜಂಟ್:— ಎಂ. ವೆಂಕೋಬರಾವ್. ಬಿ. ಎ.
ಸತ್ಯನಾರಾಯಣಪೇಟೆ
ಬಳ್ಳಾರಿ

Commerce has conquered the world

FREE INSTRUCTIONS.

THE KARNATAKA TYPE-WRITING INSTITUTE.
& Commercial Agency.
Bangalore Road, Bellary.

Agents & dealers in:-
Wood-stock, Corona and other typewriters of all makes, best ribbons carbons, and Swadeshi fountain pens etc.

HOW TO LEARN TOUCH TYPE-WRITING IN 20 days
short hand a speciality.
(Seperate accommodation for lady students.)
Job works & repairs undertaken on moderate charges.

ಆರ್ಡರಗಳನ್ನು ಕಳುಹಿಸಿದ ಕೂಡಲೆ ಪೂರೈಸಲಾಗುವುದು.

Prospectus sent free on application.

THE GRADUATES' TRADING ASSOCIATION,

General merchants, Gramophone Dealers & News Agents,

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್ ಗ್ರಾಮಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜಂಟ್ಸ್.

ತೇರು ಬೀದಿ ಬಳ್ಳಾರಿ.

ARYA VAIDYALAYA BELLARY

Pandit C.S. Shastry's Patent Medicines — MONEY RETURNED IF NOT CURED

1 FEVER KILLER.
Any fever completely cured in 4 days — 8 oz Bottle Rs 2—0—0

2 NAVAJEEVAN PAK.
King of Tonic foods (sweet) — 1 lb Rs 1—8—0

3 PRAMEHA BHANJINI
Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್ ಸಿ ಯಸ್ ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. ಗಣವಿಲ್ಲದಿದ್ದರೆ ಹಣ ವಾಪಸು

" ಜ್ವರ ಸಂಹಾರಿ. "

ಸಾಮಾನ್ಯ ಎಲ್ಲಾ ಜ್ವರಗಳು ಸಣ್ಣ ದಿನಗಳಲ್ಲಿ ಸಂಪೂರ್ಣ ಗುಣ — ೮, ಔನ್ಸ್ ಬಾಟ್ಲಿ ರೂ. ೨—೦—೦

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ ರೂ. ೧—೮—೦

ಪ್ರಮೇಹ ಭಂಜಿನಿ

ಎಲ್ಲ ಸಮ-ಮೇಹಗಳ ಪ್ರಮೇಹವು ೧೨ ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತವೆ. — ರೂ ೬—೦—೦

ಈ ಔಷಧಾಲಯದಲ್ಲಿ ಜ್ವರಗಡ್ಡೆ, ಪಕ್ಷವಾತ, ಪ್ರಮೇಹ, ಬಂಜೆತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯವಾದರೂ ಕಷ್ಟಸಾಧ್ಯವಾಗಿದ್ದವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ವಾಸಿಪಡಿಸಲ್ಪಡುತ್ತವೆ. ಒಮ್ಮೆ ಬಂದು ಪರೀಕ್ಷಿಸಿದರೆ ತಾನಾಗಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

FRINTED & PUBLISHED BY T. B. KESHAVA RAO
AT SRI VIDYARANYA PRESS. BELLARY.

REGISTERED NO. M 2736

ಕರ್ನಾಟಕ ಕೇಸರಿ

ಮುಕ್ತಿಯ ಕೃಷ್ಣಶ್ವರನೋ! ಪ ವೃಕ್ಷಸ್ವಂಗ ಪಕ್ಷಿಗಳು
ಪಿಲ್ಲೆಗಳ ಕೃಷ್ಣಶ್ವರ್ಯಪೋಷಣ ಯಸ್ಸ ಮಾಯೇತಿ ಪಾಂಡವ ॥ ಗೀತೆ. ಅ. ೧೧ ಶ್ಲೋ. ೩೩

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ.

ವಾರ್ಷಿಕ ಚಂದಾ
ಸ್ಥಳದವರಿಗೆ ... ೨—೪—೦
ಪರಸ್ಥಳದವರಿಗೆ ... ೩—೦—೦

ಸಂಪಾದಕ
ಟೇಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.
(ಪಿಡಿ ಪತ್ರಿಕೆ ೦-೧-೦)

ಆರು ತಿಂಗಳಚಂದಾ.
ಸ್ಥಳದವರಿಗೆ ... ೧—೪—೩
ಪರಸ್ಥಳದವರಿಗೆ ... ೧—೨—೦

ವರ್ಷ ೧ ಬಳ್ಳಾರಿ ನಗರ—ದಿನಾಂಕ ೨೮ ನೇ ಸೋಮವಾರ ೧೯೩೧ ಸಂಚಿಕೆ ೧೧

ಪಂಡಿತ ಜವಾಹರಲಾಲರು ಕರ್ನಾಟಕಕ್ಕೆ ಕೊಟ್ಟ ಸಂದೇಶ.

ಪಂಡಿತ ಜವಾಹರಲಾಲ ನೆಹರೂಯವರು, ಹುಬ್ಬಳ್ಳಿ ಪ್ರಾಂತ್ಯದಲ್ಲಿ 4 ದಿನದ ಸಂಚಾರಮಾಡಿ, ಹೋಗಬೇಕಾದರೆ ಕರ್ನಾಟಕ ದೇಶಕ್ಕೆ ಈ ಕೆಳಗಿನ ಸಂದೇಶವನ್ನು ಕೊಟ್ಟರು.

"ಹಿಂದೂಸ್ಥಾನೀ ಸೇವಾದಳದ ಪದವೀದಾನದ ಸಮಾರಂಭದಲ್ಲಿ, ದಳದವತಿಯಿಂದ ಶಿಕ್ಷಣ ಹೊಂದಿದ ಸೈನಿಕರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲು, ನನ್ನ ಸಹಪ್ರವಾಸಿಗರಾದ ಡಾ. ಹರ್ಡೀಕರರವರಿಂದ ನಿಮಂತ್ರಿತನಾಗಿ, ಕರ್ನಾಟಕ ಪ್ರಾಂತಕ್ಕೆ ಬಂದೆನು ಸಂಯುಕ್ತ ಪ್ರಾಂತದಲ್ಲಿನ ಪರಿಸ್ಥಿತಿಗಳಿಂದ ನನ್ನ ಕಾಲವು ಬೇರೆ ವಿನಿಯೋಗವಾಗಿದ್ದರೂ, ಈ ಭಾಗದ ಕರ್ನಾಟಕಕ್ಕೆ ಬರಲು ನನಗೆ ಸಮಯ ಒದಗಿದ್ದಕ್ಕೆ ಸಂತೋಷಪಡೆಸುತ್ತದೆ ಕರ್ನಾಟಕ ಪ್ರಾಂತದಲ್ಲಿ ಸಂಚಾರಮಾಡಬೇಕೆಂಬ ಉದ್ದೇಶವು ನನ್ನಲ್ಲಿದ್ದಿದ್ದರೂ, ಸ್ನೇಹಿತರ ಒತ್ತಾಯದಿಂದ ಅವರಿಗೆ ಇಲ್ಲ ನೆಂದುಹೇಳಲು ನನ್ನ ಮನಸ್ಸಾಗಲಿಲ್ಲ. ನಾನು ಇಷ್ಟಪಟ್ಟ ಎಲ್ಲಾ ಸ್ಥಳಗಳಿಗೂ ಹೋಗಲಿಕ್ಕವಕಾಶವಾಗಲಿಲ್ಲ. ಡಾ. ಹರ್ಡೀಕರರವರಿಗೂ, ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ಸಿನವರಿಗೂ ನನ್ನ ಕಾರ್ಯಾಶ್ರಮವನ್ನೇರ್ಪಾಡಿಸಲು ಕಷ್ಟವಾಗಿರಬಹುದು ಅವರು ಬೇಕಾದಷ್ಟು ಪ್ರಯತ್ನಿಸಿದರೂ, ಒಳ್ಳೆಯ ಕೆಲಸನಡೆದ ಮತ್ತೆ ಕೆಲವು ಸ್ಥಳಗಳಿಗೆ ಹೋಗಲಾಗಲಿಲ್ಲ. ತಪ್ಪುನನ್ನದೇ ಆಗಿದೆ. ಆದಕ್ಕೆ ನಾನು ಕ್ಷಮಾಪಣೆ ಬೇಡುವೆನು. ನಾನು ನನ್ನ ಸಲಕ್ಕೆ ಹೋಗಬೇಕಾದರೆ, ದಾರಿಯಲ್ಲಿದ್ದ ಕೆಲವು ಸ್ಥಳಗಳನ್ನು ನೋಡಲಾಯತೇವನಿತ, ಹೆದ್ದಾರಿಯನ್ನು ಅಲ್ಪಕಾಲದ ದೃಷ್ಟಿಯಿಂದ ಬಿಡಬೇಕಾಯಿತು. ನನ್ನ ಈ ಸಂಚಾರದಲ್ಲಿ ಸಾಕಾದಷ್ಟು ಏರ್ಪಾಡುಗಳನ್ನು ಮಾಡಲು ಪೂರಾಕಷ್ಟಪಟ್ಟಿದ ಡಾ ಹರ್ಡೀಕರರವರಿಗೂ, ಅಧ್ಯಕ್ಷರಾದ ಶ್ರೀ ಸದಾಶಿವರಾಯರಿಗೂ, ಸೇವಾದಳದ ಮಂತ್ರಿಗಳಾದ ವಿನಾಕರರಾಯರಿಗೂ, ಮತ್ತೆತರರಿಗೂ ನಾನು ಬಹಳ ಕೃತಜ್ಞನಿದ್ದೇನೆ.

ನಾನು ಕರ್ನಾಟಕದಲ್ಲಿಯ ನಾಲ್ಕು ದಿವಸಗಳೂ ಸಂತೋಷದಾಯಕ ದಿನಗಳಾಗಿ ಪೂರ್ತಾ ಏರ್ಪಾಟುಗಳನ್ನೆಳಗೊಂಡಿದ್ದವು. ಮುಂದೆ ಬರುವ ಎಲ್ಲಾ ಕಷ್ಟಗಳನ್ನು ಸಹಿಸಲು ಬೇಕಾದ ಉತ್ಸಾಹ, ತಯಾರಿಕೆಯನ್ನು ನಾನು ಹೋದೆಡೆಗಳಲ್ಲೆಲ್ಲಾ ನೋಡಿದೆನು. ಹಳ್ಳಿಗಳ ಮಾರ್ಗಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಜನ ಸಂದಣಿ ನೆರೆದದ್ದನ್ನು ನೋಡಿ ಬಹಳ ಗೌರವವನ್ನು ತಿಳಿದು, ಈ ಪ್ರೇಮ ಮತ್ತು ಉತ್ಸಾಹವೂ, ನನ್ನಂಥ ಸಾಮಾನ್ಯ ಸೈನಿಕನಿಗಲ್ಲವೆಂದೂ, ಇದು ನಾನು ಸಮಾಧಿಸುವ ಆ ದೊಡ್ಡ ಸ್ವಾತಂತ್ರ್ಯ ಧ್ಯೇಯಕ್ಕೆಂದೂ ನಂಬುವೆನು.

ಪ್ರಾಚೀನ ವೈಭವ ಶಾಲಿಯಾದ ಕರ್ನಾಟಕದಿಂದ ಹೊರಗೆ ಹೋಗಬೇಕಾದರೆ, ಕರ್ನಾಟಕಸ್ತರು, ಮುಂದೆ ಬರುವ ಪರೀಕ್ಷೆಯಲ್ಲಿ ಧೈರ್ಯದಿಂದ ನಿಂತು ತೇರ್ಗಡೆಯಾಗುವರೆಂತಲೇ ನಂಬಿಕೊಂಡು ಹೋಗುವೆನು.

ಕರ್ನಾಟಕವು ತನ್ನ ವೈಭವಶಾಲೀ ಚರಿತ್ರೆಗೆ ಇನ್ನೊಂದು ವೈಭವ ಶಾಲೀ ಪುಟವನ್ನು ಕೂಡಿಸಲಿ.

ಜವಾಹರಲಾಲ ನೆಹರು.

ಡಾಕ್ಟರ್ ಅನ್ಸಾರಿಯವರ ಭಾಷಣ.

ಹಿಂದೂಸ್ಥಾನದವರು ಕ್ರೈಸ್ತನ ಹತ್ಯಕ್ಕೆ ಕಾರಣರಂತೆ, ಲಂಡನ್ನಿಗೆಹೋದ ಮುಸಲ್ಮಾನ್ ಪ್ರತಿನಿಧಿಗಳು, ರೌಂಡ್ ಟೇಬಲ್ ಸಭೆಯ ನಾಶಕ್ಕೆ ಕಾರಣರಾಗಿ ಅಪಕೀರ್ತಿಯನ್ನು ತಂದರೆಂದು ಡಾ. ಅನ್ಸಾರಿಯವರು, ದೆಹಲಿಗೆ 20 ಮೈಲಿ ದೂರದಲ್ಲಿರುವ ನೇರಲೆ ಎಂಬ ಗ್ರಾಮದಲ್ಲಿ ಗಾಂಧೀ ಆಶ್ರಮವನ್ನು ತೆರೆಯುತ್ತಾ, ಒಂದು ಅಮೋಘವಾದ ಭಾಷಣವನ್ನು ಕೊಟ್ಟರು. ಮುಂಬಯಿ ಮಂತ್ರಿಗಳ ಭಾಷಣವು ಹಿಂದೂ ದೇಶಕ್ಕೆ ಒಂದು ದೊಡ್ಡ ವರಪ್ರಸಾದವೆಂದು ತಿಳಿದಿರುವ ಕೆಲವರನ್ನು ನೋಡಿ ಅವರು ಆಶ್ಚರ್ಯವನ್ನು ವ್ಯಕ್ತಪಡಿಸಿದರು ಕಾಂಗ್ರೆಸ್ಸಿನವರೊಂದಿಗೆ ಒಪ್ಪಂದವಾಗುವುದಾದರೆ, ಅದು ಮರ್ಯಾದೆಯ ರೀತಿಯಿಂದ ಆಗುವುದೆಂತಲೂ, ಯಾವ ಒಪ್ಪಂದ ಆಗುವ ಸಂಭವ ಒದಗಿದರೆ ಅದು ಕೊನೆಯ ಯತ್ನವಾಗುವುದೆಂತಲೂ, ಹೇಳಿದರು.

ಮಹಾತ್ಮ ಗಾಂಧಿಯವರು.

ಮಹಾತ್ಮ ಗಾಂಧಿಯವರು ಬೊಂಬಾಯಿಯಲ್ಲಿ ಇಳಿದೊಡನೆಯೇ, ವೈಸ್ರಾಯರಲ್ಲಿ ಸಂಭಾಷಿಸಲು ಹೋಗುವರೆಂದು ವರ್ತಮಾನವಿದೆ. ಬಂಗಾಳಕ್ಕೆ ಹೋಗಿ ತಾವು ಅಲ್ಲಿನ ಪ್ರಿತಿಗತಿಗಳನ್ನು ಪರಿತೀಲಿಸಿ, ಅಲ್ಲಿಯ ಧೋರಣದ ಬಗ್ಗೆ ಬಂಗಾಳದ ಗವರ್ನರರವರೊಡನೆ ಮಾತಾಡಬೇಕೆಂದು ಅವರ ಉದ್ದೇಶವಿದ್ದಂತೆ ಕಂಡುಬರುತ್ತದೆ

ದೆಸಲಿಯಿಂದ ಬಂದಿರುವ ವರ್ತಮಾನದಲ್ಲಿ ಬಂಗಾಳದ ಅಸಾಧಾರಣ ಕಾನೂನು ಸವಂಗೆ ಯಾಗುವುದೆಂತಲೂ, ಮಹಾತ್ಮರು ಬಂಗಾಳದ ಎಲ್ಲಾ ಭಾಗಗಳನ್ನೂ ಸಂಚರಿಸಲು, ಸರ್ಕಾರದವರು ತಿನ್ನಿಲ ಪಡಿಸುವರೆಂದೂ ತಿಳಿದು ಬಂದಿದೆ.

ಕಾರ್ಯಕಾರಿಣಿಮಂಡಲದ ಸಭೆ.

ಅಖಿಲ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ತಿಯ ಬೊಂಬಾಯಿಯಲ್ಲಿ ಈ ತಿಂಗಳ ೨೨ ನೇ ತಾರೀಖಿಗೆ ಕೂಡುವುದು. ಅಧ್ಯಕ್ಷರು ಮಹಾತ್ಮ ಗಾಂಧಿಯವರಅಭಿಪ್ರಾಯವನ್ನು ತಿಳಿದುಕೊಂಡು, ದೇಶದ ಪರಿಸ್ಥಿತಿಗಳನ್ನು ಅವರಿಗೆ ನಿವೇದನಮಾಡಿ, ಮುಂದೆ ನಡೆಯಬೇಕಾದ ಕಾರ್ಯಕ್ರಮವನ್ನು ನಿರ್ಣಯಿಸುವರು.

ಅಲಹಾಬಾದಿನ ವಿಶೇಷ ಕಾನೂನು.

ಪಂಡಿತ ಜವಾಹರಲಾಲರಿಗೆ ನೋಟೀಸು.

ಈ ಸಾಯಂಕಾಲ ಪಂಡಿತ ಜವಾಹರಲಾಲರು ಅಲಹಾಬಾದಿನಲ್ಲಿ ದೊಡನೆಯೇ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಮಿಸ್ಟರ್ ಹರ್ಕರವರ ಸಹಿಯಿಂದ ಒಂದು ನೋಟೀಸು ಜಾರಿಯಾದಿತು

ಪಂಡಿತರು ಮುನಿಸಿಪಾಲಿಟಿ ಲಿಮಿಟ್ಸನ್ನು ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಬಿಡಕೂಡದು. ಯಾವ ಸಭೆಗಳಲ್ಲಿಯೂ ಭಾಗ ತೆಗೆದುಕೊಳ್ಳಬಾರದು. ಮ್ಯಾಜಿಸ್ಟ್ರೇಟರ ಮತ್ತು ಪೋಲೀಸ್ ಸೂಪರಿಂಟೆಂಡೆಂಟರ ಅಪ್ಪಣೆಯಿಲ್ಲದೆ ಪುಸ್ತಕ, ಪತ್ರ ಜಾಹೀರಾತ್ಗಳನ್ನು ಪ್ರಕಟಿಸಬಾರದು. ಇದೇ ಆ ಹುಕುಮ ನಾಲ್ಕಾರು ದಿವಸ ಒಂದು ತಿಂಗಳ ವರೆಗೂ ಜಾರಿಯಲ್ಲಿರುವುದು.

ನನಗೆ ಮುಕ್ಕಳಮೇಲೆ ಯುದ್ಧಹೂಡುವ ಇಚ್ಛೆಯಿಲ್ಲ.

ಪಂಡಿತ ಮೋತೀಲಾಲರ ಮಗಳಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಮೇಲೆ, ಒಂದು ನೋಟೀಸು ಜಾರಿಯಾಗಿ, ಅವರಮೇಲೂ ಕಾನೂನು ಕಂದಾಯ ನಿವಾಕರಣೆ ಸಭೆಗೆ ತೆಗೆದುಕೊಂಡುಹೋಗಿ ಮರುಪಯೋಗ ಪಡಿಸಿರುವರೆಂದೂ, ಅಧಿಕಾರಿಗಳು ಅದನ್ನು ಬಿಡಬೇಕೆಂದೂ ಇದೆ.

(ಮಿಕಿಯ ಪುಟದ ಮುಂದುವರಿದಿದೆ.)

ಉತ್ತಮ ಜಮೀನು ಬಗ್ಗೆ

ಕಿಲ್ಲೋಸ್ಕರ ನೇಗಿಲನ್ನು ಉಪಯೋಗಿಸಿರಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನ ಮಾಡುತ್ತದೆ.

ನೇಗಿಲುಗಳ ಸಿಫಾರಸ್ ಪತ್ರವೆಂದರೆ, ಒಕ್ಕಲಿಗರಸಂತೋಷ ವೆಂಬುವದನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ನಮೂನೆಯ ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕಿಲ್ಲೋಸ್ಕರ ಬಂಧುಗಳು, ಲಿಮಿಟೆಡ್

ಕಿಲ್ಲೋಸ್ಕರವಾಡಿ

ಜಿ. ಸಾ ಪ್ರಾಂ.

ಶ್ರದ್ಧಾನಂದ ಬಲಿದಾನ.

ಹೋಗುವಲ್ಲಿ ಹಾಕುವ ಹವಿಸ್ಸಂತೆ ಶ್ರೀ. ಸ್ವಾಮಿ ಶ್ರದ್ಧಾನಂದರು ನಮ್ಮಿಂದ ಅಗಲಿ ಈ ವಾರಕ್ಕೆ ೧ ವರ್ಷಗಳಾದವು, ಅವರ ಅಪಾರವಾದ ಸ್ವಾರ್ಥತ್ಯಾಗವನ್ನು ನೆನ್ನೆ ಪೆಟ್ಟಿರೂ ಈ ನಾಶಾಳಹಬ್ಬದಲ್ಲಿ ಸ್ಮರಿಸಿ, ಕ್ಷೋಭೆ, ಹಾಗೂ ಅಜ್ಞಾನಗಳನ್ನು ನಂದಿಸಲು ನಮ್ಮಲ್ಲಿರತಕ್ಕ ಸ್ವಾರ್ಥ ತ್ಯಾಗವನ್ನು ವ್ಯಕ್ತಪಡಿಸೋಣ. ಮತ್ತು ಇಲ್ಲಿಯ ವರೆಗೆ ಹಲವು ಬಗೆಯಿಂದ ನಮ್ಮನ್ನು ಪರೀಕ್ಷಿಸುತ್ತ ಬಂದಿರುವ ಸರ್ವ ಶಕ್ತನಾದ ಪರಮಾತ್ಮನನ್ನು ಇನ್ನು ಮೇಲಾದರೂ ಅನೇಕ ಎಡರುಗಳಿಗೆ ನಮ್ಮನ್ನು ಗುರಿಮಾಡದೆ ಎಲ್ಲ ಕಡೆಗೆ ಸುಖಶಾಂತಿಯನ್ನು ಮತ್ತು ಪರಸ್ಪರ ಪ್ರೇಮಾದರಗಳನ್ನು ನಮ್ಮ ಪಾಲಿಗೆಂದು ಬೇಡಿಕೊಳ್ಳೋಣ.

ನಮ್ಮ ಸಮಾಜ ಪುರುಷನ ದೇಹದಲ್ಲಿ ಅಕ್ಷತ್ರಿಯತೆಯೆಂಬ ಒಂದು ವೇದನೆಯನ್ನುಂಟುಮಾಡುತ್ತಿರುವ ಗಾಯವಾಗಿದೆ. ಈ ವ್ರಣವು ಆತನ ಶರೀರದಲ್ಲಿ ಕಡುತರವಾದ ವಿಷವನ್ನು ಹುಟ್ಟಿಸಿ ಆತನ ರಾಷ್ಟ್ರೀಯ ಜೀವನವನ್ನು ಕೆಡಿಸಿ ಆತನನ್ನು ಯಾವ ರೀತಿಯಿಂದಲೂ ಉಲುಕಾಡದಂತೆ ಮಾಡಿಬಿಟ್ಟಿರುವುದು. ಸ್ವಾಮಿಶ್ರದ್ಧಾನಂದರ ಜೀವನವು ಈ ಗಾಯವನ್ನು ಗುಣ ಪಡಿಸುವುದರಲ್ಲಿಯೂ, ಮತ್ತು ಹಿಂದೂ ಸಮಾಜ ಶುದ್ಧಿಕರಣದಲ್ಲಿಯೂ ವ್ಯಯವಾಯಿತು ಆತನ ಅಪಾರವಾದ ಉತ್ಸಾಹವು ಈ ಕಾರ್ಯದಲ್ಲಿ ಪೂರ್ಣ ಲಯ ಸಂಪಾದನೆಯಾಗುವವರೆಗೆ ನಮಗೆ ಸಹಾಯವನ್ನೀಯಲಿ.

ಇಂಥಾ ಮರಣಪ್ರಾಯವಾದ ಗಾಯವನ್ನು ನಮ್ಮ ಶರೀರದಲ್ಲಿರಿಸಿಕೊಂಡರೆ ನಮಗೆ ಸುಖ ಸಮಾಧಾನಗಳು ದೊರೆಯುವುದು ಹೇಗೆ? ಜನಾಂಗವು ಅನೇಕ ವ್ಯಕ್ತಿಗಳ ಅಥವಾ ಸಂಗಡಿಗರ ಸಮೂಹವು ಮಾತ್ರವಾಗಿರದೆ ವೃದ್ಧಿಸಿ, ಅದರಂತೆ ಕೂಸಿನಂತೆ ಪ್ರಾರೈಯುಕಾಲ ಬರೆ ಸೂಕ್ಷ್ಮ ಅಣುಗಳ ಸಂಚಯವಲ್ಲ ಅವರಿಂದ ಅ ಜೀವಿತದಲ್ಲಿರತಕ್ಕ ಪ್ರಾಣ ಹಾಗೂ ಸುಖ ಸೋಪಗಳನ್ನು ತಿಳಿದುಕೊಳ್ಳುವ ಜ್ಞಾನ ತಂತುಗಳು ಸಾವಿರಾರು ಅಣುಗಳನ್ನು ಒಟ್ಟುಗೂಡಿಸಿ ಒಂದು ಸುಂದರವಾದ ಸಜೀವ ಪ್ರಾಣಿಯನ್ನು ಮಾಡುತ್ತವೆ. ಸೂಕ್ಷ್ಮದರ್ಶಕ ಯಂತ್ರದಿಂದ ಪರೀಕ್ಷಿಸಿದರೆ ಈ ಎಲ್ಲ ಪರಮಾಣುಗಳಿಗೆ ಭಿನ್ನ ಭಿನ್ನ ಅಸ್ತಿತ್ವವಿರುವುದೆಂದು ಕಂಡುಬಂದರೂ ಅವು ತಮಗಿಂತಲೂ ಶ್ರೇಷ್ಠವಾದ ದೇವರ ಸಯಮವನ್ನು ಸದಾ ಪಾಲಿಸುತ್ತಿರುವವು. ಶರೀರ ವ್ಯಾಪಾರಕ್ಕೆ ಸ್ವಲ್ಪ ಸಂಬಂಧವನ್ನೇ ಇಟ್ಟುಕೊಂಡಂತೆ ತೋರುವ ಉಗುರೂ ಸಹ ಎಲ್ಲ ಶರೀರ ಸಾಮೂಹಿಕ ಜೀವನದ ಸಲುವಾಗಿಯೇ ಜೀವಿಸಿ ತನ್ನ ಕರ್ತವ್ಯವನ್ನು ಮಾಡಿ ಕಡೆಗೆ ಸಾಯುತ್ತದೆ.

ಇದೇ ರೀತಿಯಾಗಿ ಒಂದು ಜನಾಂಗವಾದರೂ, ಒಬ್ಬೇ ವ್ಯಕ್ತಿಮಾತ್ರದ ಅಥವಾ ಅನೇಕ ಸಂಗಡಿಗರ ಸಮ್ಮೇಳನವಷ್ಟೆ. ಭಿನ್ನ ಭಿನ್ನ ವ್ಯಕ್ತಿಗಳೂ ಹಾಗೂ ಸಂಗಡಿಗರೂ ಸ್ವಾರ್ಥದೃಷ್ಟಿಯಿಂದಲೇ ಜಡೆದಾಡುತ್ತಿರಬಹುದು ಆದರೆ ಜನಾಂಗವು ಮಾತ್ರ ಅಭೇದ್ಯವಾದ ಒಂದೇ ವ್ಯಕ್ತಿಯಾಗಿದೆ. ಆದ್ದರಿಂದ ಜನಾಂಗವೆಂಬ ಪುರುಷನ ಯಾವ ಭಾಗದಲ್ಲಿಯೇ ಗಾಯವಾದರೂ ಎಷ್ಟು ಜನಾಂಗವೇ ಕಷ್ಟಕ್ಕೀಡಾಗಬೇಕಾಗುತ್ತದೆ. ಅಸ್ಪೃಶ್ಯತೆಯು ಇಂಥಾ ಭೀಕರವಾದ ಗಾಯವಿದ್ದು ನಾವು ಜೀವದಿಂದಿಳಿಯಬೇಕೆಂಬ ಆಶೆಯಿದ್ದರೆ ಈ ಗಾಯವನ್ನು ಮಾಯಿಸಲು ಪ್ರತಿಯೊಬ್ಬರು ಪ್ರಯತ್ನಿಸತಕ್ಕದ್ದು.

ಶರೀರದಲ್ಲಿ ಇಂಥ ಗಾಯವನ್ನು ಮಾಡಿಕೊಂಡ ನಿಮಗೆ ಒಬ್ಬೇ ನೋಣ ಜಾಡಿಸುವದರಿಂದ ಸುಖವಿದ್ದೀಯೆನ್ನುವುದು ಹೇಗಿರುವುದು ಶಕ್ಯವಿಲ್ಲ ಎಲ್ಲಿಯವರೆಗೆ ಈ ಗಾಯವು ಮಾಯವುದಿಲ್ಲವೋ, ಆಲ್ಲಿಯವರೆಗೆ ನೋಣಗಳು ಬರತಕ್ಕದ್ದೇ ಅಸ್ಪೃಶ್ಯರೆಂಬ ಹೆಸರಿನ ಮೇಲೆ ಹಿಂದೂ ಸಮಾಜವು ತನ್ನ ಸಂರಕ್ಷಕತ್ವತೆಯನ್ನು ಬೆಳೆಯಗೊಡೆದ್ದರಿಂದ ಮುಸಲ್ಮಾನರು, ಕ್ರಿಶ್ಚಿಯನ್ನರು ಮತ್ತು ಸರಕಾರವೆಂಬ ನೋಣಗಳು ಅವರ ಮೇಲೆ ಕೂತು ಎಲ್ಲರಕ್ಕೆಯನ್ನು ಹೀರುತ್ತಿರುವವು ಆದರೂ ನಾವು ಇನ್ನೂ ಸುಮ್ಮನೆ ಕುಳಿತಿರುವರಿ ಗಾಯವಿದ್ದ ಸ್ಥಳದ ಶರೀರದ ಭಾಗವಿದ್ದಂತೆ ಅಸ್ಪೃಶ್ಯರಾದರೂ ಹಿಂದೂ ಸಮಾಜದ ಮುಖ್ಯಾಂಗವಾಗಿದ್ದರೆ. ಅವರಿಗಾದ ನೋವು ನಮಗಾದರೂ ಆಗತಕ್ಕದ್ದೇ.

ಕ್ರಿಶ್ಚಿಯನರು, ಮುಸಲ್ಮಾನರು, ಮತ್ತು ಸರಕಾರವು, ತಮ್ಮ ಸ್ವಾರ್ಥ ಪ್ರವೃತ್ತಿಯಿಂದಲೇ ಯಾಕಾಗಲಿ ಹಿಂದು. ಅಸ್ಪೃಶ್ಯರಿಗೆ ಸಹಾಯ ಮಾಡುವದು. ಹಿಂದೂ ಸಮಾಜಕ್ಕೆ ಅಸತ್ಯವಾಗಿದೆ. ಆದರೆ ಈ ಉದಾಸೀನತೆಯಿಂದಲಾದರೂ ನಮ್ಮ ಸಮಾಜವು ಎಚ್ಚತ್ತು ಈ ಮರಣ ಪ್ರಾಯವಾದ ಗಾಯವನ್ನು ಮಾಯಿಸುವದು ಸಮಂಜಸವಾಗಿದೆ ಮತ್ತು ಈ ಹುಣ್ಣನ್ನು ಗುಣಪಡಿಸಲು ತಕ್ಕ ಚೈತನ್ಯವು ನಮ್ಮ ಹಿಂದೂ ಸಮಾಜದ ರಕ್ತನಾಳಗಳಲ್ಲಿದೆಯೆಂದು ವಿಶ್ವಾಸವಿಂದ ಹೇಳಬಹುದು

ಸ್ವಾಮಿ ಶ್ರದ್ಧಾನಂದರ ಜೀವನ ಜ್ಯೋತಿಯೇ ಭೀಕರ ಸ್ವರೂಪವನ್ನು ತಾಳಿದ ಈ ಹುಣ್ಣನ್ನು ಗುಣಪಡಿಸುವುದರಲ್ಲಿಯೇ ಲಯವಾಯಿತು. ಅವರ ದಿವ್ಯ ಸಾಮಸ್ಮರಣೆಯು ಚಿರವಾಗಿ ಉಳಿದು ನಮ್ಮಲ್ಲಿ ಹೊಸ ಚೈತನ್ಯವನ್ನುಂಟುಮಾಡಲಿ

ರಾಜಗೋಪಾಲಾಚಾರ್ಯರು.

(ಶ. ಸಂ)

ಜಯ ಕರ್ನಾಟಕ. (೧೦ನೆಯ ಮಾಸಿಕ ಸಂಚಿಕೆ.)

ಕರ್ನಾಟಕದಲ್ಲಿಯ ಓದುಗಾರರಿಗೆಲ್ಲಾ, ಜಯ ಕರ್ನಾಟಕದ ಶ್ರೀಮತ್ತತ್ವವು ತಿಳಿವೆ ಇದು ಗಾಂಭೀರ್ಯ ಭಾಷಾಶೈಲಿಯಿಂದ ಕೂಡಿ ಸುಪ್ರಸಿದ್ಧ ವಿದ್ವಾಂಸರ ಲೇಖನಗಳನ್ನೊಳಗೊಂಡಿದೆ. ಹಿಂದೀ ಮಾಸಿಕ ಪತ್ರಿಗಳ ಪೈಪೋಟಿಯಿಂದ, ಆಂಥಾ ಸುಧಾರಿಕೆಯನ್ನು ಸಾವು ಬಯಸುವೆವಾದರೂ, ಕರ್ನಾಟಕದವರು, ಪತ್ರ ಪ್ರೇಮಿಗಳ ಕೊರತೆಯಿಂದ ಇದು ಸಾಗದಾಗಿದೆ ಜಯಕರ್ನಾಟಕವು ಒಂದಲ್ಲೊಂದು ದಿನ ಹಿಂದಿ ವಿಶಾಲ ಭಾರತದ ತರಗತಿಗೆ ಏರಲೆಂದು ನಾವೆಲ್ಲ ಪ್ರಾರ್ಥಿಸೋಣ.

ಮುಖ್ಯವಿಷಯಗಳು.

ಅಲಹಾಬಾದಿನ ವಿಶೇಷ ಕಾನೂನು.

(ಒಂದನೇ ಪುಟದಿಂದ. ಮುಂದುವರಿದಿದೆ.)

ನಿಮ್ಮ ಕಾರ್ಯದಿಂದ ನನ್ನ ಸಂತೃಪ್ತಿಯನ್ನು ಊರ ಹೊರಗೆ ಕರೆದುಕೊಂಡು ಹೋಗುವ ಕಾರ್ಯಕ್ಕೆ ಭಂಗ ಬಂದಿತ್ತದೆ. ಎಂದು ತೀರ್ಮಾನಿಸುವದು ಅವರಿಗೆ ಬರೆದಿದ್ದುದು

ಈಚೆಗೆ ಜಿಲ್ಲಾ ಮ್ಯಾಜಿಸ್ಟ್ರೇಟರು ಆ ಹೇಳುವುದು ಮಾಡಿ, ತೀರ್ಪ ತಿಯವರಿಗೆ ನನಗೆ ಸಂತೃಪ್ತಿ ಮೇಲೆ ಯುದ್ಧ ಸೂಚಿಸುವ ಇಚ್ಛೆ ಇಲ್ಲವೆಂದು, ಬರೆದರು ವರು.

ಇಟಾವಾ ಪರಿಷತ್ತು ನಿಂತಿತು.

ಅಲಹಾಬಾದ್ ನ ಪ್ರಾಂತೀಕ ಪರಿಷತ್ತಿನವರು, ಸರ್ಕಾರದವರ ಒಪ್ಪಾಬನ್ನು ವಿಮರ್ಶಿಸುತ್ತಾ, ತಾವು ಕಳುಹಿಸಿದ ಉತ್ತರವು ಸರಿಯಾದುದೆಂದು ನಿರ್ಧರಿಸಿದರು ಅಲ್ಲದೆ ಮಹಾತ್ಮ ಗಾಂಧಿಯವರು ಶೀಘ್ರದಲ್ಲಿ ಬರುವುದಿದ್ದು, ಕಾರ್ಯಕಾರಿಮಂಡಲವು ಕೂಡ ಬೇಕಾಗಿರುವುದರಿಂದ, ಆ ಸಭೆಯಾದಮೇಲೆಯೇ, ತಮ್ಮ ಪ್ರಾಂತದಲ್ಲಿ ರಾಜಕೀಯ ಸಭೆಯನ್ನು ನಿರ್ಣಯಿಸುವ ವಿಷಯಕ್ಕೆ ಆಲೋಚಿಸಬೇಕು ನು, ನಿರ್ಣಯಮಾಡಿ, ಸಭೆಯನ್ನು ಮುಂದಕ್ಕೆ ಹಾಕಿದರು.

ಶಿಕ್ಷೆಗಳು.

ಈ ಪ್ರಾಂತದ ಹಳ್ಳಿಕಾಂಗ್ರೆಸ್ ಸಭೆಗಳ ಐದು ಮುಖಂಡರು ಬೈಲದಲ್ಲಿಯೇ ವಿಚಾರಸಲ್ಪಟ್ಟು, ಆರು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು. ಕಾಪುರದ ಹತ್ತರ ಸಿಲಾಸು ಎಂಬ ಹಳ್ಳಿಗೆ ಮ್ಯಾಜಿಸ್ಟ್ರೇಟರೇ ಖುದ್ದಾಗಿಹೋಗಿ ಅಲ್ಲಿ 144 ನೇ ಕಲಂ ವಿರುದ್ಧ ನಡೆಯುತ್ತಿದ್ದ ಸಭೆಯ ಕಾರಣದಿಂದ 16 ಜನರನ್ನು ಸೆರೆಹಾಡಿದರು. " ಅಭ್ಯುದಯ" ಪತ್ರಿಕೆಯ ಸಂಪಾದಕರಾದ ಶ್ರೀ ಕೃಷ್ಣಕಾಂತಮಾಳವೀಯರಿಗೆ, ಆರು ತಿಂಗಳ ಜೈಲ್ ಯಾಯಿತು. ಜೆಂಝಾಕ್ ಎಂಬ ಸ್ಥಳದಲ್ಲಿ ಹಿಡಿಯಲ್ಪಟ್ಟ 22 ಜನರು 3 ತಿಂಗಳ ಶಿಕ್ಷೆಗೂ, 50 ರೂ, ಒಬ್ಬಾನೆಗೂ ಗುರಿಯಾದರು.

ಕಾಂಗ್ರೆಸ ಕಛೇರಿಗಳ ಶೋಧನೆ

ಅಲಹಾಬಾದಿನಲ್ಲಿ ಪಟ್ಟಣ ಮತ್ತು ಜಿಲ್ಲಾ ಕಾಂಗ್ರೆಸ್ ಕಛೇರಿಗಳು ಪೋಲೀಸರಿಂದ ಶೋಧಿಸಲ್ಪಟ್ಟು ಸಾಮಾನ ಗಳೆಲ್ಲವನ್ನೂ ಗಾಡಿಗೆತುಂಬಿ ಬೀಗಮುದ್ರೆ ಹಾಕಿದರು ಸಾಮಾನುಗಳ ಗಾಡಿಗಳನ್ನು ಕೂಲಿಯವರಾದ ಎಳೆಯದ್ದರಿಂದ ಪೋಲೀಸಿನವರು ತಾವೇ ಎಳೆಸುಕೊಂಡು ಹೋದರು.

ಪೂರೀ ಕಾಂಗ್ರೆಸ್ ತಯಾರಿ

46 ನೆಯ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ತಯಾರಿಗೆ ಪೂರಿಯಲ್ಲಿ ಮಂಟಪವು ಗೋಪಬಂಧು ನಗರವೆಂಬ ಹೆಸರಿನಿಂದ ತಯಾರಾಗುತ್ತಲಿದೆ. ಇದಕ್ಕೆ ಬೆಲೆಯುಳ್ಳ ವಸ್ತುಗಳನ್ನು ಉಪಯೋಗಿಸುತ್ತಲಿರುವುದಿಲ್ಲ. ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಎಂಥಾ ಬಡವರೇಬರಲಿ ಇದುನಮ್ಮದೆಂಬ ಭಾವನೆಯು ಅವರಿಗೆ ಬರುವಂತೆ ಮಾಡುವುದೇ ಕಾರ್ಯಕರ್ತರ ಕೆಲಸವಾಗಿದೆ. ಚಿತ್ತರಂಜನ ಆಸ್ಪತ್ರೆಯ ಕಟ್ಟಡವು ಮುಗಿಯಲಿಕ್ಕೆ ಬಂದಿತೆ. ಪೂರೀವೆಬ್ಬಿಣವು ವೈಭವಯುಕ್ತವಾದ ವ್ಯಾಜೀನ ಕಟ್ಟಡಗಳಂದ ಶೋಭಿಸುತ್ತಲಿದ್ದು, ಎಲ್ಲಾರೀತಿಯಲ್ಲಿಯೂ ಆಕರ್ಷಣೀಯವಾಗಿದೆ.

1932 ನೇ ಫಿಬ್ರವರಿ 21 ನೇ ತಾರೀಖಿನಿಂದ 3-4 ದಿವಸಗಳು ಮಹಾಸಭೆಯು ಕೂಡಬಹುದಾಗಿದೆ. ಅದರೆ ಮಹಾತ್ಮ ಗಾಂಧಿಯವರು ಬಂದಮೇಲೆ ಕಾರ್ಯಕಾರೀ ಮಂಡಲದಲ್ಲಿ ಇದನ್ನು ನಿರ್ಣಯಿಸುವಾಗಬೇಕು. ಒಂದು ದೊಡ್ಡ ಸ್ವದೇಶೀ ವಸ್ತುಪ್ರದರ್ಶನವೂ ಏರ್ಪಾಟಾಗಿದೆ.

ಸರ್. ಎಂ ವಿಶ್ವೇಶ್ವರಯ್ಯನವರು ಮಂದರಾಸಿನಲ್ಲಿ ಇಡೀ ಇಂಡಿಯಾ ಸ್ವದೇಶೀ ವಸ್ತು ಪ್ರದರ್ಶನದ ಅಧ್ಯಕ್ಷರಾಗಿ ನುಡಿದ ಕೆಲವು ಅಮೋಘ ವಾಕ್ಯಗಳು.

ಸ್ವಂತವಾಗಿ ರಾಟೆ ಹಿಡಿದು ಬಟ್ಟೆ ನೂತು ಧರಿಸುವದು ದೇಶದ ಬಡತನವನ್ನು ಹೋಗಲಾಡಿಸಲು ಉತ್ತಮ ಮಾರ್ಗವೆಂದು ನಾನು ಕೆಲವು ವರ್ಷಗಳ ಹಿಂದೆ ನಿರ್ಧರಿಸಿರಲಿಲ್ಲ. ಈಗಿನ ಸಮಯದಲ್ಲಿ ಜನರಿಗೆ ನೌಕರಿಯಿಲ್ಲದ ತೊಂದರೆಯನ್ನು ತಪ್ಪಿಸಲು ಇದಕ್ಕಿಂತ ಬೇರೊಂದು ಮಾರ್ಗವೇ ಇಲ್ಲವೆಂದು ತಿಳಿದುಬಂದಿದೆ. ಅನೇಕ ನಾಗರಿಕ ದೇಶಗಳಲ್ಲಿ ವ್ಯವಸಾಯಕ್ಕಿಂತಲೂ ಕೈಗಾರಿಕೆಯಿಂದಲೇ ರೈತರ ಜೀವನಕ್ಕೂ ಸರ್ಕಾರದ ಖಜಾನೆಗೂ ಹಣವು ದೇಶದಿಂದ ಸಿಕ್ಕುತ್ತಿದೆ.

ಉದಾಹರಣೆಗೆ,

ಅಮೇರಿಕಾ ಸಂಯುಕ್ತ ರಾಜ್ಯದಲ್ಲಿ ವ್ಯವಸಾಯದಿಂದ ಕೈಗಾರಿಕೆಯಿಂದ,

	286	ಕೋಟಿ	1300	ಕೋಟಿ
ಕೆನಡಾ ರಾಜ್ಯದಲ್ಲಿ	464	"	1047	"
ಬ್ರಿಟನ್ "	80	"	808	"
ಜಪಾನ್ "	85	"	120	"
ಸ್ವೀಡನ್ "	129	"	381	"
ಇಂಡಿಯಾ "	67	"	13	"

ಜಪಾನ ಮತ್ತು ಕೆನಡಾ ರಾಜ್ಯಗಳನ್ನು ನೋಡಿರಿ. 50 ವರ್ಷಗಳ ಹಿಂದೆ ಜಪಾನು ನಮ್ಮ ದೇಶದಂತೆಯೇ ಇತ್ತು. ಈಗ ನಾಲ್ಕರಷ್ಟು ಹೆಚ್ಚಿದೆ. ಕೆನಡಾ ರಾಜ್ಯವು ಹೀಗೆಯೇ. ಈಗ ಈ ರಾಜ್ಯವು ಪ್ರಪಂಚದ ಐದನೆಯ ಕೈಗಾರಿಕೆ ರಾಜ್ಯವೆನಿಸಿದೆ.

ಕೈಗಾರಿಕೆಗೆ ಬೇಕಾದ ಸಲಕರಣೆಗಳಾವುವೆಂದರೆ ಆರು ಅಡಕತ (ಮ್ಯಾನೇಜ್‌ಮೆಂಟ್) ಹಣ, ಯಂತ್ರ, ಜನ, ಸಾಮಾನ, ವ್ಯಾಪಾರ ಇವುಗಳು ಇವುಗಳಲ್ಲಿ ಮೊದಲನೇಯ ಮೂರನ್ನೂ ಪಡೆಯುದು ಕಷ್ಟ. ಒಳ್ಳೆಯ ಮ್ಯಾನೇಜರುಗಳು ನಮ್ಮ ದೇಶದಲ್ಲಿ ಕಡಿಮೆ. ಎಲ್ಲಾ ದೇಶದವರೂ ತಮ್ಮ ದೇಶಕ್ಕೆ ಬರುವ ಪರದೇಶದ ಪದಾರ್ಥಗಳಿಗೆ ಸುಂಕವನ್ನು ಹೆಚ್ಚಿಸಿದ್ದಾರೆ. ಇಂಡಿಯಾ ದೇಶೀಯರೂ ಈ ಪ್ರಯತ್ನದಲ್ಲಿದ್ದಾರೆ.

ವಯ್ಯಾಗಿ ಹಿಂದೆ ಒಂದುಕಡೆ ಮಾತನಾಡುವಾಗ ನಾನು ರಸ್ಯಾದೇಶದ ಐದುವರ್ಷದ ವಿಧಾನವನ್ನು ನಾವು ಆಚರಣೆಗೆ ತರುವುದು ಒಳ್ಳೆಯದೆಂದು ಹೇಳಿದ್ದೆನು. ಇದಕ್ಕೆ ಮೊದಲು ಪ್ರತಿಯೊಂದು ಪ್ರಾಂತ್ಯದವರೂ ಇತರದೇಶದವರ ವ್ಯಾಪಾರದ ಲೆಕ್ಕಗಳನ್ನು ಸಂಗ್ರಹಿಸಬೇಕು. ಇವುಗಳನ್ನು ಒಂದು ಕೈಗಾರಿಕೆ ಕಮಿಟಿಯ ವಶಕ್ಕೆ ಕೊಡಬೇಕು. ಈ ಕಮಿಟಿಯು ಈ ಲೆಕ್ಕಗಳನ್ನು ಪರೀಕ್ಷಿಸಿ, ನಮ್ಮ ದೇಶಕ್ಕೆ ಅನುಕೂಲವಾದ ಒಂದು ಸೂತ್ರವನ್ನು ತಯಾರಿಸಬೇಕು. ನಾವು ಯಾವ ಪದಾರ್ಥ ತಯಾರಿಸಬೇಕು, ಎಲ್ಲಿ ಮಾರಬೇಕು, ಹೇಗೆ ಮಾರಬೇಕು ಎಂಬವುಗಳನ್ನು ನಿರ್ಣಯಿಸಬೇಕು. ಈ ನಿರ್ಣಯವನ್ನು ಆಚರಣೆಗೆ ತರಬೇಕು. ಪ್ರತಿವರ್ಷದ ಕೊನೆಯಲ್ಲಿ ಲಾಭ ನಷ್ಟಗಳನ್ನು ತಿಳಿದು ಹೀಗೆಯೇ ಐದುವರ್ಷಗಳ ಕಾಲ ನೋಡಬೇಕು. ಕಾಲವು ಎಷ್ಟು ವರ್ಷಗಳಾದರೂ ಸರಿಯೆ ಕೃಷಿ ಪ್ರಧಾನ ಹೀಗಿರಬೇಕು. ಮೊದಲು ಯಾವ ಕೈಗಾರಿಕೆಗಳಿಗೆ ಸದ್ಯದಲ್ಲಿ ನಾವು ಕೈಹಾಕಬೇಕೆಂಬುದನ್ನು ನಿರ್ಣಯಿಸುವುದೊಂದು. ಅನಂತರ ವಿಶ್ವವಿದ್ಯಾನಿಲಯದವರು ಎಲ್ಲಿಯೋ ಒಂದು ಕಡೆ ಜನರಿಗೆ ದೊರವಾಗಿ ಕುಳಿತಿರುವುದಕ್ಕಿಂತ ಜನರ ಕೈಗಾರಿಕೆಗಳ ವಿಷಯದಲ್ಲಿ ಪರಿಶೀಲಿಸಿ ದೇಶದ ಹಣ ಕಾಸಿನ ಮುಗ್ಗಟ್ಟನ್ನು ತಪ್ಪಿಸಲು ಯತ್ನಿಸುವುದು ಎಂದೆಂದೂ ಈಗ ತಾನೇ ಲಂಡನ್‌ನಲ್ಲಿ ಕೈಗಾರಿಕೆ ಕಸಬುಗಳನ್ನು ಕಲ್ಪಿಸಲು ಒಂದು ಕಾಲೇಜು ಏರ್ಪಾಟಾಗಿದೆ.

ಕೊನೆಯಲ್ಲಿ ನನ್ನ ಕೋರಿಕೆಯೇನೆಂದರೆ- ಪ್ರಪಂಚದ ಅನುಭವನ್ನು ತಿಳಿದು ಕಾರ್ಯಕ್ಕೆ ಕೈಹಾಕಿರಿ. ಕಾರ್ಯದಲ್ಲಿ ಕಟ್ಟು ನಿಟ್ಟಾಗಿ ಇರಿ. ಒಳ್ಳೆಯ, ಗುಣಾಢ್ಯರಾಗಿರಿ. ಅಂದಿಗೆ ಇಂಡಿಯಾ ದೇಶವು ತಾನಾಗಿಯೇ ಮುಂದೆ ಬರುವುದು.

ಸಾದರ ಸ್ವೀಕಾರ.

ಧಾರವಾಡ ವನಿತಾನೇವಾ ಸಮಾಜದ ತೃತೀಯ ವಾರ್ಷಿಕವರದಿ ಮತ್ತು ಆ ಸಮಾಜದವರು ಪ್ರಕಟಿಸಿರುವ ಶ್ರೀಮತಿ ಸಾಕಮ್ಮನವರ ದಿವ್ಯಸಂದೇಶ:—

ಈ ಸಮಾಜದ ವಿಷಯದಲ್ಲಿ ನಮಗೆ ಬಹಳ ಸಹಾನುಭೂತಿ ಇದೆ. ಶ್ರೀಮತಿ ಸಾಕಮ್ಮನವರ ಸಂದೇಶವನ್ನು ಪ್ರತಿಯೊಬ್ಬ ನಾರೀ ಮಣಿಯೂ ಓದಿ ಲಾಭಕೊಂದಲೆಂಧು ನಾವು ಅಪೇಕ್ಷಿಸುತ್ತೇವೆ. ಸಾಧಾರಕರು ಇಂಥಾ ಸಂಸ್ಥೆಗಳಿಗೆ ತನು, ಮನ, ಧನಗಳಿಂದ ಸಹಾಯ ಮಾಡಬೇಕು.

ಶಿಕ್ಷಣ ಚಂದ್ರಿಕೆ.

ಕಾವ್ಯ ಓದುಗಾರರಿಗೆ ಸುಲಭ ಗ್ರಾಹ್ಯವಾಗಿದೆ. ಗ್ರಂಥಕರ್ತರು ಅರ್ಥವನ್ನೂ ಕೆಳಗೆ ಇಟ್ಟು ಮಹೋಪಕಾರಮಾಡಿದ್ದಾರೆ. ಬಡತನವು ಹೆಚ್ಚುತ್ತಿರುವ ಈ ಕಾಲದಲ್ಲಿ, ಇಂಥಾ ಚಿತ್ರ ಪುಸ್ತಕಕ್ಕೆ 5 ಅಣೆ ಬೆಲೆ ಇಟ್ಟಿದುದು ಅನುಚಿತವಾಗಿದೆ. ಸಾಮಾನ್ಯವಾಗಿ ಕನ್ನಡಿಗರಲ್ಲಿ ಓದ ವ್ಯಾಭಿಲಾಷೆಯೇ ಕಡಿಮೆ. ಹೀಗಿರುವಾಗ ಉಪಯುಕ್ತ ಪುಸ್ತಕಗಳಿಗೆ ಹೆಚ್ಚಿಗೆ ಬೆಲೆ ಇಡುವುದರಿಂದ ಪುಸ್ತಕ ಪ್ರಚಾರವು ಕಡಿಮೆಯಾಗಿ, ಅದರ ನೈತಿಕ ಬೆಲೆಯು ನಿರುಪಯೋಗವಾಗಿಹೋಗುವುದು

ಕ್ರಯ 0—5—0 ಸಿಕ್ಕುವ ಸ್ಥಳ:—

ಬಿ. ಶ್ರೀಕಂಠಯ್ಯ ಎಕ್ಸ್‌ಟ್ರಾ ಕ್ಲರ್ಕ್
ಹಾಸನ.

ರೈತರ ಭಾಗ್ಯೋದಯ

ಸಂಘಶಕ್ತಿ ಕಲಾಯುಗೇ ಎಂದು ಸಂಘಶಕ್ತಿಯಲ್ಲಿರುವ ಸಾಮರ್ಥ್ಯವನ್ನು ರೈತರ ಹೃದಯ ಪ್ರಾಣಸ್ಥಿತಿಯನ್ನೂ, ಈ ಅಧಿಕಾರಿಗಳ ದರ್ಪವನ್ನೂ ಈ ಕಥೆಯು ವರ್ಣಿಸುತ್ತದೆ. ರೈತರೇ ಜನಾಗಣ ತೀನಾಳ್ ಎಂಬವನ್ನು ಪಟ್ಟಣದಲ್ಲಿರುವ ಅಧಿಕಾರಿಗಳು ಅರಿಯಿ. ಈ ಕಾಲಕ್ಕೆ ಇಂಥಾ ಪುಸ್ತಕಗಳು ಪ್ರಕಟ ವಾಗಬೇಕಾದುದು ಅಗತ್ಯ.

ಕ್ರಯ ೦-೨-೦ ಸಿಕ್ಕುವ ಸ್ಥಳ ಸಮಾಜೋನ್ನತಿ ಪುಸ್ತಕಾಲಯ.
ಧಾರ್ವಾಡ.

ಖಾ ಸೂಚನೆ:— ಬಾಕ್ಸ್‌ವಾರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂಬುದನ್ನು ಎಲ್ಲರೂ, ತಿಳಿಯಬೇಕು **ಸಂಪಾದಕ ಕ. ಕೇ**

ಚಂದಾದಾರರಲ್ಲಿ ವಿನಂತಿ.

ನಾವು ಎರಡು ತಿಂಗಳಿಂದಲೂ, ತಮಗೆ ಪತ್ರಿಕೆಗಳನ್ನು ಕಳುಹಿಸುತ್ತಾ ಬಂದಿರುತ್ತೇವೆ. ಚಂದಾ ಹಣವನ್ನು ತಾವು ಕಳುಹಿಸಿಲ್ಲ. ವಿ. ಪಿ. ಮೇಲೆ ಕಳುಹಿಸುವುದು ನಿಮಗೆ ದುಬಾರಿಯಾಗಿ ಪೋಸ್ಟು ಖರ್ಚುಗಳನ್ನು ವೃಥಾ ನೀವು ಕೊಡಬೇಕಾಗುತ್ತದೆ. ತಾವು ದಯವಿಟ್ಟು, ಮನಿ ಆರ್ಡರದ ಮೇಲೆ ವಾರ್ಷಿಕ ಚಂದಾ ಹಣ 3—0—0 ಕಳುಹಿಸಿ, ಬಳ್ಳಾರಿ ಜಿಲ್ಲೆಯ ಒಂದೇ ಒಂದಾದ ಈ ಪತ್ರವನ್ನು ಅನುಗ್ರಹಿಸುವರೆಂದು ನಂಬಿರುತ್ತೇನೆ.

ವ್ಯವಸ್ಥಾಪಕ— **ಕರ್ನಾಟಕ ಕೇಸರಿ.**



ಕಾಂಗ್ರೆಸ್ ಮುಖಂಡರ ದಸ್ತಗಿರಿ.

ಹಿಂದೂಸ್ಥಾನದ ಸ್ವರಾಜ್ಯಸಾಧನೆಯ ವಿಷಯದಲ್ಲಿ ತಮಗೆ ಸಂಪೂರ್ಣ ಸ್ವಾತಂತ್ರ್ಯವಿದೆಯೆಂತಲೂ, ಮುಖಂಡರು ಮಾತ್ರ ಶಾಂತ ವಾತಾವರಣದಲ್ಲಿ, ಸಭೆ ಚರ್ಚೆಗಳ ಮೂಲಕ, ಸ್ವರಾಜ್ಯ ಪ್ರಾಪ್ತಿಗೆ ಸಂಬಂಧಪಟ್ಟ ಅಸಾಧಾರಣವಯಗಳನ್ನು ಪರಸ್ಪರ ವಿಮರ್ಶಿಸಿ ವ್ಯಾಖ್ಯಾಪ್ರಾಯಕ್ಕೆ ಬಂದು, ಸುಧಾರಣೆಗಳನ್ನು ತಿಳಿಸುವಲ್ಲಿ ಜಾರಿಗೆ ತರಬೇಕೆಂತಲೂ, ಈ ಹಿಂದಿನ ವೈಸ್ರಾಯರಾದ ಲಾರ್ಡ್ ಇರ್ವಿನ್ ರವರು, ಮಹಾತ್ಮ ಗಾಂಧಿಯವರೊಡನೆ ಒಪ್ಪಂದ ಮಾಡಿಕೊಂಡು, ಹಿಂದೂಸ್ಥಾನದ ಮೂಲೆ ಮೂಲೆಗಳಲ್ಲಿಯೂ ಬಂಧಿಸಲ್ಪಟ್ಟಿದ್ದ ರಾಜಕೀಯ ಖೈದಿಗಳನ್ನೆಲ್ಲಾ ಬಿಡುಗಡೆಮಾಡಿ ಮಹಾತ್ಮರ ಲಂಡನ್ ಪರಿಷತ್ತಿಗೆ ಹೋಗುವಂತೆ ಮಾಡಿದರು, ಎರಡನೇ ಗುಂಡುಮೇಜಿನ ಸಭೆಯಲ್ಲಿ ಏನು ಕಾರ್ಯಗಳು ನಡೆದವೆಂಬುದು, ಇಡೀ ಪ್ರಪಂಚಕ್ಕೆಲ್ಲಾ ತಿಳಿದ ವಿಷಯವಾಗಿದೆ. ಮಹಾತ್ಮ ಗಾಂಧಿಯವರು ತಮ್ಮ ಸರ್ವ ಶಕ್ತಿಗಳನ್ನೆಲ್ಲಾ ವಿನಿಯೋಗಿಸಿ ಕಾಂಗ್ರೆಸ್ಸಿನವರ ಧ್ಯೇಯಗಳನ್ನು ಮುಚ್ಚುಮರೆಮಾಡದೆ ವಿಶೇಷ ಧೈರ್ಯದಿಂದ ನಡೆಸಿತ್ತಿದ್ದಲ್ಲಿಯೇ ಅಲ್ಲದೆ ಲಂಡನ್ ಕೇಂಬ್ರಿಡ್ಜ್ ಲಂಕಾಷೈರ್ ಮುಂತಾದ ಪಟ್ಟಣಗಳಲ್ಲಿ ವ್ಯಕ್ತಮಾಡಿದರು ಇಷ್ಟೆಲ್ಲಾ ಆದನಂತರ ಪ್ರಧಾನ ಮಂತ್ರಿಗಳ ಪ್ರಕಟನೆಯಾಯಿತು.

ಇನ್ನೂ ಈ ಪ್ರಕಟನೆಯ ವಿಷಯದಲ್ಲಿ ಮಹಾತ್ಮರು ತಮ್ಮ ನಿಶ್ಚಯಾಭಿಪ್ರಾಯಗಳನ್ನು ವ್ಯಕ್ತಪಡಿಸಿಲ್ಲಾ. ಮಹಾತ್ಮರು ಬೊಂಬಾಯಿಗೆ ಈ ದಿವಸ ಬರುವವರಿದ್ದಾರೆ. ಕಾಂಗ್ರೆಸ್ ಕಾರ್ಯಕಾರೀ ಮಂಡಲವು ಹಾಳೆ ನಾಡಿದ್ದು ಕೂಡುವುದಿದ್ದು ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಟ್ಟು ಒಂದು ನಿರ್ಣಯಕ್ಕೆ ಬರಬೇಕಾಗಿದೆ.

ಇಷ್ಟೆಲ್ಲಾ ನಡೆಯುವುದಕ್ಕೆಮುಂಚೆಯೇ, ಮಾಯ ಸ್ವ ಪ್ರಾಂತಗಳಲ್ಲಿ, ಅಸಾಧಾರಣ ಕಾನೂನುಗಳನ್ನು ಮಾಡಿ ಖಾನ್ ಅಬ್ದುಲ್‌ಗಫ್ಫಾರ್‌ಖಾನ್‌ರವರನ್ನು ಗಡೀಪಾರು ಮಾಡಿರುವುದೂ, ಅಲಹಾಬಾದಿನಲ್ಲಿ, ಪಂಡಿತ ಜವಾಹರಲಾಲ್, ಶಿರ್ಷಾನಿಯವರನ್ನು ಹಿಡಿದಿರುವುದೂ, ನಾಡೇಕಟ್ಟು, ಲಿಬರಲ್, ಮತ್ತು ಎಲ್ಲಾರಾಜಕೀಯ ಕತ್ತವೇತ್ತರಿಗೂ ವಿಷಾದಸೂಚಕವಾಗಿದೆ ಖಾನ್ ಅಬ್ದುಲ್‌ಗಫ್ಫಾರ್‌ಖಾನ್, ಪಂಡಿತ ಜವಾಹರಲಾಲ್‌ನೆಹರೂ, ಶಿರ್ಷಾನಿಯವರು, ರಾಷ್ಟ್ರ ಪತಿಗಳಾದ ವಲ್ಲಭಭಾಯಿಪಟೇಲರ ಆಜ್ಞಾನುವರ್ತಿಗಳಾಗಿ, ಬೊಂಬಾಯಿಯಲ್ಲಿ ನಡೆಯಬೇಕಾದ ಕಾರ್ಯಕಾರೀಮಂಡಲಕ್ಕೆ ಬರುತ್ತಿದ್ದರು

ಹಿಂದೂಸ್ಥಾನದ ಈ ಕಠಿಣ ಪರಿಸ್ಥಿತಿಯಲ್ಲಿ, ಸರ್ಕಾರದವರು, ನಮ ಖಂಡನನ್ನು ಶೇರೆಮಾಡಿ ಸಾರ್ವಜನಿಕರ ಅಭಿಪ್ರಾಯಗಳಿಗೆ ವಿರುದ್ಧ ವರ್ತಿಸಿ, ಇಂಥಾ ವಿಷಮ ವಾತಾವರಣವನ್ನು ಕಲ್ಪಿಸಬಾರದಾಗಿತ್ತು. ಅವರ ಅಂತರ್ಯ ಅಶಯಗಳು ನಮಗೆ ಗೊತ್ತಿಲ್ಲದಿದ್ದರೂ, ಬಾಹ್ಯ ರೂಪದಲ್ಲಿ ಪ್ರಧಾನ ಮಂತ್ರಿಗಳಂದಲೂ, ವೈಸ್ರಾಯರಿಂದಲೂ, ಆಗಾಗ್ಯೆ ಪ್ರಕಟವಾಗುವ ಪ್ರಕಟನೆಗಳ ರೀತಿ ನೀತಿಗಳನುಸರಿಸಿ, ಅವರು ವರ್ತಿಸಬೇಕೆಂತಲೇ ನಾವು ನಿರೀಕ್ಷಿಸುತ್ತೇವೆ.

ಇಂಥಾ ವಿಷಮವಾತಾವರಣದಲ್ಲಿ ಜನರು ಅಮಿತ ಧೈರ್ಯವುಳ್ಳವರಾಗಿ ಬಹಳ ತಾಳ್ಮೆಯನ್ನು ವಹಿಸಬೇಕು.

ಅಹಿಂಸಾ ತತ್ವ.

ಪುರಸಭೆಯಲ್ಲಿ ಚರ್ಚೆ

ಕೋಲಾರಜಿಲ್ಲೆಯ ಕಲೆಕ್ಟರ ರವರ ಕೊಲೆಯನ್ನು ಖಂಡಿಸಲು, ಮತ್ತು ಅಹಿಂಸಾ ಮಾರ್ಗದಿಂದ ಸ್ವರಾಜ್ಯ ಹೋರಾಡುವುದರಲ್ಲಿ ವಿಶ್ವಾಸವನ್ನು ಪ್ರಕಟಿಸಲು ಶ್ರೀ. ಡಿ. ಎಸ್. ಹನುಮಂತರಾಯರು ಪುರಸಭೆಯಲ್ಲಿ ಠರಾವನ್ನು ತಂದರು. ಅವರ ಠರಾವು ಪೂರಾ ಅನುಮೋದಿಸಲ್ಪಡಲಿಲ್ಲ. ಆ ಠರಾವು ಬೇರೆಕಡೆಗೆ ಪ್ರಕಟವಾಗಿದೆ. ಯಾವ ಠರಾವು ಪಾಸಾಯಿತೊ, ಅದಕ್ಕೆಂತಲೂ, ಶ್ರೀ. ಹನುಮಂತರಾಯರ ಠರಾವು ಶ್ರೇಷ್ಠವಾಗಿದ್ದಿತು ಏತಕ್ಕೆಂದರೆ, ಆ ಠರಾವಿನಲ್ಲಿ ಪುರಸಭೆ ಅಹಿಂಸಾ ತತ್ವವನ್ನು ಅನನ್ಯಭಾವದಿಂದ ಸ್ವೀಕರಿಸುತ್ತಿತ್ತು. ಕ್ರಾಂತಿಕಾರೀ ವತ್ತಿದವರ ಕೆಲವು ಅಂಗ್ಲೇಯ ವ್ಯಕ್ತಿಗಳನ್ನು ಕೊಲ್ಲುವುದರಿಂದ ಸ್ವರಾಜ್ಯವನ್ನು ಸಂಪಾದಿಸಬೇಕೆಂಬ ಸಂದರ್ಭಗಳಲ್ಲಿ, ಪುರಸಭೆಯು ಅ ಮಾರ್ಗಗಳನ್ನು ಖಂಡಿಸಬೇಕಾದುದು ಮುಖ್ಯ ಕರ್ತವ್ಯವಾಗಿತ್ತು.

ಆದರೆ ಬಳ್ಳಾರಿ ಪುರಸಭೆಯಲ್ಲಿ ಪಾಸಾದ ಠರಾವಿನಿಂದ ಸ್ವೀಕರ್ತರ ಹೆಚ್ಚಿಯ ಖಂಡಿಸಲ್ಪಟ್ಟರೂ, ಅಹಿಂಸಾಮಾರ್ಗಕ್ಕೆ ಸ್ವಾಮ್ಯ ಮೈವ ಸಿಕ್ಕದೆ ಒಬ್ಬರಿಬ್ಬರು ಜವಾಬ್ದಾರಿಯುಳ್ಳ ಪ್ರಮುಖರು ಅಹಿಂಸಾಮಾರ್ಗದಲ್ಲಿ ನಂಬಿಕೆ ಇಲ್ಲವೆಂತ ಸೂಚಿಸಿರುವುದರಿಂದ ಸಂದರ್ಭಗಳು ವಿಶೇಷ ವಾದವು. ಸಾರ್ವಜನಿಕಾಭಿಪ್ರಾಯಕ್ಕೆ ಬೆಂಬಲಕೊಟ್ಟು ಮಾರ್ಗದರ್ಶಿಯಾಗಿರಬೇಕಾದ ಈ ಸಂಸ್ಥೆಗಳು ಹಿಂಸಾಮಾರ್ಗಗಳನ್ನು ಸಮರ್ಥಿಸುವ, ಅಹಿಂಸಾಮಾರ್ಗಗಳಲ್ಲಿ ಜನರಿಗೆ ನಂಬಿಕೆ ಕಡಮೆಮಾಡುವ ಠರಾವುಗಳನ್ನೂ, ಸೂಚನೆಗಳನ್ನೂ ಅನುಮೋದಿಸಬಾರದು. ಈ ದೃಷ್ಟಿಯಿಂದ ಪುರಸಭೆಯವರು ಅನುಮೋದಿಸಿದ ಠರಾವು ಬಹಳ ವಿವಾದಕರವಾದದ್ದು.

ಅಲಹಾಬಾದ್ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಯಾದ ಲಾಲ್‌ಬಹದೂರ್ ಎಂಬುವರು, 26-12-31 ನೇ ಮೀಟಿಂಗದಲ್ಲಿ ಕಾನೂನು ವಿರುದ್ಧ ಮಾತಾಡಿದರೆಂದು, ಸರ್ಕಾರದವರು ಅವರನ್ನು ದಸ್ತಗಿರಿ ಮಾಡಿದರು.

ಕೋಲಾಚಲಂ ವೆಂಕಟರಾಯರ ಸ್ವರ್ಗಯಾತ್ರೆ

ಈ ಊರಿನ ಸ್ವಾತ್ರ ವಿಚಾರವಾದಿಗಳೂ, ಪ್ರಮುಖ ಶಿಕ್ಷಣಮಂತ್ರಿಗಳೂ, ಆದ ಶ್ರೀ ಕೋಲಾಚಲಂ ವೆಂಕಟರಾಯರು ತಮ್ಮ ೪೫ ನೇ ವರ್ಷದಲ್ಲಿ 25—12—31 ನೇ ಸಾಯಂಕಾಲ 6 ಘಂಟೆಗೆ ತಮ್ಮ ಸ್ವಗೃಹದಲ್ಲಿ ಸ್ವರ್ಗಸ್ಥರಾದರು. ಇವರು ವೈದೀಕರಾಗಿ ದೊಡ್ಡ ಕುಟುಂಬಕ್ಕೆ ಸೇರಿದ್ದರು ಇವರ ಹಿರಿಯರು ಕರ್ಣಾಟಕರಾಗಿದ್ದರು. ಇವರು ಸ್ವಾಂತದಲ್ಲಿ ಖ್ಯಾತಿ ಹೊಂದಿದ ವಕೀಲರಾಗಿಯೂ, ಸಮಾಜ ಸುಧಾರಕರಾಗಿಯೂ, ಇದ್ದರು. ೫೫ ವರ್ಷಗಳಿಗೂ ಹೆಚ್ಚಾಗಿಯೇ ಇವರು ವಕೀಲಿ ಕೆಲಸ ಮಾಡಿದ್ದಾರೆ. ಸಾಯುವುದಕ್ಕೆ 15 ದಿನಗಳ ಮುಂಚೆ ಬೆಳಗಾಂ ಕೋರ್ಟಿಗೆ ಹೋಗಿದ್ದರು.

ಯಾವ ಸಾರ್ವಜನಿಕ ಕೆಲಸವಾಗಲೀ, ಇವರ ಸಹಾಯ ವಿಲ್ಲದೆ ಬಳ್ಳಾರಿಯಲ್ಲಿ ಮುಂದೆಬಂದಿಲ್ಲ. ಬಾಲಿಯರ ಬಾಲಾ ಗೃಹವನ್ನು ರೂ. 7000-ಕೊಂಡು ದಾನಮಾಡಿದರು. ನಿಧಿಯಾ ಸಂಸ್ಥೆಗೆ ರೂ. 5000 ಕೊಟ್ಟರು. ಊರಿನ ಪುರಭವನವನ್ನು ಸುಮಾರು ರೂ. 50,000 ಖರ್ಚಿಟ್ಟು ಕಟ್ಟಿಸಿ ಉಚಿತ ಉಪಯೋಗಕ್ಕೆ ಕೊಟ್ಟರು. ಮತ ಕ್ರಮಾನುಸಾರ ಅನಾಥರ ಸಹಾಯಕ್ಕೆಂದು ರೂ. 20,000 ತೆಗೆದಿಟ್ಟರು ಇವೆಲ್ಲಾ ಕೆಲ ಉದಾಹರಣೆಗಳಾಗಿವೆ.

ಇವರ ಅಂತ್ಯಕ್ರಿಯೆಗಳ ಸಮಯದಲ್ಲಿ ಲೆಕ್ಕವಿಲ್ಲದಷ್ಟು ಜನರೂ, ಪ್ರಮುಖರೂ ಇದ್ದ, ತಮ್ಮ ಗಾರವವನ್ನು ವ್ಯಕ್ತಪಡಿಸಿದರು. ದೇವರು ಇಂಥಾ ಮತ ನೀತಿಯ ಆತ್ಮಕ್ಕೆ ಶಾಂತಿಯನ್ನೀಯಲಿ.

ಮುಖ್ಯ ಸುದ್ದಿಗಳು.

ವಾಯುವ್ಯ ಪ್ರಾಂತದ ವಿಶೇಷ ಕಾನೂನುಗಳು.

ವೈಸ್ರಾಯರು ವಾಯುವ್ಯ ಪ್ರಾಂತಕ್ಕೆ ತಮಗಿರುವ ವಿಶೇಷ ಅಧಿಕಾರದಿಂದ ಮತ್ತೆ 3 ಅಸಾಧಾರಣ ಕಾನೂನುಗಳನ್ನು ಮಾಡಿರುವರು. ಈ ಕಾನೂನುಗಳಿಂದ ತಮಗೆ ಅನಮಾನವೆಂದು ತೋರುವುದನ್ನೆಲ್ಲಾ ತೆಗೆದು ಹಾಕಿ, ಅವರನ್ನು ತಡೆಮಾಡಬಹುದು ಯಾವ ಮನೆಗಳನ್ನಾಗಲೀ, ಕಟ್ಟಡಗಳನ್ನಾಗಲೀ ಅವರು ಸ್ವಾಧೀನ ಪಡಿಸಿಕೊಂಡು. ಬೇಗ ಮುಚ್ಚಿಮಾಡಬಹುದು ಯಾವ ಸ್ಥಳಕ್ಕಾದರೂ ಹೋಗುವ ಸಾಧಾರಣ ಸಾಮಗ್ರಿಗಳನ್ನು ತಡೆಯಬಹುದು. ಪೋಸ್ಟ್, ಟೆಲಿಗ್ರಾಫಿಕ್ ಟೆಲ್ಲಿ ಮುಂತಾದವುಗಳನ್ನೆಲ್ಲಾ ತಮ್ಮ ಅಧೀನದಲ್ಲಿಟ್ಟು ಅನುಕೂಲವಾದ ರೀತಿಯಲ್ಲಿ ಉಪಯೋಗಿಸಬಹುದು

ಅಲ್ಲಿಯ ಚೀಫ್ ಕಮಿಶನರವರು, ಖಾನ್ ಅಬ್ದುಲ್ ಗಫ್ಫಾರ್ ಖಾನ್‌ರ ಚಳವಳಿಯ ವಿಷಯದಲ್ಲೂ, ಇದರಿಂದ ಸರ್ಕಾರಕ್ಕೆ ಒದಗಿರುವ ಕಷ್ಟದ ವಿಷಯಕ್ಕೂ ಸುಮಾರು ೩೦ ಪುಟಗಳ ವರದಿಯನ್ನು ಪ್ರಸಿದ್ಧಪಡಿಸಿ, ಇಂಥಾ ಕಠಿಣ ಪರಿಸ್ಥಿತಿಯಲ್ಲಿ ಸರ್ಕಾರದವರು ಅಸಾಧಾರಣ ಕಾನೂನುಗಳನ್ನು ಮಾಡಿರುವುದು ನ್ಯಾಯವಾದ್ದೆಂದು ವಾದಿಸಿರುವರು.

ಮಿಲಿಟರಿ ಯವರ ಗುಂಡಿನೇಟುಗಳಿಂದ.

೧೧ ಜನರು ಸತ್ತರು ೫೦ ಜನರಿಗೆ ಘಾಯವಾಗಿವೆ.

ಕೋಹತ್ ಕ್ಯಾಂಟೋನ್ಮೆಂಟ್ ಹತ್ತರ 500 ರೆಡ್ ಶರ್ಟ್ ಸ್ವಯಂ ಸೇವಕರು ಕೂಡಿದ್ದರು. ಅವರು ಲಾಠೀಗಳಿಂದ ಹೊಡೆದರೂ ಚದರಲಿಲ್ಲ. ಮಿಲಿಟರಿಯವರ ಗುಂಡಿನೇಟುಗಳಿಂದ 11 ಜನರು ಸತ್ತರು, ೫೦ ಜನಗಳಿಗೆ ಘಾಯಗಳಾಗಿವೆ. ಪೋಲೀಸ್ ಸೂಪರೆಂಟರಿಗೆ ಕಲ್ಲಿನ ಏಟಿನಿಂದ ಮೂಗಿನಸ್ಥಾನದಲ್ಲಿ ಘಾಯವಾಗಿದೆ: 2000 ಜನರು ಸೇರಿದ ಇನ್ನೊಂದು ಕಡೆಯಲ್ಲಿಯೂ ಮಿಲಿಟರಿಯವರು ಗೋಳೀಬಾರ ಮಾಡಿದರು ಎಷ್ಟು ಜನರು ಸತ್ತರೆಂಬುದು ತಿಳಿದು ಬಂದಿಲ್ಲ.

ಕರ್ನಾಟಕ

ಬಳ್ಳಾರಿ

ಪುರಸಭೆಯ 23-12-31 ನೇ ಸಾಮಾನ್ಯಕಾಲ ಶ್ರೀ. ಬಾಳಾಚಾರಿಯರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಶ್ರೀ. ಪಿ ಎಸ್. ಹನುಮಂತರಾಯರು ಈ ಕೆಳಗಣ ಠರಾವನ್ನು ತಂದರು.

" ಕಾಮಿಲಾಜೆಲ್ಲಾ ಮ್ಯಾಜಿಸ್ಟ್ರೇಟರಾದ ಸ್ರೀಮತ್ ಸ್ವಾ ಐ. ಸಿ ಎಸ್ ಎಂಬುವರ ಕೊಲೆಯನ್ನು ಈ ಸಭೆಯು ನಿಷೇಧಿಸುತ್ತದೆ ಮತ್ತು ಅಹಿಂಸಾತತ್ವಕ್ಕೆ ಮಾರ್ಗಗಳಂದಲೇ ಹಿಂದೂಸ್ಥಾನಕ್ಕೆ ಸ್ವರಾಜ್ಯ ದೊರೆಯುವುದೆಂದು ಇವರ ಅಭಿಪ್ರಾಯವಿದೆ "

ಈ ಠರಾವನ್ನು ಶ್ರೀ ಶಿವಾಯಿಚೆಟ್ಟಿಬಸಪ್ಪನವರು ಸಮರ್ಥಿಸಿದರು. ಮುಸಿ ಅಬ್ದುಲ್ಸ್ಯೆಯನವರು ' ಅಹಿಂಸತ್ವ ಮಾರ್ಗಗಳಿಂದಲೇ ಹಿಂದೂಸ್ಥಾನಕ್ಕೆ ಸ್ವರಾಜ್ಯಬರುವುದೆಂಬ' ಕೊಳೆಯ ವಾಕ್ಯವನ್ನು ತೆಗೆಯಬೇಕೆಂದು ಸೂಚಿಸಿದರು. ಶ್ರೀ. ಗೋಪಾಲಸ್ವಾಮಿ ನೋಪಲಿಯಾರ್ ರವರು, ಮುಸಿ ಶೈಖುವರ ಸೂಚನೆಯನ್ನು ಸಮರ್ಥಿಸುತ್ತಾ, ತಮಗೆ ಅಹಿಂಸಾ ತತ್ವದಲ್ಲಿ ನಂಬಿಕೆಯಿಲ್ಲವೆಂದು ಸೂಚಿಸಿದರು ಈ ವಿಷಯದಲ್ಲಿ ಆಗ್ರಹವಾದ ಚರ್ಚೆಯಾದರು, ಕೊನೆಗೆ ಅಧ್ಯಕ್ಷರು ಸಮರ್ಥಣ ಮಾಡಿ ಠರಾವನ್ನು ಈ ಪ್ರಕಾರ ಮಾಡಿದರು

" ಕಾಮಿಲಾಜೆಲ್ಲಾ ಮ್ಯಾಜಿಸ್ಟ್ರೇಟರಾದ ಸ್ರೀಮತ್ ಸ್ವಾ ಐ. ಸಿ. ಎಸ್. ಎಂಬುವರ ಕೊಲೆಯನ್ನು ಈ ಸಭೆಯು ನಿಷೇಧಿಸುತ್ತದೆ ಮತ್ತು ಇಂಥಾ ಹತ್ಯಗಳನ್ನು ತೋರ್ಯದೆ ತ್ತಿಯೆಂದೆ ನೋಡುತ್ತದೆ."

ಈ ಠರಾವು ಸರ್ವಾನು ಮತದಿಂದ ಸಾಸಾಯಿತು

ಹಗರಿಯಿಂದ ಬಳ್ಳಾರಿಗೆ ಬರುವ ಮಾರ್ಗದಲ್ಲಿ ರಸ್ತೆಯ ಮಗ್ಗುಲಲ್ಲಿರುವ ಗ್ರಾಮಗಳಿಗೆ ಮನೆ ಉಪಯೋಗಕ್ಕೆ ಒಂದು ಹೂಸಾಯಿಗೆ 1000 ಗ್ಯಾಲನ್ನುಗಳಂತೆ ಕೊಡಬೇಕೆಂದು ನಿಶ್ಚಿತವಾಗಿ ಠರಾವಾಯಿತು

ಪುರಸಭೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು, ಒಂದು ಸಮಿತಿಯನ್ನೇರ್ಪಡಿಸಿ, ಈ ಕೆಳಗಣ ಸದಸ್ಯರು, ಸಭ್ಯರಾಗಿ ನಿಯಮಿಸಲ್ಪಟ್ಟರು ಇವರು ಜನವರಿ 15 ರ ಒಳಗಾಗಿ ಯೂಪಯೋಗಭಾಗದಲ್ಲಿ ಎಷ್ಟು ಖರ್ಚು ತಗ್ಗಿಸಬೇಕೆಂಬ ದರ ಬಗ್ಗೆ ವರದಿಮಾಡಬೇಕಾಗಿದೆ.

ಸಭ್ಯರು (1) ಪುರಸಭೆ ಅಧ್ಯಕ್ಷರು. (2) ಪು. ಉಪಾಧ್ಯಕ್ಷರು. (3) ಶ್ರೀ. ಗಳಾದ ಕೃಷ್ಣಸ್ವಾಮಿ ನಾಯಿಡು (4) ಡಾ. ಸೀತಾರಾಮ ಶರ್ಮ (5) ಜಿ. ತಿಮ್ಮಪ್ಪ (6) ಬಿ. ಕೆ. ಗುರುರಾಜರಾವ್ (7) ಮಹಾಬೂಬ್ ಖಾ (8) ಅಬ್ದುಲ್ ಹೈ (9) ಯಂ. ನೀಲಪ್ಪ

ರಾಜಕೀಯ ಖೈದಿಗಳ ಬಿಡುಗಡೆ

ಶಾ 24—12—31 ಮಧ್ಯಾನ್ಹ 12 ಘಂಟೆಗೆ ಬಳ್ಳಾರಿ ಸೆಂಟ್ರಲ್ ಜೈಲಿಂದ ಆಂಧ್ರ ದೇಶದ ಗುಡಿವಾಡ ಊರಿನ 147, 149, 188, ಮುಂತಾದ ಕಲಂಗಳ ಮೇಲೆ ಶಿಕ್ಷಿತರಾದ ಶ್ರೀಗಳಾದ, ಐ. ವೆಂಕಟ ಸುಬ್ಬರಾವ್, ಜಿ. ಮಲ್ಲಿಕಾರ್ಜುನಪ್ಪ, ಅ, ವೆಂಕಟ ರಂಗಯ್ಯ, ಇವರಿಗೆ ಬಿಡುಗಡೆ ಯಾಯಿತು. ಅದಿವಸವೇ, ಅವರು ತಮ್ಮ ತಮ್ಮ ಊರುಗಳಿಗೆ ತೆರಳಿದರು.

ಕಾಂಗ್ರೆಸ್ ಮುಖಂಡರ ಕೈಸೆರೆ

ಸಂಯುಕ್ತಪ್ರಾಂತದಲ್ಲಿ:-

ಪಂಡಿತ ಜವಾಹಿರಲಾಲ್‌ನೆಹರೂ, ಶ್ರೀಯುತ, ಇವರು ಬೊಂಬಾಯಿಯಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗ ತೆಗೆದುಕೊಳ್ಳಲಿಕ್ಕೂ, ಮಹಾತ್ಮ ಗಾಂಧಿಯವರನ್ನು ಸ್ವಾಗತಿಸಲಿಕ್ಕೂ ಹೋಗಬೇಕಾದರೆ ರೈಲುಗಾಡಿಯಲ್ಲಿ ಅಲಹಾಬಾದಿಗೆ ೧೦ ಮೈಲಿದೂರ ಇರುವಾಗಲೇ ಸ್ಟೇಶನದಲ್ಲಿ ಇಳಿಯಲ್ಪಟ್ಟು, ಸೈನ್ ಶೆಟ್ರಲ್ ಜೈಲಿಗೆ ಸಿಕ್ಕಲ್ಪಟ್ಟರು.

ವಾಯುವ್ಯಪ್ರಾಂತದಲ್ಲಿ:-

ಖಾನ್ ಅಬ್ದುಲ್‌ಗಫ್ಫರ್‌ಖಾನ್ (ಫ್ರಾಂಟಿಯರ್ ಗಾಂಧಿ) ಊರ ಸಮೀಪದವರು ಮಾಳ್ಟರ್ ಖಾನ್‌ಸಾಹೇಬರು, ಮಾಳ್ಟರ್ ರವರ ಮಕ್ಕಳಾದ ಸಾದುಲ್ಲಾಖಾನ್‌ರು, ಪಕ್ಕದಾದ ಅಕುಲಾ, ರವರೂ, ನಿಂಬಂ ಸೇ ಇವ್ವರು ಸೇರ ಅಕ್ಕಪ್ರಕಾರ ಹಿಡಿಯಲ್ಪಟ್ಟು ಗಡೀಪಾರು ಮಾಡಿಲ್ಪಟ್ಟರು. ಇವರನ್ನು ಜಂಗಾಳಕ್ಕೆ ಒಯ್ದುರೆಂತಲೂ, ಸ್ಥಳ ಇಂಥಾದ್ದೆಂದು ಯಾರಿಗೂ ತಿಳಿದಿಲ್ಲವೆಂತಲೂ, ವರ್ತಮಾನವಿದೆ.

ಪಂಡಿತ ಜವಾಹಿರಲಾಲರು

ಪುನಃ ಸರ್ಕಾರದ ಅತಿಥಿಗಳಾದರು.

ಮಹಾತ್ಮರು ಹಡಗಿನಿಂದಿಳಿದರು.

ಬೊಂಬಾಯಿಯಲ್ಲಿ ಅಮಿತ ಉತ್ಸಾಹ.

ಸೋಮವಾರ 23—12—31

ಈ ದಿವಸ ಪ್ರಾತಃಕಾಲ 8 ಘಂಟೆಗೆ ಮಹಾತ್ಮ ಗಾಂಧಿಯವರೂ, ದೆಹಲೀ ಶಾಸನ ಸಭೆಯ ಹಿಂದಿನ ಅಧ್ಯಕ್ಷರಾದ ಶ್ರೀ ನಿಶಲ ಭಾಯಿ ಪಟೇಲರೂ, S. S. ಪಿಸ್ಸಾ ಎಂಬ ಹಡಗದಿಂದ ಇಳಿದರು ಹಿಂದೂಸ್ಥಾನದ ಎಲ್ಲಾ ಪ್ರಾಂತಗಳಿಂದಲೂ, ಕಾಂಗ್ರೆಸ್ ಕಮಿಟಿಗಳ ಪರವಾಗಿ ಮುಖ್ಯ ಪ್ರತಿನಿಧಿಗಳು ಬಂದಿದ್ದರು. ಎಲ್ಲರೂ ಮಹಾತ್ಮರಿಗೆ ಹಾರಗಳನ್ನು ಹಾಕಿದರು. ಶ್ರೀ ಸುಭಾಸಚಂದ್ರಬೋಸರವರು, ಬಂಗಾಳದ ಪರವಾಗಿ ಅವರಿಗೆ ಹಾರ ಹಾಕಿದಾಗ, ಜನರಲ್ಲಿ ಅಮಿತ ಕೋಲಾಹಲವೆದ್ದಿತು. ಅವರು ಹಡಗನ್ನು ಇಳಿದಾಗ, ಪ್ರಥಮತಃ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು, ಕೈಬೋಡಿಸಿಕೊಂಡು ಅವರ ಪಾದಕ್ಕೆ ಬಿದ್ದರು. ಮಹಾತ್ಮರು ಅವರನ್ನು ಆಲಿಂಗಿಸಿ ಬೆನ್ನು ಚಪ್ಪರಿಸಿದರು.

ಅವರು ಹೋಗುವ ಹಾದಿಯಲ್ಲಾ ಶೃಂಗರಿಸಲ್ಪಟ್ಟಿತ್ತು. ಮಹಾತ್ಮರು ಆಲಂಕರಿಸಲ್ಪಟ್ಟ ಮೋಟಾರನ್ನು ಬಿಟ್ಟು ತಮ್ಮ ಸ್ನೇಹಿತರ ಬೇರೊಂದು ಗಾಡಿಯಲ್ಲಿ ಕೂತು, ಮಣಿಭವನಕ್ಕೆ ವೇಗವಾಗಿ ಹೊರಟರು. ಮಹಾತ್ಮರ ದರ್ಶನಕ್ಕೆಂದು, ಪರಸ್ಥಳಗಳಿಂದ ಸಾವಿರಾರು ಜನರು ಕೂತಿದ್ದ ರಸ್ತೆಗಳನ್ನೆಲ್ಲಾ ಕುಂಬಿಟ್ಟಿದ್ದರು. ಲಾಬರ್ನ ರಸ್ತೆಯಲ್ಲಿ ಗಾಡಿಗಳೂ, ಟ್ರಾಂಗಳೂ ಹೋಗದಂತೆ ಪೋಲೀಸರು ಏರ್ಪಡಿಸಿದ್ದರು. ಮಹಾತ್ಮರ ಮಗ್ಗುಲಲ್ಲಿ ಶ್ರೀ ನಿಶಲಭಾಯಿ ಪಟೇಲರು ಕೂತಿದ್ದರು. ಅವರು ಕೂತಿದ್ದ ಗಾಡಿಯು ಎಷ್ಟುವೇಗವೆಂದರೂ ಮಣಿಭವನವನ್ನು ಸೇರಲು ಹತ್ತೂವರೆ ಘಂಟೆ ಯಾಯಿತು.

ಹಡನು ಇಳಿಯುವಪೂರ್ವ ಕೊಟ್ಟ ಸಂದೇಶ

ಹಿಂದೂಸ್ಥಾನದ ಸಮೀಪಸಿದಾಗೆಲ್ಲಾ ಇಬಾಬ್ಬಾರಿಯೊಳಿಯು ನನಗೆ, ಹೆಚ್ಚಾಗುತ್ತಲಿದೆ. ಲಂಡನ್ ಸಮೀಪಸಿದಾಗ, ನನಗೆ ಆ ಇಬಾಬ್ಬಾರಿ ಇದ್ದಿತಾದರೂ, ಈಗ ಅದು ಒಂದುಸಾವಿರ ಪಟ್ಟು ಹೆಚ್ಚಾಗಿದೆ.

ಅನುದಿಂದ ನಾನು ಶೀಘ್ರವಾಗಿ ಯಾವತ್ಕರ್ತವ್ಯವನ್ನೂ ಆಚರಿಸುವುದಿಲ್ಲ. ಹಿಂದೂಸ್ಥಾನದವರಿಗೆ ಸ್ವಾತ್ರಂತ್ರ್ಯಹಕ್ಕನ್ನಾಚರಿಸಿರೆಂದು ಹೇಳುವ ಪೂರ್ವದಲ್ಲಿ ನನ್ನ ಕೈಲಿ ಸಾಗುವ ಯತ್ನಗಳನ್ನೆಲ್ಲಾ ಮಾಡಿ ನೋಡುವೆನು.

ನಾನು ಯಾವಾಗಲೂ, ಮಾರ್ಗವನ್ನು ತೋರಿಸೆಂದು ಜೀವರನ್ನು ಪ್ರಾರ್ಥಿಸುವೆನು ನನ್ನ ತತ್ವಾನುಸಾರವಾಗಿ ನಾನು ಇತ್ತ ಪಕ್ಷದಲ್ಲಿ ಈ ಸಲವೂ ಅತರು ನನಗೆ ದಾರಿ ತೋರಿಸದಿರಲಾರರು ನನ್ನ ಯೂರೋಪ್ ಪ್ರಯಾಣದಿಂದ, ಸತ್ಯ ಮತ್ತು ಅಹಿಂಸೆಯಲ್ಲಿನ ನನ್ನ ನಂಬಿಕೆಯು, ಶಕ್ತಿಯನ್ನು ಹೊಂದಿತು. ಈ ಜೀವನದಲ್ಲಿ ನಾನು ಸೇವಿಸಬೇಕಾದುದು ಬೇರೊಂದಿಲ್ಲ.

ಕನ್ನಡಿಗರಲ್ಲಿ ವಿಜ್ಞಾಪನೆ.

ಎಂಬ ಕಳೆದ ಸಂಚಿಕೆಯ ಲೇಖನದ ಮುಂದೆ.

21—12—31 ನೇ ಸಂಚಿಕೆಯಲ್ಲಿ ಶ್ರೀ. ಆರ್ ಸಿ. ಶ್ರೀನಿವಾಸ ಮೂರ್ತಿ ಯವರು 'ಕನ್ನಡಿಗರಲ್ಲಿ ವಿಜ್ಞಾಪನೆ' ಎಂಬ ಲೇಖನದಲ್ಲಿ, ಕರ್ನಾಟಕ ಮುಖಂಡರು ಬಳ್ಳಾರಿಯನ್ನು ಮಾನಭಂಗ ಪಡಿಸಿದಂತೆ ಭಾವಿಸಿ, ಇರತಕ್ಕ ಆಂಧ್ರ ಭಾಷೆಯ ನಿರ್ಮೂಲದ ಬಗ್ಗೆ ಸಲಹಾರೂಪವಾಗಿ ಭಾಷಾ ಪ್ರಯುಕ್ತ, ಪರಸ್ಪರ ಸಂಕುಚಿತ ಭಾವನೆಗಳನ್ನು ವ್ಯಕ್ತ ಪಡಿಸಿರುವರು. ಆದರೆ ಇದು ವಿಶಾಲ ದೃಷ್ಟಿಯಲ್ಲಿ, ರಾಷ್ಟ್ರೀಯಾಭಿವೃದ್ಧಿಯನ್ನು ಪಡೆಯಲು ಯತ್ನಿಸುವ, ದೇಶಾರಾಧಕರಿಗೆ ಹೇಸಿಕೆ ಕಾರಣವಾಗಿದೆ.

(1) ನಮ್ಮಲ್ಲಿ ಮಾತೃ ಭಾಷಾಭಿವೃದ್ಧಿಯು ಕಂಡು ಬಂದಿಲ್ಲವೆಂದು, ಶ್ರೀ ಮೂರ್ತಿಗಳು ಹೇಳಿದ್ದಾರೆ. ಕನ್ನಡವು ಯಾವ ಕಾರಣದಿಂದ ಅಭಿವೃದ್ಧಿಗೆ ಬಂದಿಲ್ಲ? ಈ ದೇಶದಲ್ಲಿ ಮಾತೃ ಭಾಷೆಯು ಕನ್ನಡವೇ? ಆಂಧ್ರದ ಜೊತೆಯಲ್ಲಿ ಕನ್ನಡವು ಅಭಿವೃದ್ಧಿಗೆ ಬರಬೇಕೆಂದಿದ್ದರೆ, ಅಕ್ಷೇಪಣೆಗೆ ಕಾರಣವಿರಲಿಲ್ಲ. ಇರತಕ್ಕ ಭಾಷೆಯನ್ನು ನಿರ್ಮೂಲಿಸಬೇಕೆನ್ನುವುದು ಅವರ ದ್ವೇಷ ಭಾವನೆಯನ್ನು ವ್ಯಕ್ತ ಪಡಿಸುವುದು. ಇದು ಯುಕ್ತವಲ್ಲ.

(2) ಒಬ್ಬ ಲೇಖಕರು ಹೇಳಿದಂತೆ ಶೇ 80 ಸಂದಿ ಕನ್ನಡ ಮಾತಾಡುವವರು ಬಳ್ಳಾರಿಯ ಎಲ್ಲಾ ಬೀದಿಗಳೂ, ಅನ್ವಯಿಸುವುದೋ ಅಥವಾ ಊರಿಗೋ, ಎಂಬುದು ಹೇಳಲ್ಪಟ್ಟಿಲ್ಲ. ಆಂಧ್ರಭಾಷೆಯೂ ಕೂಡಾ ಅಲ್ಲಿಯಲ್ಲಿರುವುದರಿಂದ, ಮತ್ತು ಬಳ್ಳಾರಿ ಜಿಲ್ಲೆಯು ಸರಹದ್ದಿನಲ್ಲಿರುವ ಕಾರಣ ಕನ್ನಡ ಭಾಷೆಗೂ ಪ್ರಾಶಸ್ತ್ಯ ಕೊಡಬೇಕೆಂದು ಬರೆದಿದ್ದರೆ, ಅಕ್ಷೇಪಣಾರ್ಹವಾಗಿದ್ದಿಲ್ಲ.

(3) ಹುಡುಗರು ಕೇಳುವ ಆಂಧ್ರ ಶಬ್ದಾರ್ಥಗಳನ್ನು ಹೇಳಲು ಕನ್ನಡ ತಾಯಿ ತಂದೆಗಳಾಗುವ ಕಷ್ಟವೇ? ಕನ್ನಡ ಶಬ್ದಾರ್ಥಗಳನ್ನು ಹೇಳುವ ಆಂಧ್ರ ಭಾಷೇ ಮಾತಾ ಸಿತೃಗಳಿಗುಂಟು. ಉಪಾಧ್ಯಾಯ ಪದವಿಯಲ್ಲಿರುವ ಕನ್ನಡಿಗರಿಗಾಗುವ ಆಂಧ್ರೋಪದೇಶದ ತೊಂದರೆಯು, ಕನ್ನಡ ವಿದ್ಯಾಭ್ಯಾಸವನ್ನು ಮಾಡಿಸಬೇಕಾದ ಆಂಧ್ರರಿಗೂ ಸಹ ಬರುವುದು. ಆಂಧ್ರರು ಈ ಪ್ರಾಂತದಲ್ಲಿ ಇಲ್ಲವೆಂತಾಗಲೀ, ಕನ್ನಡಿಗರೇ ಎಲ್ಲರೂ ಇರುವರೆಂದಾಗಲೀ ಹೇಳಲಿಲ್ಲವಷ್ಟೆ.

(4) ಎರಿಮೆಂಟರಿ ಶಾಲೆಗಳಲ್ಲಿ ಆಂಧ್ರ ಪುಸ್ತಕಗಳನ್ನು ನಿರ್ಮೂಲಿಸುವುದರಿಂದ ಪೈಸ್ಕೂಲಿನಲ್ಲಿ ಕರ್ನಾಟಕ ಮಾತೆಯ ಬೆಳೆಯುವುದೆಂದು ಅವರು ಹೇಳಿದ್ದಾರೆ ನಿರ್ಮೂಲ ಎಂಬ ಶಬ್ದವು ಅನುಚಿತವಾಗಿ, ಕೆಟ್ಟ ಅರ್ಥವನ್ನು ಕೊಡುತ್ತದೆ.

ಆದ್ದರಿಂದ ಸರಹದ್ದಿನ ಪ್ರಾಂತದಲ್ಲಿ ಭಾಷಾಪ್ರಯುಕ್ತ ರಾಷ್ಟ್ರ ವಿಭಜನ ಸೂತ್ರಕ್ಕೆ ಎಲ್ಲರೂ ಬದ್ಧರಾಗುವವರೆಗೂ ಉಭಯ ಭಾಷಾಭಿವೃದ್ಧಿಯನ್ನು ಧ್ಯೇಯದಲ್ಲಿಟ್ಟುಕೊಂಡು ನಡೆಯುವುದೇ ಅಭ್ಯುದಯದ ಲಕ್ಷಣವೆಂದು ಲೇಖಕರು ಸೂಚಿಸಿದ್ದರೆ ಚನ್ನಾಗಿತ್ತು.

ಒಬ್ಬ ವಿಮರ್ಶಕ.

ಎಲ್ಲಾ ಭಾಷೆಗಳೂ ಪವಿತ್ರವೇ. ಎಲ್ಲಾ ಭಾಷೆಗಳ ಅಭಿವೃದ್ಧಿ ಯಾಗಬೇಕಾದುದೂ ಒಳ್ಳೆಯದೇ! ನಮ್ಮ ರಾಷ್ಟ್ರೀಯ ದೇಶದಲ್ಲಿ ಎಲ್ಲಾ ಭಾಷೆಗಳೂ, ಪ್ರಾಂತ್ಯಗಳೂ, ಅಂಗಗಳಂತೆ. ಯಾವ ಅಂಗವು ಕ್ಷೀಣಿಸಿದರಾಗಲೀ, ಅಥವಾ ತೆಗೆಯಲ್ಪಟ್ಟರೆ; ಇಡೀ ದೇಹಕ್ಕೇ ಬಾಧೆಯು ತಟ್ಟುವುದು. ಕಾರಣ ಸಂಕುಚಿತ ದೃಷ್ಟಿಯಲ್ಲಿ, ದ್ವೇಷಭಾವವು ದೂರೀಕರಿಸಲ್ಪಟ್ಟು, ನ್ಯಾಯ ಮತ್ತು ಸಮಂಜಸವಾದ ಕ್ರಮಬದ್ಧತೆಯ ಪ್ರತಿಭಾಸಗೂ ಇರಬೇಕಾದ್ದೆಂದಾನು ನಂಬುವೆನು.)

ಸಂಪಾದಕ

ರೂಪಾಯನ್ನು ಪೌನಿಗೆ ಬದಲಾಯಿಸುವುದೆಂದರೇನು?

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಹೀಗೆ ಮಾಡಲು ಮುಖ್ಯ ಕಾರಣವು ಹಿಂದುದೇಶದ್ದು ಬೆಳ್ಳಿಯ ಪರಿಮಾಣವನ್ನು ಸ್ಥಾಪಿಸಬೇಕೆಂಬ ದೃಢಸಂಕಲ್ಪವೇ ಆಗಿರುತ್ತದೆ. ಅದಕ್ಕನುಸಾರವಾಗಿ ಮುಂದೆ ಬೆಳ್ಳಿಯ ಪರಿಮಾಣವನ್ನು ತೆಗೆದುಬಿಟ್ಟರು.

ಇನ್ನು ಬಂಗಾರದ ಪರಿಮಾಣವನ್ನು ಸ್ಥಾಪಿಸುವ ವಿಷಯವಾಗಿ ಆಲೋಚನೆಮಾಡಲು ಫೌಲರ್ ಕಮಿಟಿಯು 1898 ರಲ್ಲಿ ನಿಯಮಿಸಲ್ಪಟ್ಟಿತು. ಈ ಕಮಿಟಿಯವರು ಈ ಕೆಳಗೆ ಕೊಟ್ಟಿರುವ ಮುಖ್ಯ ಸಿದ್ಧಾಂತವನ್ನು ಮಾಡಿದರು:—

(1) ಹಿಂದು ದೇಶದಲ್ಲಿ ಬಂಗಾರದ ಪರಿಮಾಣ ನೇರ್ಪಡಿಸಲ್ಪಡಬೇಕು.

(2) ಆದಕ್ಕಾಗಿ ಆಂಗ್ಲ ದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯವನ್ನು ಹಿಂದು ದೇಶದಲ್ಲೂ ಕೂಡ ಚಲಾವಣೆಯಾಗುವಂತೆ ಮಾಡಬೇಕು.

(3) ಹಾಗೆ ಮಾಡಲು ಸ್ವತಂತ್ರ ಬೆಳ್ಳಿ ನಾಣ್ಯಗಳ ಮುದ್ರಣ ವಿಧದಂತೆ ಸ್ವತಂತ್ರ ಬಂಗಾರದ ಪೌನಗಳ ಮುದ್ರಣವನ್ನು ಮಾಡಲು ಪ್ರಭುತ್ವದವರು ಬಾಧ್ಯತೆಯನ್ನು ವಹಿಸಿಕೊಳ್ಳಬೇಕು.

ಇದರ ಫಲವೇನೆಂದರೆ, ಆಂಗ್ಲ ದೇಶದಲ್ಲಿ ಹಿಂದು ದೇಶದಲ್ಲಿ ಒಂದೇ ನಾಣ್ಯವು ಒಂದೇ ಪರಿಮಾಣದಲ್ಲಿ ಚಲಾವಣೆಯಾಗುತ್ತಿದ್ದುದ್ದೇ ಆ ಕಾರಣದಿಂದಲೇ ವಿಶೇಷ ಬದಲಾವಣೆಯಲ್ಲಿರುವ ತೊಂದರೆಗಳು ಬಹಳ ಮಟ್ಟಿಗೆ ಪರಿಹಾರವಾಗುತ್ತವೆ.

ಮೇಲೆ ಹೇಳಿದ ಪ್ರಕಾರ ಫೌಲರು ಕಮಿಟಿಯ ಸಲಹೆಗಳನ್ನು ಇಂಡ್ಯಾ ಪ್ರಭುತ್ವದವರು ಅಂಗೀಕರಿಸಿದರು. ಆದರೆ ಬಂಗಾರವು ಪ್ರಜೆಗಳಲ್ಲಿ ಚಲಾವಣೆ ಯಾಗುವಂತೆಮಾಡುವ ಪ್ರಯತ್ನದಲ್ಲಿ ಸರ್ಕಾರದವರು ಗೆಲ್ಲದೆ ಹೋದರು. ಈ ಪ್ರಕಾರವಾಗಿ ಬಂಗಾರದ ಪರಿಮಾಣವನ್ನು ನಿರ್ಧರಿಸುವದರಲ್ಲಿಯೂ, ಅದು ಪ್ರಜೆಗಳಲ್ಲಿ ಸರಾಗವಾಗಿ ಚಲಾವಣೆ ಯಾಗುವಂತೆ ಮಾಡುವುದರಲ್ಲಿಯೂ, ಮಾಡಿದ ಪ್ರಯತ್ನಗಳು ವಿಫಲವಾಗಲಿಕ್ಕೆ ಅನೇಕ ಕಾರಣಗಳುಂಟು. ಹಾಗೆ ವಿಫಲವಾಗಲು ಬಾಧ್ಯಕಾರಣವು ವಿಷಯವು. ಕೂಡಿ ಕೆಡಿಚ್ಚಾನೀಯಾಂಶವಾಗಿದೆ ಅದನ್ನು ಇಲ್ಲಿ ನಿವರಿಸಲು ಉದಾಹರಣ ವಾಗುವುದರಿಂದ ಮಾನಸಿಕಮಾಡಿದೆ.

ಬಂಗಾರ ಪರಿಮಾಣವನ್ನು ಬಂಗಾರದ ಬದಲಾವಣೆಯೊಡನೆ ಪ್ರವೇಶಗೊಳಿಸಲ್ಪಟ್ಟ ಪ್ರಭುತ್ವವು ವಿಫಲವಾದಾಗ್ಗೆ ಹಿಂದು ದೇಶವಲ್ಲಿ ನಾಣ್ಯದ ಪರಿಮಾಣಸ್ಥಿತಿಯು ಈ ಪ್ರಕಾರವಾಗಿದ್ದಿತೆ?

(1) 1893 ರಲ್ಲಿ ಬೆಳ್ಳಿಯ ಪರಿಮಾಣವು ಹೋಗಿದ್ದಿತು

(2) 1898 ರಲ್ಲಿ ಬಂಗಾರದ ಪರಿಮಾಣವನ್ನೇ ಪಡಿಸುವ ಪ್ರಯತ್ನವು ವಿಫಲವಾಯಿತು.

ಇಂತಹ ಸರಿಸ್ಥಿತಿಯಲ್ಲಿ ಹಿಂದು ದೇಶವು ಯಾವ ಪರಿಮಾಣದಲ್ಲಿದೆ? ಇದಕ್ಕೆ ಉತ್ತರ ಕೊಡುವುದು ಕಷ್ಟವಲ್ಲ. ಬೆಳ್ಳಿಯ ಪರಿಮಾಣವಿಲ್ಲದೆ ಬಂಗಾರದ ಪರಿಮಾಣವು ಇಲ್ಲದಂತಾಗುವುದರಿಂದ ನಮ್ಮ ದೇಶದಲ್ಲಿ ಯಾವ ಪರಿಮಾಣವೂ ಇಲ್ಲವೆಂದು ಸ್ಪಷ್ಟವಾಗುತ್ತದೆ. ಹಾಗಾದರೆ, ರೂಪಾಯಿಗಳೂ ರೂಪಾಯಿ ನೋಟುಗಳೂ ಆ ಕಾಲದಿಂದಲೂ ಯಾವ ವಿಧವಾಗಿ ಚಲಾವಣೆಯಾಗುತ್ತಿರುವುವೆಂಬ ಸಂದೇಹವು ತೋರಬಹುದು. ಅದಕ್ಕೆ ಕಾರಣವು ಪ್ರಜೆಗಳಿಗೆ ಪ್ರಭುತ್ವದಲ್ಲಿರುವ ನಂಬಿಕೆಯು ಕೆಡದಿರುವುದಾಗಿದೆ. ಕಣವಿರುವವನು ಎಷ್ಟಾದರೂ ಸರ್ಕಾರಿಯಾದರೂ ಎಷ್ಟು ಜನರಿಗಾದರೂ ಪ್ರಾಂಸರಿನೋಟುಗಳನ್ನು ಕೊಟ್ಟರೂ ಪ್ರಜೆಗಳು ಅದನ್ನು ಅಂಗೀಕರಿಸುವರು. ಇದಕ್ಕೆ ಕಾರಣವೇನೆಂದರೆ— ಆಸಾಮಂತನು ತಾನು ಬರೆದುಕೊಟ್ಟ ನೋಟುಗಳಿಗೆ ಹಣವನ್ನು ಯಾವಾಗ ಕೇಳಿದರೂ ಕೊಡಬಲ್ಲನೆಂಬ ನಂಬಿಕೆಯು ಪ್ರಜೆಗಳಿರುವುದೇ ಆಗಿದೆ!

ಯಾವಾಗ ಆ ಧನವಂತನು ಮಿತಿಮೀರಿ ನೋಟುಗಳನ್ನು ಬರೆಯುವನೋ ಆಗ ಪ್ರಜೆಗಳಿಗೆ ಅತನಲ್ಲಿರುವ ನಂಬಿಕೆಯು ಹೋಗಿ ನೋಟುಗಳನ್ನು ತಿರಸ್ಕರಿಸುವರು. ಪ್ರಭುತ್ವದವರ ವಿಚಾರದಲ್ಲೂ ಹೀಗೆಯೇ ಸರಿ. ಪ್ರಭುತ್ವದವರು ನೋಟುಗಳನ್ನು ಮಿತಿಮೀರಿ ಮುದ್ರಿಸಿದಲ್ಲಿ ಆ ನೋಟುಗಳು ಚಲಾವಣೆ ಯಾಗುವುವಲ್ಲಿ. ಮಿತಿಮೀರಿ ಮುದ್ರಿಸುವವರಿಗೂ ಪ್ರಭುತ್ವದವರಲ್ಲಿ ನಂಬಿಕೆ ಯಿಡಲ್ಪಟ್ಟಿದ್ದರೆ ನೋಟುಗಳು ಚಲಾವಣೆಯಾಗುತ್ತಿರುವುವು. ಆದರೆ ಅನ ಧನದಿಂದ ತಂದ ಬಂದಿರುವ ದೇನೆಂದರೆ, ನಾಣ್ಯವನ್ನು ಮುದ್ರಿಸುವ ವಿಚಾರದಲ್ಲಿ ಯಾವ ಪ್ರಭುತ್ವದವರನ್ನೂ ನೇಲಲಾಗದು ಯಾವ ಪ್ರಭುತ್ವವಾದರೂ ಮುದ್ರಿಸುವ ಮುಗ್ಗಟ್ಟಿನಾಸ್ತವಾದಾಗ ತನ್ನ ಕೈಯ್ಯಲ್ಲಿ ಯಿರುವಹಕ್ಕನ್ನು ಪೂರ್ತಿಯಾಗಿ ವಿನಿಯೋಗಿಸುವುದು. ಆದುದರಿಂದಲೇ ತನಗಿಷ್ಟಬಂದಂತೆ ನೋಟುಗಳನ್ನು ಸೃಷ್ಟಿಸುವುದು ಇವರ ಫಲವೇನಂದರೆ, ನಾಣ್ಯದ ಬೆಲೆಯು ಬಿದ್ದುಹೋಗುವುದು, ಆದರಿಂದ ಪ್ರಜೆಗಳು ನಷ್ಟಪಡುವರು.

ಮೇಲಿನ ಕಾರಣದಿಂದ ಯಾವುದೋ ಒಂದು ಪರಿಮಾಣವನ್ನು ಗೊತ್ತುಮಾಡಿ ನಾಣ್ಯದ ಬೆಲೆಯನ್ನು ನಿರ್ಧರಿಸುವ ಆವಶ್ಯಕತೆಯುಂಟಾಗಿದೆ. ಹಾಗಾಗದಿದ್ದಲ್ಲಿ ಎಷ್ಟುಕಾಲ ಈ ದುಡ್ಡಿನ ಅಕಾಬಳವು ಪ್ರಬಲವಾಗಿರತಕ್ಕುದು?

ಬಂಗಾರದ ಬದಲಾವಣೆಯ ಪರಿಮಾಣ

ಈ ಪರಿಸ್ಥಿತಿಯಲ್ಲಿ ಪ್ರಭುತ್ವವು ಒಂದು ಹೊಸ ಪರಿಮಾಣವನ್ನು ಸೃಷ್ಟಿಸಿರುವುದು. ಅದನ್ನೇ ಬಂಗಾರದ ಬದಲಾವಣೆಯ ಪರಿಮಾಣವೆಂದು ಕರೆಯುವರು. ಈ ಪರಿಮಾಣವನ್ನು ಸೃಷ್ಟಿಸಲು ಆಂಗ್ಲ ಅರ್ಥಶಾಸ್ತ್ರ ನಿಪುಣನಾದ ಜೆ. ಎಂ ಕೆಯನ್ಸ್ ಎಂಬಾತನು ಬಹಳ ಶ್ರಮ ತೆಗೆದುಕೊಂಡನು.

ಈ ಬಂಗಾರದ ಬದಲಾವಣೆಯ ಪರಿಮಾಣವನ್ನು ಕುರಿತು ಕೊಂಚ ಪರ್ಯಾಲೋಚಿಸೋಣ.

ಸಾಧಾರಣವಾಗಿ (ಎ) ಎಂಬ ದೇಶಕ್ಕೂ (ಬಿ) ಎಂಬ ಮತ್ತೊಂದು ದೇಶಕ್ಕೂ ವ್ಯಾಪಾರ ನಡೆಯುವಾಗ್ಯೆ (ಎ) ದೇಶವು (ಬಿ) ದೇಶಕ್ಕೆ ಕೆಲವಪದಾರ್ಥಗಳನ್ನು ಕಳುಹಿಸಿ ಕೊಡುತ್ತದೆ, (ಬಿ) ದೇಶದಿಂದ ಕೆಲವಪದಾರ್ಥಗಳನ್ನು ತರಿಸುವುದು ನಿಂತುಹೋಗುವುದು. (ಎ) ದೇಶವು (ಬಿ) ದೇಶಕ್ಕೆ 3 ಕೋಟಿ ರೂಪಾಯಗಳ ಬೆಲೆಯ ಸರಕುಗಳನ್ನು ಕಳುಹಿಸಿಕೊಟ್ಟು ಎರಡು ಕೋಟಿ ರೂಪಾಯಗಳ ಪದಾರ್ಥಗಳನ್ನು ತರಿಸಿಕೊಂಡಲ್ಲಿ ಕಳುಹಿಸುವುದೂ ತರಿಸುವುದೂ ಸರಿಹೋಗುತ್ತವೆ. ಆದುದರಿಂದ (ಎ) ದೇಶವು (ಬಿ) ದೇಶಕ್ಕಾಗಲೀ, (ಬಿ)ದೇಶವು(ಎ)ದೇಶಕ್ಕಾಗಲಿ ಬೆಲೆಯನ್ನು ನಾಣ್ಯರೂಪವಾಗಿ ಕೊಡಬೇಕಾದ ಅವಶ್ಯಕತೆಯಿರುವುದಿಲ್ಲ. (ಎ) ದೇಶವು 2 ಕೋಟಿ ರೂಪಾಯಿನ ಸರಕುಗಳನ್ನು ಕಳುಹಿಸಿಕೊಟ್ಟು 2ವರೆ ಕೋಟಿ ರೂಪಾಯಿನ ಸರಕನ್ನು ತರಿಸಿಕೊಂಡಲ್ಲಿ, ಉಳಿದ ಅರ್ಧಕೋಟಿಗಾಗಿ (ಬಿ) ದೇಶಕ್ಕೆ ಬೆಲೆ ಕೊಡಬೇಕಾಗುವುದು ಈ ಖರೀದಿಯನ್ನು ರೂಪಾಯಿಗಳಲ್ಲಿ ಕೊಟ್ಟಲ್ಲಿ (ಬಿ) ದೇಶವು ತೆಗೆದುಕೊಳ್ಳುವುದಿಲ್ಲ. ಏತಕ್ಕೆಂದರೆ (ಬಿ) ದೇಶದಲ್ಲಿ ರೂಪಾಯಿ ನ ಚಲಾವಣೆಯಿಲ್ಲ (ಬಿ)ದೇಶದಲ್ಲಿ ಪೌನು ಚಲಾವಣೆಯಿರುವುದರಿಂದ (ಎ) ದೇಶವು (ಬಿ) ದೇಶಕ್ಕೆ ಅರ್ಧ ಕೋಟಿ ರೂಪಾಯಿ ಖರೀದಿಗೆ ತಕ್ಕಂತೆ ಪೌನುಗಳನ್ನಾಗಲೀ ಅಷ್ಟೇ ಖರೀದಿಯ ಭಂಗಾರವನ್ನಾಗಲೀ ಕೊಟ್ಟರೆ(ಬಿ) ದೇಶವು ಅಂಗೀಕರಿಸುವುದು.

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೨೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
೧/೪ ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟರಲ್ಲೊಂದು ಪುಟಕ್ಕೆ	೨೫—೦—೦	೧೫—೦—೦	೧೦—೦—೦	೩—೦—೦
ಹದಿನಾರರಲ್ಲೊಂದು ಪುಟಕ್ಕೆ	೧೫—೦—೦	೧೦—೦—೦	೬—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಒದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರತಿನಿತ್ಯವೂ ಪ್ರಾತಃಕಾಲ 7 30 ರಿಂದ 9 ರ ವರೆಗೂ, ಸಾಯಂಕಾಲ 6-30 ರಿಂದ 7-30 ರ ವರೆಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು. ಸಮಾಜದ ಕೋಟ್ಯಾನುಕೋಟಿಜನಗಳಿಗೆ ಚೆನ್ನಾಗಿ ಸಾಧ್ಯವಿರುವ, ಈ ಭಾಷೆಯನ್ನು ಅಭ್ಯಸಿಸ ಬೇಕಾದ ದೇಶಾಭಿಮಾನಿಗಳ ಅಗತ್ಯಕರ್ತವ್ಯವಾಗಿದೆ. ಭಾರತ ಸ್ವಾತಂತ್ರ್ಯ ಸಂಘಟನೆಯಲ್ಲಿ ಹಿಂದಿಯು ರಾಷ್ಟ್ರ ಭಾಷೆಯಾಗುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಫೆಬ್ರವರಿ 1932 ರ ಮೊದಲನೇ ವಾರದಲ್ಲಿ ಪಡೆಯುವ ಹಿಂದೀಪರೀಕ್ಷೆಗೆ ಕೂಡಲೇ ಕ್ಷೇಮಿಯಾಗುವುದು ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

		ಕ್ರಯ
ಮಹಾತ್ಮ ಗಾಂಧಿಯವರ ಆತ್ಮಕಥೆ	ಅಧಿಕೃತ ಸತ್ಯ ಶೋಧನೆ.	
"	ಒಂದನೆಯ ಭಾಗ	೦—೧೫—೦
"	ಎರಡನೆಯ ಭಾಗ	೦—೧೨—೦
	ಮೂರನೆಯ ಭಾಗ	೦—೯—೦
"	ನಾಲ್ಕನೆಯ ಭಾಗ	೧—೮—೦
"	ಐದನೆಯ ಭಾಗ	೧—೮—೦
ಮಹಾತ್ಮಗಾಂಧಿಯವರು ಬರೆದ " ಅನಾಸಕ್ತಿ ಯೋಗ "		೦—೧೨—೦

(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ)

ಮಹಾತ್ಮ ಗಾಂಧಿ "	ಚಿಕ್ಕ ಪುಸ್ತಕ	೦—೧—೦
ತಾತ್ಪರ್ಯದ ಗೀತೆ.		೦—೨—೦

ಹಿಂದೀ ಪುಸ್ತಕಗಳು.

Hindi English Self Instructor.		1—0—0
ಹಿಂದೀ ಬಾಲ ಬೋಧಿನಿ.	(ಕನ್ನಡ ತೆಲುಗು)	೦—೨—೬
ಲಿಪಿ ಪುಸ್ತಕ	ನಂ ೧	೦—೨—೦
"	ನಂ ೨	೦—೨—೦
ಹಿಂದೀ ಪಹಿಲೀ ಪುಸ್ತಕ		೦—೫—೦
ದೂಸರೀ		೦—೬—೦
ಮಜೇದಾರ ಕಹಾನಿಯಾ		೦—೫—೦
ಅನುವಾದಮಾಲ ಭಾಗ ೧		೦—೪—೦

ಈ ಪುಸ್ತಕಗಳು ಪ್ರಾಥಮಿಕ ಪರೀಕ್ಷೆಗೆ ಪಾಠ್ಯ ಪುಸ್ತಕಗಳಾಗಿವೆ

ಕರ್ನಾಟಕ ಕೇಸರಿ ಕಾರ್ಯಾಲಯ. ಬೆಳ್ಳಾರಿ.

ಪ್ರೇಮ ಚಿಕಿತ್ಸಾಲಯ.

ಕಿಲ್ಲೆ ಮಾರ್ಕೆಟ್ ರೋಡು ಬೆಳ್ಳಾರಿ.

[ಸರ್ ಏಜೆಂಟರು :—ಝಾಂಡೆ ಫಾರ್ಮಕ್ಯೂಟಿಕಲ್ ವರ್ಕ್ಸ್ ಬೊಂಬಾಯಿ.

ಹೆಂಗಸರಿಗೆ ಮಕ್ಕಳಿಗೆ ಬರುವ ರೋಗಗಳಿಗೂ, ಸುಖ, ಇತರೆ ಎಲ್ಲಾ ರೋಗಗಳಿಗೂ, ನಿಷ್ಣಾತ ವಿದ್ಯಾ ಶಕ್ತಿ, ಶಸ್ತ್ರಗಳಿಂದಲೂ, ಆಯುರ್ವೇದೀಯ ಔಷಧಗಳಿಂದಲೂ, ಶ್ರೇಷ್ಠ ಚಿಕಿತ್ಸೆಯು ದೊರೆಯುತ್ತದೆ.

ವಿ. ಎಂ, ಗಿರಿ ಅಂಡ್ ಸನ್ಸ್.

ತೇರುಬೀದಿ ಬೆಳ್ಳಾರಿ.

ಏಜಂಟರು:- ಲೋಧ್ರಾ (ಗರ್ಭಾಶಯ ರೋಗನಿವಾರಣಿ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳೂ ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯಕವಾಗಿ ಮನೆ ಬಳಕೆಗೆ ಬೇಕಾಗುವ ಚಿಲ್ಲರೆವಸ್ತುಗಳೂ, ಸ್ವೀಟ ಪನ್ನರಿ ಪದಾರ್ಥಗಳೂ, ಸುಲಭ ಬೆಲೆಗೆ ದೊರೆಯುತ್ತವೆ.

ಶಿ. ಎ. ಡಿ, ಯಿಂದ ತಯಾರಾದ ಅತ್ಯುತ್ತಮ ಹೆಸ್ಲೆನ ಜಿಬುತ್ತುಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತವೆ.

ರಘು ಮಂಜಾಲಿ ಮೆಡಿಕಲ್ ಹಾಲ್.

ಬ್ರಾಹ್ಮಣರ ಬೀದಿ ಬೆಳ್ಳಾರಿ.

ನಮ್ಮಲ್ಲಿ ಗ್ಯಾರಂಟೀ ಆಗಿ ಗುಣಕೊಡುವಂಥ ಔಷಧಿಗಳು ಅತಿ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಹೆಸರು ಕೆಸರು. ೨೦ ಮಾತ್ರೆ	ಕ್ರಯ ರೂ	೨—೦—೦
ಚಲ್ಲಿ ದೋಷಕ್ಕೆ ತೊಲೆ ಡಬ್ಬಿ		೧—೦—೦
ಅಮೂಲ್ಯ ಧಾರೆ (ಸಕಲ ರೋಗಗಳನ್ನೂ ಗುಣಪಡಿಸುತ್ತೆ.		೦—೮—೦
ವಿಷಮ ಸನ್ನಿಪಾತ ಜ್ವರಗಳಿಗೆ ಮಾತ್ರೆ 50 ಸೀಸ.		೨—೦—೦

FOR SALE

1 Boston hand Press :—

Prints 5" × 8" matter neatly, in good working order.

Price moderate & reasonable.

2 New cyclostyle Machine :—

Used only Twice or thrice. Perfectly new.

Price considerably cheap. Apply shop —

KARNATAKA KESARI. OFFICE

Bellary.

ಶ್ರೀ ಸ್ವಾದ ಮಿಷ್ಟ ದಾರದ ಪುಂಡೆಗಳು.



ಈ ದಾರದ ಪುಂಡೆಗಳು ಘಟ್ಟಿ ಯಾಗಿಯೂ, ನಯವಾಗಿಯೂ, ಇರುವುದರಿಂದ ವಿಶ್ವಾಸ್ಯ ಕೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ, ಸಾಲಭವಾಗಿ ಉಪಯೋಗಕ್ಕೆ ಬರುತ್ತವೆ. ಬಿಳುಪು, ಕಪ್ಪು, ಕೆಂಪು, ನೀಲಿ, ಇತರ ರಂಗುಗಳಲ್ಲಿ ಅನೇಕ ಸೃಜನ ದಾರದ ಪ್ರಕಾರಗಳು ಕಡಿಮೆ ಧರಣೆಗೆ ದೊರೆಯುತ್ತವೆ.

ದರ ಬರೆದು ತಿಳಿಸಿಕೊಳ್ಳಿರಿ

K. V. & Sons,
Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್
ತೇರು ಬೀದಿ ಬಳ್ಳಾರಿ

ದಿ ಎಂಪೈರ್ ಆಫ್ ಇಂಡಿಯಾ. ಟೈಪ್ ರೈಟಿಂಗ್ ಇನ್ಸ್ಟಿಟ್ಯೂಟ್, ಲಿಮಿಟೆಡ್

ಈ ಸಂಸ್ಥೆಯ ಮುಖ್ಯ ಲಕ್ಷಣಗಳು ಹೊಲಿಯಾದು

ಗ. ಅತಿ ಕಡಿಮೆ ಖರ್ಚಾಗಿ ಸಡಿಯುಳ್ಳುದು ಸಂಸ್ಥೆ.
ಅ. ಹೊಲಿಯಾದರೆ ಹೊಲ್ಲ ಸುಲಭ ಪ್ರಯತ್ನಿಸುವುದು.
ಇ. ಸಂಸ್ಥೆಯ ಬಂದಾಳಗಳ್ಳು ಸದಿಯನ್ ಲಕ್ಷ್ಯದ ಮುಂಜಾಗ್ರತೆ ಸಂಸ್ಥೆಗಳಲ್ಲಿ ಒಂದಾಗಿ ದೊರೆಯ
ಉ. ಸ್ಟೇಷನರಿಯವರ ದರ ಮತ್ತೆ ಇಂಜಿನಿಗಳ ದರಕ್ಕಿಂತ ಕಡಿಮೆ.
ಊ. ಹೊಲಿಗಳನ್ನು ತಿಳಿಸಲಾದ ಸರ್ಕಾರಗಳವರು ಅಲ್ಲದೆ ಸರ್ವಸಾಧಾರಣವುಗಳು
ಎ. ಕಲ್ಪಾದ ಹೊಲಿಗಳನ್ನು ಹೆಚ್ಚು ಕಡಿಮೆ ಅಲ್ಲದೆ ಅಳತೆಗೆ ತರುವುದು.
ಏ. ಸಂಸ್ಥೆಯ ಲಾಭಗಳ್ಳು ಸಂಸ್ಥೆ ಸಂಸ್ಥೆ ಹೊಲಿಯಾದರೆಗೆ ಹಂಚಿಕೆ ಕೊಡುವುದು
ಐ. ಹೊಲಿಯು ಬೇಡದಿದ್ದ ಕಡು ಬಂದಾಗ ಕಂಪೆನಿಯಿಂದ ಕೊಡೋಣಗುವ ಸ್ವಾಧೀನ ಲಾಭ ಉದಾರವಾಗಿ ಕೊಡುವುದು.
ಗ. ಹೊಲಿಯ ಪ್ರತಿಭಟನೆಯನ್ನು ಸಂಪೂರ್ಣ ಬಂದಾಗ ಅಭ್ಯಾಸದಲ್ಲಿ ಕೂಡಲೆ ಸರಿ ಸಿಕ್ಕುವುದು.

ಮೆಸರ್ಸ:— ಎಂ. ವೆಂಕಟೇಶರಾವ್. ಬಿ. ಎ.
ಸ್ಥಳಾಧಿಕಾರಿಗಳು-ಟಿ
ಬಳ್ಳಾರಿ

Commerce has conquered the world

FREE INSTRUCTIONS

THE KARNATAKA TYPE-WRITING INSTITUTE,
& Commercial Agency.
Bangalore Road, Bellary.

Agents & dealers in:-
Wood-stock, Corona and other typewriters of all makes, best ribbons cartons, and Swadeshi fountain pens etc.

HOW TO LEARN TOUCH TYPE-WRITING IN 20 days
short hand a speciality.
(Seperate accommodation for lady students)
Job works & repairs undertaken on moderate charges.
ಅಚ್ಚಿಗಳನ್ನು ಕಲ್ಪಿಸಿ ದರದಲ್ಲಿ ಕೆಲಸ ಮಾಡಲಾಗುವುದು.
Prospectus sent free on application.

THE GRADUATES' TRADING ASSOCIATION,

General merchants, Gramaphone Dealers & News Agents,

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಶಿಯೇಷನ್,

ಜನರಲ್ ಮರ್ಚೆಂಟ್ಸ್, ಗ್ರಾಮಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜೆಂಟ್ಸ್

ತೇರು ಬೀದಿ ಬಳ್ಳಾರಿ.

ARYA VAIDYALAYA BELLARY

Pandit C.S. Shastry's
Patent Medicines

MONEY RETURNED IF NOT CURED

1 FEVER KILLER.
Any fever completely cured in 1 days — 8 oz Bottle Rs 2—0—0

2 NAVAJEEVAN PAK.
King of Tonic foods (sweet) — 1 lb Rs 1—8—0

3 PRAMEHA BHANJINI
Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್. ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು. ಗ್ಯಾರಂಟಿಯಿದ್ದರೆ ಹಣ ವಾಪಸು

* ಜ್ವರ ಸಂಹಾರಿ. *

ಸಾಮಾನ್ಯ ಎಲ್ಲಾ ಜ್ವರಗಳು ಒಂದು ದಿನಗಳಲ್ಲಿ ಸಂಪೂರ್ಣ ಗುಣ — ೮ ಔನ್ಸಿನ ಬಾಟ್ಲಿ ರೂ. 2—0—0

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ ರೂ 1—8—0

ಪ್ರಮೇಹ ಭಂಜಿನಿ

ಎರಡು ವರ್ಷದೊಳಗಿನ ಪ್ರಮೇಹವು 12 ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ. — ರೂ. 6—0—0

ಈ ಔಷಧಾಲಯದಲ್ಲಿ, ಜ್ವರಗಡ್ಡೆ, ಸಕ್ಷಯಾತ, ಪ್ರಮೇಹ, ಬಂಜೆತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯವಾದರೂ ಕಷ್ಟಸಾಧ್ಯವಾಗಿದ್ದವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ಗುಣಪಡಿಸಲ್ಪಡುತ್ತವೆ. ಒಮ್ಮೆ ಬಂದು ಪರೀಕ್ಷಿಸಿದರೆ ಖಾತ್ರಿ ತಿಳಿದು ಬರುವುದು.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO
AT SRI VIDYARANYA PRESS. BELLARY.